೭೯
ಜುಲೈ–ಸೆಪ್ಟೆಂಬರ್ ೨೦೦೭

೫೦ ಕರ್ನಾಟಕ
KARNATAKA

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ಸಂಪಾದಕರು
ಡಾ. ವೆಂಕಟಗಿರಿ ದಳವಾಯಿ



ದಯವಿಟ್ಟು ಗಮನಿಸಿ

ಸುವರ್ಣ ಕರ್ನಾಟಕದ ಆಚರಣೆ ಅಂಗವಾಗಿ
ಎಲ್ಲಾ ಪುಸ್ತಕಗಳಿಗೆ "ಶೇಕಡ ೫೦ರಷ್ಟು
ವಿಶೇಷ ರಿಯಾಯಿತಿ"

❁ ❁ ❁

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ಕ್ಕೆ ಚಂದಾದಾರರಾಗಿರಿ.

ಬಿಡಿ ಪ್ರತಿ	–	೩೦–೦೦
ವಾರ್ಷಿಕ ಚಂದಾ	–	೧೦೦–೦೦
ಆಜೀವ ಚಂದಾ	–	೩೦೦–೦೦

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಜುಲೈ – ಸೆಪ್ಟೆಂಬರ್ – ೨೦೦೬

ಸಂಪಾದಕ

ಡಾ. ವೆಂಕಟಗಿರಿ ದಳವಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೨೧ ೧೬೩೦

ANIKETHANA : A Literary Journal (Quarterly)
Edited by : **Dr. Venkatagiri Dalavai,** Lecturer, Dept of P.G (Kannada) Basaveshwar Arts College, Bagalkot - 587 101
Published by : **V.N. Mallikarjunaswamy,** Registrar, Karnataka Sahithya Academy, Kannada Bhavana, J.C. Road, Bengalooru - 02

Pages : x + 164

Registration No. 45646/88

ಸಂಪುಟ : ೧೭

ಸಂಚಿಕೆ : ೫

ಪ್ರತಿಗಳು : ೧೨೦೦

ಪುಟಗಳು : x + ೧೬೪

ಪ್ರಧಾನ ಸಂಪಾದಕರು
ನಾಡೋಜ ಗೀತಾ ನಾಗಭೂಷಣ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ.ಎಸ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಬಿಡಿ ಪ್ರತಿ : ರೂ. ೩೦/–
ವಾರ್ಷಿಕ ಚಂದಾ : ರೂ. ೧೦೦/–
ಆಜೀವ ಚಂದಾ : ರೂ. ೩೦೦/–

ಮುಖಪುಟ ಕಲೆ : ಪ್ರತಾಪ್ ರಾ. ಬಹುರೂಪಿ
ಹಿಂಬದಿಪುಟ ಕಲೆ : ಕೆ.ಎಸ್. ಕಾಂಬಳೆ
ಕೃಪೆ : ಕರ್ನಾಟಕ ಲಲಿತಕಲಾ ಅಕಾಡೆಮಿ
ಅಕ್ಷರ ವಿನ್ಯಾಸ : ಬಸವರಾಜ ಚಿನಿವಾಲರ

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೨೬೧ ೩೧೨೩, ೨೬೬೧ ೮೭೫೨

‘ಬಿಟ್ಟರೆ ಬಯಲು; ಹಿಡಿದರೆ ಬೆಳಕು.’

ಪರಂಪರೆಯೊಂದಿಗೆ ವ್ಯಕ್ತಿ ಪ್ರತಿಭೆಯ ಸಾತತ್ಯ ತುಂಬಾ ಸಂಕೀರ್ಣವಾದದ್ದು. ಸಾಧನೆಗೆ ಇದು ಹೆಗಲಾದರೂ, ಅದರೊಂದಿಗಿನ ನೈತಿಕ ಜಗಳ ಸಮಕಾಲೀನಗೊಳ್ಳುತ್ತಲೇ ಇರುತ್ತವೆ. ಒಬ್ಬ ಲೇಖಕನ ಮೇಲೆ ಪರಂಪರೆ ಪ್ರಭಾವ ಬೀರಿದಷ್ಟೇ ಮುಖ್ಯವಾಗಿ ಪ್ರತಿರೋಧದ ನೆಲೆಗಳು, ಅದಕ್ಕೆ ಪೂರಕವಾದ ಸಮಾಜನಿಷ್ಠ ಪ್ರಶ್ನೆಗಳು ಕಾಡಿರುತ್ತವೆ. ಈ ಅನುಮಾನಗಳನ್ನೇ ‘ಪಠ್ಯ’ಕ್ಕೆ ಅಳವಡಿಸಿದಾಗ ಪರಂಪರೆಯ ಮೂಸೆಯಿಂದ ಬಂದಂತಹ ಮೌಲ್ಯಕ್ಕೂ (Ethics) ಮತ್ತು ಸತ್ಯಕ್ಕೂ (Truth) ಇರುವ ವ್ಯತ್ಯಾಸಗಳು ತಿಳಿಯಲು ಸಾಧ್ಯ. ಇಲ್ಲವಾದಲ್ಲಿ ಚರಿತ್ರೆ ನಿಷ್ಠ ಅಥವಾ ಧರ್ಮ ಮೂಲದ ಮೋಕ್ಷದ ಹಾದಿಗೆ? ಒಂದು ಕೃತಿ ಕೊಂಡೊಯ್ಯಬಲ್ಲದೆ ಹೊರತು, ಅನುಭವದ ನಿಜದರ್ಶನಕ್ಕಲ್ಲ. ಇದನ್ನೆ ಅಲ್ಲಮ ಹೇಳುವುದು “ಘನತರವಾದ ಚಿತ್ರದ ರೂಪ ಬರಯಬಹುದಲ್ಲದೆ ಪ್ರಾಣವ ಬರೆಯಬಹುದೇ ಅಯ್ಯಾ ?” ಎಂದು. “ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಬ, ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಬ” ಪರಂಪರೆಯ ದಿವ್ಯಾರಾಧಕರು ತಾರ್ಕಿಕ ಚರ್ಚೆಗಳಿಗೆ ಹೊಂದಿಕೊಳ್ಳುವ ಸಂವಾದ ಗುಣವನ್ನು ರೂಢಿಸಿಕೊಳ್ಳಬೇಕಿದೆ. ಇಂತಹ ಸಂವೇದನೆಯಿಂದ 'Ethics' ಗಳ ಆಚೆಯೂ ಇರುವ ಫಿಜಿಕಲ್ (Physical) ನ್ಯಾಚೂರಲ್ (Natural) ರಿಲೀಜಿಯಸ್ (Religious) ಮತ್ತು ಮಾರಲ್ (Moral) truth ನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಸಿದ್ಧಾಂತನಿಷ್ಠ ಹಾಗೂ ಸಂಪ್ರದಾಯನಿಷ್ಠ ಅವಲಂಬಿಗಳಿಬ್ಬರೂ ಗಂಭೀರವಾಗಿ ಯೋಚಿಸಬೇಕಾದ ಸಂಗತಿ ಇದು.

‘ಪರಂಪರೆ’ ಎಂಬ ಕಾಡನ್ನು ಹೊಕ್ಕಾಗ ಮನಸ್ಸಿಗೆ ದಿಗ್ಭ್ರಮೆಯನ್ನುಂಟುಮಾಡುವ ಮಹಾವೃಕ್ಷದಷ್ಟೇ ‘ಹೀರೆ ಹೂವು’ ಕೂಡ ಮುಖ್ಯವಾಗಬೇಕು. ಅಲಕ್ಷಕ್ಕೆ ಒಳಗಾದ ಮೈನೂಟ್ (minute) ಎಂದೇ ಭಾವಿಸಿದ ಸಂಗತಿಗಳಿಗೆ ನೆಲಮೂಲದ ಕಾಳಜಿಯ ಸಾಂಸ್ಕೃತಿಕ ಸ್ಪರ್ಶ ಕೊಟ್ಟು 'Front line' ಗೆ ತಂದಾಗ ನಾವು ಬೆಚ್ಚಿಬೀಳುವ ಅಗತ್ಯವಿಲ್ಲ. ಅಮೆರಿಕಾದ ಬುದ್ಧಿಜೀವಿ, ವಿಮರ್ಶಕ ‘ಹೆರಾಲ್ಡ್ ಬ್ಲೂಮ್’ನ ಅಭಿಪ್ರಾಯದಂತೆ “ಸಾಹಿತ್ಯದ ಇತಿಹಾಸವೆಂದರೆ ವಾಸ್ತವವಾಗಿ ವಿರಾಟ ಪ್ರತಿಭೆಗಳು ಸೇರುವ ಘರ್ಷಿಸುವ ಇತಿಹಾಸ”. ಇಲ್ಲಿ ಮುಖಾಮುಖಿಯಾದ ಸಂಗತಿಗಳು ಯಾವವು? ಎನ್ನುವುದು ಮುಖ್ಯ.

ಇದು ಬಹುತ್ವದ ಕಾಲ. ಒಂದು ಪಠ್ಯಕ್ಕೆ ಒಂದೇ reading ಇಲ್ಲ. ಗ್ರಹಿಕೆಯ ನೆಲೆಯಲ್ಲಿ ಭಿನ್ನ ಭಿನ್ನ 'ಪಠ್ಯ'ಗಳಾಗಿ ಕಾಣಿಸಿಕೊಳ್ಳುತ್ತದೆ. ಈ ಕಾರಣಕ್ಕಾಗಿ 'ವಾಮನ'ಕ್ಕಿಂತಲೂ ಬಲಿಚಕ್ರವರ್ತಿ ಮುಖ್ಯ. ರಾಜನಷ್ಟೇ ಮುಖ್ಯ ಕುಶಲಕರ್ಮಿ ಎನ್ನುವ ಸಮಾಜ ಮೀಮಾಂಸೆಯ ರಚನಾ ಮಾದರಿಗಳನ್ನು ಕಾಣುತ್ತಿದ್ದೇವೆ. ಈ ಪ್ರಮೇಯಗಳನ್ನು ಸೂಕ್ಷ್ಮ ಸಂವೇದನೆಯ ಬರಹಗಾರ ಅಥವಾ ಸಂಶೋಧಕ ಅಧ್ಯಯನದ ಮಾದರಿಯನ್ನಾಗಿಸಿಕೊಳ್ಳುವುದು ಪರಂಪರೆಯ ಉಲ್ಲಂಘನೆಯಲ್ಲ. ಸಂಶೋಧಕ ಕೇವಲ 'ಮಿಥ್'ನ್ನು ಒಡೆಯುವ ಕೆಲಸವಷ್ಟೇ ಮಾಡುವುದಿಲ್ಲ. ನಿರ್ಮಿತಿಯ ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತಾನೆ. ಕಟ್ಟುವ ಪ್ರಕ್ರಿಯೆ ಮುರಿಯುವುದರಿಂದಲೇ ಆರಂಭವಾಗುತ್ತದೆ. ಇದು ವೈಚಾರಿಕ ಆಕೃತಿಯ ಪೂರ್ವ ಸಿದ್ಧತೆಗಳಾಗಿರುತ್ತವೆ. ಈ ಹಂತದಲ್ಲಿ ಕೆಲವೊಮ್ಮೆ ಸಂಶೋಧಕ ಅತಾರ್ಕಿಕನಾಗಿಯೂ ಕಾಣಿಸಬಹುದು. ಆದರೆ ಇದು ಅಧ್ಯಯನದ ಮಿತಿಯಾಗುತ್ತದೆಯೇ ಹೊರತು ಇತಿಹಾಸಕ್ಕೆ ಅಪಚಾರ ಎಸಗಿದಂತಲ್ಲ. ಒಂದು ವೇಳೆ ಅಪಚಾರವೆಸಗಿದ್ದೇ ಆದಲ್ಲಿ ಅದನ್ನು ಬೌದ್ಧಿಕ ನೆಲೆಯಲ್ಲಿ ಡೆಮಾಕ್ರೆಟಿಕ್ ವೇ (Democratic way) ಒಳಗೆ ವಿರೋಧವನ್ನು ವ್ಯಕ್ತಪಡಿಸಬೇಕು. ಪರಂಪರೆಯೊಂದಿಗೆ ಮುಖಾಮುಖಿಯಾಗುವುದೆಂದರೆ ಅಭಿವ್ಯಕ್ತಿಯ ಅನಂತ ಸಾಧ್ಯತೆಗಳನ್ನು ಅನಾವರಣಗೊಳಿಸುವುದೆಂದರ್ಥ. ಇಂತಹ ಪ್ರಯತ್ನಗಳಿಂದಲೆ ಇತಿಹಾಸ ರಾಜನಿಷ್ಠವಾಗದೇ, ಧರ್ಮನಿಷ್ಠವಾಗದೇ, ಮನುಷ್ಯನಿಷ್ಠವಾಗುತ್ತದೆ. ಮನುಷ್ಯ ಕೇಂದ್ರಿತ ಯಾವ ವಾದಗಳನ್ನಾದರೂ ಒಪ್ಪುವ ಮನಸ್ಸನ್ನು ನಾವು ಹೊಂದಬೇಕಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಕ್ರಮ.

ಲೇಖಕರ ಬಹುಮುಖ್ಯ ಸಾಮಾಜಿಕ ಸಂವೇದನೆಗಳು ಈ ಸಂಚಿಕೆಯಲ್ಲಿ ವ್ಯಕ್ತಗೊಂಡಿವೆ. ಗಂಭೀರವಾದ ಆಲೋಚನೆಗಳನ್ನು ಸಾಹಿತ್ಯ-ಸಂಸ್ಕೃತಿಯ ಅಡಿಯಲ್ಲಿ ಚರ್ಚಿಸಲಾಗಿದೆ. ಶ್ವೇತಭವನದಿಂದ ಹೊರಡುವ ಕಪ್ಪು ಉಗಳನ್ನು ಅದೇ ದೇಶದ ಪ್ರಜೆ, ಲೇಖಕ ಹೆರಾಲ್ಡ್ ಬ್ಲೂಮ್ ಪ್ರಜಾಪ್ರಭುತ್ವದ ಆಶಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾನೆ. ಇದರಿಂದಾಗಿಯೇ ಅಮೆರಿಕಾದ ಪ್ರಜೆಗಳು ಮೂರ್ಖರು ಎನ್ನುತ್ತಾನೆ. ಇದು ಸಿನಿಕತನದ ಮಾತಲ್ಲ. ಇಲ್ಲೊಂದು "ಆತ್ಮಾವಲೋಕನದ, ಆತ್ಮ ವಿಮರ್ಶೆಯ ಮನವಿಯಿದೆ". ಇದನ್ನು ಆರ್.ಪಿ. ಹೆಗಡೆಯವರು ಸಮರ್ಥವಾಗಿ ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಈ ಸಂಚಿಕೆಯ ವಿಶಿಷ್ಟ ಲೇಖನವಿದು. ಅಕ್ಷರರೂಪ ತಾಳಿದ ಅನುವಾದಿತ ಬಹುತೇಕ ಲೇಖನ, ಕವಿತೆ, ಕಥೆಗಳು ನೋವಿನ ನೆಲೆಗಳನ್ನು ಪ್ರತಿನಿಧಿಸುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂ.ಟಿ. ವಾಸುದೇವನ್ ನಾಯರ್‌ರವರ 'ಸಾಕು ಮೃಗಗಳು'. ಹೆಣ್ಣಿನ ಅಸಹಾಯಕತೆ, ಆರ್ದ್ರಭಾವಗಳನ್ನು ಈ ಕಥೆ ವಿಸ್ತೃತವಾಗಿ ಕಟ್ಟಿಕೊಡುತ್ತದೆ. "ಸರ್ಕಸ್ ಕಂಪನಿಯಲ್ಲಿ ಮನುಷ್ಯರಿಲ್ಲ. ಎಲ್ಲ ಮೃಗಗಳು" ಎನ್ನುವ ಜಾನಮ್ಮಳ ಮಾತು, ಶೋಷಣೆಯ ಒಂದು ವ್ಯಾಖ್ಯಾನದ ರೂಪವನ್ನೆ ಪಡೆದುಕೊಂಡಿದೆ. ಇಂತಹದೇ ಮಾದರಿಗಳು, 'ಶರ್ಟ್‌ಗಳು', 'ಭಲ್ಲೂಕ', 'ನಾನು ಮಹಿಳೆ' (ಕವಿತೆ), 'ಆ ಮಳೆ ಬಿದ್ದ ರಾತ್ರಿ', 'ಕುರುಬನ ಮಗಳು', 'ಗರಿಗಳು' 'ಯಾಕೆ ಹೇಳ್ತಿನಿಂದ್ರೆ'ಯಲ್ಲಿ ಕಾಣಬಹುದು. ಸೃಜನಶೀಲ ಮನಸ್ಸುಗಳೆಲ್ಲ ಅನುವಾದದಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಈ

ಸಂಚಿಕೆಗೆ ಮತ್ತಷ್ಟು ಮೌಲಿಕತೆ ಬಂದಿದೆ. ಇಲ್ಲೆಲ್ಲಾ 'ಪರಕಾಯ ಪ್ರವೇಶ' ಅತ್ಯಂತ ಸಮರ್ಥವಾಗಿ ನಿರ್ವಹಣೆಗೊಂಡಿದೆ.

ಡಾ. ವಿಠಲರಾವ್ ಗಾಯಕ್ವಾಡ್, ಡಾ. ತಮಿಳ್ ಸೆಲ್ವಿ, ಡಾ. ಪ್ರಮೀಳಾ ಮಾಧವ್, ಪ್ರೊ. ಪರಿಮಳಾ ನಾಯಕ, ಶ್ರೀನಿವಾಸ ವಿ. ಸುತ್ರಾವೆ, ಡಾ. ಬಾಳಾಸಾಹೇಬ ಲೋಕಾಪುರ, ನೀಳಾದೇವಿ, ಡಾ. ಮುಹಮ್ಮದ್‌ಸಿಬ್ಗತುಲ್ಲಾ, ವಿ. ಶ್ರೀನಿವಾಸ, ಗುರುಮೂರ್ತಿ ಪೆಂಡಕೂರ, ಡಾ. ಆಂಜನಪ್ಪರವರ ಆಸಕ್ತಿಗಳನ್ನು, ಸಹಕಾರವನ್ನು ಈ ಸಂಚಿಕೆಯಲ್ಲಿ ಬಳಸಿಕೊಂಡ ತೃಪ್ತಿ ನನಗಿದೆ. ಅನುವಾದ ಸಾಹಿತ್ಯದಲ್ಲಿ ಅತ್ಯುತ್ತಮವಾದದ್ದನ್ನು ಕನ್ನಡಕ್ಕೆ ತರುವ ಪ್ರಯತ್ನ ಈ ಅನುವಾದಕರಲ್ಲಿ ಗುರುತಿಸಬಹುದು.

ಸೃಜನ ವಿಭಾಗದಲ್ಲಿ ಹಿರಿಯರಾದ ಪ್ರೊ. ಶಿವರಾಮಯ್ಯ, ಬಿದರಹಳ್ಳಿ ನರಸಿಂಹಮೂರ್ತಿ, ಡಾ. ಎಸ್. ಚಂದ್ರಕಿರಣ, ಅಬ್ಬಾಸ್ ಮೇಲಿನಮನಿ, ಕೆ. ಷರೀಫಾ ಡಾ. ಶ್ರೀಧರ ಪಿಸ್ಸೆಯವರ ಜನಮುಖಿ ಆಲೋಚನೆಗಳು ವ್ಯಕ್ತಗೊಂಡಿವೆ.

ಬಿದರಹಳ್ಳಿ ನರಸಿಂಹಮೂರ್ತಿಯವರ ಅಲ್ಲಮ ಮತ್ತು ಬಸವಣ್ಣ: 'ಅನುಭಾವ ಕಾಯಕಗಳ ಮುಖಾಮುಖಿ'ಯನ್ನು ಭೌತ ವಿಜ್ಞಾನದ ಪ್ರಮೇಯದ ಮೂಲಕ ವಿಶ್ಲೇಷಿಸಿರುವುದು ವಿಶಿಷ್ಟವಾಗಿದೆ. ಅಲ್ಲಮನ ಏಕಾಂತ, ಬಸವಣ್ಣನ ಲೋಕಾಂತದ ಬೆಳಕನ್ನು ಅನೇಕ ಪ್ರಸಂಗಗಳ ಮುಖೇನ ವಿಸ್ತರಿಸುವಲ್ಲಿ ಪ್ರಯೋಜನಕಾರಿಯಾಗಿದೆ. ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಮೌಲಿಕ ಲೇಖನ ಇದಾಗಿದೆ. ಡಾ. ಎಸ್. ಚಂದ್ರಕಿರಣ್‌ರವರ 'ಬೆಳಕಿಗೆ ಶರಣು' ಎಂಬ ಲೇಖನ ಬುದ್ಧನ ತಿಳುವಳಿಕೆಯ ಸಾರವನ್ನು ವಚನಕಾರರು, ಈ ನಾಡಿನ ಸಂತರು ಹೇಗೆ ಬಳಸಿಕೊಂಡರು ಎನ್ನುವುದನ್ನು ವಿಮರ್ಶಿಸಿದೆ. ಬುದ್ಧನ ಈ ಮೌನಕ್ರಾಂತಿ ಹೇಗೆ ಬೆಳಗಿತು; ಭಗ್ನಗೊಂಡಿತು ಎನ್ನುವ ಚರ್ಚೆ ಇಲ್ಲಿದೆ. ಜನಮುಖಿ ಅಧ್ಯಯನಗಳ ಮಹತ್ವವನ್ನು ಪ್ರೊ. ಶಿವರಾಮಯ್ಯರವರ ವಿಮರ್ಶಾ ಲೇಖನ ಪ್ರತಿಪಾದಿಸುತ್ತದೆ. ಕ್ಷೇತ್ರ ಕಾರ್ಯ ಆಧಾರಿತ ಡಾ. ಮೀರಾಸಾಬಿಹಳ್ಳಿ ಶಿವಣ್ಣರವರ ಮಹಾಪ್ರಬಂಧವು ಆಕರ ಕೃತಿಯಾಗಿ ನಿಲ್ಲುವುದನ್ನು ಅಧ್ಯಾಯಗಳ ವಸ್ತು–ವಿಶ್ಲೇಷಣೆಯ ಆಧಾರದಿಂದ ವಿವರಿಸಿದ್ದಾರೆ. ಕೋಮು ಸಾಮರಸ್ಯದ ಹಿನ್ನೆಲೆಯಲ್ಲಿ ಅಬ್ಬಾಸ್ ಮೇಲಿನಮನಿಯವರ ಕಥೆ ನಿರೂಪಿತವಾಗಿದೆ. ಮುಸ್ಲಿಂ ಸಮುದಾಯದ ಲೇಖಕಿಯಾಗಿ ಸಾಹಿತ್ಯಲೋಕಕ್ಕೆ ಪ್ರವೇಶಿಸಿದ ಬಗೆಯನ್ನು ಕೆ. ಷರೀಫಾರವರು 'ನಾನು ನನ್ನ ಬರಹವೂ' ಎಂಬ ಶೀರ್ಷಿಕೆಯ ಅಡಿಯಲ್ಲಿ ಸ್ಥೂಲವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ. ಬರಹವನ್ನು ಒಂದು ನೈತಿಕ ಪ್ರಜ್ಞೆಯಿಂದ ಭಾವಿಸಿದ ಲೇಖನಗಳ ಸಂಗ್ರಹವಿದು.

ಕಾಡಿಗೂ ಸಮುದ್ರಕ್ಕೂ ವಿಜ್ಞಾನಕ್ಕೂ ಸಾಹಿತ್ಯಕ್ಕೂ ಲಂಗರು ಹಾಕಿದ 'ಕರ್ವಾಲೋ' ಇನ್ನಿಲ್ಲ. ಸಮಾಜವಾದಿ ಚಳುವಳಿಯಿಂದ ಪ್ರೇರಿತರಾಗಿ ಸಾಹಿತ್ಯದ ಆಶಯಗಳಿಗೆ ಹೊಸ ರೂಪವನ್ನು ಕಂಡುಕೊಳ್ಳಲು ಹಂಬಲಿಸಿದ ಮಲೆನಾಡಿನ 'ಮುನಿ' ನಾವು ಕಾಣದ ಲೋಕಕ್ಕೆ ಪಾದಾರ್ಪಣೆ

ಮಾಡಿದ್ದಾರೆ. ಅವರು ಆರಂಭಿಸುತ್ತಿದ್ದ ಚರ್ಚೆಗಳಿಗೆ ಆಧುನಿಕತೆಯ ಸೆಳಕು ಇರುತ್ತಿತ್ತು. ಮಾತಿಗಾಗಿ ಮಾತನ್ನು ಎಂದಿಗೂ ಬೆಳೆಸಿದವರಲ್ಲ. ಮಾತಿಗೂ ಮೌನಕ್ಕೂ ಅಗಾಧ ವ್ಯತ್ಯಾಸವನ್ನು ಕಂಡುಕೊಂಡ ಕಾರಣಕ್ಕಾಗಿ 'ಮಾಯಾ ಲೋಕ'ದಲ್ಲಿ ನಿತ್ಯ ಪಯಣ. ಸಮಕಾಲೀನ ಸಾಹಿತ್ಯ ಸಂಸ್ಕೃತಿಯ ಸಂವಾದಗಳಿಗೆ ತೇಜಸ್ವಿಯವರ ಮುನ್ನುಡಿ ಬೆನ್ನುಡಿ ಇನ್ನು ಮುಂದೆ ಇಲ್ಲದಿರುವುದು ಸಾಂಸ್ಕೃತಿಕ ಜಗತ್ತನ್ನು ಕಾಡುವ ಸಂಗತಿಯಾಗಿದೆ. ಹೆಮಿಂಗ್ವೆಯಂತೆ ಮೀನು ಹಿಡಿಯುವುದನ್ನು ಒಂದು ಕೃತಿಯಂತೆ ಧ್ಯಾನಿಸಿದ ಅದ ಕಲಿತವನನ್ನು ಮಹಾಕವಿಯಂತೆ ಕಂಡು ಜೀವನ ಪ್ರೀತಿಯನ್ನು ಹಂಚಿದ, ಸೃಜನಶೀಲಗೊಳಿಸಿದ ವೈಚಾರಿಕ ಆಕೃತಿ ಪೂರ್ಣಚಂದ್ರ ತೇಜಸ್ವಿ. 'ಜುಗಾರಿ ಕ್ರಾಸ್'ನ ಸಂಸ್ಕೃತಿಯಂತೆ ನಿತ್ಯ ಅಲೆದು ಸಾಹಿತ್ಯದ ಅರುಹನ್ನು ವಿಸ್ತರಿಸಿದ ತೇಜಸ್ವಿಯ ಸ್ಮರಣೆಯೇ ಒಂದು ವಿಸ್ಮಯ–ಅನುಭೂತಿ. ಆ ದಿವ್ಯ ಚೇತನಕ್ಕೆ ಗೌರವಪೂರ್ವಕ ನಮನಗಳು.

ಎಂದಿನಂತೆ ಈ ಸಂಚಿಕೆಯನ್ನು ಪ್ರೀತಿಯಿಂದ ಓದಿ ಪ್ರತಿಕ್ರಿಯಿಸುವಿರೆಂದು ನಂಬಿದ್ದೇನೆ.

–ಡಾ. ವೆಂಕಟಗಿರಿ ದಳವಾಯಿ

ಪರಿವಿಡಿ

ಹೆರಾಲ್ಡ್ ಬ್ಲೂಮ್‌ರ ಜಗತ್ತು

ಹಿಂದಿ ಮೂಲ: **ವಿಜಯಕುಮಾರ**
ಅನುವಾದ: **ಆರ್.ಪಿ. ಹೆಗಡೆ**

ಅಮೇರಿಕದ ವಿಮರ್ಶಕ ಹೆರಾಲ್ಡ ಬ್ಲೂಮ್ ಸಾಹಿತ್ಯ ವಿಮರ್ಶೆಯ ಜಗತ್ತಿನಲ್ಲಿ ತುಂಬ ಪ್ರಸಿದ್ಧರಾದವರು, ಅವರು ಇಪ್ಪತ್ತಕ್ಕೂ ಹೆಚ್ಚು ವಿಮರ್ಶಾ ಗ್ರಂಥಗಳನ್ನು ಬರೆದಿದ್ದಾರೆ. ಸುಮಾರು ೪೦೦ ಪುಸ್ತಕಗಳನ್ನು ಸಂಪಾದನೆ ಮಾಡಿದ್ದಾರೆ; ಅಥವಾ ಅವುಗಳಿಗೆ ಪೀಠಿಕೆಯನ್ನು ಬರೆದಿದ್ದಾರೆ. ಕಳೆದ ಐದು ದಶಕಗಳಿಂದ ಸಾಹಿತ್ಯಕ ಕೃತಿಗಳೊಂದಿಗೆ ತೊಡಗಿಕೊಂಡಿರುವುದು ಅವರ ಸಹಜ ಧರ್ಮವಾಗಿದೆ. ವಿಶ್ವಸಾಹಿತ್ಯದಲ್ಲಿನ ವಿಭಿನ್ನ ಸೃಜನ ಪರಂಪರೆ ಹಾಗೂ ಕೃತಿ ವ್ಯಕ್ತಿತ್ವಗಳೊಂದಿಗಿನ ಅಂತಃಸಂಬಂಧಗಳ ಬಗೆಗಿನ ವಿಚಾರಗಳ ಅವರ ಜಗತ್ತು ಎಷ್ಟೊಂದು ವಿಶಾಲವಾಗಿದೆಯೆಂದರೆ ಸಾಹಿತ್ಯದಾಚೆಗಿನ ಜಗತ್ತಿನ ಬಗೆಗೆ ಟೀಕೆ-ಟಿಪ್ಪಣಿ ಮಾಡಲು ಅವರ ಬಳಿ ಅವಕಾಶವೇ ಇಲ್ಲವಾಗಿದೆ. ಆದರೆ ಈಗ ತಮ್ಮ ಇಳಿವಯಸ್ಸಿನಲ್ಲಿ ಆರೋಗ್ಯ ಕುಸಿಯುತ್ತಿರುವಾಗ, ಆಗಾಗ್ಗೆ ಸಾಹಿತ್ಯದ ಹೊರಗಿನ ಜಗತ್ತಿನ ಬಗೆಗೂ ತೀಕ್ಷ್ಣವಾದ ಮುಕ್ತ ಟಿಪ್ಪಣಿಗಳನ್ನು ಮಾಡುತ್ತಿರುವುದು ಕಂಡು ಬರುತ್ತಿದೆ. ಮೊನ್ನೆ ಮೊನ್ನೆ ಅವರು ತಾವು ಅಮೆರಿಕನ್ನರೆನಿಸಿ ಕೊಂಡಿರುವದರ ಬಗೆಗೆ ಎಷ್ಟೊಂದು ನಾಚಿಕೆಯಾಗುತ್ತಿದೆಯೆಂದು 'ಗಾರ್ಡಿಯನ್' ಪತ್ರಿಕೆಯಲ್ಲಿ ಬರೆದಿದ್ದಾರೆ. ಅವರ ಅಭಿಪ್ರಾಯದಲ್ಲಿ ಅಮೇರಿಕನ್ನರು ಸ್ಪಂದನಹೀನರಾಗಿಬಿಟ್ಟಿದ್ದಾರೆ. ಏನನ್ನೂ ಓದಲು, ಯೋಚಿಸಲು, ನೆನಪಿಸಿಕೊಳ್ಳಲು ಅಸಮರ್ಥರಾಗಿದ್ದಾರೆ. ಜಗತ್ತಿನಲ್ಲಿ ವಾಸ್ತವಿಕವಾಗಿ ಅಮೇರಿಕದ ಅಧಿಕಾರ ರಾಷ್ಟ್ರಪತಿ ಬುಶ್‌ರದಲ್ಲ; ವಾಲ್ಟ ವಿಟಮಿನ್, ರಾಲ್ಫ ಎಮರ್ಸನ್,

ಮಾರ್ಕಟ್ವೇನ್, ವಿಲಿಯಂ ಫಾಕ್ನರ್ ಹಾಗೂ ಹೆನ್ರಿ ಜೇಮ್ಸರದು ಎಂಬುದು ಅಮೇರಿಕನ್ ಸಮಾಜಕ್ಕೆ ಗೊತ್ತೇ ಇಲ್ಲ. ಆದರೆ ಅಮೇರಿಕದ ಜನತೆಯ ಸ್ಮೃತಿಯೇ ನಾಶವಾಗಿಬಿಟ್ಟಿದೆ. ಅಮೇರಿಕದ ಸಮಾಜವು ರಾಷ್ಟ್ರೀಯ ಆತ್ಮ-ವಿನಾಶದತ್ತ ಮುಂದುವರಿಯುತ್ತಿದೆಯೆಂದು ಬ್ಲೂಮ್ ಹೇಳುತ್ತಾರೆ.

ನಾವು ಅಮೇರಿಕನ್ನರು ಮೂಲಭೂತವಾಗಿಯೇ ಪಕ್ಕಾ ಮೂರ್ಖರು, ಆದಕ್ಕಾಗಿಯೇ ನಮಗೆ ಇಂಥ ರಾಷ್ಟ್ರಪತಿ ಸಿಕ್ಕಿದ್ದಾರೆ ಮತ್ತು ನಾವು ಅದಕ್ಕೆ ತಕ್ಕವರಾಗಿದ್ದೇವೆ ಎಂದು ಹೆರಾಲ್ಡ ಬ್ಲೂಮ್ ಬರೆದಿದ್ದಾರೆ. ಅವರ ದೃಷ್ಟಿಯಲ್ಲಿ ಜಾರ್ಜ್‌ಬುಶ್ ಯೇಲ್ ಯುನಿವರ್ಸಿಟಿಯಿಂದ ಬಿ.ಎ. ಪದವಿ ಪಡೆದಿದ್ದಾರೆ. ಅನಂತರ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗಿದೆ. ಆದರೆ ರಾಷ್ಟ್ರಪತಿ ಬುಶ್ ಪೂರ್ಣರೂಪದಲ್ಲಿ ಒಬ್ಬ ಅರ್ಧಶಿಕ್ಷಿತ ವ್ಯಕ್ತಿಯಾಗಿದ್ದಾರೆ. ತಾವು ಇಂದಿನವರೆಗೂ ಯಾವ ಪುಸ್ತಕವನ್ನೂ ಪೂರ್ಣವಾಗಿ ಓದಿಲ್ಲವೆಂದು ಅವರು ತಮ್ಮ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಯೇಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗಲೂ ಅಷ್ಟೇ. ಹೆರಾಲ್ಡ ತಮ್ಮ ಟಿಪ್ಪಣಿಯಲ್ಲಿ ಮುಂದೆ ಬರೆಯುತ್ತಾರೆ - ಒಂದು ಬಾರಿ ಮಹಾನ್ ಕಾದಂಬರಿಕಾರ ಹೆನ್ರಿ ಜೇಮ್ಸ ರಾಷ್ಟ್ರಪತಿ ರೂಜವೆಲ್ಟರನ್ನು ಭೇಟಿಯಾಗಿದ್ದರು. ಭೇಟಿಯಾದ ಅನಂತರ ಅವರು ತಮ್ಮನ್ನು ಅಪಮಾನಿತರಾದಂತೆ ಭಾವಿಸಿಕೊಂಡಿದ್ದರು. ಹೆನ್ರಿ ಜೇಮ್ಸ ರಾಷ್ಟ್ರಪತಿ ಬುಶ್‌ರನ್ನು ಭೇಟಿಯಾಗಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತೋ ಗೊತ್ತಿಲ್ಲ.

ಇಂದು ಅಮೇರಿಕವನ್ನು ಪರಿಭಾಷಿತಗೊಳಿಸುವ ಸಂಗತಿ ಯಾವುದು? ಪ್ರಜಾಪ್ರಭುತ್ವದ ಅರ್ಥವನ್ನು ನಾವು ನಾಶ ಮಾಡಿದ್ದೇವೆ. ಆದರೆ ಹೀಗೆ ನಾಶವಾದ ಶಬ್ದದ ರಾಜನೈತಿಕ ರೆಟರಿಕ್‌ನ್ನು ಈಗ ಅಮೇರಿಕಾ ತನ್ನ ಸಲುವಾಗಿ ಬಳಸುತ್ತಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಜಾರ್ಜ್‌ಬುಶ್ ಇರಾಕ್‌ನಲ್ಲಿ ಪ್ರಜಾಪ್ರಭುತ್ವವನ್ನು ತರುವ ಮಾತನಾಡುತ್ತಿದ್ದಾರೆ. ಆದರೆ ಅವರ ಆಶಯವು ಇರಾಕನ್ನು ಲೂಟಿ ಮಾಡುವುದು, ತಮ್ಮ ವರ್ಚಸ್ಸು ಬೆಳೆಸಿಕೊಳ್ಳುವುದು, ಹಾಗೂ ಅಮೇರಿಕದ ಕಂಪನಿಗಳಿಗೆ ಲಾಭಕೋರತನಕ್ಕೆ ದಾರಿ ಮಾಡಿಕೊಡುವುದೇ ಆಗಿದೆ - ಎಂದು ಅವರು ತೀಕ್ಷ್ಣವಾಗಿ ಟಿಪ್ಪಣಿ ಬರೆಯುತ್ತಾರೆ.

ಸಾಹಿತ್ಯ ವಿಮರ್ಶಕರಾದ ಹೆರಾಲ್ಡ ಬ್ಲೂಮ್‌ರ ಈ ಟಿಪ್ಪಣಿ ಶುದ್ಧಾಂಗವಾಗಿ ರಾಜನೈತಿಕವಲ್ಲ. ಈ ಟಿಪ್ಪಣಿಯಲ್ಲಿ ಅವರು ಸಾಹಿತ್ಯದ ಗಂಭೀರ ಅರ್ಥ-ಹೊಳಹನ್ನು ಪ್ರಕಟಿಸಿದ್ದಾರೆ. ಬ್ಲೂಮ್ ಹೇಳುವ ಹಾಗೆ ಹ್ಯಾಮಲೆಟ್ ಹಾಗೂ ಡಾನ್ ಕ್ವಿಗ್ಸೋಟ್ ಯೂರೋಪ್‌ನ ಆತ್ಮವನ್ನು ಪರಿಭಾಷಿತಗೊಳಿಸುತ್ತಾರೆ. ಆದರೆ ಅಮೇರಿಕದ ಕವಿ ವಾಲ್ಟ್ ವಿಟಮನ್‌ರ ವ್ಯಕ್ತಿತ್ವ ಹ್ಯಾಮಲೆಟ್ ಹಾಗೂ ಡಾನ್ ಕ್ವಿಗ್ಸೋಟರಿಗಿಂತ ತುಸು ಭಿನ್ನವಾದ ಅರ್ಥವನ್ನು ವ್ಯಕ್ತಪಡಿಸುತ್ತದೆ. ವಿಟ್‌ಮನ್‌ರಾಗಲಿ ಅಥವಾ ಮೆಲವಿಲೆ, ಅಥವಾ ನೆಥೆನಿಯಲ್ ಹಾಥಾರ್ನ್ - ಈ ಎಲ್ಲರೂ ವಿಸ್ತಾರ, ವೈಯಕ್ತಿಕತೆ ಮತ್ತು ಆತ್ಮನಿರ್ಭರತೆಯ ಮೂಲ ಅಮೇರಿಕದ ಚೇತನವನ್ನು ಸಾಕಾರಗೊಳಿಸುತ್ತಾರೆ. ಇದು ಒಂದು ಬಗೆಯ ಏಕಾಕಿತನದ ಕಡೆ ಸಾಗುವ ದರ್ಶನವಾಗಿದೆ. ವಿಟ್‌ಮನ್‌ರನ್ನು ಜನತಂತ್ರದ ಕವಿ ಎನ್ನಲಾಗುತ್ತಿದೆ. ಆದರೆ ಅವರು

ಸಾರ್ವಜನಿಕರಾಗಿಯೂ ವೈಯಕ್ತಿಕತೆಯ ಕವಿಯಾಗಿದ್ದಾರೆ. ಇಲ್ಲಿನ ವೈಯಕ್ತಿಕತೆಯೆಂದರೆ ತೀವ್ರತೆಯೊಂದಿಗೆ ತನ್ನ ಹಾಗೂ ಅನ್ಯವೆರಡನ್ನೂ ಗೌರವಿಸುವಂಥದು. ಅಮೇರಿಕದ ಜನರಲ್ಲಿ ವಿಟಮನ್‌ರನ್ನು ತಮ್ಮ ಕವಿಯೆಂದು ಹೇಳುವ ಯಾವುದೇ ಪಾತ್ರತೆ ಉಳಿದಿಲ್ಲ. ಇಂದು ಅಮೇರಿಕದಲ್ಲಿ ಇರುವ ವೈಯಕ್ತಿಕತೆಯು ಆತ್ಮ ಹಾಗೂ ಅನ್ಯ ಎರಡರ ಬಗೆಗೂ ಉದಾಸೀನವಾದದ್ದು.

ಹೆರಾಲ್ಡ ಬ್ಲೂಮ್ ಸ್ವಯಂ ಅಮೇರಿಕನ್ನರಾದರೂ ಆ ಸಮಾಜದ ಶಕ್ತಿಯ ವರ್ಚಸ್ಸು ಹಾಗೂ ವಿಚಾರ ಹೀನತೆಯ ಮೇಲೆ ತೀಕ್ಷ್ಣವಾದ ಟಿಪ್ಪಣಿ ಬರೆದಿದ್ದಾರೆ. ಈ ಟಿಪ್ಪಣಿಯಲ್ಲಿ ಆತ್ಮಾವಲೋಕನದ, ಆತ್ಮವಿಮರ್ಶೆಯ ಮನವಿಯಿದೆ. ಆದರೆ ಇದನ್ನು ನೋಡಿಯೂ ನೋಡದಂತೆ ಅಮೇರಿಕದ ಮಾಧ್ಯಮದ ಬಾಡಿಗೆಯ ತಟ್ಟುಗಳಾದ ಬುದ್ಧಿಜೀವಿಗಳು ಹೆರಾಲ್ಡ ಬ್ಲೂಮರ ಮೇಲೆ ಮುಗಿಬಿದ್ದಿದ್ದಾರೆ. ರಾಜನೀತಿ ಅವರ ಕ್ಷೇತ್ರವಲ್ಲ. ಅವರು ತಮ್ಮನ್ನು ಪುಸ್ತಕದ ಜಗತ್ತಿಗೇ ಸೀಮಿತಗೊಳಿಸಿಕೊಳ್ಳುವುದು ಒಳ್ಳೆಯದು ಎಂದೂ ಕೆಲವರು ಸಲಹೆ ಮಾಡಿದ್ದಾರೆ.

ಆದರೆ ಸಾಹಿತ್ಯ ಜಗತ್ತಿನಲ್ಲಿಯೂ ಬ್ಲೂಮ್ ಎಲ್ಲಿ ಶಾಂತಿಯಿಂದ ಇರಬಲ್ಲರು? ಅರ್ಧ ಶತಮಾನದಿಂದಲೂ ಅವರು ಒಬ್ಬ ಏಕಾಕಿ ಯೋಧನಂತೆ ಯುದ್ಧರಂಗದಲ್ಲಿ ನಿಂತಿದ್ದಾರೆ. ಇಂದು ಆಧುನಿಕೋತ್ತರದ ಕೆಲವು ಪ್ರವರ್ತಕರು ಲೇಖಕನೆಂಬ ಪ್ರಾಣಿ ಸತ್ತಿದ್ದಾನೆ ಎಂದು ಘೋಷಣೆ ಮಾಡಿಬಿಟ್ಟಿದ್ದಾರೆ. ಹೆರಾಲ್ಡ ಬ್ಲೂಮ್ ಇಂದಿಗೂ ಸೃಜನಶೀಲ ಪ್ರತಿಭಾವಂತರನ್ನು ಹುಡುಕುತ್ತಾರೆ, ಮತ್ತು ಅವರ ಸಾರ್ವಕಾಲಿಕ ಪ್ರಸ್ತುತತೆಯ ಪ್ರತಿಮಾನಗಳನ್ನು ರಚಿಸುತ್ತಾರೆ. ಐವತ್ತರ ದಶಕದಲ್ಲಿ ಟಿ.ಎಸ್.ಎಲಿಯೆಟ್ ಪ್ರೇರಿತ 'ನವ್ಯ ವಿಮರ್ಶೆ'ಯ ಸಮರ್ಥಕರೊಡನೆ ಬಡಿದಾಡುತ್ತಲೇ ಉಳಿದರು. ಎಪ್ಪತ್ತರ ದಶಕದಲ್ಲಿ ಅಮೇರಿಕದ ಅಕಾಡೆಮಿಗಳಲ್ಲಿ ಫ್ರಾನ್ಸನಿಂದ ಬಂದ ವಿಖಂಡನಾವಾದವನ್ನು ಎದುರಿಸಿದರು. ವಿಖಂಡನಾವಾದಿಗಳು ಅಥವಾ ಸಂರಚನೋತ್ತರವಾದಿಗಳೊಂದಿಗೆ ಅವರ ಬಡಿದಾಟ ಇನ್ನೂ ನಿಂತಿಲ್ಲ. ೧೯೯೦ರ ದಶಕದಲ್ಲಿ ಅವರ ಒಂದು ಪುಸ್ತಕ 'ವೆಸ್ಟರ್ನಕ್ಯಾನನ್' ಬಂದಿತು. ಸ್ತ್ರೀ ವಿಮರ್ಶಾವಾದಿಗಳು - ಬಹು ಸಾಂಸ್ಕೃತಿಕ ಅಧ್ಯಯನವಾದಿಗಳನ್ನೂ ಅವರು ಎದುರಿಸಿದರು. ಹೆರಾಲ್ಡ ಬ್ಲೂಮರ ಸಂಬಂಧ ದೊಡ್ಡದು. ಅವರು ಪ್ರಚಲಿತ ಫ್ಯಾಶನ್‌ಗಳಿಂದ ಎಂದೂ ಪ್ರಭಾವಿತರಾಗಲಿಲ್ಲ. ಪಶ್ಚಿಮದ ಅಕಾಡೆಮಿಗಳಲ್ಲಿ ಎಪ್ಪತ್ತರ ದಶಕದಲ್ಲಿ ಸಾಹಿತ್ಯದ ವಿಶ್ಲೇಷಣೆ ನಡೆಯಿತು. ಹೊಸ ಥಿಯರಿಗಳು ಹುಟ್ಟಿಕೊಂಡವು. ಈ ಥಿಯರಿಗಳ ವಿಶೇಷಜ್ಞರು ಹೆರಾಲ್ಡಬ್ಲೂಮ್‌ರನ್ನು ಹಳೆಯ ಪಂಥದವರೆಂದು ನಿರ್ಣಯಿಸಿದರು. ಹೆರಾಲ್ಡ ಬ್ಲೂಮ್ ಡಾನ್ ಕ್ವಿಗ್ಸೋಟ ಥರಾ ಇದ್ದಾರೆ. ಪ್ರತಿಯೊಂದು ಹೊಸ ಬದಲಾವಣೆ ಹಾಗೂ ಪ್ರಗತಿಯ ಬಗ್ಗೆ ಅವರಿಗೆ ಹೆದರಿಕೆ, ಹೋಮರ್, ಶೇಕ್ಸಪಿಯರ್, ಮಿಲ್ಟನ್ ಹಾಗೂ ಡಾಂಟೆಯವರಿಂದ ಸಿದ್ಧವಾದ ಅವರ ಕ್ಲಾಸಿಕ್ ವಿಮರ್ಶೆಯ ಶಾಸನ ಈಗ ಅಪಾಯದಲ್ಲಿ ಸಿಲುಕಿದೆ. ಅವರು ಗಾಳಿಯಲ್ಲಿ ಕತ್ತಿ ಬೀಸತೊಡಗುತ್ತಾರೆ - ಎಂದೆಲ್ಲ ಅವರು ಹೇಳಿದರು. ಆದರೆ ಹೆರಾಲ್ಡ ಬ್ಲೂಮ್‌ರಿಗೆ ಯಾರ ಲಕ್ಷ್ಯವೂ ಇಲ್ಲ. ಅವರ ಹೊಚ್ಚ ಹೊಸ ಆಕ್ರಮಣವೆಂದರೆ ಹ್ಯಾರಿಪಾಟರ್ ನೆವದಲ್ಲಿ ಪಶ್ಚಿಮದ ಬಾಜಾರ್‌ಗಳಲ್ಲಿ ಬಿಕರಿಯಾಗುವ ಜನಪ್ರಿಯ 'ಪಲ್ಪಸಾಹಿತ್ಯ'ದ ಮೇಲಿನದು. ಈ ಬಗೆಯ

ಪ್ರಚಲಿತ ಸಾಹಿತ್ಯವು ಮನುಷ್ಯನ ವಿವೇಕ ಹಾಗೂ ಕಲ್ಪನಾಶಕ್ತಿಯನ್ನು ಬಹುಮಟ್ಟಿಗೆ ನಾಶಗೊಳಿಸುತ್ತದೆ - ಎನ್ನುತ್ತಾರೆ.

ವಾಸ್ತವವೆಂದರೆ ನ್ಯೂಯಾರ್ಕ ವಿಶ್ವವಿದ್ಯಾಲಯ ಮತ್ತು ಯೇಲ್ ವಿಶ್ವವಿದ್ಯಾಲಯಗಳಲ್ಲಿ ಐದು ದಶಕಗಳಿಂದ ಇಂಗ್ಲಿಷ್ ಸಾಹಿತ್ಯ ಹಾಗೂ ಮಾನವಿಕಗಳನ್ನು ಕಲಿಸಿದ ನಂತರವೂ ಹೆರಾಲ್ಡ ಬ್ಲೂಮ್ ಆಸ್ಥಾನ ಬುದ್ಧಿಜೀವಿಯಾಗುವ ವಿಧಿಯಿಂದ ತಮ್ಮನ್ನು ಬಚಾವು ಮಾಡಿಕೊಂಡಿದ್ದಾರೆ. ಅವರು ಅಕಡೆಮಿಕ್ ಜಗತ್ತಿನ ಬಹುದೊಡ್ಡ ಹೆಸರು. ಆದರೆ ಅವರ ಪುಸ್ತಕಗಳು ಯುನಿವರ್ಸಿಟಿಯ ಎಲ್ಲೆಗಳನ್ನು ಮುರಿದಿವೆ ಮತ್ತು ಪುಸ್ತಕ ಪ್ರೇಮಿಗಳ ನಡುವೆ ಚೆನ್ನಾಗಿ ಮಾರಾಟವಾಗುವ ಪುಸ್ತಕಗಳಾಗಿವೆ. ಪಶ್ಚಿಮದ ಅಕಾಡೆಮಿಗಳಲ್ಲಿ ಪ್ರಾಧ್ಯಾಪಕೀಯ ಚಿಂತನೆಗಳ ಕೆಲಸವು ತುಂಬ ಟೆಕ್ನಿಕಲ್, ಸಂಕೀರ್ಣ ಹಾಗೂ ಶುಷ್ಕವಾಗುತ್ತ ಹೋಗಿದೆ. ಇದಕ್ಕೆ ವಿರುದ್ಧವಾಗಿ ಹೆರಾಲ್ಡ ಬ್ಲೂಮ್‌ರ ಲೇಖನದಲ್ಲಿ ತರಂಗವಿದೆ - ಪ್ಯಾಶನ್ ಇದೆ. ಅವರ ವಿಮರ್ಶೆಗಳು ಅಸಾಹಿತ್ಯಕ ಮತ್ತು ಚನ್ನಾಗಿ ಓದಬಹುದಾದವುಗಳಾಗಿವೆ. ತಮ್ಮ ವಿಶ್ವಕೋಶೀಯ ಜ್ಞಾನ ಹಾಗೂ ಸಂದರ್ಭಗಳ ಒಂದು ವಿರಾಟ್ ಸಂಪತ್ತಿನಿಂದ ಯುಕ್ತವಾಗಿರುವುದರಾಚೆ ಅವರ ಲೇಖನಗಳಲ್ಲಿ ಆತ್ಮೀಯತೆ, ಸ್ವಚ್ಛಂದ ಹಾರಾಟ ಮತ್ತು ವೈಯಕ್ತಿಕ ಶೈಲಿಯ ಆನಂದವಿದೆ. ಇದರ ಪರಿಣಾಮವೆಂದರೆ 'ವೆಸ್ಟರ್ನ್ ಕ್ಯಾನನ್', 'ಶೇಕ್ಸ್‌ಪಿಯರ್ : ದ ಇನ್‌ವೆನ್ಶನ್ ಆಫ್ ಹ್ಯೂಮನ್, ಮತ್ತು 'ಹೌ ಟು ರೀಡ್ ಆ್ಯಂಡ್ ವ್ಹಾಯ್'? ಮುಂತಾದ ಪುಸ್ತಕಗಳು ಓದುಗರ ನಡುವೆ ಲೋಕಪ್ರಿಯವಾಗಿವೆ. ಇದೀಗ ೨೦೦೨ರಲ್ಲಿ ಅವರ ಒಂದು ಪುಸ್ತಕ ಬಂದಿತ್ತು 'ಜೀನಿಯಸ್', ಈ ಪುಸ್ತಕವು ಭಾಷೆ, ಭೂಭಾಗ, ಸಂಸ್ಕೃತಿ, ಕಾಲ ಹಾಗೂ ಆವರಣದ ಸೀಮೆಗಳನ್ನು ದಾಟುತ್ತ, ಮನುಷ್ಯ ಇತಿಹಾಸದ ನೂರು ಬಹುದೊಡ್ಡ ರಚನಾತ್ಮಕ ಪ್ರತಿಭೆಗಳ ಅಂತಃ ಸಂಬಂಧವನ್ನು ಪರಿಭಾಷಿತಗೊಳಿಸುತ್ತವೆ. ಇಲ್ಲಿ ಶೇಕ್ಸಪಿಯರ್ ಮಿಲ್ಟನ್‌ರಿಗೆ ಸ್ವಲ್ಪ ಕಲಿಸುತ್ತಿದ್ದಾನೆ. ನೀತ್ಸೆಯ ಪಕ್ಕದಲ್ಲಿ ಕಾಫ್ಕಾ, ಫ್ರಾಸ್ಟ ಸ್ಯಾಮ್ಯುಯೆಲ್ ಬೆಕೆಟ್ ಕೂತಿದ್ದಾರೆ. ಚೆಖಾವ್ ಆಸ್ಕರ್‌ವೈಲ್ಡ್ ಹಾಗೂ ಪಿರಾಂಡೆಲೋ ಜತೆ ಏನೋ ಗುಟ್ಟಾದ ಸಂವಾದ ನಡೆಸುತ್ತಿದ್ದಾನೆ. ಲೋರ್ಕಾ ಹಾಗೂ ವಿಟ್‌ಮನ್‌ರೊಂದಿಗೆ ಏನೋ ಕೇಳುತ್ತಿದ್ದಾರೆ. ಡಿಕೆನ್ಸ್ ದಾಸ್ತೋವಸ್ಕಿಗೆ ಏನೋ ತಿಳಿಸುತ್ತಿದ್ದಾರೆ. ಸಾಹಿತ್ಯದ ಬಹುದೊಡ್ಡ ಪ್ರತಿಭೆಗಳ ಒಂದು ವಿಶ್ವನಾಗರಿಕತೆಯನ್ನು ತಯಾರು ಮಾಡಲಾಗುತ್ತಿದೆ. ಅಕಾಡೆಮಿಕ್ ಸಿದ್ಧಾಂತಗಳ ಯಾವುದೇ ಜಟಿಲತೆಯಿಲ್ಲ, ಯಾವುದೇ ಫಾರ್ಮೆಟ್ ಇಲ್ಲ. ಬ್ಲೂಮ್ ತಮ್ಮೊಂದಿಗೆ ಮುಕ್ತ ಯಾತ್ರೆಯಲ್ಲಿ ನಿಮ್ಮನ್ನು ಕರೆದೊಯ್ಯುತ್ತಾರೆ. ವಿಭಿನ್ನ ರಚನಾಕಾರರ ಕೃತಿಗಳಲ್ಲಿ ಅಡಗಿರುವ ಅರ್ಥಗಳ ಅಪ್ರತ್ಯಾಶಿತ ಆವಿಷ್ಕಾರ ನಡೆಯುತ್ತಿದೆ. ಯಾವುದೇ ವಿಚಾರಧಾರೆಯ ಆಧಿಪತ್ಯದ ಅಡಿಯಲ್ಲಿ, ಯಾವುದೋ ಸೃಜನಾತ್ಮಕ ಕೃತಿಗಳನ್ನು ಓದುವುದೆಂದರೆ ಅದು ಓದುವುದೇ ಅಲ್ಲ.

ಕಳೆದ ಕಾಲುಶತಮಾನದಲ್ಲಿ ಸಾಹಿತ್ಯ ಜಗತ್ತಿನಲ್ಲಿ ಬಗೆ ಬಗೆಯ ಅಧ್ಯಯನ ದೃಷ್ಟಿಗಳು, ಅಕಡೆಮಿಕ್ ವಿಶೇಷತೆಗಳು ಬಂದವು-ಹೋದವು, ಆದರೆ ಬ್ಲೂಮ್ ತಮ್ಮ ಮೂಲ ಸಂಬಂಧಗಳನ್ನು ಅಪ್ಪಿಕೊಂಡು ತಮ್ಮ ಸ್ಥಳದಲ್ಲಿ ಗಟ್ಟಿಯಾಗಿ ನಿಂತಿದ್ದಾರೆ. ಅವರು ಬೋಧಿಸುವ ಯೇಲ್ ವಿಶ್ವವಿದ್ಯಾಲಯ

ಆಧುನಿಕೋತ್ತರ ಥಿಯರಿಗಳ ಕೋಟೆಯಾಗಿದೆ. ಸಾಹಿತ್ಯಕ ಅಧ್ಯಯನದ ಹೆಸರಿನಲ್ಲಿ ಕಳೆದ ಕೆಲವು ದಶಕಗಳಲ್ಲಿ ಕೃತಿಯ ಸಂರಚನಾತ್ಮಕ ವಿಶೇಷತೆ, ಜಾತಿ, ಲಿಂಗ, ವರ್ಗ ಆಧಾರಿತ ಬಗೆಬಗೆಯ ತಾಂತ್ರಿಕ ಅಧ್ಯಯನಗಳ ಏರುಪೇರಿನಲ್ಲಿ ಸಾಹಿತ್ಯದ ಮೂಲದಲ್ಲಿನ ಮಾನವೀಯ ಸಂಬಂಧಗಳ ಚರ್ಚೆ ಎಲ್ಲಿಯೋ ಕಳೆದು ಹೋಗಿದೆ. ಆದರೆ ಹೆರಾಲ್ಡ್‌ಬ್ಲೂಮ್ ಸೃಜನಾತ್ಮಕ ಪ್ರತಿಭೆಗಳ ಮೂಲ ಸಂಬಂಧವನ್ನು ಎತ್ತಿಕೊಂಡು ತಮ್ಮ ಏಕಾಕಿ ಹೋರಾಟವನ್ನು ಇಂದಿಗೂ ಮುಂದುವರಿಸಿದ್ದಾರೆ. ಅವರು ತಮ್ಮ ಭವ್ಯ ಏಕಾಕಿತನದಲ್ಲಿದ್ದಾರೆ, ಮತ್ತು ತಮ್ಮಷ್ಟಕ್ಕೆ ತಾವೇ ಒಂದು 'ವಿಭಾಗ'ವಾಗಿದ್ದಾರೆ. ಈ ಹೊಸ ಹೊಸ ಥಿಯರಿಗಳು ಸಾಹಿತ್ಯಕ ಕೃತಿಗಳ ಅರ್ಥವತ್ತತೆಯನ್ನು ತನ್ನಷ್ಟಕ್ಕೆ ಕಡಿತಗೊಳಿಸುತ್ತವೆ. ಮೂಲ ಕೃತಿಯೊಂದಿಗೆ ಇವುಗಳ ಯಾವ ಕೊಡು-ಕೊಳ್ಳುವ ಸಂಬಂಧವೂ ಇಲ್ಲ ಎನ್ನುತ್ತಾರೆ ಬ್ಲೂಮ್.

ಹೆರಾಲ್ಡ್‌ಬ್ಲೂಮ್ ಅವರ ಪ್ರಕಾರ ಮಹಾನ್‌ಕೃತಿಗಳ ಅರ್ಥ ಎಂದೂ ಏಕ ಆಯಾಮದ್ದಾಗಿರುವುದಿಲ್ಲ. ಅವು ರಹಸ್ಯತಮ ವಸ್ತುವಿನ ಹಾಗೆ. ಒಮ್ಮೆಲೇ ಎಂದೂ ತಮ್ಮನ್ನು ತೆರೆದು ಕೊಡುವುದಿಲ್ಲ. ಅವುಗಳಲ್ಲಿ ಅನೇಕ ಪದರಗಳು, ಓದಿನ ಅನಂತ ಸಾಧ್ಯತೆಗಳು ಅಡಗಿರುತ್ತವೆ. ಬ್ಲೂಮ್ ಯಹೂದಿ. ಅವರ ವಿಚಾರಗಳ ಮೇಲೆ ಯಹೂದಿ ಧಾರ್ಮಿಕ ರಹಸ್ಯವಾದದ ಪ್ರಾಚೀನ ಮೀಮಾಂಸೆಯ ಆಳವಾದ ಪ್ರಭಾವವಿದೆ. ಆದರೆ ಬ್ಲೂಮ್ ಈ ಧಾರ್ಮಿಕ ರಹಸ್ಯವಾದದ ಮೂಲಭೂತ ಗುಣಗಳನ್ನು ತಮ್ಮ ಆಲೋಚನೆಯಲ್ಲಿ ಧರ್ಮನಿರಪೇಕ್ಷ ಸ್ವರೂಪದಲ್ಲಿ ತಂದಿದ್ದಾರೆ. ವಿಲಕ್ಷಣ ಸೃಜನಾತ್ಮಕ - ವ್ಯಕ್ತಿಗಳಲ್ಲಿ ಅಡಗಿರುವ ಅದ್ವಿತೀಯ ಶಕ್ತಿ ಮತ್ತು ಮೌಲಿಕತೆಯ ವಿಶ್ಲೇಷಣೆ ಮಾಡುತ್ತ ಅವರು ಪಶ್ಚಿಮದ ಸಾಹಿತ್ಯ ಪರಂಪರೆಯ ಮೂಲಭೂತ ಪ್ರತಿಮಾನಗಳನ್ನು (ಕೆನನ್) ರೇಖಾಂಕಿತಗೊಳಿಸಿದ್ದಾರೆ.

ಅದೇ ಹೊತ್ತಿಗೆ ಹೆರಾಲ್ಡ್‌ಬ್ಲೂಮ್‌ರ ಮಹತ್ವಪೂರ್ಣ ಸ್ಥಾಪನೆಯೇನೆಂದರೆ, ಪ್ರತಿಯೊಂದು ದೊಡ್ಡ ಸೃಜನಾತ್ಮಕ ಪ್ರತಿಭೆಯೂ ತನ್ನ ಅನಂತರದಲ್ಲಿ ಬರುವ ಬರೆಹಗಾರರಿಗೆ ಕಠಿಣವಾದ ಸ್ಪರ್ಧೆಯನ್ನು ಒಡ್ಡುತ್ತದೆ. ಕವಿತೆ ಮುಂದಿನತ್ತ ಹೋಗುವುದಿಲ್ಲ. ಆದರೆ ಪ್ರತಿಯೊಬ್ಬ ಹೊಸ ಕವಿಯೂ ತುಂಬ ಉದ್ವಿಗ್ನತೆಯೊಂದಿಗೆ ತನಗಿಂತ ಮೊದಲಿನ ದೊಡ್ಡ ಕವಿಗಳತ್ತ ಹೊರಳಿ ನೋಡುತ್ತಾನೆ. ತನ್ನ ಪೂರ್ವಜರ ಎದುರು ಅವನಿಗೆ ತನ್ನ ಮೌಲಿಕತೆಯನ್ನು ಸಾಬೀತು ಪಡಿಸಬೇಕಾಗುತ್ತದೆ. ತನಗಿಂತ ಮುಂಚಿನ ದೊಡ್ಡ ಕವಿಗಳನ್ನು ಓದಿ ಪ್ರಭಾವಿತನಾಗಿರುವುದರಿಂದಲೇ ಹೊಸ ಕವಿಗೆ ಬರೆಯಲು ಪ್ರೇರಣೆ ದೊರೆಯುತ್ತದೆ. ಆದರೆ ತನಗಿಂತ ಮೊದಲ ಕವಿಗಳ ಬಗೆಗಿನ ಅವನ ಪ್ರಶಂಸೆಯ ಅವನ ಅಂತರಂಗದಲ್ಲಿ ಒಂದು ಪ್ರತಿರೋಧವನ್ನೂ ಹುಟ್ಟಿಹಾಕುತ್ತದೆ. ತಾನು ಆದರ್ಶವೆಂದು ಭಾವಿಸುವ ಕವಿಗಳ ಬಗೆಗಿನ ಅವನ ಪ್ರೇಮವು ಒಂದು ಪ್ರತಿರೋಧದ ರೂಪವನ್ನು ಅಧಿಕೃತಗೊಳಿಸುತ್ತದೆ. ಅವನು ಅವರನ್ನು ಕುರಿತ ಒಂದು ಬಗೆಯ ನಿಷೇಧಾತ್ಮಕ ಶಕ್ತಿಯಿಂದ ಚಾಲಿತನಾಗುತ್ತಾನೆ. ಅವನು ಅವರು ಬರೆದಿದ್ದನ್ನೇ ಅಲ್ಲಲ್ಲಿ ಮುಟ್ಟಿ-ಮುರಿದು-ಒಡೆದು ತನಗೊಂದು ಸ್ಥಳ ಮಾಡಿಕೊಳ್ಳಬಯಸುತ್ತಾನೆ. ದುರ್ಬಲ ಕವಿಗಳು ತನಗಿಂತ ಮುಂಚಿನವರನ್ನು ನಕಲು ಮಾಡುತ್ತಾರೆ. ಒಬ್ಬ ಸಶಕ್ತ ಬರೆಹಗಾರ ಅನಿವಾರ್ಯವಾಗಿ ತನ್ನ

ಮುಂಚಿನವರಿಗೆ ಮುಖಾಮುಖಿಯಾಗುತ್ತಾನೆ. ಅವನು ಅವರಿಗಿಂತ ಬೇರೆ ದಾರಿ ಹಿಡಿಯುವ ಯುದ್ಧತಂತ್ರವನ್ನು ಹುಡುಕುತ್ತಾನೆ. ಅವನು ತನಗಿಂತ ಮುಂಚಿನವರ ಪಾದದಲ್ಲಿ ಶ್ರಮಪೂರ್ವಕ ಹೆಚ್ಚು-ಕಡಿಮೆ ಮಾಡುತ್ತಾನೆ. ಬ್ಲೂಮ್ ಇದನ್ನು ಸೃಜನಾತ್ಮಕ ಮಿಸ್ ರೀಡಿಂಗ್ ಎನ್ನುತ್ತಾರೆ. ಪ್ರತಿಯೊಬ್ಬ ಆಧುನಿಕ ಕವಿ ತನ್ನ ಮುಂಚಿನ ಕವಿಯ ಪ್ರಭಾವವನ್ನು ಮುಚ್ಚಿಡುವ ತಂತ್ರವನ್ನು ಹುಡುಕುತ್ತಾನೆ. ಸೃಜನಶೀಲತೆಯ ಜಗತ್ತಿನಲ್ಲಿ ನಡೆಯುವ ಎಣೆಯಿಲ್ಲದಷ್ಟು ಈ ಸೂಕ್ಷ್ಮ ಸ್ಪರ್ಧಾತ್ಮಕತೆಯನ್ನು ಬ್ಲೂಮ್ ದಾಖಲಿಸುತ್ತಾರೆ.

ಹೆರಾಲ್ಡ್‌ಬ್ಲೂಮ್ ಕವಿತೆಯ ಇತಿಹಾಸವನ್ನೇನೂ ಬರೆದಿಲ್ಲ. ಆದರೆ ಆ ಮನೋವೈಜ್ಞಾನಿಕ ಪ್ರಕ್ರಿಯೆಯ ಪರಿಶೀಲತೆಯನ್ನು ಮಾಡಿದ್ದಾರೆ. ಅನಂತರ ಮಹತ್ವಪೂರ್ಣ ಕವಿಗಳು ಮುಂಚಿನ ಕವಿಗಳಿಂದ ಬಹಳಷ್ಟು ಕಲಿತಿದ್ದಾರೆ. ಹಾಗೆಯೆ ಅವರ ಪ್ರಭಾವದಿಂದ ದೂರ ಹೋಗುವ ಪ್ರಯತ್ನವನ್ನೂ ಮಾಡಿದ್ದಾರೆ. ದೊಡ್ಡ ಸೃಜನಾತ್ಮಕ ಪ್ರತಿಭೆಗಳ ತನ್ನೊಳಗಿನ ಮುಖಾಮುಖಿ, ಅವರ ಸಂವಾದ ಮತ್ತು ಜಗಳಗಳ ಹುಡುಕಾಟ - ಇದೇ ಹೆರಾಲ್ಡ್‌ಬ್ಲೂಮರ ಜಗತ್ತು. ಅದರಲ್ಲಿಯೇ ಅವರು ಕಳೆದ ೩೦ ವರ್ಷಗಳಿಂದ ನಿರಂತರ ಕೆಲಸ ಮಾಡುತ್ತಿದ್ದಾರೆ.

ಆಧುನಿಕ ಕೃತಿಕಾರ ತನ್ನ ಪರಂಪರೆಯನ್ನು ಕುರಿತು ಜಾಗ್ರತನಾಗಿರುತ್ತಾನೆ, ಮತ್ತು ತನ್ನೊಳಗೆ ಎಲ್ಲ ಮೃತಕವಿಗಳೂ ಇದ್ದಾರೆಂಬುದು ಅವನಿಗೆ ಗೊತ್ತು. ಆದರೆ ತಾನು ಅನಂತರದ ಕೃತಿಕಾರನಾದ್ದರಿಂದ, ಎಲ್ಲ ಮೃತ ಬರೆಹಗಾರರಿಗಿಂತ ತನಗೆ ಒಂದಿಷ್ಟು ಹೆಚ್ಚು ಗೊತ್ತಿದೆಯೆಂಬ ಆತ್ಮವಿಶ್ವಾಸವೂ ಅವನಲ್ಲಿದೆ ಎಂದು ಟಿ.ಎಸ್. ಎಲಿಯಟ್ ಹೇಳಿದ್ದ. ಹೆರಾಲ್ಡ ಬ್ಲೂಮ್ ಪ್ರಕಾರ ಕವಿತೆ ರಚಿಸಲ್ಪಡುವುದಿಲ್ಲ. ಆದರೆ ಒಂದು ಕವಿತೆ ಮೊದಲೇ ಇರುವ ಅನ್ಯ ಎಲ್ಲ ಕವಿತೆಗಳ ಜೊತೆ ಒಂದು ವ್ಯಾಖ್ಯಾತ್ಮಕ ಸಂಬಂಧವನ್ನು ಜೋಡಿಸಿಕೊಳ್ಳುತ್ತದೆ. ಸಾಹಿತ್ಯದ ಇತಿಹಾಸವೆಂದರೆ ವಾಸ್ತವವಾಗಿ ವಿರಾಟ್ ಪ್ರತಿಭೆಗಳು ಸೇರುವ - ಘರ್ಷಿಸುವ ಇತಿಹಾಸ. ಶೇಕ್ಸ್ಪಿಯರ್, ಡಾಂಟೆ, ಗಯಟೆ, ದಾಸ್ತೊವಸ್ಕಿ, ಬಾಲ್ಜಾಕ್, ಇಮರ್ಸನ್, ಬೊದಿಲೇರ್, ಟಾಲ್‌ಸ್ಟಾಯ್, ಫ್ಲಾಬ್ಯು, ವಿಟ್‌ಮನ್, ಯೇಟ್ಸ್, ಕಾಫ್ಕಾ, ಫ್ರಾಸ್ಟ, ಪಿರಾಂಡೆಲೋ, ಹೆಮಿಂಗ್ವೆ, ಲೋರ್ಕಾ, ಬೋರ್ಹೆಸ್, ರಿಲ್ಕೆ - ಈ ಎಲ್ಲರಿಗೂ ಒಳ ಸಂಬಂಧಗಳಿವೆ. ಮತ್ತು ಎಲ್ಲರಿಗೂ ಮೌಲಿಕತೆಗಾಗಿ ತಮ್ಮ ತಮ್ಮ ಸಂಘರ್ಷವೂ ಇದೆ.

'ಎಂಗ್ಸಾಯಿಟಿ ಆಫ್ ಇನ್‌ಫ್ಲುಯೆನ್ಸ' ಜಗತ್ತಿನಲ್ಲೆಲ್ಲ ಬಹುಚರ್ಚಿತ ಪುಸ್ತಕವಾಗಿದೆ. ಈ ವಿಮರ್ಶಾ ಗ್ರಂಥದ ಮೇಲೆ ವಿಶ್ವದಲ್ಲಿ ಪ್ರಕಟವಾದಷ್ಟು ಸಮೀಕ್ಷೆಗಳು ಬೇರಾವುದೇ ವಿಮರ್ಶಾಕೃತಿಯ ಮೇಲೆ ಬಂದಿಲ್ಲ ಎನ್ನಲಾಗುತ್ತಿದೆ. ಬ್ಲೂಮ್ ತಮ್ಮ ಆ ಅವಧಾರಣೆಯನ್ನು 'ಎ ಮ್ಯಾಪ ಆಫ್ ಮಿಸ್ ರೀಡಿಂಗ್' ಹಾಗೂ 'ಏಗನ್ ; ಟುವರ್ಡ್ಸ್ ದಿ ಥಿಯೆರಿ ಆಫ್ ರಿವಜನಿಸ್ಮ'ಗಳಲ್ಲಿ ಮುಂದುವರಿಸುತ್ತಾರೆ.

ಎಡ್ವರ್ಡ ಸಯೀದ್ ಹೆರಾಲ್ಡ್‌ಬ್ಲೂಮರ ಈ ಅವಧಾರಣೆಯ ವಿಷಯದಲ್ಲಿ ಬರೆಯುತ್ತಾರೆ - ಇದಕ್ಕೆ ಮುನ್ನ ಈ ವಿಮರ್ಶಾತ್ಮಕ ಅಧ್ಯಯನದ ಕ್ಷೇತ್ರ, ಯಾಕೆ ಇರಲಿಲ್ಲ? ಈ ದೃಷ್ಟಿಯ ಎಲ್ಲ ಕೃತಿಗಳ ಹಾಗೂ ಲೇಖಕರ ಸ್ಥಿರತೆಯನ್ನು ಒಂದು ರೀತಿಯಲ್ಲಿ ಭಂಗಪಡಿಸುತ್ತದೆ. ಆದರೆ ಸಂಸ್ಕೃತಿಯ ಒಂದು

ಸುವ್ಯವಸ್ಥಿತ ಪರಂಪರೆಯಲ್ಲಿ ರಚನಾತ್ಮಕ ಏರು ಪೇರು ಉಂಟು ಮಾಡುತ್ತದೆ. ಈ ಆಸ್ವಾದ ದೃಷ್ಟಿಯಲ್ಲಿ ಅತೀತವು ವರ್ತಮಾನದಲ್ಲಿ ಸಕ್ರಿಯವಾಗಿ ಹಸ್ತಕ್ಷೇಪ ಮಾಡುವುದು ದೃಷ್ಟಿಗೋಚರವಾಗುತ್ತದೆ. ಹೆರಾಲ್ಡ್ ಬ್ಲೂಮ್‌ರ ಮಹತ್ವವಿರುವುದು ಇದರಲ್ಲಿ. ಯಾಕೆಂದರೆ ಅವರ ಅಭಿಪ್ರಾಯದಲ್ಲಿ ಕವಿ, ವಿಮರ್ಶಕ, ಇತಿಹಾಸಕಾರ, ಹಾಗೂ ಓದುಗರ ಮಧ್ಯೆ ನಿಲ್ಲಿಸಲಾದ ಬೇಲಿ, ಅರ್ಥಹೀನ. ಎಲ್ಲವಕ್ಕೂ ಒಂದು ಇನ್ನೊಂದರ ಜೊತೆ ಕೊಳು-ಕೊಡುವಿಕೆಯಿದೆ.

ಆರ್.ಪಿ. ಹೆಗಡೆ, ೨೩೪, 'ಸೃಷ್ಟಿ' ಕಾಲೇಜ್ ಸ್ಟಾಫ್ ಹೌಸಿಂಗ್ ಕಾಲನಿ, ಅವರಗುಪ್ಪಾ, ಸಿದ್ದಾಪುರ (ಉ.ಕ.) ೫೮೧ ೩೫೫

ವೀರಶೈವ ಮರಾಠಿ ಸಂತರು

ಮರಾಠಿ ಮೂಲ: **ಡಾ. ಪಸಾರಕರ ಶೇ.ದ.**
ಅನುವಾದ: **ಡಾ. ವಿಠಲರಾವ್ ಗಾಯಕ್ವಾಡ್**

(ಡಾ. ಪಸಾರಕರ ಅವರು ಸೋಲ್ಲಾಪುರದ ಸಂಗಮೇಶ್ವರ ಕಾಲೇಜಿನಲ್ಲಿ ಮರಾಠಿ ಪ್ರಾಧ್ಯಾಪಕರು. ಸಂತಸಾಹಿತ್ಯ ಮತ್ತು ವಿಶೇಷತಃ ವೀರಶೈವ ಸಾಹಿತ್ಯವು ಅವರ ವಿಶೇಷ ಪ್ರೀತಿಯ ವಿಷಯ. ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆಯನ್ನು ತಿಳಿಯದ ಲಕ್ಷಾಂತರ ವೀರಶೈವ ಕುಟುಂಬಗಳಿವೆ. ಅಂಥವರಿಗಾಗಿ ವೀರಶೈವ ಸಾಹಿತ್ಯವು ಮರಾಠಿಯಲ್ಲಿ ಬರಬೇಕು ಎಂಬ ಕಾರಣದಿಂದ ಅವರು ಈ ದಿಶೆಯಲ್ಲಿ ನಿರಂತರ ಪ್ರಯತ್ನವನ್ನು ಮಾಡುತ್ತಲೇ ಬರುತ್ತಿದ್ದಾರೆ. ಧಾಂಡೋಳ (ಸಂಶೋಧನ ಲೇಖನಗಳು), ಸಂತ ಲಕ್ಷ್ಮಣಾಂಚೀ ಅಭಂಗವಾಣಿ (ಸಂಪಾದನೆ), ಶ್ರೀಸದ್ಗುರು ಪಲಸಿದ್ಧ (ಚರಿತ್ರೆ), ಅಭಂಗ ಸಿದ್ಧಾಯನ (ಕಾವ್ಯ), ಮನ್ಮಥ ಶಿವಲಿಂಗರ 'ಪರಮರಹಸ್ಯ' ಎಂಬ ಗ್ರಂಥದ ಸರ್ವಾಂಗೀಣ ಚಿಕಿತ್ಸಕ ಅಧ್ಯಯನದ ಪಿಎಚ್.ಡಿ. ಮಹಾಪ್ರಬಂಧ - ಇವು ಅವರ ಪ್ರಕಟಿತ ಸಾಹಿತ್ಯ ಕೃತಿಗಳು. ಪ್ರಸ್ತುತ ಈ ಲೇಖನವನ್ನು ಡಾ. ಕಲ್ಯಾಣ ಕಾಳೆಯವರ ಗೌರವ ಗ್ರಂಥ (೧೯೮೯)ದಿಂದ ಆಯ್ದುಕೊಳ್ಳಲಾಗಿದೆ.)

ಪ್ರಾಸ್ತಾವಿಕ :

ಮಹಾರಾಷ್ಟ್ರದಲ್ಲಿಯ ನಾಥ, ಮಹಾನುಭಾವ, ವಾರಕರಿ ಈ ಸಂಪ್ರದಾಯಗಳು ಮರಾಠಿ ಸಾಹಿತ್ಯಧಾರೆಯನ್ನು ಸಂಪನ್ನಗೊಳಿಸಿದುವುಗಳು. ಅಲ್ಲದೆ, ಮಹಾರಾಷ್ಟ್ರ ಸಂಸ್ಕೃತಿಯನ್ನು ಗಂಭೀರವಾಗಿ ಪ್ರರೂಪಿಸಿದವು. ಈ ಪ್ರಕ್ರಿಯೆಯಲ್ಲಿ ವೀರಶೈವ ಸಂಪ್ರದಾಯದ್ದೂ ದೊಡ್ಡಪಾಲು. ಈವರೆಗೆ ದುರ್ಲಕ್ಷಿತವಾಗಿದ್ದ ವೀರಶೈವರ ಮರಾಠಿ ವಾಙ್ಮಯವು ಹೇಗೆ ಹೇಗೆ ಪ್ರಕಾಶನಕ್ಕೆ ಬಂದು ಅದರ ಅಧ್ಯಯನವು ನಡೆಯಲಾರಂಭಿಸಿತೋ ಹಾಗೆಲ್ಲ ಮಹಾರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ವೀರಶೈವ

ಸಂಪ್ರದಾಯದ ಸ್ಥಾನವು ನಿಶ್ಚಿತವಾಗುತ್ತಾ ಹೋಯಿತು ಎಂಬುದು ಅವಶ್ಯ ಗಮನೀಯ ಅಂಶ. ವೀರಶೈವ ಮರಾಠಿ ವಾಙ್ಮಯದ ಒಂದು ಅಜ್ಞಾತ ಭಾಗವು ಇಂದು ಅಧ್ಯಯನಕ್ಕೆ ಮುಕ್ತವಾಗಿ ಲಭ್ಯವಾಗುತ್ತಿದೆ. ಅನೇಕ ಸಂಶೋಧಕರು, ಅಧ್ಯಯನಕಾರರು ಈ ಕ್ಷೇತ್ರದಲ್ಲಿ ತಮ್ಮ ಶೋಧ ಪ್ರಯತ್ನವನ್ನು ಪೂರ್ಣಗೊಳಿಸಿದ್ದಾರೆ, ಮತ್ತೆ ಕೆಲವರು ತೊಡಗಿಕೊಂಡಿದ್ದಾರೆ.

ವೀರಶೈವರ ಮಹಾರಾಷ್ಟ್ರ - ವಾಸ್ತವ್ಯ:

ಭಾಷಾಂತರ ಪ್ರಾಂತ್ಯಗಳ ರಚನೆಯ ನಂತರದ 'ಮಹಾರಾಷ್ಟ್ರ' ಇಂದು ನಮ್ಮ ಕಣ್ಣೆದುರಿಗಿದೆ. ಭಾಷೆಯ ಸೀಮಾರೇಖೆಯು ಬಹಳ ವ್ಯಾಪಕ ಮತ್ತು ಅಷ್ಟೇ ಹಗುರವಾದುದು. ಕರ್ನಾಟಕದಲ್ಲಿ ಬೆಳಗಾವಿಯಿಂದ-ಗುಲಬರ್ಗಾದವರೆವಿಗೆ ಇಂದಿಗೂ ಹೇಗೆ ಮರಾಠಿ ಭಾಷೆಯನ್ನು ಮಾತನಾಡುತ್ತಾರೆಯೋ ಹಾಗೆಯೇ ಮಹಾರಾಷ್ಟ್ರದಲ್ಲಿ ಉದಗೀರ್‌ನಿಂದ ಹಿಡಿದು ಲಾತೂರಿನವರೆವಿಗೆ ಕನ್ನಡ ಭಾಷೆಯನ್ನು ಮಾತನಾಡುವವರಿದ್ದಾರೆ. ನದಿಗಳ ದಡಗಳು ಮತ್ತು ಪರ್ವತಗಳ ಸಾಲುಗಳನ್ನು ರಾಜ್ಯಗಳ ಭೌಗೋಳಿಕ ಗಡಿಗಳಾಗಿ ನಿರ್ಧರಿಸಲಾಗಿದೆ. ಆದರೆ ಭಾಷೆಗಳಿಗೆ ಹೀಗೆ ಒಂದು ಗಡಿರೇಖೆಯನ್ನು ಗೊತ್ತುಪಡಿಸಲು ಸಾಧ್ಯವಿಲ್ಲ. ಎಂತಲೇ ಇಂದಿನ ಮಹಾರಾಷ್ಟ್ರವನ್ನು ಕಣ್ಣೆದುರಿಗೆ ಇಟ್ಟುಕೊಂಡು ಹನ್ನೆರಡನೆಯ ಶತಮಾನದಲ್ಲಿನ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿನ ಅನುಬಂಧವನ್ನು ಗುರುತಿಸಿ ಹೇಳಲು ಸಾಧ್ಯವಿಲ್ಲ. ಕಾರಣ ಆ ಹೊತ್ತಿನ ಮಹಾರಾಷ್ಟ್ರವು ಇಂದಿಗಿಂತ ಬೇರೆಯಾಗಿತ್ತು. ಕನ್ನಡ ರಾಜರು ಇಂದಿನ ಮಹಾರಾಷ್ಟ್ರದಲ್ಲಿಯ ಅನೇಕ ಭಾಗಗಳಲ್ಲಿ ತಮ್ಮ ರಾಜ್ಯಾಧಿಕಾರವನ್ನು ವಿಸ್ತರಿಸಿದ್ದರು. ಹಾಗೆಯೆ ಮರಾಠಾ ರಾಜರುಗಳೂ ಇಂದಿನ ಕರ್ನಾಟಕದಲ್ಲಿಯೂ ಅಧಿಕಾರವನ್ನು ಸ್ಥಾಪಿಸಿದ್ದರು. ಹಾಗಾಗಿ ಎರಡೂ ಪ್ರಾಂತ್ಯಗಳಲ್ಲಿಯೂ ರಾಜಕೀಯ ಮತ್ತು ಸಾಂಸ್ಕೃತಿಕ ಕೊಳು-ಕೊಡುಗೆ ದೊಡ್ಡ ಪ್ರಮಾಣದಲ್ಲಿಯೇ ನಡೆದುಕೊಂಡು ಬಂದಿದೆ.

ಬಸವೇಶ್ವರ ಕ್ರಾಂತಿಯ ಕೇಂದ್ರ ಕಲ್ಯಾಣ (ಬಸವ ಕಲ್ಯಾಣ)ವು ಮರಾಠಿ ಸೀಮೆಗೆ ತಾಗಿಕೊಂಡೇ ಇತ್ತು. ಬಸವಣ್ಣನವರ ಸಮಕಾಲೀನ ಶಿವಶರಣ ಶ್ರೀಸಿದ್ಧರಾಮನು ಸೊಲ್ಲಾಪುರದಲ್ಲಿದ್ದ. ಇಷ್ಟು ಮಾತ್ರವಲ್ಲ. ಬಸವೇಶ್ವರರ ಆದ್ಯ ಕರ್ಮಭೂಮಿಯಾದ ಮಂಗಳವೇಢೆ; ಅಲ್ಲಿಯೇ ಅವರು ತಮ್ಮ ನವಸಮಾಜ ನಿರ್ಮಿತಿಯ ದಿಶೆಯಲ್ಲಿ ಮೊದಲ ಹೆಜ್ಜೆಯನ್ನು ಇಟ್ಟದ್ದು ಎಂಬುದಾಗಿ ಪಿ.ಬಿ.ದೇಸಾಯಿಯವರು ತಮ್ಮ ಹೊಸ ಸಂಶೋಧನೆಯ ಮೂಲಕ ಸಿದ್ಧಪಡಿಸಿ ತೋರಿಸಿದ್ದಾರೆ.[೧]

ಯಾದವರ ಕಾಲದಲ್ಲಿ ವೀರಶೈವರ ಸಂಬಂಧವು ಉಂಟಾಯಿತು ಎಂಬುದಾಗಿ ಡಾ. ರಾಮಚಂದ್ರ ಚಿಂತಾಮಣಢೇರೆಯವರು ಅಭಿಪ್ರಾಯಪಟ್ಟಿದ್ದಾರೆ.[೨] ಯಾದವರ ರಾಜ್ಯವ್ಯವಸ್ಥೆಯಲ್ಲಿ ವೀರಶೈವರಿಗೆ ಉಚ್ಚಾಧಿಕಾರವು ಸಿಕ್ಕಂತಹ ಉದಾಹರಣೆಯನ್ನು ಅವರು ದಾಖಲಿಸಿದ್ದಾರೆ. ಮಹಾದೇವ ಯಾದವನ ಮಹಾಪ್ರಧಾನ ದೇವರಾಜ ಮತ್ತು ರಾಮದೇವರಾಯನ ಸೇನಾಪತಿ ಚೌಂಡರಸ ಇವರಿಬ್ಬರು ವೀರಶೈವ ಪಂಥದ ಅನುಯಾಯಿಗಳಾಗಿದ್ದರು. ದೇವರಾಜನು ಸೊಲ್ಲಾಪುರದಲ್ಲಿನ ಕಪಿಲಸಿದ್ಧ ಮಲ್ಲಿಕಾರ್ಜುನ ದರ್ಶನವನ್ನು ಪಡೆದು ಅದರ ಪೂಜೆ ಅರ್ಚನೆಗಾಗಿ ಒಂದು ಊರನ್ನು ಇನಾಮು

(ವೇಣಗೆ) ನೀಡಿದ ಉಲ್ಲೇಖ ಸಂಗುರ ಶಾಸನ (ಶಕ ೧೧೨೬)ದಲ್ಲಿದೆ.[೬] ಈ ಆಧಾರದ ಮೇಲೆ ಹನ್ನೆರಡು- ಹದಿಮೂರನೆಯ ಶತಮಾನದಲ್ಲಿ ಮರಾಠಿ ಮಣ್ಣು ಮತ್ತು ಮರಾಠಿ ಜೀವನದಲ್ಲಿ ವೀರಶೈವವು ಏಕರೂಪತೆಯನ್ನು ಹೊಂದಿತ್ತು ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿದೆ.

ಆದರೆ, ಬಸವೇಶ್ವರರ ಕ್ರಾಂತಿಯ ನಂತರ ವೀರಶೈವರು ಕರ್ನಾಟಕದಿಂದ ಸ್ಥಳಾಂತರ ಮಾಡಿ ನಿಧಾನವಾಗಿ ಮಹಾರಾಷ್ಟ್ರದಲ್ಲಿ ನೆಲೆಗೊಂಡರು ಎಂಬುದು ಸರಿಯಾದ ವಿಚಾರವಲ್ಲ. ಕಾರಣ ಬಸವಪೂರ್ವ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ವೀರಶೈವ ಸಂಪ್ರದಾಯವಿರಲಿಲ್ಲ ಎಂಬರ್ಥವನ್ನು ತರುತ್ತದೆ ಈ ಮೇಲಿನ ಅಭಿಪ್ರಾಯ. ಅಲ್ಲದೆ ನಾಗನಾಥ, ವೈದ್ಯನಾಥ, ತ್ರ್ಯಂಬಕೇಶ್ವರ, ಭೀಮಾಶಂಕರಗಳಂಥ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರದಲ್ಲಿಯೇ ಇವೆ. ಅಲ್ಲದೆ ಅವು ಆ ಕಾಲಕ್ಕೇ ಶೈವರ ಪ್ರಸಿದ್ಧ ಕೇಂದ್ರಗಳಾಗಿದ್ದುವು. ಮಹಾರಾಷ್ಟ್ರದ ಸಾಂಸ್ಕೃತಿಕ ಪಾರ್ಶ್ವಭೂಮಿ ಶೈವರದ್ದೇ ಆಗಿತ್ತು. ವಿದರ್ಭದಲ್ಲಿನ ಸಾಖರಖೇಡ (ಜಿ. ಬುಲಢಾಣ)ಯಲ್ಲಿನ ಪಲಸಿದ್ಧಮಠದ ಪರಂಪರೆಯು ಸುಮಾರು ಒಂದು ಸಾವಿರ ವರ್ಷಗಳಷ್ಟು ಪ್ರಾಚೀನವಾದುದಾಗಿದೆ. ಈ ಮಠದಲ್ಲಿನ ಸಮಾಧಿದ್ವಾರದ ಮೇಲೆ - 'ಶ್ರೀ ಮಜ್ಜಗದ್ಗುರುಪರಮಹಂಸ ಮರುಳಾಚಾರ್ಯವರ್ಯ ಶ್ರೀ ಮದ್ ಭೂರುದ್ರ ಶ್ರೀ ಪಳಸಿದ್ಧಸ್ವಾಮಿನ್ ಪ್ರಸೀದ ಶ್ರೀ ಮನ್ನಪ ಶಾ. ಶಕೆ ೯೮೦'- ಎಂಬ ಉಲ್ಲೇಖವಿದೆ. ಈ ಆಧಾರದಿಂದ ಪಲಸಿದ್ಧ ಸ್ವಾಮಿಗಳ ಸಮಾಧಿಯು ಶಕೆ ೯೮೦ ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ಶಕೆ ೯೮೦ರ ಪೂರ್ವದಲ್ಲಿಯೇ ಪಲಸಿದ್ಧರು ಮಹಾರಾಷ್ಟ್ರದಲ್ಲಿ ಧರ್ಮ ಜಾಗೃತಿಯನ್ನು ಮಾಡಿದ್ದರು ಎಂಬುದು ಗಮನೀಯ ಸಂಗತಿ. ಪಲಸಿದ್ಧರು ಸಾಖರಖೇಡ ಮಠದ ಮೂಲಪುರುಷರು. ಅವರ ಆ ಪರಂಪರೆ ಇಂದಿಗೂ ಚಾಲ್ತಿಯಲ್ಲಿದೆ. ಈ ಹಿನ್ನೆಲೆಯಿಂದ ಯಾದವಕಾಲೀನ ಪೂರ್ವದಲ್ಲಿ ಅಲ್ಲದಿದ್ದರೂ ಬಸವಪೂರ್ವ ಕಾಲಕ್ಕೆ ಮಹಾರಾಷ್ಟ್ರದಲ್ಲಿ ವೀರಶೈವರ ವಾಸ್ತವ್ಯವಿತ್ತು ಮತ್ತು ಆ ಕಾಲಕ್ಕೇ ಮಹಾರಾಷ್ಟ್ರದಲ್ಲಿ ವೀರಶೈವ ಸಂಪ್ರದಾಯವು ಸುಪ್ರತಿಷ್ಠಿತವಾಗಿತ್ತು ಎಂಬುದು ಸಿದ್ಧವಾಗುತ್ತದೆ.

ಸಾಮಾನ್ಯವಾಗಿ ಬಸವಣ್ಣನವರನ್ನೇ ವೀರಶೈವ ಸಂಪ್ರದಾಯದ ಸಂಸ್ಥಾಪಕರೆಂದು ಒಪ್ಪಿಕೊಳ್ಳಲಾಗಿದೆ. ಆದರೆ, ವಸ್ತುಸ್ಥಿತಿಯು ಹಾಗಿಲ್ಲ ಎಂಬುದನ್ನು ಅಧ್ಯಯನಕಾರರು ಈಗ ಅದನ್ನು ತಿಳಿದು ಮಾನ್ಯಮಾಡಿದ್ದಾರೆ. ಬಸವೇಶ್ವರರ ಜನನ ವರ್ಷ ೧೧೩೧ ಮತ್ತು ಪಲಸಿದ್ಧರ ಸಮಾಧಿ ವರ್ಷ ೧೦೫೮(ಶಕ.೯೮೦). ಈ ಅಂತರವನ್ನು ಗಮನಿಸಿಯೇ ವೀರಶೈವ ಸಂಪ್ರದಾಯದ ಪ್ರಾಚೀನತೆಯ ಮತ್ತು ಮಹಾರಾಷ್ಟ್ರದಲ್ಲಿನ ಅವರ ಅಸ್ತಿತ್ವದ ಬಗೆಗೆ ತಿಳಿಯಬೇಕಾದ್ದು ಅತ್ಯವಶ್ಯ.

ವೀರಶೈವ ಸಂಪ್ರದಾಯ : ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ -

ಹನ್ನೆರಡನೆಯ ಶತಮಾನದಲ್ಲಿ ವೀರಶೈವರಲ್ಲಿ ಒಂದು ಹೊಸ ಉತ್ಸಾಹ ಮೂಡಿತು. ಮೂಲದ ಉದಾರಮತವಾದಿ ವೀರಶೈವ ಸಂಪ್ರದಾಯವನ್ನೇ ಬಸವೇಶ್ವರರು ಪುನರ್ ನಿರ್ಮಿಸಿದರು.

ಶಿವಸಂಸ್ಕಾರಯುಕ್ತೇಷು ಜಾತಿಭೇದೋ ನ ವಿದ್ಯತೇ।
ಕಾಷ್ಠೇಷು ವಹ್ನಿ ದಗ್ಧೇಷು ಯಥಾ ರೂಪಂ ನ ವಿದ್ಯತೇ॥

ಹೀಗೆ ಕೇವಲ ಧರ್ಮಗ್ರಂಥಗಳಲ್ಲಿ ಬದ್ಧವಾದ ತತ್ವಗಳನ್ನು ಬಸವೇಶ್ವರರು ಪ್ರತ್ಯಕ್ಷ ಸಮಾಜದಲ್ಲಿ ಅಮಲಿಗೆ ತಂದರು. ಶಿವಾನುಭವ ಮಂಟಪವನ್ನು ಸ್ಥಾಪಿಸಿದರು. ವಿವಿಧ ಉದ್ಯೋಗಗಳಲ್ಲಿನ ಜನರು ಕೃತ್ರಿಮ ಸಾಮಾಜಿಕ ಪ್ರತಿಷ್ಠೆಯನ್ನು ಮತ್ತು ಉಚ್ಚ-ನೀಚ ಭೇದಭಾವವನ್ನು ಮರೆತು ಏಕತ್ರ ಸೇರಿ ತತ್ತ್ವ ಚರ್ಚೆಗಳಲ್ಲಿ ತೊಡಗಿದರು. ಪುರುಷರಿಗೆ ಸಮಾನವಾಗಿ ಸ್ತ್ರೀಯರೂ ಧಾರ್ಮಿಕ ಚರ್ಚೆಗಳಲ್ಲಿ ಸಹಭಾಗಿಗಳಾಗಲಾರಂಭಿಸಿದರು. ಜಾತ್ಯಾತೀತ ಸಮಾಜ ನಿರ್ಮಿತಿಯ ದಿಶೆಯಿಂದ ವೀರಶೈವ ಸಂಪ್ರದಾಯದ ಚಟುವಟಿಕೆಗಳು ನಡೆಯಲಾರಂಭಿಸಿದವು. ಹರಳಯ್ಯ ಮತ್ತು ಮಧುವಯ್ಯರ ಮಗ-ಮಗಳ ವಿವಾಹ ನಿಶ್ಚಿತಗೊಂಡು ಅಂತರ್ ಜಾತೀಯ ವಿವಾಹದ ಮುಹೂರ್ತದ ಟಿಸಿಲನ್ನು ನೆಟ್ಟರು ಬಸವೇಶ್ವರರು. ಆದರೆ ತತ್ಕಾಲೀನ ಕರ್ಮಠರಿಗೆ ಬಸವೇಶ್ವರರ ಈ ಸಮತಾ ವಿಚಾರವು ಸಹ್ಯವಾಗಲಿಲ್ಲ. ಬಸವಾನುಯಾಯಿಗಳು ಸಾಮಾಜಿಕ ಸಂಘರ್ಷಕ್ಕೆ ಮುಖಾಮುಖಿಯಾಗಿ ಬಲಿಯಾಗಬೇಕಾಯಿತು. ಈ ದೇಶದಲ್ಲಿನ ಇಂಥ ಸೃಜನಶೀಲ ಪುರೋಗಾಮಿ ವಿಚಾರಗಳಿಗೆ ಈ ಬಗೆಯ ಶೋಕಾಂತಿಕತೆಯು ಅನಿವಾರ್ಯ.

ಮಹಾರಾಷ್ಟ್ರೀಯ ವೀರಶೈವ ಸಂತರ ರಚನೆಯಲ್ಲಿ ಬಸವೇಶ್ವರರ ಹೊಸ ವಿಚಾರಗಳು ಪ್ರತಿಬಿಂಬಿತವಾಗಿರುವಂತೆ ಕಾಣುವುದಿಲ್ಲ. ವಾರಕರಿ ಸಂತರು ಧರ್ಮಕ್ಷೇತ್ರದ ಮಟ್ಟಿಗಷ್ಟೇ ಮಾನ್ಯ ಮಾಡಿದ್ದ ಸಮತೆಯೇ ವೀರಶೈವ ಸಂತರಿಗೂ ಮಾನ್ಯವಾಗಿತ್ತು. ಈ ಅಂಶ ಸ್ಪಷ್ಟವಾಗಿದ್ದೂ ಬಸವೇಶ್ವರರು ಕರ್ನಾಟಕದಲ್ಲಿ ಮಾಡಿದ ಸಮಾಜಕ್ರಾಂತಿಯ ಸಂದರ್ಭವನ್ನೇ ಇಟ್ಟುಕೊಂಡು ಮಹಾರಾಷ್ಟ್ರದ ವೀರಶೈವ ಸಂಪ್ರದಾಯದ ಬಗ್ಗೆ ನಿಷ್ಕರ್ಷೆಯನ್ನು ಮಾಡಿದರೆ ದಿಕ್ಕುತಪ್ಪುವ ಸಂಭವವೇ ಹೆಚ್ಚು. ಬಸವೇಶ್ವರರಂತೆ ಮರಾಠಿ ವೀರಶೈವ ಸಂತರು ಚಾತುರ್ವರ್ಣ್ಯ ಮತ್ತು ವೇದಪ್ರಾಮಾಣ್ಯವನ್ನು ಅಲ್ಲಗಳೆದ ಅಂಶಗಳು ಎಲ್ಲಿಯೂ ಕಂಡುಬರುವುದಿಲ್ಲ. ಅಥವಾ ಅವುಗಳನ್ನು ಪುರಸ್ಕರಿಸಿದಂತಹ ಉದಾಹರಣೆಗಳೂ ಅವರ ವಾಙ್ಮಯದಲ್ಲಿ ಕಾಣಸಿಕ್ಕುವುದಿಲ್ಲ. ಮರಾಠಿ ವೀರಶೈವ ಸಂತರು ಬಸವೇಶ್ವರರ ಬಗ್ಗೆ ಆದರ ಭಾವವನ್ನು ಅವಶ್ಯವಾಗಿ ವ್ಯಕ್ತಪಡಿಸಿದ್ದಾರೆ. ಹಾಗೆಯೇ, ಜ್ಞಾನೇಶ್ವರರ ಅನುಯಾಯಿತ್ವವನ್ನು ಯಾರೂ ಸ್ವೀಕರಿಸಿರುವಂತೆಯೂ ಕಾಣುವುದಿಲ್ಲ. ವೈದಿಕ ಮತ್ತು ಅವೈದಿಕ ಅರ್ಥಗಳಲ್ಲಿಯೂ ಪಂಚಾಚಾರ್ಯ ಮತ್ತು ವಿರಕ್ತ ಎಂಬ ಎರಡು ಪರಂಪರೆಗಳು ವೀರಶೈವ ಸಂಪ್ರದಾಯದಲ್ಲಿ ಕಂಡುಬರುತ್ತವೆ. ಅವುಗಳೆರಡರ ಪೈಕಿ ವೈದಿಕ ಪರಂಪರೆಯ ಕಡೆಗೇ ಮರಾಠಿ ವೀರಶೈವ ಸಂತರು ಅಧಿಕವಾಗಿ ಒಲವು ಉಳ್ಳವರಾಗಿದ್ದಾರೆ ಎಂಬುದನ್ನು ಸಾಧಾರವಾಗಿಯೇ ನಿರೂಪಿಸಬಹುದಾಗಿದೆ. ಮರಾಠಿ ವೀರಶೈವ ಸಂತರ ಅಧ್ವರ್ಯ ಮನ್ಮಥಸ್ವಾಮಿ, ಇವರು ಬಸವೇಶ್ವರರ ಪಂಥಸಂಸ್ಥಾಪಕತ್ವವನ್ನು ಅಮಾನ್ಯ ಮಾಡಿದ್ದರು.

ಕೋಣ್ಹೀ ಮ್ಹಣತೀ ಸವಿಚಾರ ನವಾ ಜಾಲಾ। ಬಸವೇಶ್ವರಾಪಾಸೂನೀ ವಿಸ್ತಾರಲಾ।
ತರೀ ತೇ ನೇಣೋನಿ ಬೋಲತೀ ಬೋಲಾ। ಅಜ್ಞಾನಪಣೆ॥ (ಪರಮರಹಸ್ಯ, ೧೬-೭)

(ಕೆಲವರು ಹೇಳುತ್ತಾರೆ ಸವಿಚಾರ ಹೊಸದಾಯಿತು। ಬಸವೇಶ್ವರರಿಂದ ವಿಸ್ತರಿಸಿತು। ಆದರೆ ಅರಿಯದೆ ಹೇಳಿದ ಮಾತು। ಅಜ್ಞಾನದಿಂದ॥)

ವೀರಶೈವ ಸಂಪ್ರದಾಯ ವೈದಿಕವೋ ಅಥವಾ ಅವೈದಿಕವೋ ಎಂಬುದು ವಾದಗ್ರಸ್ತ ಪ್ರಶ್ನೆಯಾಗಿದೆ. ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಗಳ ಆಧಾರದಿಂದ ಎರಡೂ ಬದಿಗಳಲ್ಲಿ

ಸಮರ್ಥಿಸುವದಕ್ಕೆ ಬರುತ್ತದೆ. ಆದರೆ ಅದರಿಂದ ಮೂಲ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಾಗದೆ ಅನುತ್ತರಿತವಾಗಿಯೇ ಉಳಿಯುತ್ತದೆ. 'ಸಿದ್ಧಾಂತ ಶಿಖಾಮಣಿ'ಯು ವೀರಶೈವರ ಪ್ರಾಚೀನ ಧರ್ಮಗ್ರಂಥವಾಗಿದ್ದು ಅದರಲ್ಲಿ ವೀರಶೈವ ಸಿದ್ಧಾಂತಕ್ಕೆ 'ವೇದವೇದಾಂತಸರ್ವಸ್ವಮ್' ಮತ್ತು 'ವೇದಮಾರ್ಗ-ಅವಿರೋಧನ' ಎಂಬುದಾಗಿ ಸಂಬೋಧಿಸಲಾಗಿದೆ.

ವೇದಧರ್ಮಾಭಿಧ್ಯಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ
ವೇದಬಾಹ್ಯಾ-ವಿರೋಧಿತ್ವಾತ್ ವೇದಸಂಮತ ಉಚ್ಯತೇ॥[೫]

ಹೀಗೆ ವೀರಶೈವರ ವೈದಿಕತ್ವದ ಉದ್ಘೋಷವನ್ನು 'ಸಿದ್ಧಾಂತಶಿಖಾಮಣಿ'ಕಾರನು ಮಾಡಿದ್ದಾನೆ. ಶ್ರೀಪತಿ ಪಂಡಿತರ ಕಾಲ ಕ್ರಿ.ಶ.೧೦೭೦ ಎಂಬುದಾಗಿ ಸಂಶೋಧಕರು ಒಪ್ಪಿಕೊಂಡಿದ್ದಾರೆ.[೬] ಡಾ. ಚಂದ್ರಶೇಖರ ಶಿವಾಚಾರ್ಯ ಅವರು ತಮ್ಮ 'ಸಿದ್ಧಾಂತಶಿಖಾಮಣಿಯ ಕಾಲ ಆಣಿ ಕರ್ತಾ' ಎಂಬ ಲೇಖನದಲ್ಲಿ ಈ ಗ್ರಂಥವು ಎಂಟನೆಯ ಶತಮಾನದ್ದಿರದೆಂಬ ವಿಷಯವನ್ನು ಆಧಾರದೊಂದಿಗೆ ದಾಖಲಿಸಿದ್ದಾರೆ.[೭] ಈ ಹಿನ್ನೆಲೆಯಿಂದ 'ಸಿದ್ಧಾಂತ ಶಿಖಾಮಣಿ' ಗ್ರಂಥವು ಶ್ರೀಪತಿಗೂ ಪೂರ್ವಕಾಲೀನವೆಂಬುದಾಗಿ ತಿಳಿದುಬರುತ್ತದೆ. ಅಂದರೆ ಇದು ಬಸವೇಶ್ವರರಿಗೂ ಪೂರ್ವದ್ದೆಂದಾಗುವುದು. ಇದರ ಹಿನ್ನೆಲೆಯಿಂದ ಬಸವಪೂರ್ವ ವೀರಶೈವ ಸಂಪ್ರದಾಯವು ವೈದಿಕ ಪರಂಪರೆಯನ್ನು ಜಪಿಸುವುದಾಗಿತ್ತು ಎಂದು ಸಾಧಾರವಾಗಿ ಊಹಿಸುವುದಕ್ಕೆ ಸಾಧ್ಯತೆಯಿದೆ.

ಬಸವೇಶ್ವರರ ಸಾಮಾಜಿಕ ಕ್ರಾಂತಿಯಿಂದಾಗಿ ವೀರಶೈವ ಸಂಪ್ರದಾಯಕ್ಕೆ ಅವೈದಿಕವೆಂದು ಗುರುತಿಸುವಂತಾಯಿತು ಎಂಬ ಅಭಿಪ್ರಾಯವನ್ನು ನಾನು ಈ ಪೂರ್ವದಲ್ಲಿ ಮಂಡಿಸಿದ್ದೆನು.[೮] ಅದಕ್ಕೆ ಈ ಮೂಲಕವೂ ಪುಷ್ಟಿಯು ದೊರೆಯುತ್ತದೆ. 'ಲೀಲಾ ವಿಶ್ವಂಭರ' ಎಂಬ ಕಾವ್ಯಕ್ಕೆ ಸೇರಿಸಿರುವ 'ವೀರಶೈವ ಧರ್ಮ' ಎಂಬ ಲೇಖನದಲ್ಲಿ ಕೈ.ಮ.ಪು.ಪಾಟೀಲ ಅವರು ಹೇಳಿರುವಂತೆ, ''ತತ್ತ್ವಜ್ಞಾನದ ದೃಷ್ಟಿಯಿಂದ ನೋಡಿದರೆ ವೀರಶೈವ ಸಿದ್ಧಾಂತಕ್ಕೆ ವೇದೋಪನಿಷತ್ತುಗಳ ಮತ್ತು ಶೈವಾಗಮಗಳ ಸಾಧಾರವುಂಟು. ಈ ಅರ್ಥದಿಂದ ವೀರಶೈವ ಪಂಥವು ವೈದಿಕವೇ ಆಗಿದೆ; ಆದರೆ ವೇದೋಕ್ತ ಚಾತುರ್ವರ್ಣ್ಯ ಮತ್ತು ಯಜ್ಞಯಾಗ ವಗೈರೆ ಕರ್ಮಕಾಂಡ ಇವುಗಳನ್ನು ವಿರೋಧಿಸುವ ಸರ್ವ ಪಂಥ ಹಿಂದೂ ಆಗಿರುವುದಾದರೂ ಅವೈದಿಕಗಳೇ ಆಗಿವೆ. ಹೀಗೆ ಅರ್ಥೈಸುವುದಾದರೆ ವೀರಶೈವ ಪಂಥವೂ ನಿಃಸಂಶಯವಾಗಿ ಅವೈದಿಕವೇ ಆಗಿದೆ.''[೯]

ಕೈ.ಮ.ಪು. ಪಾಟೀಲ ಅವರ ಈ ಸಮಂಜಸ ಭೂಮಿಕೆಯನ್ನು ಮಾನ್ಯ ಮಾಡುವುದಕ್ಕೆ ಅಡ್ಡಿಯೇನಿಲ್ಲ. ವೈದಿಕ ಈ ಶಬ್ದಗಳನ್ನು ಅತಂತ್ರವಾಗಿ ಬಳಸುವುದಕ್ಕಾಗಿ ಹೀಗೆ ಹೇಳಲು ಬರುವುದೋ ಹೇಗೆ, ವೀರಶೈವ ಸಂಪ್ರದಾಯದಲ್ಲಿ ಪರಂಪರವಾದಿ ಮತ್ತು ಪರಂಪರಾ ವಿರೋಧಿ ಎಂಬ ಎರಡೂ ಪ್ರವಾಹಗಳಿವೆ. ಬಸವೇಶ್ವರರು ವೀರಶೈವ ಸಂಪ್ರದಾಯದಲ್ಲಿ ಸಾಮಾಜಿಕ ಆಶಯವನ್ನು ಚೆಲ್ಲಿದರು. ಅವರ ಈ ಕಾರ್ಯ ನಿಃಸಂದಿಗ್ಧವಾಗಿಯೂ ಅತ್ಯಂತ ಮೌಲ್ಯಯುತವಾದುದು. ಮಹಾರಾಷ್ಟದಲ್ಲಿನ ವೀರಶೈವ ಸಂಪ್ರದಾಯ ಮಾತ್ರ ಪರಂಪರೆಗೆ ಹತ್ತಿರವಾಗಿಯೇ ಇದೆ. ಪರಂಪರೆಯನ್ನು ವಿರೋಧಿಸಿದ

ಕಾರಣವಾಗಿಯೆ ಬಸವಾನುಯಾಯಿಗಳು ಸಾಮಾಜಿಕ ಸಂಘರ್ಷದಲ್ಲಿ ಬಲಿಯಾಗಬೇಕಾಗಿ ಬಂದಿತು. ಆದರೆ ವಾರಕರಿ ಪಂಥಕ್ಕೆ ಸಮಾಂತರವಾದ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಿದ್ದ ಮಹಾರಾಷ್ಟ್ರದಲ್ಲಿನ ವೀರಶೈವ ಸಂತರಿಗೆ ಮಾತ್ರ ಇಂಥ ಸಂಘರ್ಷಕ್ಕೆ ಎದುರಾಗಬೇಕಾಗುವ ಸರದಿ ಬರಲಿಲ್ಲ. ಇದಕ್ಕೆ ಕಾರಣ, ಪರಂಪರೆಯನ್ನು ಮುರಿಯುವುದಕ್ಕೆ ಹೋಗದಿರುವುದು ಮತ್ತು ಧರ್ಮಕ್ಷೇತ್ರದಲ್ಲಿಯೆ ತಮ್ಮ ಅಧಿಕಾರವನ್ನು ಪ್ರಸ್ಥಾಪಿತಗೊಳಿಸುವ ಮರಾಠಿ ವೀರಶೈವ ಸಂತರ ಪ್ರವೃತ್ತಿ ಎಂದು ಹೇಳಿದರೆ ಅನುಚಿತವೆನಿಸುವುದಿಲ್ಲ. ಸಮನ್ವಯಶೀಲತೆ ಮತ್ತು ಪರಂಪರೆಯನ್ನು ಜಪಿಸುವ ಈ ವೃತ್ತಿಯಲ್ಲಿಯೆ ಮರಾಠಿ ವೀರಶೈವ ಸಂತರ ಕಾರ್ಯದ ಯಶಸ್ಸು ಸಾಧ್ಯವಾಗಿದೆ.

ಕರ್ನಾಟಕದಲ್ಲಿನ ಶಿವಶರಣರು ಪರಂಪರೆಗೆ ವಿರೋಧ ಮಾಡುತ್ತಾ ಇರುವಾಗ ಮಹಾರಾಷ್ಟ್ರದಲ್ಲಿನ ವೀರಶೈವ ಸಂತರು ಪರಂಪರೆಗೆ ಶರಣರಾಗಿದ್ದುದು ಏಕೆ, ಈ ಬಗೆಗಿನ ಕೆಲವಾರು ಕಾರಣಗಳನ್ನು ಇಲ್ಲಿ ಪ್ರಸ್ತಾಪಿಸಿದರೆ ಅಪ್ರಸ್ತುತವಾಗಲಾರದು.

ಬಸವೇಶ್ವರರ ಕಾಲ ಹನ್ನೆರಡನೆಯ ಶತಮಾನ, ಆದರೆ ಮರಾಠಿ ವೀರಶೈವ ಸಂತರ-ಶಾಂತಲಿಂಗ, ಮನ್ಮಥಸ್ವಾಮಿ-ಕಾಲ ಹದಿನಾರನೆಯ ಶತಮಾನ. ಹನ್ನೆರಡನೆಯ ಶತಮಾನದಲ್ಲಿ, ಭಾರತೀಯ ಸಾಧನೆಯ ಕ್ಷೇತ್ರದಲ್ಲಿ ಹಿಂದೂಸ್ಥಾನದಲ್ಲಿ ಶುದ್ಧೀಕರಣ ಸಂಬಂಧವಾಗಿ ಚಳವಳಿ ನಡೆಯುತ್ತಿದ್ದಿತು. ಅದರ ನೇತೃತ್ವವನ್ನು ಗೋರಕ್ಷನಾಥ, ಅಲ್ಲಮಪ್ರಭು, ಬಸವೇಶ್ವರರಂಥ ಪ್ರಭೃತಿಗಳು ಸ್ವೀಕರಿಸಿದ್ದರು. ಬಸವೇಶ್ವರರ ದೃಷ್ಟಿಯೆದುರು ನವಸಮಾಜ ನಿರ್ಮಾಣದ ಸ್ವಪ್ನವಿತ್ತು. ಜೊತೆಗೆ ಕೈಯಲ್ಲಿ ರಾಜದಂಡಕೂಡ ಇದ್ದಿತು. ರೂಢಿ, ಸಂಪ್ರದಾಯಗಳಿಗೆ ಹಿಡಿಮಣ್ಣು ಹಾಕಿ, 'ಕಾಯಕವೇ ಕೈಲಾಸ' ಎಂಬ ಶ್ರಮಮಂತ್ರದ ಬಲದಿಂದ ನವಸಮಾಜದ ಹೆಜ್ಜೆಗಳನ್ನು ಅವರು ಕಲ್ಯಾಣದಲ್ಲಿ ಮಾಡಿ ತೋರಿಸಿದರು. ಆದರೆ ಬ್ರಾಹ್ಮಣ ಮತ್ತು ಅಂತ್ಯಜ ಇವರ ವಿವಾಹ ಸಂಬಂಧದಿಂದ ರೂಢಿದಾಸರುಗಳಿಂದ ಹಿಂಸೆಯ ಜ್ವಾಲೆ ಪಸರಿಸಿತೋ ಅದರಿಂದ ಕರ್ನಾಟಕದಲ್ಲಿನ ಧಾರ್ಮಿಕ ಇತಿಹಾಸದ ಪುಟಗಳು ರಕ್ತವರ್ಣವಾದವು.

ಮುಂದೆ ಹದಿಮೂರನೆಯ ಶತಮಾನದಲ್ಲಿ ಜ್ಞಾನೇಶ್ವರಾದಿಗಳು ಮಹಾರಾಷ್ಟ್ರದಲ್ಲಿ ಸಮಾನತೆಯ ಆಧಾರದ ಮೇಲೆ ಚಳವಳಿಯನ್ನು ರೂಪಿಸಿ ನೆಲೆಗೊಳಿಸಿದರು. ಆ ಹೊತ್ತಿನಲ್ಲಿ ಅವರ ದೃಷ್ಟಿಯೆದುರು ಖಂಡಿತವಾಗಿಯೂ ಬಸವೇಶ್ವರಾದಿಗಳ ಕ್ರಾಂತಿಯ ಯಶಾಪಯಶಗಳೇ ಇದ್ದಿತು ಎಂಬುದು ನನ್ನ ಖಾತ್ರಿ. 'ಮ್ಹಣೋನಿ ಕುಳಜಾತಿವರ್ಣ। ಏವ ಆಘವೇಚಿ ಅಕಾರಣ' (ಎಂತಲೇ ಕುಲಜಾತಿವರ್ಣ। ಸರ್ವವು ಅಕಾರಣ) ಎಂದು ಹೇಳುತ್ತಲೇ ಜ್ಞಾನೇಶ್ವರರು ಸಮತೆಯನ್ನು ಪುರಸ್ಕರಿಸಿದರು ನಿಜ; ಆದರೆ ಆ ಸಮತೆಯ 'ದೇವಾಚಿಯೇ ದ್ವಾರ' (ದೇವರ ದ್ವಾರದೊಳು)ದ ಮರ್ಯಾದೆಗಷ್ಟೇ ಸೀಮಿತಗೊಳಿಸಿದರು. ಕರ್ನಾಟಕದ ಉದಾಹರಣೆಯನ್ನು ಎದುರಿಗಿಟ್ಟುಕೊಂಡೇ ಜ್ಞಾನೇಶ್ವರಾದಿಗಳು ಮಹಾರಾಷ್ಟ್ರದಲ್ಲಿ ನಿಧಾನವಾಗಿ ಹೆಜ್ಜೆ ಹಾಕಿದರು. ಮರಾಠಿ ವೀರಶೈವ ಸಂತರ ವಿಷಯದಲ್ಲಿಯೂ ಖಚಿತವಾಗಿ ಇಂಥದೇ ಆದುದು.

ಕರ್ನಾಟಕದ ಮತ್ತು ಮಹಾರಾಷ್ಟ್ರಗಳ ಪ್ರಶ್ನೆಗಳು ಬೇರೆ ಬೇರೆಯಾದವುಗಳು; ಮತ್ತು ಕಾಲವೂ ಬೇರೆ ಬೇರೆಯೇ. ಬಸವೇಶ್ವರರ ಕಾಲಕ್ಕೆ ವೀರಶೈವ ಸಂಪ್ರದಾಯದ ಅಸ್ತಿತ್ವದ ಮೇಲೆ ಪ್ರಹಾರ, ಸಂಕಟಗಳೇನೂ ಬಂದಿರಲಿಲ್ಲ. ಅಥವಾ ವೀರಶೈವ ಬಾಂಧವರು ಸ್ವಧರ್ಮವನ್ನು ಬಿಟ್ಟು ಪರಧರ್ಮ ಪ್ರವೇಶಕ್ಕೆ ಉತ್ಸಾಹವನ್ನೇನು ತೋರಿಸುತ್ತಿರಲಿಲ್ಲ. ಯಾವ ಪ್ರಶ್ನೆಗಳು ಬಸವೇಶ್ವರರ ಮುಂದಿರಲಿಲ್ಲವೋ ಅವು ಮನ್ಮಥಸ್ವಾಮಿ ಮತ್ತು ಶಾಂತಲಿಂಗಸ್ವಾಮಿಗಳ ಎದುರಿಗಿತ್ತು; ಅಲ್ಲದೆ ಬಸವೇಶ್ವರರ ಕೈಯಲ್ಲಿ ರಾಜ್ಯಾಧಿಕಾರವಿದ್ದಂತೆ ಇವರ ಕೈಯಲ್ಲಿ ಇರಲಿಲ್ಲ. ಅಸ್ಮಾನಿ ಸುಲ್ತಾನರ ಭಯಾವಹ ಸಂಕಟ ಮತ್ತು ಏಕನಾಥರ ಪ್ರಭಾವೀ ನೇತೃತ್ವದಲ್ಲಿ ವಿಸ್ತೃತವಾಗಿ ವ್ಯಾಪಿಸಿ ಬೆಳೆದಿದ್ದ ವಾರಕರಿ ಪಂಥದ ಆಕರ್ಷಣೆ ಇವುಗಳ ಮೂಲಕವೇ ಹಾದಿ ಹುಡುಕುತ್ತಾ ಮಹಾರಾಷ್ಟ್ರದಲ್ಲಿ ವೀರಶೈವ ಸಂಪ್ರದಾಯ ನೆಲೆಯನ್ನು ಕಂಡುಕೊಳ್ಳಬೇಕಾಗಿತ್ತು. ಕಾಲದ ಈ ಆಹ್ವಾನವನ್ನು ಸ್ವೀಕರಿಸುವುದು ಆಗಿನ ಅಗತ್ಯ. ಹೀಗಿರುವಲ್ಲಿ ಬಸವೇಶ್ವರರಂತೆ ನವಸಮಾಜ ನಿರ್ಮಾಣಕ್ಕೆ ಅವಕಾಶವಾದರೂ ಎಲ್ಲಿತ್ತು? ಆಗ್ಗೆ ಮೂಲ ಸಮಾಜದ ಅಸ್ತಿತ್ವವೇ ಕೊನೆಗೊಳ್ಳುವಂತಾಗಿತ್ತು. ಎಂತಲೇ ತಮ್ಮ ಸಂಜೀವಕ ವಾಣಿಯಿಂದ ಸ್ವಧರ್ಮಪಾಲನೆಯ ಉದ್ಘೋಷವನ್ನು ಮಾಡಿ ಅವರಿಗೆ ವೀರಶೈವರ ಮನದಲ್ಲಿನ ಧರ್ಮಬುದ್ಧಿಯನ್ನು ಸತತವಾಗಿ ಜಾಗೃತವಾಗಿಡಬೇಕಾದುದು ಅಗತ್ಯವಾಗಿತ್ತು. ಅಲ್ಲದೆ ವಾರಕರಿ ಸಂಪ್ರದಾಯದ ಉತ್ಕರ್ಷದ ಕಾಲದಲ್ಲಿ ತಮ್ಮ ಸಂಪ್ರದಾಯದ ಪ್ರಾಣದಾಚೆಗೆ ನಿಂತು ಸಂರಕ್ಷಿಸಬೇಕಾಗಿತ್ತು. ಮನ್ಮಥಾದಿ ಸಂತಕವಿಗಳು ಈ ಕಾರ್ಯವನ್ನು ಮಾಡುವಲ್ಲಿ ಯಶಸ್ವಿಯಾದರು.

ನಿಜೂ ನಕಾ ಜಾಗಾ ಜಾಗಾ। ಆಪುಲ್ಯಾ ಸ್ವಧರ್ಮಾನೆ ವಾಗಾ।। ಕಿಂವಾ
ಸಾಂಡೋನೀ ಶಿವಾತೇ ದುಜಿಯಾತೆ ಧ್ಯಾತೀ। ತ್ಯಾಚೇ ತೋಂಡೀ ಮಾತೀ ಜನ್ಮೋಜನ್ಮೀ।।[೧೧]
(ನಿದ್ರಿಸದಿರಿ ಎಚ್ಚರ ಎಚ್ಚರ। ನಿಮ್ಮ ಸ್ವಧರ್ಮದಿ ನಡೆಯಿರಿ।। ಅಥವಾ
ಬಿಸುಟು ಶಿವನನ್ನು ಮತ್ತೊಂದ ಕೊಳುವವನ। ಬಾಯೊಳು ಮಣ್ಣಹುದು ಜನುಮಜನುಮದೊಳು)

ಇಂಥ ವಚನಗಳು ಮನ್ಮಥಸ್ವಾಮಿಯ ಬಾಯಿಂದ ಹೊರಟಿರುವುದು ಈ ಕಾರಣಗಳಿಂದಾಗಿಯೇ, ಮರಾಠಿ ವೀರಶೈವ ಸಂತರು ಪರಂಪರೆಗೆ ಏಕೆ ಶರಣಾಗಿದ್ದರು? ಅವರು ವಾರಕರೀ ಸಂತರದ್ದೇ ಮಾರ್ಗವನ್ನು ಏಕೆ ಆಯ್ಕೆ ಮಾಡಿಕೊಂಡರು? ಅಭಂಗಗಳನ್ನೇ ಏಕೆ ರಚಿಸಿದರು, ವಚನಗಳನ್ನು ಏಕೆ ರಚಿಸಲಿಲ್ಲ? ಟೀಕಾ ಗ್ರಂಥಗಳನ್ನು ಏಕೆ ಬರೆದರು? ಕೀರ್ತನ ಪರಂಪರೆಯನ್ನು ಏಕೆ ಉಳಿಸಿಕೊಂಡರು? ಭಜನಾ ಮಂಡಳಿಗಳನ್ನು ಏತಕ್ಕಾಗಿ ಹುಟ್ಟುಹಾಕಿದರು? ಇತ್ಯಾದಿ ಪ್ರಶ್ನೆಗಳಿಗೆ ತತ್ಕಾಲೀನ ಪರಿಸ್ಥಿತಿಯ ಗಂಭೀರ ಅಧ್ಯಯನದಿಂದಷ್ಟೇ ಉತ್ತರ ಕಂಡುಕೊಳ್ಳಬಹುದು. ವಾರಕರಿ ಸಂಪ್ರದಾಯದ ಕಡೆಗೆ ಆಕರ್ಷಿತರಾದ ವೀರಶೈವರಿಗೆ ಯಾವುದರ ಕಾರಣವಾಗಿ ಈ ಸಂಪ್ರದಾಯವು ಆಕರ್ಷಿಸಿದ್ದು ಎಂಬ ವಿಷಯದಿಂದಾಗಿ ಎಂಬುದನ್ನು ಸ್ಪಷ್ಟವಾಗಿ ತಿಳಿದಂಥ ವೀರಶೈವ ಸಂತರು ಅದನ್ನು ತಮ್ಮ ಸಂಪ್ರದಾಯದಲ್ಲಿ ಸೇರಿಸಿಕೊಳ್ಳಬೇಕಾಯಿತು. ಒಂದೊಮ್ಮೆ ಹಾಗೆ ಮಾಡದೆ ಇದ್ದಿದ್ದರೆ ಮಹಾರಾಷ್ಟ್ರದ ಭೂಪಟದಿಂದ ಕಾಲವೇ ವೀರಶೈವ ಸಂಪ್ರದಾಯವನ್ನು ಸಂಪೂರ್ಣವಾಗಿ ಅಳಿಸಿ ಹಾಕುತ್ತಿತ್ತು. ಸೈದ್ಧಾಂತಿಕ ದೃಷ್ಟಿಯಿಂದ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿನ ವೀರಶೈವ ಸಂಪ್ರದಾಯ ಒಂದೇ

ಆಗಿದ್ದರೂ ಮಹಾರಾಷ್ಟ್ರದಲ್ಲಿನ ವೀರಶೈವ ಸಂಪ್ರದಾಯವು ಮರಾಠಿ ಮಣ್ಣಿನೊಂದಿಗೆ ಅನುಬಂಧವನ್ನು ಉಳಿಸಿ ಕಾಪಾಡಿಕೊಂಡು ಬಂದಿರುವುದರಿಂದಾಗಿ ಅದು ಕರ್ನಾಟಕದಲ್ಲಿನ ವೀರಶೈವ ಸಂಪ್ರದಾಯಕ್ಕಿಂತಲೂ ಬೇರೆಯೇ ಆಗಿ ಕಂಡುಬರುತ್ತಿದೆ ಅಷ್ಟೆ.

ವೀರಶೈವ ಸಂಪ್ರದಾಯ ಮತ್ತು ವಾರಕರಿ ಸಂಪ್ರದಾಯ:

ದಕ್ಷಿಣ ಭಾರತದಲ್ಲಿ ಹೇಗೆ ಶೈವ ವೈಷ್ಣವರ ಸಂಘರ್ಷವುಂಟಾಯಿತೊ ಅಂಥದು ಮಹಾರಾಷ್ಟ್ರದಲ್ಲಿ ಎಂದಿಗೂ ಸಂಭವಿಸಲಿಲ್ಲ. ಜ್ಞಾನೇಶ್ವರರ ಗುರುಸ್ಥಾನವೆನಿಸಿರುವ ನಾಥಸಂಪ್ರದಾಯ ಮತ್ತು ವೀರಶೈವ ಸಂಪ್ರದಾಯ ಇವೆರಡೂ ಒಂದು ರೀತಿಯಲ್ಲಿ ಶೈವ ಸಂಪ್ರದಾಯಗಳೆ ಆಗಿದ್ದವು. ಜ್ಞಾನೇಶ್ವರರು ತಮ್ಮ 'ಅಮೃತಾನುಭವ'ದಲ್ಲಿ ವಿವರಿಸಿರುವ ಶಿವಶಕ್ತಿಯ ಅದ್ವೈತ ವೀರಶೈವರಿಗೆ ಅದು ತಮ್ಮದು ಎಂದು ಎನಿಸದಿದ್ದರೆ ಒಂದು ರೀತಿಯಲ್ಲಿ ಸೋಜಿಗವೇ ಸರಿ! ನಾಥಶೈವನಾಗಿದ್ದರೂ ಜ್ಞಾನೇಶ್ವರನು ವಿಠ್ಠಲ ಭಕ್ತಿಯನ್ನು ಸ್ವೀಕರಿಸಿದನು. ಜೊತೆಗೆ ಮಹಾರಾಷ್ಟ್ರದ ಭೂಮಿಯಾದ್ಯಂತ ಹರಿಹರೈಕ್ಯದ ಸಂಪ್ರದಾಯವನ್ನು ಹೆಚ್ಚು ಸಂಪನ್ನಗೊಳಿಸಿದನು. 'ವಿಠೋನೆ ಶಿರೀ ವಾಹಿಲಾ ದೇವರಾಣಾ!' (ವಿಠ್ಠಲನು ಶಿರದಲ್ಲಿ ದೇವರಾಯನನ್ನು ಹೊತ್ತಿರುವನು.) ಇದೊಂದು ಅಪೂರ್ವ ಸಂಪ್ರದಾಯದ ಒಂದು ಬದಿ. ಕೈಲಾಸವಾಸಿ ಶಿವರಾಯ ಮತ್ತು ವೈಕುಂಠದ ರಾಯ ಇಬ್ಬರೂ ಒಂದೇ ವೇಳೆಯಲ್ಲಿ ಒಂದೇ ಭೂಮಿಯಲ್ಲಿ ತಂತಮ್ಮ ಭಕ್ತರಿಗೆ ಭಕ್ತಿಗೆ ಪ್ರೇರಣೆ ನೀಡುತ್ತಿದ್ದರು; ಸಮತೆಯ ದೀಕ್ಷೆಯನ್ನು ನೀಡುತ್ತಿದ್ದರು; ಕರುಣೆಯ ಮಹತ್ವವನ್ನು ತಿಳಿಸಿ ಹೇಳುತ್ತಿದ್ದರು ಎಂಬ ರಾಮಚಂದ್ರ ಚಿಂತಾಮಣ ಢೇರೆಯವರು ಹೇಳಿರುವ ಮಾತುಗಳು ಯಥಾರ್ಥವಾದುದೇ ಆಗಿವೆ.[೨]

ನಾಥ ಸಂಪ್ರದಾಯವು ವೀರಶೈವ ಸಂಪ್ರದಾಯ ಮತ್ತು ವಾರಕರಿ ಸಂಪ್ರದಾಯಗಳೊಂದಿಗೆ ಸೂಕ್ಷ್ಮ ಅನುಬಂಧವನ್ನು ಹೊಂದಿದೆ. ಉಪಾಸ್ಯ ದೇವತೆ ಮತ್ತು ಉಪಾಸನ ಪದ್ಧತಿಗಳು ಭಿನ್ನವಾಗಿದ್ದರೂ ಇವೆರಡೂ ಸಂಪ್ರದಾಯಗಳ ಮಾರ್ಗ ಸಮನ್ವಯಶೀಲತೆ ಮತ್ತು ಉದಾರಮತವಾದಗಳಲ್ಲಿಯೇ ಸದಾ ನಡೆಯುತ್ತಿರುವುದಾಗಿದೆ. ಬಾಹ್ಯವೇಷ ಭಿನ್ನವಾಗಿದ್ದರೂ ಅವುಗಳ ಆತ್ಮ ಮಾತ್ರ ಒಂದೇ ಆಗಿದೆ.

ವೀರಶೈವ ಪ್ರಭಾವಶಾಲಿತ್ವದ ಗುರುತು ಹದಿಮೂರನೆಯ ಶತಮಾನದಿಂದ ಮರಾಠಿ ವಾಙ್ಮಯದಲ್ಲಿ ಮೂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ವಿಸೋಬಾ ಖೇಚರನ 'ಷಟ್‌ಸ್ಥಳ'(ಷಡು ಸ್ಥಳ)ವು ನವೋಪಲಬ್ಧ ಮರಾಠಿ ಗ್ರಂಥವಾಗಿದ್ದು, ವೀರಶೈವ ಪ್ರಭಾವದ ದ್ಯೋತಕವಾಗಿದೆ. ಆದರೆ ವಾರಕರಿ ಸಂತರ ಅಭಂಗವಾಣಿಯ ವಾರಸುದಾರಿಕೆಯನ್ನು ಹದಿನಾರನೆಯ ಮತ್ತು ಆನಂತರದ ವೀರಶೈವ ಸಂತಕವಿಗಳು ಸಾಭಿಮಾನದಿಂದ ಮೆರೆಯುತ್ತಿರುವುದನ್ನು ಕಾಣಬಹುದಾಗಿದೆ. 'ಜ್ಞಾನೇಶ್ವರಿ'ಯಲ್ಲಿ ವೀರಶೈವರ ಪರಿಭಾಷೆ ವ್ಯಕ್ತವಾಗಿರುವುದನ್ನು ಸಹಜವಾಗಿಯೇ ಕಾಣಬಹುದು. ಹಾಗೆಯೇ ಮನ್ಮಥಸ್ವಾಮಿಯವರ 'ಪರಮರಹಸ್ಯ' ಕೃತಿಯ ಮೇಲೆ ಜ್ಞಾನೇಶ್ವರಿಯ ಸಂಸ್ಕಾರವಾಗಿರುವುದನ್ನೂ ಕಾಣಬಹುದು. ವೀರಶೈವ ಮತ್ತು ವಾರಕರಿ ಈ ಎರಡೂ ಸಂಪ್ರದಾಯಗಳಲ್ಲಿನ ಸಂತರ ಆಂತರಿಕ ಏಕರೂಪತೆಯು ಮನಮೋಹಿಸುವಂಥ ಸ್ವರೂಪದ್ದಾಗಿದೆ.

ಮುಕ್ತಾಬಾಯಿಯವರ ಒಂದು ಸ್ಫುಟ ಕವಿತೆಯಲ್ಲಿ ಆಚಾರ-ಕ್ರಿಯಾ, ಲಿಂಗ, ಗುರು, ಶಿವಲಿಂಗ, ಪ್ರಸಾದಲಿಂಗ ಎಂಬಿತ್ಯಾದಿ ವೀರಶೈವ ಪರಿಭಾಷೆಗಳು ಯೋಗಾನುಭವದ ಅಭಿವ್ಯಕ್ತಿಗಾಗಿ ಯೋಜಿತಗೊಂಡಿವೆ.[೧೩] ವೀರಶೈವರ 'ಸ್ಥಳ' ಎಂಬ ಪಾರಿಭಾಷಿಕ ಸಂಜ್ಞೆಯು ಮಹಾನುಭಾವಗಳದ್ವಾದ 'ಆಚಾರಸ್ಥಲ', 'ತ್ಯಾಗಸ್ಥಲ', 'ಸ್ಮೃತಿಸ್ಥಲ' ಇತ್ಯಾದಿ ಗ್ರಂಥನಾಮಗಳಲ್ಲಿ ದಿವಾಖಿನಿಂದ ಮೆರೆಯುತ್ತಿರುವುದು ಮುಖ್ಯವಾಗಿ ಕಂಡುಬರುತ್ತಿರುವ ಅಂಶ. 'ಜೇಯಾಚೆ ಸ್ಥಳ ನಿರಾಧಾರ ಹೋಯ್; ತೇಯಾಚೆ ಗೋಸಾವೀ ಅವಲೋಕಿತೀ।'[೧೪] (ಯಾರ ಸ್ಥಲವು ನಿರಾಧಾರವಾಗಿರುವುದೋ ಅವರನ್ನು ಗೋಸಾವಿ ಅವಲೋಕಿಸುವನು) ಎಂಬ ಲೀಳೆಯಲ್ಲಿನ 'ಸ್ಥಳ' ಎಂಬ ಸಂಕೇತವು ಸಿದ್ಧಾಂತವಾಚಕವೆ ಆಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ವೀರಶೈವ ಮತ್ತು ಮಹಾನುಭಾವ ಈ ಸಂಪ್ರದಾಯಗಳಲ್ಲಿನ ಸಾಮ್ಯಗಳ ವಿವರಣೆಯನ್ನು ಪ್ರಾ.ರ.ಮ. ಭುಸಾರಿಯವರು ತುಂಬ ವಿಸ್ತೃತವಾಗಿಯೇ ಬರೆದಿದ್ದಾರೆ.[೧೫] ವೀರಶೈವರ ಪ್ರಭಾವ ಪ್ರಾಚೀನ ಮರಾಠಿ ವಾಙ್ಮಯದಿಂದ ಹೀಗೆ ಸ್ರವಿಸಿ ಬಂದಿದೆ.

ಮರಾಠಿ ವೀರಶೈವ ಸಂತಕವಿಗಳ ವಾಙ್ಮಯದಲ್ಲಿ ವಾರಕರಿ ಸಂತರ ಪ್ರಭಾವದ ಕುರುಹುಗಳು ಹೆಜ್ಜೆಹೆಜ್ಜೆಗೂ ಅರಿವಿಗೆ ಬರುವುದು. ಮನ್ಮಥಸ್ವಾಮಿಯು ಜ್ಞಾನೇಶ್ವರನ ಅನುವಾದವಾಗಿರುವ ಹಾಗೆ ಭಾಸವಾಗುತ್ತಿರುತ್ತದೆ. 'ಜೇ ಜೇ ಭೇಟೇ ಭೂತ। ತೇ ತೇ ಮಾನಿಜೇ ಭಗವಂತ' (ಯಾವ್ಯಾವುದೆಲ್ಲ ಭೇಟಿಯಾಗಿರುವೆನೋ ಹಿಂದೆ॥ ಅವವುಗಳೆಲ್ಲ ಒಪ್ಪಿತವು ಭಗವಂತನಿಗೆ) ಎಂಬುದು ಜ್ಞಾನೇಶ್ವರನ ಭಕ್ತಿಯೋಗದ ಮಂಡನೆಯಾದರೆ, 'ಜೇ ಜೇ ದೇಖಿಜೇ ಭೂತಮಾತ್ರ। ತೇ ತೇ ಜಾಣಿಜೇ ಆತ್ಮಸೂತ್ರ। (ಯಾವ್ಯಾವುದೆಲ್ಲ ನೋಡಲಾಗಿದೆಯೋ ಭೂತದಲ್ಲಿ ಮಾತ್ರ। ಅವೆಲ್ಲವನು ತಿಳಿದಿಹುದು ಆತ್ಮಸೂತ್ರ) ಮನ್ಮಥಸ್ವಾಮಿಯು ಅದನ್ನೇ ಹೀಗೆ ಈ ಸೂತ್ರದಲ್ಲಿ ಹೇಳಿರುವುದನ್ನು ಗಮನಿಸಬಹುದು. ಖರೆ ವೀರಶೈವ ಹೇಗಿರುತ್ತಾನೆ ಎಂಬುದನ್ನು ಕುರಿತು ಹೇಳುವಾಗ ಆತ ನಿಃಶಂಕೆಯಿಂದಲೆ 'ಜ್ಞಾನೇಶ್ವರಿ'ಯ ಹದಿಮೂರನೆಯ ಅಧ್ಯಾಯದಲ್ಲಿನ ಜ್ಞಾನಲಕ್ಷಣವನ್ನೇ ಬಳಸಿಕೊಂಡಿದ್ದಾನೆ. ಜ್ಞಾನೇಶ್ವರನ ಈ ಶಬ್ದಕಲೆಯನ್ನು ತನ್ನ ರಚನೆಯಲ್ಲಿ ಹೆಜ್ಜೆ ಹೆಜ್ಜೆಗೂ ಛಾಪಿಸಿರುವುದನ್ನು ಕಾಣಬಹುದು. ವಾರಕರಿ ಸಂತರ 'ಹರಿಪಾಠ'ದ ನೆಲೆಯ ಮೇಲೆಯೆ ವೀರಶೈವ ಸಂತರು 'ಶಿವಪಾಠ'ವನ್ನು ಬರೆದಿದ್ದಾರೆ, ಅಭಂಗಗಳನ್ನು ರಚಿಸಿದ್ದಾರೆ, ಬಾಳಸಂತೋಷ (ಬಾಲಸಂತೋಷ), ಆಂಧಳಾ (ಅಜ್ಞಾನ), ಜೋಹಾರಣ (ಅಗ್ನಿಪ್ರವೇಶ), ಭಾರುಡೆ (ಅಡಚಣೆ, ನಿಂದೆ) ಮತ್ತು ಆಧ್ಯಾತ್ಮಿಕ ಕೂಟಗಳನ್ನು ಬರೆದಿದ್ದಾರೆ. ಲಕ್ಷ್ಮಣ ಎಂಬ ವೀರಶೈವ ಸಂತಕವಿಯು

'ಭವನಾಶನೀ ಪಂಢರಿ। ಪಾಹೂ ಚಲಾ ಹೋ ಝಡಕರೀ।
ಪೂರ್ಣಬ್ರಹ್ಮ ತೋ ಶ್ರೀಹರಿ। ಭೀಮಾತಟೀ ಶೋಭತಸೇ॥'[೧೬]

(ಭವನಾಶಕನು ಪಂಢರಿ। ಬೇಗನೆ ನೋಡಲು ನಡೆಯಿರಿ। ಪೂರ್ಣಬ್ರಹ್ಮನವನು ಶ್ರೀಹರಿ। ಶೋಭಿಸಿರುವನು ಭೀಮಾ ತೀರದೊಳು॥) ಎಂಬುದಾಗಿ ಹೇಳಿದ್ದಾನೆ. ಹೀಗೆ ಒಂದು ತುಲಸೀದಳವೂ ಮಹಾರಾಷ್ಟ್ರದ ಈ ಆರಾಧ್ಯ ದೇವತೆಯ ಮೇಲೆ ಏರಿ ಪಾವನವಾಗುವುದನ್ನು ಮರೆಯುವುದಿಲ್ಲ.

ವೀರಶೈವ ಸಂಪ್ರದಾಯ ಮತ್ತು ವಾರಕರಿ ಸಂಪ್ರದಾಯ ಇವುಗಳ ತತ್ವಜ್ಞಾನ, ಉಪಾಸನ ಪದ್ಧತಿಗಳು ಭಿನ್ನವಾಗಿದ್ದರೂ ಅವುಗಳ ಪರಮಧ್ಯೇಯ ಒಂದೇ ಆಗಿದೆ ಎಂಬುದರ ಮರೆವು ಈ ಎರಡೂ ಸಂಪ್ರದಾಯ ದಲ್ಲಿನ ಸಂತರಿಗೆ ಬರಲೇ ಇಲ್ಲ. ಎರಡೂ ಸಂಪ್ರದಾಯಗಳು ಮುಖ್ಯವಾಗಿ ಭಕ್ತಿಸಂಪ್ರದಾಯ ಗಳಾಗಿರುವುದರಿಂದ ಕೇವಲ ನಾಮಭೇದದಿಂದ ತಮ್ಮ ಉಪಾಸನೆಯನ್ನು ಬೇರೆ ಎಂದು ಒಪ್ಪಿಕೊಂಡಿದ್ದರೂ ಎರಡರಲ್ಲೂ ಇರುವ 'ಭಕ್ತಿತತ್ತ್ವ' ಸಮಾನವಾದುದೇ ಆಗಿದೆ ಎಂಬುದರಲ್ಲಿಯೇ ಅವರ ಶ್ರದ್ಧೆ.

'ಹರಿಹರಾಂ ಭೇದ। ನಾಹೀ ಕರೂ ನಯೇ ವಾದ॥
ಏಕ ಏಕಾಂಚೇ ಹೃದಯೀ। ಗೋಡೀ ಸಾಖರೇಚ್ಯಾ ಠಾಯೀ॥
ಭೇದಕಾಸೀ ನಾಡ॥ ಏಕ ವೇಲಾಂಟೀಚ ಆಡ॥'[೧೭]

(ಹರಿಹರರ ಭೇದವನು। ಮಾಡಬಾರದು ಅಂತೆ ವಾದ। ಒಬ್ಬರೊಬ್ಬರ ಹೃದಯದಿ। ಸ್ವಾದವು ಸಿಹಿಸಕ್ಕರೆಯಂದದಿ॥ ಭೇದಕರಿಗೆ। ಇಕಾರವೊಂದು ಅಡ್ಡಿಯು॥) ಎಂಬುದಾಗಿ ತುಕಾರಾಮನು ಹೇಳಿದ್ದಾನೆ. ಹಾಗೆಯೇ.

'ಹರಿಹರಾ ನಾಹೀ ದ್ವೈತ। ವ್ಯರ್ಥ ವಾದಕಾಚೇ ಮತ॥
ಜೈಸೀ ಬ್ರಹ್ಮ ಆಣಿ ಮಾಯಾ। ತೈಸೀ ಪುರುಷಾಅಂಗೀ ಛಾಯಾ॥
ಮಾಯಪೀಠ ಪಾಂಡುರಂಗ। ವರೀ ಬ್ರಹ್ಮ ಶಿವಲಿಂಗ॥'[೧೮]

(ಹರಿಹರರೊಳು ಇಲ್ಲವು ದ್ವೈತ। ವ್ಯರ್ಥವದು ವಾದಕರ ಮತ॥ ಎಂತು ಬ್ರಹ್ಮ ಮತ್ತು ಮಾಯಾ। ಅಂತು ಪುರುಷನ ಅಂಗದಿ ಛಾಯಾ॥ ಮಾತೃಪೀಠವೊ ಪಾಂಡುರಂಗ। ಮೇಲಿಹುದು ಬ್ರಹ್ಮ ಶಿವಲಿಂಗ॥)

ಎಂಬುದಾಗಿ ಶಿವದಾಸನು ಆಶ್ವಾಸನೆ ನೀಡಿರುವನು. ಉಪಾಸ್ಯ ದೇವತೆಗಳ ಕಾರಣ ಆಗುವ ಅಸಹಿಷ್ಣುತೆಯ ಕಲಹಕ್ಕೆ ಮಹಾರಾಷ್ಟ್ರದ ಭೂಮಿಯಲ್ಲಿ ಎಂದಿಗೂ ಅವಕಾಶವಾಗಲಿಲ್ಲ. ತಂತಮ್ಮ ಸಂಪ್ರದಾಯ ವೈಶಿಷ್ಟ್ಯಗಳನ್ನು ಜತನವನ್ನು ಎರಡೂ ಸಂಪ್ರದಾಯದವರೂ ಮಾಡಿಕೊಂಡೇ ಬಂದಿದ್ದಾರೆ. ಹಾಗೆ ಮಾಡುವಲ್ಲಿ ಕಟುತನವಾಗಲೀ ಅಥವಾ ಅಸಹಿಷ್ಣುತೆಯನ್ನಾಗಲೀ ಎಲ್ಲಿಯೂ ಹುಟ್ಟುವುದಕ್ಕೆ ಇಂಬು ಕೊಡದಿರುವುದು ಇಲ್ಲಿನ ಗಮನಾರ್ಹ ಸಂಗತಿ. ಪರಸ್ಪರರು ಇವೆರಡೂ ಮತಗಳನ್ನು ಆದರಿಸುತ್ತಿದ್ದರು, ಅನೇಕತ್ವದಲ್ಲಿನ ಏಕತ್ವವನ್ನು ಅರಿತುಕೊಂಡುದರಿಂದ ಎರಡೂ ಸಂಪ್ರದಾಯಗಳೂ ಚಾಲ್ತಿಯಲ್ಲಿದ್ದವು. ದಕ್ಷಿಣದಲ್ಲಿನ ಧರ್ಮಸಂಗ್ರಾಮದ ಪಾರ್ಶ್ವಭೂಮಿಗೆ ಮಹಾರಾಷ್ಟ್ರದ ಈ ವೀರಶೈವ ಮತ್ತು ವಾರಕರಿ ಸಂಪ್ರದಾಯಗಳ ಸೌಹಾರ್ದತೆಯು ಲಕ್ಷಣೀಯ ಮಾದರಿಯಾಗಿದೆ ಎಂಬುದರಲ್ಲಿ ಯಾವ ಶಂಕೆಯೂ ಇಲ್ಲ.

೦೫. ವೀರಶೈವರ ಮರಾಠಿ ರಚನೆಗಳು:

ವೀರಶೈವರ ಪ್ರಮುಖ ಆಧಾರ ಗ್ರಂಥಗಳೆಲ್ಲ ಸಂಸ್ಕೃತ ಭಾಷೆಯಲ್ಲಿವೆ. ಬಸವಣ್ಣನವರ ಕಾಲಕ್ಕೆ ಆಡುಭಾಷೆಗೆ ಹೆಚ್ಚು ಮಹತ್ವ ಪ್ರಾಪ್ತವಾದುದರಿಂದ ಕರ್ನಾಟಕದಲ್ಲಿನ ಶಿವಶರಣರು ಇಲ್ಲಿನ ಜನರ ಆಡುಭಾಷೆಯಾದ ಕನ್ನಡದಲ್ಲಿ ಗ್ರಂಥ ರಚನೆಯನ್ನು ಮಾಡಿದರು. ಅವು ಗಪದ್ಯದಂತಿದ್ದರೂ ಗೇಯ ಸ್ವರೂಪದವುಗಳಾಗಿದ್ದು ಸಾವಿರಾರು ಸಂಖ್ಯೆಯಲ್ಲಿ ರಚನೆಯಾಗಿವೆ.

ಮಹಾರಾಷ್ಟ್ರದಲ್ಲಿ ಯಾದವರ ಕಾಲದಲ್ಲಿ ವೀರಶೈವರಿಗೆ ಮಾನನೀಯ ಸ್ಥಾನ ದೊರೆತಿರುವಂತೆ ಕಂಡುಬಂದರೂ ವೀರಶೈವರ ಮರಾಠಿ ರಚನೆಗಳಂತೂ ಉಪಲಬ್ಧವಾಗಿರುವಂತೆ ಕಂಡುಬರುವುದಿಲ್ಲ. ಬೇಚರ ವಿಸಾ ಕೃತ 'ಷಟ್‌ಸ್ಥಲ'ವೇ ಏಕಮೇವ ಗ್ರಂಥ, ಯಾದವರ ಕಾಲದಲ್ಲಿ ಮರಾಠಿಯಲ್ಲಿ ವೀರಶೈವ ವಿಚಾರಗಳನ್ನು ಗ್ರಥಿತಗೊಂಡಿದ್ದುದಕ್ಕೆ ಸಾಕ್ಷ್ಯ ನೀಡುವ ಗ್ರಂಥವಾಗಿದೆ. ಆದರೆ ಬೇಚರ ವಿಸಾ ಎಂಬ ಈತನು ವೀರಶೈವ ಗ್ರಂಥಕಾರನಾಗಿದ್ದನೋ ಅಥವಾ ಜ್ಞಾನೇಶ್ವರ ಮಂಡಳಿಯಲ್ಲಿದ್ದ ವಿಸೋಬಾ ಖೇಚರನೇ ಈ ಹೆಸರಿನವನೋ ಎಂಬ ಬಗ್ಗೆ ಮತಭೇದವಿದೆ. ಡಾ.ರಾಮಚಂದ್ರ ಚಿಂತಾಮಣಿ ಢೇರೆಯವರು ತಮ್ಮ 'ಚಕ್ರಪಾಣಿ' ಎಂಬ ಕೃತಿಯಲ್ಲಿ ಬೇಸರ ವಿಸಾ ಕೃತ 'ಷಟ್‌ಸ್ಥಲ' ಎಂಬ ಗ್ರಂಥದ ಆಧಾರದಿಂದ ಮಹಾರಾಷ್ಟ್ರದಲ್ಲಿನ ವೀರಶೈವ ವಿಚಾರಗಳ ಪ್ರಭಾವದ ಬಗೆಗೆ ಮಾಡಿರುವ ಕಥನವು ಅತ್ಯಂತ ಅಪೂರ್ವವಾದುದೇ ಹೌದು. ಮಹಾರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿನ ಅನೇಕ ಘಟನೆಗಳನ್ನು ಆ ನಿಮಿತ್ತದಿಂದ ಹೊಸ ರೀತಿಯಲ್ಲಿ ಮಂಡಿಸಿರುವುದು ಗಮನಾರ್ಹ.

ಹದಿಮೂರನೆಯ ಶತಮಾನದಲ್ಲಿ ವೀರಶೈವ ವಿಚಾರಗಳನ್ನು ಮಂಡಿಸುವ ಗ್ರಂಥ ರಚನೆಯಾಗಿರಬೇಕು ಎಂಬುದಾಗಿ ಈ 'ಷಟ್‌ಸ್ಥಲ' ಎಂಬ ಗ್ರಂಥದ ಉಪಲಬ್ಧತೆಯ ಹಿನ್ನೆಲೆಯಲ್ಲಿ ಹೇಳಬಹುದಾಗಿದೆ. ಆದರೆ ಹದಿನಾರನೆಯ ಶತಕಕ್ಕೆ ಪೂರ್ವದ ಮರಾಠಿ ವೀರಶೈವ ವಾಙ್ಮಯ ಇಂದಿಗೂ ಅಜ್ಞಾತವಾಗಿಯೇ ಉಳಿದಿದೆ. ಮರಾಠಿ ವಾಙ್ಮಯದ ಮೇಲೆ ಇಂದಿಗೂ ಕಂಡು ಬರುತ್ತಿರುವುದು ಅಕ್ಷಮ್ಯ ಅಪರಾಧವೋ ಎಂಬ ರೀತಿಯಲ್ಲಿ ತೀರಾ ಉಪೇಕ್ಷೆ. ಇದು ವೀರಶೈವೇತರರಿಂದ ಆಗಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವೀರಶೈವರಿಂದಲೆ ಆಗಿರುವುದು ಅತ್ಯಂತ ಖೇದದ ಸಂಗತಿ. ಒಂದೆಡೆ ಸಂಪ್ರದಾಯ ಪ್ರಿಯರು ಇವನ್ನು ಪ್ರಕಟಿಸದೆ ಮುಚ್ಚಿಟ್ಟರು. ಇನ್ನೊಂದೆಡೆ ಹಾಗೆಯೆ ಅವು ಗೆದ್ದಲಿನ ಭಕ್ಷ್ಯಕ್ಕಾಗಿ ಇಡಲಾಗಿದೆ. ಸಾಖರಖೇಡಿಯಲ್ಲಿನ ಪಲಸಿದ್ಧಮಠದಲ್ಲಿನ ಗ್ರಂಥ ಸಂಪತ್ತಿಗೆಲ್ಲ ಒಬ್ಬ ಅಪ್ಪಾಡಿ ಕಲಾವಿದನು ಕೆಸರು ಮೆತ್ತಿ ಅದರಿಂದ ಒಂದು ಪ್ರತಿಮೆಯನ್ನು ಸ್ಥಾಪಿಸಿದ ಎಂಬ ಕಥೆಯುಂಟು. ಇಂಥ ಗ್ರಂಥ ಶತ್ರುಗಳೇ ಅಜ್ಞಾನದಿಂದಾಗಿ ಪ್ರಚಂಡ ಗ್ರಂಥ ಸಂಪತ್ತನ್ನು ವಿನಾಶ ಮಾಡಿರುವವರಾಗಿದ್ದಾರೆ. ಒಂದೊಮ್ಮೆ ಹೀಗೆ 'ವೀರಶೈವ ವಿಚಾರಗಳ ಸಂಪರ್ಕವು ಯಾದವರ ಕಾಲದಿಂದಲೇ ತೋರಿಸುವದಕ್ಕೆ ಸಾಧ್ಯವಾಗಿದ್ದರೆ ವೀರಶೈವರ ಮರಾಠಿ ವಾಙ್ಮಯದ ಇತಿಹಾಸವನ್ನು ಮಾತ್ರ ಶಾಂತಲಿಂಗ ಸ್ವಾಮಿಯವರಿಂದಲೇ ಆರಂಭಿಸಬೇಕಾಗುವುದು.''[೫] ಎಂಬ ವಸ್ತುಸ್ಥಿತಿಯನ್ನು ದೃಷ್ಟಿಸದೇ ಇರಲು ಸಾಧ್ಯವಿಲ್ಲ.

ಮರಾಠಿ ವೀರಶೈವರಿಂದ ಯಾವ ಕಾಲದಲ್ಲಿ ವಾಙ್ಮಯದ ನಿರ್ಮಿತಿಯಾಯಿತೋ ಆ ಕಾಲದಲ್ಲಿನ ಮಾನವ ಜೀವನವು ಧರ್ಮ ಪ್ರಭಾವಿತವಾದುದಾಗಿತ್ತು. ಧರ್ಮವು ಜೀವನಕ್ಕೆ ಆಧಾರಶೀಲವೆನಿಸಿತ್ತು. ಹಾಗಾಗಿ ಆ ಕಾಲದಲ್ಲಿನ ವಾಙ್ಮಯದಲ್ಲಿ ಧಾರ್ಮಿಕ ಭಾವನೆಗೆ ಪ್ರಾಥಮ್ಯ ಮತ್ತು ಪ್ರಾಧಾನ್ಯವು ದೊರಕಿತ್ತು. ವೀರಶೈವ ವಾಙ್ಮಯವೂ ಈ ವಿಚಾರಕ್ಕೆ ಅಪವಾದವಾಗಿರಲಿಲ್ಲ. ಅಷ್ಟೇ ಅಲ್ಲದೆ 'ವೀರಶೈವ ವಾಙ್ಮಯ' ಎಂಬ ಅಭಿದಾನವೇ ಅದರ ಧಾರ್ಮಿಕ ಸ್ವರೂಪವನ್ನು ಬೋಧೆ ಮಾಡಿಕೊಡು ವುದಾಗಿದೆ. ಮಹಾರಾಷ್ಟ್ರದಲ್ಲಿನ ವೀರಶೈವ ಸಮಾಜಕ್ಕೆ ತಮ್ಮ ಧರ್ಮ-ತತ್ತ್ವಜ್ಞಾನದ ಮತ್ತು ಆಚಾರ

ಧರ್ಮದ ಅರಿವನ್ನು ಮಾಡಿಕೊಡುವುದೂ ಈ ವೀರಶೈವ ವಾಙ್ಮಯದ ನಿರ್ಮಿತಿಯ ಒಂದು ಮುಖ್ಯ ಹೇತುವಾಗಿದೆ. ಟೀಕಾಗ್ರಂಥ ಮತ್ತು ಸ್ವತಂತ್ರ ಗ್ರಂಥಗಳ ರಚನೆ ಇದಕ್ಕಾಗಿಯೇ ಆಗಿರುವಂತೆ ತೋರುತ್ತದೆ. ಬಹುತೇಕ ವೀರಶೈವ ಕವಿಗಳು ಈ ಸಂತಕವಿಗಳೇ ಆಗಿರುತ್ತಿದ್ದುದರಿಂದ ತಮ್ಮ ಭಕ್ತಿಭಾವನೆಗೆ ಅವರು ಅಭಂಗಗಳ ಮೂಲಕ ಶಬ್ದರೂಪ ಕೊಟ್ಟಿರುವರು. ಇದು ಇವರ ವಾಙ್ಮಯ ನಿರ್ಮಾಣದ ಮತ್ತೊಂದು ಮುಖ್ಯ ಹೇತುವೇ ಆಗಿದೆ ಎಂಬುದಾಗಿಯೂ ಹೇಳಬಹುದಾಗಿದೆ.

ಮಹಾರಾಷ್ಟ್ರದಲ್ಲಿನ ವೀರಶೈವ ಸಮಾಜಕ್ಕೆ ಜಾಗೃತಗೊಳಿಸಿ ತಮ್ಮ ಸಂಪ್ರದಾಯ-ವೈಶಿಷ್ಟ್ಯವನ್ನು ಪರಿಪೋಷಿಸುವುದು ಈ ಸಂತರುಗಳ ಮುಂದಿದ್ದ ಬಹು ದೊಡ್ಡ ಆಹ್ವಾನ. ಆ ಕಾರಣದಿಂದಾಗಿ ಅವರು ಸಂಸ್ಕೃತ -ಕನ್ನಡ ಭಾಷೆಗಳಲ್ಲಿನ ಗ್ರಂಥಗಳನ್ನು ಆಧರಿಸಿ ಟೀಕಾಗ್ರಂಥಗಳನ್ನು ರಚಿಸಿದರು. ಅದರೊಂದಿಗೆ ಸ್ವತಂತ್ರ ಗ್ರಂಥಗಳನ್ನೂ ಸಹ ನಿರ್ಮಿಸಿದರು. ಸಾಂಪ್ರದಾಯಿಕ ತತ್ವಜ್ಞಾನ ಮತ್ತು ಆಚರಣೆಗಳನ್ನು ಸುಲಭ ಪದ್ಧತಿಯಿಂದ ಅವರು ಲೋಕದೆದುರು ಮಂಡಿಸಿದರು. ಸಮಾಜದಲ್ಲಿನ ನ್ಯೂನತೆಗಳನ್ನು ಇಟ್ಟುಕೊಂಡೇ ಅಭಂಗಗಳನ್ನು ರಚನೆಗೆ ತೊಡಗಿದುದು ಗಮನಾರ್ಹ. ತಮ್ಮ ಭಕ್ತಿಭಾವನೆಗೆ ಅಭಂಗಗಳ ಮೂಲಕವೇ ಶಬ್ದರೂಪವನ್ನು ನೀಡಿದರು. ಜೊತೆಗೆ ಶಿವಭಕ್ತಿಯ ಆದರ್ಶವನ್ನು ಸಮಾಜದೆದುರು ಮಂಡಿಸಿದರು. ವಾಸುದೇವ (ನವಿಲಿನ ಟೊಪ್ಪಿಗೆ ಹಾಕಿಕೊಂಡು ನೀತಿ ಹೇಳುತ್ತಾ ಭಿಕ್ಷೆ ಬೇಡುವವರು), ಭಾರುಡೆ (ನಿಂದನಾ ಗೀತೆಗಳು)ಗಳಂತಹ ಜನಪ್ರಿಯವಾದ ರಚನೆಗಳ ಮೂಲಕ ಬಹುವಿಧದ ಮತ್ತು ಸಂಪನ್ನವಾದ ರಚನೆಗಳನ್ನು ಮಾಡುತ್ತಿದ್ದಂಥ ವಾರಕರಿ ಸಂತರ ಗಾಯನ ಪರಂಪರೆಯವರು ತಾವಾಗಿದ್ದೇವೆ ಎಂಬುದನ್ನು ಸಿದ್ಧಪಡಿಸಿ ತೋರಿಸಿದರು.

ಮರಾಠಿಯಲ್ಲಿನ ವೀರಶೈವ ವಾಙ್ಮಯವನ್ನು ಅನುವಾದ-ಗ್ರಂಥ, ಟೀಕಾಗ್ರಂಥ, ಸ್ವತಂತ್ರ ಗ್ರಂಥ, ಚರಿತ್ರಗ್ರಂಥ, ಅಭಂಗ ರಚನೆ ಮತ್ತು ಸ್ಫುಟರಚನೆಗಳು ಹೀಗೆ ಆರು ಪ್ರಕಾರಗಳಲ್ಲಿ ವಿಭಾಗಿಸಬಹುದಾಗಿದೆ. 'ವಿವೇಕ ಚಿಂತಾಮಣಿ', 'ಕರಣಹಸುಗೆ(ಕರ್ಣಹಂಸ)', 'ಲೀಲಾವಿಶ್ವಂಭರ'ಗಳಂಥ ಕನ್ನಡ ಭಾಷೆಯಿಂದ ಅನುವಾದಿಸಿರುವ ಕೃತಿಗಳು ಇವೆ. ಹಾಗೆಯೇ 'ಶ್ರೀಗುರುಗೀತಾ', 'ಪರಮರಹಸ್ಯ', 'ವೀರಶೈವಧರ್ಮ ನಿರ್ಣಯಟೀಕಾ', 'ಅಷ್ಟಾವರಣ ಮಹಾತ್ಮ್ಯ', 'ಶಿವರಹಸ್ಯ'- ಇಂಥವೇ ಮೊದಲಾದ ಸಂಸ್ಕೃತ ಗ್ರಂಥಾಶ್ರಿತ ರಚನೆಗಳೂ ಉಪಲಬ್ಧವಾಗಿವೆ. 'ಶಾಂತಬೋಧ', 'ನಿಜಾತ್ಮಸಾರ', 'ಸಿದ್ಧಾಂತಸಾರ', 'ಅನುಭವಾನಂದ', 'ಸ್ವಯಂಪ್ರಕಾಶ', 'ಜ್ಞಾನಬೋಧ', ಇತ್ಯಾದಿ ಸ್ವತಂತ್ರವಾಗಿ ರಚಿಸಿರುವ ಗ್ರಂಥಗಳೂ ಇರುವುವು. ಹಾಗೆಯೇ 'ಸಿದ್ಧೇಶ್ವರ ಪುರಾಣ', 'ಬಸವ ಪುರಾಣ', 'ಸಿದ್ಧೇಶ್ವರ ಮಾಹಾತ್ಮ್ಯ' (ಪಲಸಿದ್ಧ ಚರಿತ್ರ), 'ಶರಣಬಸಪ್ಪಾ ಚರಿತ್ರ' ಇತ್ಯಾದಿ ಮಹಾಪುರುಷರ, ಸಂತರ ಚರಿತ್ರವರ್ಣನೆಗಳುಳ್ಳ ಕಾವ್ಯಗಳೂ ಇವೆ. ವಿಶೇಷವೆಂದರೆ ಈ ಎಲ್ಲ ಕೃತಿಗಳು ಓವಿ ಛಂದಸ್ಸಿನಲ್ಲಿ ರಚನೆಯಾಗಿರುವುದು.

ಮನ್ಮಥಸ್ವಾಮಿಯೇ ಮೊದಲ ವೀರಶೈವ ಅಭಂಗಕಾರ. ಅವನ ಕೆಲವೇ ಅಭಂಗಗಳು ಉಪಲಬ್ಧವಾಗಿವೆ. ಆದರೆ ಏನು ಸಿಕ್ಕಿವೆಯೋ ಅವೇ ಅತ್ಯಂತ ಸತ್ವಭರಿತವಾದವುಗಳಾಗಿವೆ. ಮುಂದೆ

ಅವರಿಂದ ಸ್ಫೂರ್ತಿ ಪಡೆದುಕೊಂಡ ಅನೇಕ ವೀರಶೈವ ಕವಿಗಳು ಅಭಂಗಗಳನ್ನು ರಚಿಸಿದ್ದು ಅವು ಸಾವಿರಾರು ಸಂಖ್ಯೆಯಲ್ಲಿ ಉಪಲಬ್ಧವಾಗಿವೆ. ಈ ಅಭಂಗವಾಣಿಗಳ ಮೂಲಕ ಅಭಂಗಕಾರರು ತಮ್ಮ ಸಾದಕ ದೆಶೆಯಿಂದ ಹಿಡಿದು ಸಾಕ್ಷಾತ್ಕಾರದವರೆಗಿನ ಭಾವಜೀವನ ಪ್ರವಾಸವನ್ನು ಪ್ರತಿಬಿಂಬಿಸಿರುವದನ್ನು ಕಾಣಬಹುದಾಗಿದೆ. ಹಾಗೆಯೇ ಭಾವಕವಿಗಳಾಗಿ ಅವರ ಶ್ರೇಷ್ಠತೆಯು ಅರಿವಿಗೆ ಬರುತ್ತದೆ. ವೀರಶೈವ ಸಂತರ ಅಭಂಗಗಳು ವಾರಕರಿ ಸಂತರ ಅಭಂಗಗಳಂತೆಯೇ ಶ್ರೇಷ್ಠತೆಯನ್ನು ಹೊಂದಿರುವುದಾಗಿವೆ ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಮನ್ಮಥಸ್ವಾಮಿಯ ಅನಂತರ ಶಿವಲಿಂಗ, ಲಿಂಗೇಶ್ವರ, ಬಸವಲಿಂಗ, ಮಹಾದೇವ, ಲಕ್ಷ್ಮಣ, ಶಿವದಾಸರೇ ಮೊದಲಾದ ಅನೇಕ ಕವಿಗಳು ವಿಪುಲ ಸಂಖ್ಯೆಯಲ್ಲಿ ಅಭಂಗಗಳನ್ನು ರಚಿಸಿದ್ದಾರೆ. ಇವರಲ್ಲದೆ ಗುರುದಾಸ, ಚನ್ನಾ, ಬಾಳಾಬುವಾ ಕಾವಾಡಿ, ಶಂಕರ ಮೃಗೇಂದ್ರಸ್ವಾಮಿ, ಶಿವಗುರುದಾಸ, ಬಸವದಾಸ ಇತ್ಯಾದಿ ಅನೇಕ ವೀರಶೈವ ಕವಿಗಳು ಅಭಂಗಗಳನ್ನು ರಚಿಸಿದ್ದಾರೆ. ಈ ಹೆಸರುಗಳೆಲ್ಲ ಕೇವಲ ಮುಖ್ಯ ಕವಿಗಳದ್ದಷ್ಟೆ. ಮರಾಠಿ ವಾಙ್ಮಯ ಇತಿಹಾಸದಲ್ಲಿ ಇನ್ನೂ ಅನೇಕರ ರಚನೆಗಳ ಮತ್ತು ಹೆಸರುಗಳ ದಾಖಲೆಯಾಗದಂತಹ ಸುಮಾರು ಐವತ್ತಕ್ಕೂ ಹೆಚ್ಚು ವೀರಶೈವ ಕವಿಗಳು ಇದ್ದಾರೆ. ಹಾಗಾಗಿಯೇ 'ಮರಾಠಿ ವೀರಶೈವ ವಾಙ್ಮಯ'ವು ಒಂದು ಸ್ವತಂತ್ರ ಅಧ್ಯಯನ ಕ್ಷೇತ್ರವಾಗಿರುವಷ್ಟು ವ್ಯಾಪಕವಾಗಿದೆ ಎಂದು ಹೇಳಬಹುದಾಗಿದೆ.

ಈಗ್ಗೆ ನೂರು ವರ್ಷಗಳ ಹಿಂದೆ, ಅಂದರೆ ಕ್ರಿ.ಶ. ೧೮೮೨ರಲ್ಲಿ, ಬಾರ್ಶಿಯ ರಾಮಲಿಂಗಪ್ರಭು ಅಯ್ಯನವರು ಮನ್ಮಥಸ್ವಾಮಿ ವಿರಚಿತ 'ಪರಮ ರಹಸ್ಯ' ಎಂಬ ಗ್ರಂಥವನ್ನು ಪ್ರಕಟಿಸಿದರು. ಇದು ವೀರಶೈವರ ಮೊದಲ ಪ್ರಕಟಿತ ಗ್ರಂಥ. ಆ ಮೊದಲಾಗಲಿ ಅಥವಾ ಅನಂತರವಾಗಲೀ ವೀರಶೈವರಿಗೆ ತಮ್ಮ ಸಾಂಪ್ರದಾಯಿಕತೆಯನ್ನು ಉಳಿಸಿಕೊಳ್ಳಬೇಕೆಂಬ ಬಗ್ಗೆ ಅರಿವು ಬಂದಿರಲಿಲ್ಲ. ಶ್ರೀಧರಸ್ವಾಮಿ ಅವರ 'ಶಿವಲಿಂಗಾಮೃತ' ಮತ್ತು ಶಿವದಾಸ ಗೋಮ ಇವರ 'ಕಾಶೀಖಂಡ' ಎಂಬ ಗ್ರಂಥಗಳನ್ನೇ ಸಾಂಪ್ರದಾಯಿಕ ಗ್ರಂಥಗಳೆಂದು ತಿಳಿದು ಅವುಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡುತ್ತಿದ್ದರು.

ವೀರಶೈವ ಸಂತರು ಹೀಗೆ ಅಭಂಗಗಳನ್ನು ರಚಿಸುವುದರ ಮೂಲಕ ಮಹಾರಾಷ್ಟ್ರದಲ್ಲಿ ಶಿವಭಜನೆಯ ಒಂದು ಪರಂಪರೆಯನ್ನೇ ಆರಂಭಿಸಿದರು. ವಾರಕರಿ ಸಂಪ್ರದಾಯದಂತೆಯೇ ಕೀರ್ತನ ಪರಂಪರೆ, ಭಜನ ಪರಂಪರೆ, ಅಭಂಗ, ಟೀಕಾಗ್ರಂಥಗಳು ನಮ್ಮಲ್ಲಿಯೂ ಇವೆ, ಎಂಬುದಾಗಿ ಸ್ವಧರ್ಮ ವಂಚಿತ ವೀರಶೈವರಿಗೆ ಅರಿವನ್ನು ಜಾಗೃತಗೊಳಿಸಿದರು. ಮನ್ಮಥಸ್ವಾಮಿಯವರ ಶಿಷ್ಯ ಪರಂಪರೆಯಂತು ಸಮರ್ಥವಾಗಿ ನಿಂತರು. ಮಾತ್ರವಲ್ಲ ತಮ್ಮ ವಾಙ್ಮಯ ರಚನೆಯ ಮೂಲಕವೂ ವೀರಶೈವರನ್ನು ಆಕರ್ಷಿಸಿದರು. ದೇಶ, ಕಾಲ ಮತ್ತು ಪರಿಸ್ಥಿತಿಗಳ ಬಗೆಗೆ ಮಹಾರಾಷ್ಟ್ರದ ಸಂತರು ಎಚ್ಚರವಾಗಿದ್ದು ತಮ್ಮ ಕಾರ್ಯಾಚರಣೆಯನ್ನು ಮಾಡಿದರು ಎಂಬುದೆ ಇದರ ಅರ್ಥ.

ಸಾಂದರ್ಭಿಕ ಗ್ರಂಥಗಳು :

೧. ದೇಸಾಯಿ ಪಿ.ಬಿ. : ಬಸವೇಶ್ವರ ಅಂಡ್ ಹಿಜ್ ಟೈಮ್ಸ್, ಧಾರವಾಡ, ೧೯೬೮, ಪುಟಗಳು-೧೧೧-೧೨೫

೨. ರಾಮಚಂದ್ರ ಚಿಂತಾಮಣ ಢೇರೆ: ಚಕ್ರಪಾಣಿ, ವಿಶ್ವಕರ್ಮ ಸಾಹಿತ್ಯಾಲಯ, ಪುಣೆ, ೧೯೭೭, ಪುಟ-೯೮

೩. ಆನಂದ ಕುಂಭಾರ : ಸಂಶೋಧನ ತರಂಗ, ನವಭಾರತ ಪ್ರಕಾಶನ ಸಂಸ್ಥಾ, ಮುಂಬಯಿ, ೧೯೮೮, ಪುಟ-೧೬೦

೪. ಮಲ್ಲಿಕಾರ್ಜುನಶಾಸ್ತ್ರಿ (ಸಂ): ಸಿದ್ಧಾಂತಶಿಖಾಮಣಿ, ವೀರಶೈವಲಿಂಗೀ ಬ್ರಾಹ್ಮಣಧರ್ಮ, ಸೊಲ್ಲಾಪುರ, ೧೯೦೫, ೧೦-೧೮

೫. ಮಲ್ಲಿಕಾರ್ಜುನಶಾಸ್ತ್ರಿ (ಸಂ): ಸಿದ್ಧಾಂತಶಿಖಾಮಣಿ, ವೀರಶೈವಲಿಂಗೀ ಬ್ರಾಹ್ಮಣಧರ್ಮ, ಸೊಲ್ಲಾಪುರ, ೧೯೦೫, ೦೫-೧೨

೬. ಮರುಳ ಸಿದ್ಧಪ್ಪ ಜಿ. (ಸಂ): ಶ್ರೀಕರಭಾಷ್ಯಂ (ಪ್ರ.ಸಂ), ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಪುಟ -೧೨೦

೭. ಚಂದ್ರಶೇಖರ ಕಪಾಳೆ ಮತ್ತು ಪಸಾರಕರ ಶೇ.ದೇ (ಸಂ): ವೀರಶೈವ ಸಾಹಿತ್ಯ ಸಂಶೋಧನ, ಖಂಡ-೧, ಭಾಗ-೨, ವೀರಶೈವ ಸಂಶೋಧನ ಮಂಡಳ, ಸೊಲ್ಲಾಪುರ, ಪುಟ-೪೩ ರಿಂದ ೫೨

೮. ಪಸಾರಕಸರ.ಶೇದೇ. : ಧಾಂಡೋಳಾ, ಮಹಾಸಾರಂಗ ಪ್ರಕಾಶನ, ಸೊಲ್ಲಾಪುರ, ಪುಟ-೨,೩

೯. ದೇಶಪಾಂಡೆ ಅ.ನಾ. : ಪ್ರಾಚೀನ ಮರಾಠೀ ವಾಙ್ಮಯಾಚ ಇತಿಹಾಸ, ಭಾಗ-೨, ವ್ಹೀನಸ್ ಪ್ರಕಾಶನ, ಪುಣೆ, ಪುಟ-೧೭೨

೧೦ ಕಾಡಾದಿ ಧರ್ಮಾದಾಯ ನಿಧಿ: ಸಮನ್ವಯ ಗಾಥಾ, ಸೊಲ್ಲಾಪೂರ, ೧೯೬೫, ಪುಟ-೧೮

೧೧. ಕಾಡಾದಿ ಧರ್ಮಾದಾಯ ನಿಧಿ: ಸಮನ್ವಯ ಗಾಥಾ, ಸೊಲ್ಲಾಪೂರ, ೧೯೬೫, ಪುಟ-೮

೧೨. ರಾ.ಚಿಂ.ಢೇರೆ: ಪ್ರಾಚೀನ ಮರಾಠೀಚ್ಯಾ ನವಧಾರಾ, ಮೋಘೆ ಪ್ರಕಾಶನ, ಕೊಲ್ಹಾಪುರ, ೧೯೭೨, ಪುಟ-೭೯

೧೩. ರಾ.ಚಿಂ. ಢೇರೆ : ಚಕ್ರಪಾಣಿ, ಪುಟಗಳು- ೧೦೯, ೧೧೦

೧೪. ತುಳಪುಳೆ,ಶಂ.ಗೋ (ಸಂ): ಲೀಳಾಚರಿತ್ರ: ಏಕಾಂಕ, ನಾಗಪುರ, ಪುಣೆ, ೧೯೬೪, ಪುಟ-೨೭

೧೫. ಭುಸಾರಿ.ರ.ಮ.: ಸಾಹಿತ್ಯ ಆಣಿ ಸಂಶೋಧನ, ಹೈದರಾಬಾದ್, ೧೯೫೧, ಪುಟಗಳು-೨೪-೨೫

೧೬. ಪಸಾರಕರ. ಶೇ.ದ. (ಸಂ): ಸಂತ ಲಕ್ಷ್ಮಣಾಂಚೀ ಅಭಂಗವಾಣಿ, ಶ್ರೀಸಿದ್ಧೇಶ್ವರ ಪ್ರಕಾಶನ, ಆಷ್ಟೀ, (ಜಿ.)ಜಲನಾ, ೧೯೮೨, ಪುಟ-೮೨

೧೭. ಆವಟೆ.ತ್ರ್ಯಂ.ಹ.(ಸಂ) : ಸಕಲ ಸಂತಗಾಥಾ, ಖಂಡ-೪, ೧೯೨೪, ಪುಟ೪೫೭

೧೮. ಪಸಾರಕರ ಶೇ.ದ. : ಧಾಂಡೋಳಾ, ಪುಟ-೮೩

೧೯. ರಾ.ಚಿಂ.ಢೇರೆ: ಪ್ರಾಚೀನ ಮರಾಠೀಚ್ಯಾ ನವಧಾರಾ, ಪುಟ-೪೦

(ಮೂಲ ಕೃತಿ: ಅ.ರಾ. ತೋರೊ(ಸಂ), ಮಹಾರಾಷ್ಟ್ರ ಕರ್ನಾಟಕಾವೇಲ್ ಸುವರ್ಣಕಾಲ, ಪ್ರತಿಮಾ ಪ್ರಕಾಶನ, ಪುಣೆ, ೨೦೦೧)

ಡಾ. ವಿಠಲರಾವ್ ಟಿ. ಗಾಯಕ್ವಾಡ್, ಪ್ರಾಧ್ಯಾಪಕ, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ (ತಾ) ಬಳ್ಳಾರಿ (ಜಿ)

ಯಾಕೆ ಹೇಳ್ತೀನೀಂದ್ರೆ

ತಮಿಳು ಮೂಲ: **ಚಾರ್ವಾಕನ್**
ಅನುವಾದ: **ಡಾ. ತಮಿಳ್ ಸೆಲ್ವಿ.**

ಅವನು ಮಾತನಾಡುತ್ತಲೇ ಇದ್ದ : 'ಏನ್ ಮಾಡೋದು ಹೇಳಿ ನಾವೇನು ಕೇಳ್ಕೊಂಡು ಹುಟ್ಟಿದೀವಾ? ಅಥವಾ ಅಪ್ಪ-ಅಮ್ಮನನ್ನು ನಾವೇ ಹುಡುಕಿಕೊಂಡೆವಾ? ಯಾರೋ ಇಬ್ಬರು ಅದೇನೋ ಗಂಟು ಹಾಕ್ಕೊಂಡರು ನಾವು ಬಂದು ಬಿದ್ವಿ. ಹಾಲನ್ನೂ -ಸಕ್ಕರೆಯನ್ನು ಬೆರೆಸಿಟ್ಟಾಗ ನೊಣ ಬಂದು ಬಿದ್ದಂತೆ. ಈ ಹೋಲಿಕೆ ಸರಿಯಿಲ್ಲವೋ? ಹಾಗಾದ್ರೆ, ಹುಣ್ಣಿನೊಳಗೆ ಹುಳು ಬಿದ್ದಂತೆ ಎಂದಿಟ್ಟುಕೊಳ್ಳಿ. ಯಾಕೆ ಹೇಳ್ತೀನೀಂದ್ರೆ, ನಾವು ಬಂದುದಕ್ಕೆ ನಾವು ಹೊಣೆಗಾರರಲ್ಲ. ಆದರೂ ಬಂದುಬಿಟ್ವಿ. ಬಂದ ನಂತರ ಹೋಗುವವರೆಗೆ ಇರಬೇಕಾದ ಹೊಣೆಗಾರಿಕೆ ಮಾತ್ರ ನಮ್ಮದಾಗಿ ಹೋಯಿತು. ಯಾಕೆ, ಕೆಲವೊಮ್ಮೆ ನಮಗೂ ಸಹ ಅನ್ನಿಸೋಲ್ವಾ, ಎಲ್ಲವನ್ನೂ ಎತ್ತಿ ಬಿಸುಟು ಒಂದೇ ಸಲ ಹೋಗ್ಬಿಟ್ರೆ ಏನೂಂತ? ಆದ್ರೆ ಎಷ್ಟು ಜನ ಹಾಗೆ ಮಾಡ್ತೀವಿ. ಪ್ರಕೃತಿಯ ಜೊತೇಲೆ ಕೈಗೂಡಿಸೋದಕ್ಕೆ ವಿಧಿ ನಮಗೆ ದಾರಿ ತೋರಿಸುತ್ತದೆಯೆ ಹೊರತು ಸಾಯೋದಕ್ಕೆ ದಾರಿ ತೋರ್ಸೋಲ್ಲ. ಆದರೂ ಒಂದು ಆಶ್ಚರ್ಯ ಎಂದರೆ, ನಾವು ಬದುಕುವ ಒಂದೊಂದು ದಿನವೂ ಸಾವಿನತ್ತ ಇಡುವ ಹೆಜ್ಜೆ. ಯಾಕೆ ಹೇಳ್ತೀನೀಂದ್ರೆ.... ಬದುಕು ಎನ್ನೋದು ಹೊಣೆರಹಿತ ದಾರೀಲಿ ಆರಂಭವಾಗಿ, ಒಂದು ದಿನ ಇದ್ದಕ್ಕಿದ್ದಂತೆ ಥಟ್ಟನೆ ಮುಗಿದು ಹೋಗುವ ವ್ಯಾಪಾರ. ಇದಕ್ಕಾಗಿ ಯಾಕಪ್ಪಾ ನಮ್ಮನ್ನು ನಾವೇ ಅನವಶ್ಯಕವಾಗಿ ಹುರಿದುಕೊಳ್ಳಬೇಕು. ಏನು? ವೇದಾಂತ ಹೇಳ್ತಾನಲ್ಲಾ ಅಂತ ಅಂದ್ಕೋತಿದಿರಾ? ವೇದಾಂತಾನೂ ಇಲ್ಲ, ಬದನೆಕಾಯೂ ಇಲ್ಲ. ಅಪ್ಪಟವಾದ ಸತ್ಯವನ್ನೆ ಹೇಳ್ತಿದ್ದೀನಿ. ಸತ್ಯಕ್ಕೂ -ಸುಳ್ಳಿಗೂ ಏನು ವ್ಯತ್ಯಾಸ ಹೇಳಿ? ಸತ್ಯದ ಹಾಗೇ ಇರುತ್ತೆ, ಆದ್ರೆ ಅದು ಸತ್ಯವಲ್ಲ. ಅದೇ ತಾನೇ ಸುಳ್ಳು! ವೇದಾಂತವೂ ಅಂಥದೇ ಒಂದು ಸುಳ್ಳು.

ನೀವೇ ಹೇಳಿ, ನಮ್ಮ ಬದುಕಿನಲ್ಲಿ ಯಾವುದು ನಿಜ? ನಿನ್ನೆ ನಡೆದದ್ದೆಲ್ಲ ಮುಗಿದು ಹೋಯಿತು, ಸತ್ತು ಹೋಯಿತು. ನಾಳೆ ಬರಲಿರುವುದು ಬಂದ ನಂತರ ತಾನೇ ನಿಶ್ಚಯ ಅಲ್ಲೀವರೆಗೆ ಅದೂ ನಿಜವಲ್ಲ. ನಾಳೆ ಚುಚ್ಚುವ ಮುಳ್ಳು ಇಂದೇ ನಿಮ್ಮನ್ನು ನೋಯಿಸುತ್ತಾ? ಅಥವಾ ಮೊನ್ನೆ ತಿಂದ ಬೇವಿನ ಕಾಯಿ ಕಹಿ ಕಹಿ ಅನ್ನಿಸ್ತಿದೆಯಾ? ಸುಮ್ಮನೆ ಹೆಣದಲ್ಲಿ ಹೊರಳುತ್ತಿರುವ ಹುಳುವಿನಂತೆ ಮೊನ್ನೆ ನಡೆದದ್ದರಲ್ಲೇ ಮನಸ್ಸನ್ನು ನೆಟ್ಟಿದ್ದರೆ ಹೇಗೆ ಸುಖ ಸಿಗುತ್ತೆ? ನಾಡಿದ್ದು ಸಿಗಲಿರುವ ಜಿಲೇಬಿಯನ್ನು ನೆನಪಿಸಿಕೊಂಡು ನಾಲಿಗೆ ಚಪ್ಪರಿಸಿದರೆ ಈಗ ಹೊಟ್ಟೆ ತುಂಬಿ ಬಿಡುತ್ತಾ?

ತೊಡೆ ಮಾಂಸವನ್ನು ಕಚ್ಚಿ ಎಳೆಯುವುದಕ್ಕಾಗಿ ಕೆಲವು ಕ್ಷಣ ಮಾತು ನಿಲ್ಲಿಸಿದ ಅವನು ಮತ್ತೆ ಮುಂದುವರೆಸಿದ: 'ಯಾಕೆ ಹೇಳ್ತಿನೀಂದ್ರೆ. ಈಗ, ಈ ನಿಮಿಷ... ಈ ಕ್ಷಣವೆ ನಿಜ. ಅದೇ ಸತ್ಯ. ಅಷ್ಟೇ ನನಗೆ ಗೊತ್ತು. ಅದರಿಂದಲೇ ನನ್ನನ್ನು ವಿಶ್ಲೇಷಿಸಲೂ ಸಾಧ್ಯ. ನನ್ನಿಂದ ಅದನ್ನು ಮಾತ್ರ ಅನುಭವಿಸಲು ಸಾಧ್ಯ. ಉಳಿದದ್ದೆಲ್ಲ ಸತ್ತ ಅಥವಾ ಇನ್ನೂ ಹುಟ್ಟದ ಕನಸುಗಳಷ್ಟೇ. ಆದ್ರೂ, ನೋಡಿ, ವಿಷಯ ಅಷ್ಟೊಂದು ಸರಳವಲ್ಲ. ಸೂಕ್ಷ್ಮವಾಗಿ ನೋಡಿದರೆ ಈ ನಿಮಿಷ, ಕ್ಷಣ ಕೂಡ ಸ್ವಲ್ಪವೂ ಶಕ್ತಿಯಿಲ್ಲದವುಗಳೇ. ನಿಮಿಷವೋ, ಕ್ಷಣವೋ ನಿಂತರೆ ತಾನೇ? ಅವು ಓಡುತ್ತಲೇ ಇವೆಯಲ್ಲಾ! 'ಈ ನಿಮಿಷ ಅನ್ನೊದು ಇದೇ' ಅಂತ ಯಾವುದನ್ನು ಹೇಳುವುದು? ಹೇಳ್ತಾ ಇರೋವಾಗ್ಲೇ ಓಡಿ ಹೋಯ್ತಲ್ಲ? ಬೇರೆ ಕ್ಷಣ ಬಂದು ಬಿಡ್ತಲ್ಲಾ! ಈ ಹೊಟ್ಟೆ ಉರಿಗೆ ಏನು ತಾನೇ ಮಾಡೋದು? ಹಾಗಾದ್ರೆ ನಿಜ ಅಂತನ್ನೊದು ಯಾವುದೂ ಇಲ್ವಾ? ಎಲ್ಲವೂ ಸುಳ್ಳು ಅಂತನ್ನೋದ್ರಲ್ಲೂ ಒಂದು ಕಷ್ಟ ಇದೆ..'

ಮಾತು ನಿಲ್ಲಿಸಿ, ಮೂಳೆಯನ್ನು ಕಚ್ಚಿ ಒಳಗಿದ್ದ ಮಜ್ಜೆಯನ್ನ ಸಶಬ್ದವಾಗಿ ಚೀಪುತ್ತಾ, ನಿಲ್ಲಿಸಿದ ಎಡೆಯಿಂದಲೇ ಮಾತನ್ನು ಮತ್ತೆ ಆರಂಭಿಸಿದ:

'ಯಾಕೆ ಹೇಳ್ತೀನೀಂದ್ರೆ... 'ನಾನು' ಎಂದು ಹೇಳಿಕೊಳ್ಳುವ ಒಂದಾದರೂ ನಿಜವಾಗಿರಬೇಕು. ಇಲ್ದೆ ಇದ್ರೆ ನಾನೇ-ನನ್ನ ಮಾತೂ, ಭಾವನೆಗಳೂ ಒಳಗೊಂಡಂತೆ - ಸುಳ್ಳಾಗಿ ಹೋಗುತ್ತೇನೆ. ಅದೇ ಥರ ಈ ಕ್ಷಣ ಇರುವವರೆಗೂ ನಿಜವಾಗಿರಬೇಕು, ಅದು ವರ್ತಮಾನ ಕಾಲವಾಗಿರುವುದಕ್ಕಾಗಿಯೇ ಆದರೆ, 'ನಾನು' ಎನ್ನುವುದೇ ಭೂತಕಾಲದ ಅನುಭವವೂ, ಭವಿಷ್ಯತ್ ಕಾಲದ ಕನಸುಗಳೂ ಸೇರಿದ ಒಂದು ಪಿಂಡ ತಾನೇ? ಎಲ್ಲಾ ಸುಳ್ಳುಗಳಿಂದ ಆದ ನಾನು ಮಾತ್ರ 'ನಿಜ'ವಾಗಿರಲು ಹೇಗೆ ಸಾಧ್ಯ? ಇಂತಹ ಸಂದೇಹಗಳೊಂದಿಗೆ ತಳಹದಿ ಹಾಕಿ, ಗಾಳಿಯನ್ನೂ ಕನಸನ್ನೂ ಇಡಿಯಾಗಿಸಿ ಕಟ್ಟಿದ ಕಟ್ಟಡ ನಮ್ಮ ಜೀವನ. ಇದರಲ್ಲಿ ನಕ್ಷೆಯ ರಚನೆ, ಒಳ್ಳೆಯದು-ಕೆಟ್ಟದು, ಪಾಪ-ಪುಣ್ಯ, ನಿನ್ನದು - ನನ್ನದು, ಉನ್ನತವಾದುದು - ಕೀಳಾದುದು, ನಾಗರೀಕತೆ-ಅನಾಗರಿಕತೆ, ಗೌರವ-ಅಗೌರವ, ಬೇಕಾದ್ದು-ಬೇಡವಾದದ್ದು, ಓಡಿಸಿದ್ದು - ಹಿಡಿಸದುದು, ... ಎಷ್ಟೊಂದು ಹೋಗ್ರೀ.... ಇದೆಲ್ಲ ಯಾರನ್ನು ಯಾರು ಮೋಸ ಮಾಡೋಕೆ ಅನ್ನೋದು ನನಗೇ ತಿಳೀತಿಲ್ಲ. ಯಾಕೆ ಹೇಳ್ತೀನೀಂದ್ರೆ... ನನಗನ್ನಿಸೋ ಹಾಗೆ ಇದರಲ್ಲೆಲ್ಲ ಅರ್ಥ ಇರೋ ಹಾಗೇ ಕಾಣ್ತಿಲ್ಲ. ನಾವು ಒಳ್ಳೇದೂಂತ ಅಂದ್ಕೊಂಡ್ರೆ

ಒಳ್ಳೇದು, ಇಲ್ಲಾಂದ್ರೆ ಕೆಟ್ಟದು. ಸ್ಯೂಗಿನಿಯವನು ಒಳ್ಳೇದೂಂದ್ರೆ ತಲೇನ ಕಡೀಲಿಲ್ಲವೇನು? ಜಿಳಿಯರವನು ಒಳ್ಳೇದೂಂದ್ರೆ ಬೇಡದವರನ್ನು ಸುಟ್ಟು ಹೊಸಕಿ ಹಾಕಲಿಲ್ವಾ? ದ್ರೋಣನೂ ಸಹ ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಿಕೊಳ್ಳಲಿಲ್ಲವಾ? ಎಲ್ಲ ಮನಸ್ಸಿನೊಳಗೇ ಇದೆ ಅಂತೀನಿ.

ಯಾಕೆ ಹೇಳ್ತೀನೀಂದ್ರೆ... ಇಗೋನೋಡಿ, ಈಗ ನೀವೂ ನಾನೂ ಚಪ್ಪರಿಸಿಕೊಂಡು ತಿನ್ತಾ ಇದೀವಿ. ಮಾಂಸ ಎಷ್ಟೊಂದು ರುಚಿಯಾಗಿಯೂ, ಮೃದುವಾಗಿಯೂ ಇದೆಯಲ್ವಾ...! ಈ ಮಾಂಸ ಓಡಾಡಿಕೊಂಡಿದ್ದವರ ಬಗ್ಗೆ ಯೋಚಿಸ್ತೀವೇನು? ತುಂಬ ಜನರಿಗೆ ಯೋಚಿಸೋದು ಹಿಡಿಸೋದೇ ಇಲ್ಲ. ಯಾಕೆ ಗೊತ್ತಾ? ಓಡಾಡಿಕೊಂಡಿರುವಾಗ ಅಲ್ಲಿದ್ದ ಸತ್ಯಬೇರೆ. ಅದು ತಿನ್ನೋ ಸತ್ಯ. ಇದೇ ಈಗ ಸತ್ಯ. ಇದನ್ನು ಸತ್ತು ಹೋದ ಹಳೆಯ ಸತ್ಯದೊಂದಿಗೆ ಹೇಗೆ ಸೇರಿಸಿ ನೋಡೋದು? ಯಾಕೆ ಹೇಳ್ತೀನಿಂದ್ರೆ, ನಮಗೆ ಬುದ್ಧಿ ಇದೆ. ಇಷ್ಟಾನಿಷ್ಟಗಳಿಲ್ಲದೆ ಸ್ವಲ್ಪ ಯೋಚನೆ ಮಾಡಿ ನೋಡೋಣ, ಮಾಡಬೇಕು. ಶಬ್ದಗಳನ್ನು ಕಂಡು ತಟಸ್ಥಗೊಳ್ಳಕೂಡದು. ಶಬ್ದಗಳ ಜೊತೆ ಜಗಳ ಆಡಬಾರದು. ಶಬ್ದಗಳು ಬಾಯಿಂದ ಬಂದ ಮೇಲೆ ಗಾಳಿಯಾಗಿ ಹೋಯ್ತಲ್ವಾ! ಇಲ್ಲಿ ನೋಡಿ, ಈ ಮಾಂಸ ಇವತ್ತು ಬೆಳಿಗ್ಗೆ ಕೂಡ ಓಡಾಡಿಕೊಂಡಿತ್ತು. ಆಗ ಇದಕ್ಕೆ ಗೊತ್ತಿಲ್ಲ, ಈಗ ಹೀಗೆ ನಮ್ಮ ಹೊಟ್ಟೆಯೊಳಗೆ ಹೋಗ್ತೀನಿ ಅಂತ. ಮುದ್ದಾಡಿತು, ಹಾಡು ಹೇಳಿತು. ಒಂದುಕ್ಷಣ ಅದು ಇತ್ತು. ಒಂದೆ ಏಟು, ಮರುಕ್ಷಣ ಅದು ಇಲ್ಲ. ನಮಗೆ ಊಟ. ಇದೇ ಪ್ರಪಂಚ. ಇದು ಯಾವ ಪ್ರಾಣಿ ಅಂತ ಕೇಳ್ತೀದೀರಾ? ಇಗೋ ನೋಡಿ...'

ಅವನು ತನ್ನ ಹೆಗಲಚೀಲದಿಂದ ಒಂದು ಚಿಕ್ಕ ಮಗುವಿನ ತಲೆಯೊಂದನ್ನು ತೆಗೆದು ಗೆಲುವಿನ ನಗೆಯೊಂದಿಗೆ ತೋರಿಸಿದ. ನಾನು ಅಲ್ಲಿಂದ ಎಂಜಲು ಕೈಯೊಂದಿಗೆ ಓಡಿ ಬಂದುಬಿಟ್ಟೆ.

ಡಾ. ತಮಿಳುಸೆಲ್ವಿ, ಅಧ್ಯಾಪಕಿ, ಕನ್ನಡ ವಿಭಾಗ, ಮದ್ರಾಸ್ ಯುನಿವರ್ಸಿಟಿ, ಮರೀನಾ ಕ್ಯಾಂಪಸ್,
ಓರಿಯಂಟಲ್ ರಿಸರ್ಚ್ ಇನ್ಸಿಟ್ಯೂಟ್, ಚೆನ್ನೈ-೬೦೦ ೦೦೫

ಸಾಕುಮೃಗಗಳು

ಮಲಯಾಳ ಮೂಲ: **ಎಮ್.ಟಿ. ವಾಸುದೇವನ್ ನಾಯರ್;**
ಅನುವಾದ: **ಡಾ. ಪ್ರಮೀಳಾ ಮಾಧವ್**

ಸೂಕ್ಷ್ಮವಾದ ಬೆಳದಿಂಗಳ ಕಿರಣಗಳು ತೆರೆದ ಕಿಟಕಿಯ ಸರಳುಗಳ ಎಡೆಯಿಂದ ನುಸುಳಿಕೊಂಡು ಕೋಣೆಯೊಳಗೆ ಇಣುಕಿನೋಡುತ್ತಿತ್ತು. ಮೋಡಗಳ ಮಸುಕಾದ ಮಂಜಿನ ತೆರೆಗಳೊಳಗಿಂದ ಪಶ್ಚಿಮ ದಿಗಂತದ ದೂರದ ಬೆಟ್ಟಗಳು ಅವ್ಯಕ್ತವಾಗಿ ನೆರಳಿನೋಪಾದಿಯಲ್ಲಿ ಗೋಚರಿಸುತ್ತಿದ್ದುವು. ರಾತ್ರಿಯ ಸಾಂದ್ರವಾದ ನಿಶ್ಯಬ್ದತೆ ಇಡೀ ಅಂತರಿಕ್ಷವನ್ನು ಆವರಿಸಿತ್ತು.

ಜಾನಮ್ಮ ಹಾಸುಗೆಯಲ್ಲಿ ಅಲ್ಲಾಡದೆ ಮಲಗಿದಳು. ಮಧ್ಯರಾತ್ರಿಯಾಗಿರಬಹುದು. ಆದರೂ ನಿದ್ರೆ ಸುಳಿಯುತ್ತಿರಲಿಲ್ಲ. ಮೌನದಲ್ಲಿ ಮುಚ್ಚಿದ ಶರೀರವನ್ನು ವೇದನೆಗೋಡುಮಾಡುವಂತೆ ದೂರದ ಸರ್ಕಸ್ ಟೆಂಟಿನಿಂದ ಸೂಕ್ಷ್ಮವಾದ ಬ್ಯಾಂಡಿನ ಸಂಗೀತ ಹರಿದುಬರುತ್ತಿತ್ತು.

ಎರಡನೆಯ ಪ್ರದರ್ಶನ ಮುಗಿಯುವ ಸಮಯವಾಗಿರಬಹುದೆಂದು ಜಾನಮ್ಮ ಯೋಚಿಸಿದಳು.

ಎಷ್ಟು ಹೊತ್ತು ಹೀಗೆ ಕಣ್ಣುಬಿಟ್ಟುಕೊಂಡು ಮಲಗುವುದು?...... ಕಿಟಕಿಯ ಮೂಲಕ ಆಕಾಶದ ಅನಂತತೆಯ ಕಡೆಗೆ ದಿಟ್ಟಿಸುತ್ತ ಜಾನಮ್ಮ ಮಲಗಿದಳು. ಕೈ ನೋಯುತ್ತಿತ್ತು. ಶ್ವಾಸೋಚ್ಛ್ವಾಸದಿಂದ ಎದೆ ಏರಿಳಿಯುತ್ತಿದ್ದಾಗಲೂ ಕೈ ನೋಯುತ್ತಿತ್ತು. ಎದೆಯಲ್ಲಿ ಇಟ್ಟಿರುವ ಬಲಗೈಯ ಪ್ಲಾಸ್ಟರ್ ಹೊದಿಸಿದ ಜಾಗದೆಡೆಗೆ ಅರಿವಿಲ್ಲದಂತೆ ಅವಳ ಎಡಗೈಯ ಬೆರಳುಗಳು ಹೋದುವು.

ಬೆನ್ನು ನೋಯತೊಡಗಿತು... ಎಷ್ಟೋ ಗಂಟೆಗಳಾದುವು. ಅವಳು ಅದೇ ಭಂಗಿಯಲ್ಲಿ ಮಲಗಿದ್ದಳು.... ಅತ್ತಿತ್ತ ಹೊರಳುವುದಕ್ಕೂ ಕಷ್ಟವಾಗುತ್ತಿತ್ತು... ಅಲುಗಾಡುವಾಗ ಗಾಯಗೊಂಡ ಕೈ ಅಸಹನೀಯವಾಗಿ

ನೋಯುತ್ತಿತ್ತು. ಕೋಣೆಯ ಒಂದು ಮೂಲೆಯಲ್ಲಿ ಮಲಗಿರುವ ಲಕ್ಷ್ಮಿಯತ್ತ ಅವಳು ಒಂದು ನಿಮಿಷ ದಿಟ್ಟಿಸಿದಳು. ಲಕ್ಷ್ಮಿ ಆರಾಮವಾಗಿ ನಿದ್ರಿಸುತ್ತಿದ್ದಳು-- ಅವಳ ಬದುಕಿನ ಬಗ್ಗೆ ಜಾನಮ್ಮ ಹಿಂದೆ ಯೋಚಿಸಿದ್ದಿದೆ. ಜಾನಮ್ಮ ಕಂಪೆನಿಗೆ ಕೆಲಸಕ್ಕೆ ಸೇರುವಾಗ ಲಕ್ಷ್ಮಿ ಅಲ್ಲಿ ಪ್ರಧಾನ ಆಟಗಾರ್ತಿಯಾಗಿದ್ದಳು. ಉಳಿದವರನ್ನು ನಿಯಂತ್ರಿಸುವ, ನಿರ್ದೇಶಿಸುವ ಜವಾಬ್ದಾರಿ ಕೂಡ ಅವಳದಾಗಿತ್ತು.

ಇವತ್ತು ಆ ಲಕ್ಷ್ಮಿ ಕೇವಲ ಪರಿಚಾರಿಕೆಯಾಗಿದ್ದಾಳೆ. ಅದಕ್ಕೆ ಕಾರಣವಿದೆ. ಅವಳ ವಯಸ್ಸು ನಲ್ವತ್ತು ದಾಟಿದೆ. ವಿಶೇಷ 'ಮೇಕಪ್' ನಿಂದಲೂ ಮುಖದ ಸುಕ್ಕುಗಳನ್ನು ಇಲ್ಲದಂತೆ ಮಾಡಲು ಅಸಾಧ್ಯವಾದ ಮೇಲೆ ಅವಳ ಸ್ಥಾನ ತನ್ನಿಂದ ತಾನೆ ಕೆಳಗಿಳಿದಿತ್ತು. ಅವಳ ಯೌವನ ಸೋರಿಹೋಗಿತ್ತು.

ಅದು ಲೋಕಸಾಧಾರಣ ಪದ್ಧತಿಯೆಂಬುದು ಜಾನಮ್ಮನಿಗೆ ಗೊತ್ತಿದ್ದುದೇ. ಹೂಗಳು ಬಾಡುತ್ತವೆ; ಕುಸಿದು ಬೀಳುತ್ತವೆ. ಆ ಸ್ಥಳದಲ್ಲಿ ಹೊಸಮೊಗ್ಗುಗಳು ಅರಳುತ್ತವೆ.

ಸೊಬಗು ನಾಶವಾಗಿದ್ದರೂ ಇನ್ನೂ ಬಾಡದ ಹೂವಾಗಿದ್ದಳು ಜಾನಮ್ಮ.

ಜಾನಮ್ಮ ಪುನಃ ಆಲಿಸಿದಳು. ಬ್ಯಾಂಡಿನ ಕ್ಷೀಣವಾದ ಶಬ್ದ. ಕೊನೆಯ ದೃಶ್ಯವಾಗಿರಬೇಕು. 'ಫ್ಲೈಯಿಂಗ್ ಟ್ರಪ್ಪೀಸ್'ನ ಅಂತಿಮ ಸಂಗೀತ. ಅದರೊಂದಿಗೆ ಕಣ್ಣಿರೆಪ್ಪೆಮುಚ್ಚದ ನೋಟಕರ ಹೃದಯವೂ ಜೋರಾಗಿ ಹೊಡೆಯುತ್ತಿರಬೇಕು.

ಹಾರುವ ಟ್ರಪ್ಪೀಸ್! ಯೋಚಿಸಿದಾಗಲೇ ಜಾನಮ್ಮನ ಹೃದಯದೊಳಗೆ ಒಂದು ದೀರ್ಘವಾದ ನೋವಿನ ಅನುಭವವಾಯ್ತು. ಹಿಂದಿನ ದಿನ ರಾತ್ರಿಯ ಆ ಬೀಳುವಿಕೆ!..... ಅದರ ನೆನಪಲ್ಲೇ ಜಾನಮ್ಮನ ಗಾಯಗೊಂಡ ಕೈನೋವು ಇಮ್ಮಡಿಯಾಯ್ತು.

ಅವಳು ಅಲ್ಲಾಡದೆ ಮಲಗಿದಳು. ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲವೆ! ಕಣ್ಣುಗಳನ್ನು ಬಲವಾಗಿ ಮುಚ್ಚಿ ನೋವನ್ನು ಅದುಮಿಕೊಂಡು ದೀನಸ್ವರದಲ್ಲಿ ಅವಳು ನರಳಿದಳು.

ಒಂದು ನಿದ್ರೆ ಮುಗಿಸಿ ಲಕ್ಷ್ಮಿ ಎದ್ದಾಗಲೂ ಜಾನಮ್ಮ ನಿದ್ರಿಸಿರಲಿಲ್ಲ. ಅವಳು ಮೆಲ್ಲನೆ ತಲೆಯೆತ್ತಿ ಕೇಳಿದಳು

'ಜಾನಮ್ಮ ನಿದ್ರಿಸಲಿಲ್ಲವೇ?'

'ಇಲ್ಲ--..'

'ಕೈ ನೋಯುತ್ತದೆಯೇ?'

'ತುಂಬ--'

ಅವಳು ಪುನಃ ನರಳಿದಳು.

ಲಕ್ಷ್ಮಿ ಪುನಃ ನಿದ್ರಿಸಿದಳು. ಪರಿಪೂರ್ಣವಾದ ನಿಶ್ಶಬ್ದತೆ ಇಡೀ ಆಕಾಶವನ್ನು ವ್ಯಾಪಿಸಿತ್ತು. ಜಾನಮ್ಮ ಲಕ್ಷ್ಯವಿಟ್ಟು ಗಮನಿಸಿದಳು. ಇಲ್ಲ. ಬ್ಯಾಂಡಿನ ಶಬ್ದ ಕೇಳಿಸುತ್ತಿಲ್ಲ. ಆಟ ಮುಗಿದಿರಬೇಕು.

ಕೆಳಗೆ ಸರ್ಕಸ್ ಲಾರಿಯ ಗರ್ಜನೆ ಕೇಳಿಸಿತು. ಅವಳ ಜೊತೆಗಾತಿಯರು ಹಿಂತಿರುಗುತ್ತಿದ್ದರು.

ಬಾಗಿಲು ತೆರೆಯುವ ಶಬ್ದ. ಅವರ ಕೋಣೆಯೊಳಗೆ ಪ್ರವೇಶಿಸಿದರು. ಎಲ್ಲರೂ ದಣಿದಿದ್ದರು. ಜಾನಮ್ಮ ನಿದ್ದೆ ಬಂದವಳಂತೆ ಕಣ್ಣುಮುಚ್ಚಿ ಮಲಗಿದಳು.

ವಿದ್ಯುದ್ದೀಪ ಕೋಣೆಯನ್ನು ಬೆಳಗಿತು. ಮೈಯನ್ನು ಬಿಗಿದಿರುವ ಉಡುಪುಗಳನ್ನು ಕಳಚಿ ಮಲಗುವುದೆ ತಡ, ಎಲ್ಲರೂ ನಿದ್ರಾವಶರಾದರು. ಇನ್ನು ಸೂರ್ಯ ನಡುನೆತ್ತಿಯ ಮೇಲೆ ಬಂದಾಗಲೇ ಅವರೆಲ್ಲ ಕಣ್ದೆರೆಯುವುದು.

ನಗರದ ಒಂದು ಹೋಟೆಲಲ್ಲಿ ಅವರ ವಸತಿ. ಮೇನೇಜರರಿಗೆ ಮಾತ್ರ ವಿಶೇಷ ಕೊಠಡಿ. ಹೆಂಗಸರಿಗೆಲ್ಲ ಮೂರು ಕೋಣೆಗಳು. ಗಂಡಸರಿಗೆ ಕೆಳಗಿನ ಅಂತಸ್ತು. ಸೇವಕ ವರ್ಗವೆಲ್ಲ ಸರ್ಕಸ್ ಟೆಂಟಿನ ಒಳಗೆಯೆ ರಾತ್ರಿಯನ್ನು ಕಳೆಯಬೇಕಿತ್ತು.

ಹಿಂದಿನ ರಾತ್ರಿ ನಡೆದುದು ಆ ಘಟನೆ. ಎರಡನೆಯ ಷೋ ಮುಗಿಯುತ್ತಿರುವ ಸಮಯ 'ಹಾರುವ ಟ್ರಪ್ಪೀಸ್'ನ ನೃತ್ಯ ಪ್ರದರ್ಶನವೆ ಅಂತಿಮ ದೃಶ್ಯ. ಜಾನಮ್ಮನ ಪ್ರತಿಭೆಯ ಪರಾಕಾಷ್ಠವೇ ಅದೆಂಬುದು ಕಂಪೆನಿಯ ಎಲ್ಲರ ಅಭಿಮತ. ಕಳೆದ ನಾಲ್ಕು ವರ್ಷಗಳಿಂದಲೂ ಜಾನಮ್ಮ ಅದರಲ್ಲಿ ತನ್ನ ಕಸರತ್ತುಗಳನ್ನು ಪ್ರದರ್ಶಿಸುತ್ತ ಬಂದಿದ್ದಳು.

ಅತ್ಯಂತ ಎತ್ತರದಲ್ಲಿ ಹಾರುವ ಆ ಟ್ರಪ್ಪೀಸ್‌ಗಳನ್ನು ಕಟ್ಟಿ ನಿಲ್ಲಿಸಿದರು. ಕೆಳಗೆ ನೆಲದ ಮೇಲಿ ಎತ್ತರದಲ್ಲಿ ಬಲೆ ಹರಡಿ ಒಬ್ಬ ನಿಂತುಕೊಂಡಿದ್ದ. ಜಾನಮ್ಮ ಮತ್ತು ಅವಳ ಒಡನಾಡಿ ಎರಡು ಅಂತಸ್ತಿನಷ್ಟು ಎತ್ತರದಲ್ಲಿರುವ ಹಲಗೆಯ ಮೇಲೆ ಅಭಿಮುಖರಾಗಿ ನಿಂತುಕೊಂಡಿದ್ದರು. ಅವಳಿಗೇನೂ ಭಯವಿರಲಿಲ್ಲ. ಅವಳು ಅಷ್ಟೊಂದು ಪಳಗಿದ್ದಳು. ನೋಟಕರ ರೆಪ್ಪೆ ಮುಚ್ಚದ ಕಣ್ಣುಗಳು ಭಯವನ್ನೂ ಆಶ್ಚರ್ಯವನ್ನೂ ಸೂಸುತ್ತಿದ್ದಂತೆ ಪ್ರದರ್ಶನ ಪ್ರಾರಂಭವಾಗಿತ್ತು. ವೇಗ ಹೆಚ್ಚುತ್ತಿದ್ದಂತೆ ಒಂದು ಸಲ, ಎರಡು ಸಲ ಅವರು ಆಕಾಶದಲ್ಲಿ ತೇಲತೊಡಗಿದರು. ಒಂದು ಹಲಗೆಯಿಂದ ಇನ್ನೊಂದಕ್ಕೆ ಒಂದು ಟ್ರಪ್ಪೀಸಿನಿಂದ ಇನ್ನೊಂದಕ್ಕೆ.

ಒಂದಕ್ಕಿಂತ ಹೆಚ್ಚುಬಾರಿ ತನ್ನ ಟ್ರಪ್ಪೀಸಿನ ಹಿಡಿತವನ್ನು ಬಿಟ್ಟು ಅಂತರಿಕ್ಷದಲ್ಲಿ ನಿರಾಲಂಬವಾಗಿ ತೇಲಿ ಮುಂಭಾಗದಿಂದ ಒಡನಾಡಿ ಕಳುಹಿಸುವ ಟ್ರಪ್ಪೀಸನ್ನು ಸಕಾಲದಲ್ಲಿ ಹಿಡಿದು ಜಾನಮ್ಮ ಸಂಚರಿಸಿದಳು. ಪ್ರೇಕ್ಷರಲ್ಲ ಕರತಾಡನಮಾಡಿದರು.

ಆದರೆ ಜಾನಮ್ಮನಿಗೆ ಅದೇನೂ ಅಸಾಧ್ಯವಾದ ಕಾರ್ಯವಾಗಿರಲಿಲ್ಲ. ಕೆಳಗೆ ವೃತ್ತಾಕಾರದ ಬಾಲ್ಕನಿಯಲ್ಲಿ ರೆಪ್ಪೆ ಮುಚ್ಚದೆ ಉತ್ಕಂಠಿತರಾಗಿ ಕುಳಿತ ಪ್ರೇಕ್ಷಕರು ಅವಳತ್ತಲೇ ನೋಡುತ್ತಿರುವುದು ಅವಳಿಗೊಂದು ವಿಶೇಷವಾಗಿ ಕಾಣಲಿಲ್ಲ.

ಸಾಸಿವೆ ಬಿದ್ದರೂ ಇಡೀ ಸಭೆ ನಡುಗಬಹುದಾಗಿದ್ದು ಪ್ರದರ್ಶನ ನೋಟಕರ ಮನಸ್ಸಿನಲ್ಲಿ ನೂರಾರು ಪ್ರಶ್ನೆಗಳನ್ನು ಎಬ್ಬಿಸುತ್ತಿತ್ತು. ಇವರಿಗೆ ಬದುಕಬೇಕೆಂಬ ಆಸೆಯೇ ಇಲ್ಲವೇ? ಇವರು

ನಿಜವಾಗಿಯೂ ಮನುಷ್ಯರೇ? ಪ್ರೇಕ್ಷಕರು ತನ್ನ ಬಗ್ಗೆ ಏನು ಭಾವಿಸುತ್ತಿರಬಹುದೆಂದು ಜಾನಮ್ಮ ಒಮ್ಮೆಯೂ ಯೋಚಿಸಿರಲಿಲ್ಲ. ಅಷ್ಟೊಂದು ನಿರ್ಭಾವುಕಳಾಗಿ, ಯಾಂತ್ರಿಕವಾಗಿ ಅವಳು ತನ್ನ ಕೆಲಸವನ್ನು ನಿರ್ವಹಿಸುತ್ತಿದ್ದಳು.

ಆ ಸಂದರ್ಭದಲ್ಲೇ ಆ ಅಘಘಾತ ನಡೆಯಿತು. ನಿಜವಾಗಿಯೂ ಅದು ಯಾರ ತಪ್ಪು? ಅಪಘಾತ ನಡೆದುದು ಒಡನಾಡಿ ಮಾಧವಿಯ ಕೈಯಿಂದ. ಕಾಲ, ದೂರಗಳನ್ನು ಖಚಿತವಾಗಿ ನಿರ್ಧರಿಸಿ ಅವಳು ಎದುರು ಭಾಗದಿಂದ ಟ್ರಿಪ್ಪೀಸನ್ನು ಕಳುಹಿಸಬೇಕಾಗಿತ್ತು.

ಜಾನಮ್ಮ ಬಿದ್ದಳು. ಆದರೆ ಅದೆಲ್ಲ ಸಾಮಾನ್ಯ ಟ್ರಿಪ್ಪೀಸಿನಿಂದ ಈ ಮೊದಲೂ ಅವಳು ಬಿದ್ದಿದ್ದಳು. ಕೆಳಗೆ ಬಲವಾಗಿ ಕಟ್ಟಿದ ಬಲೆಯ ಮೇಲೆ ಬೀಳುವುದು ಪದ್ಧತಿ. ಪ್ರೇಕ್ಷಕರಿಗೆ ಮನರಂಜನೆ ನೀಡಲು, ಅವರನ್ನು ನಗಿಸಲು ಕ್ಲೌನ್ ಕುಳ್ಳ ರಾಮು ನೂರಾರು ಸಲ ಅದರ ಮೇಲೆ ಬೀಳುತ್ತಿಲ್ಲವೇ?

ಆದರೆ ದುರದೃಷ್ಟ! ಜಾನಮ್ಮನ ಬೀಳುವಿಕೆ ಅಪಘಾತವನ್ನು ತಂದೊಡ್ಡಿತು. ಬಲೆಯ ಬದಿಯಲ್ಲಿ ಬಿದ್ದ ಅವಳು ಅಲ್ಲಿಂದ ಹೊರಕ್ಕೆ ಎಗರಿ ಬಿದ್ದಳು. ಪ್ರೇಕ್ಷಕರ ಹಾಹಾಕಾರವಷ್ಟೇ ಕೇಳಿದ್ದು ಅವಳಿಗೆ ನೆನಪಿದೆ.

ಪ್ರಜ್ಞೆ ಬಂದಾಗ ಅವಳು ಸರ್ಕಸ್ ಲಾರಿಯಲ್ಲಿ ಮಲಗಿದ್ದಳು. ವಿದ್ಯುದ್ದೀಪದ ಬೆಳಕಿನಿಂದ ಕೂಡಿದ ನಿರ್ಜನವಾದ ದಾರಿಯಲ್ಲಿ ಲಾರಿ ಹೋಟೆಲಿನ ಕಡೆಗೆ ವೇಗವಾಗಿ ಸಾಗುತ್ತಿತ್ತು. ಅವಳ ಸುತ್ತಲೂ ಸ್ತ್ರೀಯರೂ, ಪುರುಷರೂ ನೆರೆದಿದ್ದರು. ದಿಗ್ಭ್ರಾಂತಳಾದಂತೆ ಅವಳು ಅವರತ್ತಲೇ ನೋಡಿದಳು. ಎಲ್ಲರೂ ಸಹಾನುಭೂತಿ ವ್ಯಕ್ತಪಡಿಸಿದರು.

ಅಸಹನೀಯವಾದ ನೋವಿನಿಂದ ಕೂಡಿದ ಬಲಮೊಣಕೈಯನ್ನು ನೋಡಿದಾ ಕ್ಷಣ ಜಾನಮ್ಮ ಜೋರಾಗಿ ಅತ್ತುಬಿಟ್ಟಳು. ಕಣ್ಣನ್ ಮಾಸ್ತರ್ ಏನೂ ಭಯಪಡಬೇಕಾಗಿಲ್ಲವೆಂದು ಹೇಳಿದ್ದಾರೆ. ಆರ್ತತೆಯಿಂದ ಕೂಡಿದ ದನಿಯಲ್ಲಿ ಮಾಧವಿ ಹೇಳಿದಳು.

ಕಣ್ಣನ್ ಮಾಸ್ತರೆಂದರೆ ಕಂಪೆನಿಯ ಮೇಲ್ವಿಚಾರಕರು. ಗಾಯಗೊಂಡ ಕೈಗಳನ್ನು ನೀವಿ ಸರಿಮಾಡುವುದೋ ಮತ್ತಿತರ ಕೆಲಸಗಳಲ್ಲಿ ಅವರಿಗೆ ಒಳ್ಳೆಯ ಪರಿಣತಿಯಿದೆ.

ಲಾರಿಯಿಂದ ಕೆಳಗಿಳಿಯಲು ಜಾನಮ್ಮನಿಗೆ ಇಬ್ಬರ ಮೂವರ ಸಹಾಯ ಬೇಕಾಯ್ತು.

ಕಣ್ಣನ್ ಮಾಸ್ತರರು ರಾತ್ರಿಯೇ ಕೈಯನ್ನು ಪರೀಕ್ಷಿಸಿದರು. ಆಮೇಲೆ ಏನೂ ಮಾತನಾಡದೆ ಹೊರಗೆ ಬಂದರು. ಮ್ಯಾನೇಜರರ ಕೊಠಡಿಗೆ ಹೋದರು.

ಒಂದು ಗಂಟೆಯೊಳಗೆ ಡಾಕ್ಟರರು ಬಂದರು. ಮೊಣಕೈಯ ಎರಡು ಮೂಳೆಗಳು ಮುರಿದಿದೆಯೆಂದು ತಿಳಿಸಿದಾಗ ಜಾನಮ್ಮ ಸ್ತಂಭಿತಳಾದಳು.

ಜಾನಮ್ಮನ ಮೊಣಕೈಯನ್ನು ಪ್ಲಾಸ್ಟರ್ ಹಾಕಿ ಬಿಗಿದರು. ಪ್ಲಾಸ್ಟರ್ ಹಾಕಿ ಹೊರಡುವಾಗ ಡಾಕ್ಟರ್ ಹೇಳಿದರು: ಹೆದರುವಂಥಾದ್ದು ಏನೂ ಇಲ್ಲ. ಊತ ಕಂಡುಬಂದರೆ ತಿಳಿಸಿ, ಸಾಕು.

ಹಗಲಿಡೀ ಲಕ್ಷ್ಮಿ ಅವಳ ಬಳಿಯಲ್ಲೇ ಇದ್ದಳು. ಉಳಿದವರೆಲ್ಲರೂ ಹಗಲು ನಿದ್ರಿಸುತ್ತಿದ್ದರು. ರಾತ್ರಿಯಲ್ಲವೇ ಅವರಿಗೆ ಕೆಲಸ?

ಸಾಯಂಕಾಲ ಮೇನೇಜರು ಕೊಠಡಿಯೊಳಕ್ಕೆ ಬಂದರು. ಅವರು ಟೆಂಟಿಗೆ ಹೊರಟಿದ್ದರು. ವ್ಯಾಸಲೀನ್ ಹಚ್ಚಿದ ಕೂದಲನ್ನು ಬಾಚಿ, ತಿಳಿಹಳದಿ ಬಣ್ಣದ ಬುಶ್‌ಶರ್ಟು ಹಾಗೂ ಪ್ಯಾಂಟ್ ಧರಿಸಿದ ಕಪ್ಪಾದ ದಪ್ಪನೆಯ ಒಬ್ಬ ಮಧ್ಯ ವಯಸ್ಕ ಆತ.

ಆಟಗಾರ್ತಿಯರು ಬ್ರಷ್ ಮಾಡುತ್ತಿದ್ದರು. ಆ ಹೊತ್ತಿನಲ್ಲಿ ಅವರು ಬಂದುದು ಸೂಕ್ತವಲ್ಲವೆಂದು ಜಾನಮ್ಮನಿಗೆ ತೋಚಿತು. ಕೇವಲ ಬ್ರೇಸಿಯರ್ ಮತ್ತು ನಿಕ್ಕರುಗಳಲ್ಲಿದ್ದ ಮಾಧವಿ, ವನಜ ಮತ್ತಿತರರೂ ಅವರೊಂದಿಗೆ ಎಷ್ಟು ಸಹಜವಾಗಿ ಮಾತನಾಡುತ್ತಾರೆ! ನಾಚಿಕೆಗೇಡು! ಆದರೆ ಅದು ಸರ್ಕಸ್ ಕಂಪನಿಯೆಂಬುದನ್ನು ಜಾನಮ್ಮ ನೆನಪಿಸಿದಳು. ನಾಚಿಕೆಗೆಟ್ಟ ಅದೆಷ್ಟೋ ಪ್ರಕರಣಗಳು ಅಲ್ಲಿ ನಡೆಯುತ್ತಿದ್ದುವು.

ಪುಟ್ಟ ಬಾಲಕಿಯಾಗಿ ತಾನು ಈ ಕಂಪೆನಿಗೆ ಬಂದು ಸೇರಿದ ಕಾಲದಲ್ಲಿ ಲಕ್ಷ್ಮಿ ಹೇಳಿದ ಮಾತುಗಳು ಇವತ್ತೂ ಜಾನಮ್ಮನ ಕಿವಿಗಳಲ್ಲಿ ಅನುರಣವಾಗುತ್ತಿವೆ. 'ಮಗೂ, ನೀನೂ ಸಿಕ್ಕಿ ಹಾಕಿಕೊಂಡೆಯಲ್ಲ?...... ಇದು ಸರ್ಕಸ್ ಕಂಪೆನಿ-- ಇಲ್ಲಿ ಮನುಷ್ಯರಿಲ್ಲ..... ಎಲ್ಲ ಮೃಗಗಳು-

ಓ, ಏಷ್ಟೋ ಹಿಂದಿನ ಮಾತದು! ಅದರ ನಂತರ ಹದಿನಾರು ಸಂವತ್ಸರಗಳು ಕಳೆದುಹೋದುವು.

ಮ್ಯಾನೇಜರು ಅವಳ ಕೈ ಹೇಗಿದೆಯೆಂದು ವಿಚಾರಿಸಿದರು. ಹಾಗೆಯೇ ಇದೆಯೆಂದು ಅವಳು ಉತ್ತರಿಸಿದಳು.

ಅವಳನ್ನು ಆಶ್ಚರ್ಯಗೊಳಿಸಿದ ಒಂದು ವಸ್ತುಸ್ಥಿತಿ ಅದರಲ್ಲಿತ್ತು. ಆತನ ಮಾತಿನಲ್ಲಿ ಒಂದಿಷ್ಟಾದರೂ ಸಹಾನುಭೂತಿಯ ಛಾಯೆಯಿರಲಿಲ್ಲ. ಬದಲಾಗಿ ಆಕ್ಷೇಪಿಸುವಂಥ ಯಾವುದೋ ಧ್ವನಿ ಆ ಮಾತಿನಲ್ಲಿ ಹುದುಗಿದಂತೆ ಭಾಸವಾಯ್ತು.

ಟ್ರೆಪ್ಪೀಸಿನಲ್ಲಿ ಇನ್ಯಾರು ಕೆಲಸಮಾಡುವವರು? ಮುಕ್ಕಾಲು ಭಾಗ ನಗ್ನರಾಗಿ ಮೇಕಪ್ಪಿನಲ್ಲಿ ಮಗ್ನರಾಗಿದ್ದ ಆಟಗಾರ್ತಿಯರತ್ತ ತಿರುಗಿ ಆತ ಕೇಳಿದ.

ನಾನೂ ಕಲ್ಯಾಣಿಯೂ ಆಡುತ್ತೇವೆ.

ಯಾರಾದರೂ ಚಿಂತೆಯಿಲ್ಲ. ನಿನ್ನೆಯಂತೆ ಅಪಘಾತ ನಡೆಯದಿದ್ದರೆ ಸಾಕು. ಅದರಿಂದ ಕಂಪೆನಿಗೆ ಕೆಟ್ಟಹೆಸರು. ಅನಂತರ ಆತ ಕೆಲವು ವಿಚಾರಗಳನ್ನು ಅವರ ಮುಂದೆ ಎತ್ತಿ ತೋರಿಸಿದ. ಅಲ್ಲಿ ಆರು ದಿನಗಳ ಪ್ರದರ್ಶನ ನಡೆಸಿಯೂ ಅವರಿಗೆ ಕೇವಲ ಐದು ಸಾವಿರ ರೂಪಾಯಿಗಳಷ್ಟೇ ಸಂಗ್ರಹವಾದದ್ದು.

ಇನ್ನು ಬರುವುದು ಮಳೆಗಾಲ. ಅದಕ್ಕೆ ಮೊದಲು ದೊಡ್ಡದೊಂದು ಮೊತ್ತ ಸಂಗ್ರಹವಾಗದಿದ್ದರೆ ಕಂಪೆನಿ ನಡೆಸುವುದು ಕಷ್ಟವಾಗುತ್ತದೆ.

ಕೇಳುವವರು ತನ್ನ ಮಾತಿಗೆ ಲಕ್ಷ್ಯವಿಡುತ್ತಿದ್ದಾರೋ ಎಂಬುದನ್ನೇನೂ ಆತ ಗಮನಿಸಿದಂತೆ ಕಾಣಲಿಲ್ಲ. ಅದನ್ನೆಲ್ಲ ಆತ ಯಾಕೆ ಗಮನಿಸಬೇಕು? ಆಗಾಗ್ಗೆ ಈ ಬಗೆಯಲ್ಲಿ ಒಂದೊಂದು ಟೀಕೆಟಿಪ್ಪಣಿ ಮಾಡಿದರೆ ತಾನೆ ಈ ಸಾಕುಮೃಗಗಳು ಚೆನ್ನಾಗಿ ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸುವುದು?

ಆತ ಹಿಂತಿರುಗಿದ. ಬಾಗಿಲನ್ನು ದಾಟುವಾಗೊಮ್ಮೆ ಆತ ಮುಖಕ್ಕೆ ಪೌಡರ ಲೇಪಿಸುತ್ತಿದ್ದ ವನಜಳ ಮಾಂಸಲವಾದ ಅಂಗಾಂಗಗಳತ್ತ ಕಣ್ಣು ಹಾಯಿಸುವುದನ್ನು ಜಾನಮ್ಮ ಮಲಗಿದಲ್ಲಿಂದಲೇ ನೋಡಿದಳು. ಕಂಪೆನಿಯ ಹೆಂಗಸರಲ್ಲಿ ಅತ್ಯಂತ ಕಿರಿವಯಸ್ಸಿನ ಹುಡುಗಿ ವನಜ.

ಎಲ್ಲರೂ ಸಿದ್ಧರಾಗಿ ಹೊರಬಂದರು. ರಸ್ತೆಯಲ್ಲಿ ಲಾರಿ ಹೊರಟುನಿಂತಿತ್ತು. ಹೋಟೆಲಿನ ಮುಂಭಾಗದಲ್ಲಿ ಅನೇಕ ಕಾಮಣ್ಣಗಳು ಹೆಂಗಸರು ಬರುವುದನ್ನು ನೋಡುತ್ತ ನಿಂತಿದ್ದರು. ಮೋಟರ್ಸೈಕಲ್ ಓಡಿಸುವ ಕಪ್ಪಾದ ತೆಳ್ಳನೆಯ ಜೋಡುತಲೆಯವರೂ ಸ್ಯಾಡೋ ಕೃಷ್ಣನೂ ಮ್ಯಾನೇಜರರ ಕಾರು ಹತ್ತಿದರು. ಉಳಿದವರು ಸ್ತ್ರೀಯರೊಂದಿಗೆ ಲಾರಿಯಲ್ಲಿ ಹತ್ತಿದರು. ಜೀವಂತ ಮೀನನ್ನು ನುಂಗುವ ಕಪ್ಪಾದ, ನೀಳವಾದ ವಿಚಿತ್ರ ಮನುಷ್ಯ, ಆನೆಗಳನ್ನೂ ಕುದುರೆಗಳನ್ನೂ ವನ್ಯಮೃಗಗಳನ್ನೂ ಮೇಯಿಸುವ ವಿದಗ್ಧರು, ಹಿರಿಯ ಕೋಡಂಗಿಗಳು, ರಿಂಗ ಮಾಸ್ತರರು - ಇವರೆಲ್ಲ ಅದರಲ್ಲಿದ್ದರು.

ಲಾರಿ ಸಾಗುವುದು ಕೇಳಿದಾಗ ಜಾನಮ್ಮ ಒಮ್ಮೆ ನಿಡಿದಾಗಿ ಉಸಿರುಬಿಟ್ಟಳು.

ಹಾಗೆ ಅಲುಗಾಡದೆ ಹಾಸುಗೆಯಲ್ಲಿ ನೋವಿನೊಂದಿಗೆ ಹೋರಾಡುತ್ತ ಮಲಗಿದಾಗ ಅವಳ ಮನಸ್ಸು ಗತಕಾಲದತ್ತ ಹಾರಿಹೋಯ್ತು.

ಜಾನಮ್ಮ ಈ ಕಂಪೆನಿಗೆ ಸೇರಿ ಹದಿನಾರು ವರುಷಗಳಾದವು. ಸೇರುವಾಗ ಅವಳಿಗೆ ಆರು ವರ್ಷ. ನೆನಪು ಮಾಡುತ್ತಿದ್ದಂತೆ ಅವಳಿಗೆ ಯಥಾರ್ಥವಾದ ಒಂದು ವಿಚಾರ ನಿಚ್ಚಳವಾಗುತ್ತಿತ್ತು. ಚಿಕ್ಕ ಬಾಲಕಿಯಾಗಿದ್ದ ಕಾಲದಲ್ಲಿ ಅವಳು ಸರ್ಕಸ್ ಕಂಪೆನಿಯಲ್ಲಿ ಆಟಗಾರ್ತಿಯಾಗಬೇಕೆಂದು ಒಮ್ಮೆಯೂ ಬಯಸಿರಲಿಲ್ಲ. ನೆನಪು ಬರುವ ಕಾಲದಲ್ಲಿ ಅವಳು ಅಮ್ಮನೊಂದಿಗೆ ವಾಸಮಾಡುತ್ತಿದ್ದಳು. ಗಾಳಿ ಬೀಸುವಾಗ ದೀನಸ್ವರದೊಂದಿಗೆ ಕಂಪಿಸುತ್ತಿರುವ ಒಂದು ಪುಟ್ಟ ಮಣ್ಣಿನ ಗುಡಿಸಲಿನಲ್ಲಿ ಅವಳೂ ಅವಳ ತಾಯಿಯೂ ವಾಸಮಾಡುತ್ತಿದ್ದರು.

ತಂದೆಯ ಬಗ್ಗೆ ಅವಳು ವಿಚಾರಿಸಲಿಲ್ಲ. ಹಾಗಿರುವ ಒಬ್ಬಾತ ತನಗಿರಬಹುದೆಂಬ ಕಲ್ಪನೆಯೂ ಅವಳಿಗಿರಲಿಲ್ಲ.

ಹೆತ್ತವಳ ಬಗ್ಗೆ ಅವಳಿಗೆ ತುಂಬ ಪ್ರೀತಿಯಿತ್ತು. ಎಂತಹ ವಾತ್ಸಲ್ಯಮಯೀ ತಾಯಿ ಆಕೆ! ಎಷ್ಟೊಂದು ಕಷ್ಟವನ್ನು ಅನುಭವಿಸಿ ತನ್ನನ್ನು ಆಕೆ ಸಾಕಿದ್ದಳು. ಬದುಕುವ ಸಲುವಾಗಿ ಆ ಪುಟ್ಟ ಸಂಸಾರ

ಅನೇಕ ಬವಣೆಗಳನ್ನು ಅನುಭವಿಸಿತ್ತು. ಬಹುಶಃ ಅದರ ಫಲವಾಗಿಯೆ ತಾನು ಸರ್ಕಸ್ ಕಂಪೆನಿಗೆ ಸೇರಿರಬೇಕೆಂದು ಜಾನಮ್ಮ ನೆನಪುಮಾಡಿದಳು.

ಹತ್ತಿರದಲ್ಲೇ ಇದ್ದ ಒಂದು ಸರ್ಕಸ್ ಕಂಪೆನಿಯ ಗುರಿಕಾರ ಒಂದು ದಿನ ಮನೆಗೆ ಬಂದುದನ್ನು ಜಾನಮ್ಮ ಈಗಲೂ ಚೆನ್ನಾಗಿ ನೆನಪಿಸುತ್ತಾಳೆ. ಅವರೂ ತಾಯಿಯೂ ಬಹಳಹೊತ್ತು ಮಾತನಾಡುತ್ತಿದ್ದರು.

ಅಡುಗೆ ಕೋಣೆಯಲ್ಲಿ ಕುಳಿತಿದ್ದ ಅವಳ ಬಟ್ಟೆ ಬದಲಾಯಿಸಿ ಒಗೆದು ಶುಚಿಮಾಡಿದ ಉಡುಪು ಹಾಕಿದ ಬಳಿಕ ಅಮ್ಮ ಹೇಳಿದಳು 'ಮಗಳೇ, ಇವರೊಂದಿಗೆ ಹೋಗು..'

ಅಮ್ಮನಿಗೆ ಅಷ್ಟು ಹೇಳುವಾಗಲೂ ಸ್ವರ ನಡುಗುತ್ತಿದ್ದಂತೆ, ಮಾತುಗಳು ಗಂಟಲಲ್ಲಿ ಸಿಕ್ಕಿಹಾಕಿಕೊಂಡಂತೆ ತೋರಿತು.

'ಎಲ್ಲಿಗಮ್ಮ?'

ಅಮ್ಮ ಅದಕ್ಕೆ ಉತ್ತರಿಸಲಿಲ್ಲ. ಅವರು ಮುಖ ತಿರುಗಿಸಿ ಕಣ್ಣೀರೊರಸಿಕೊಂಡರಷ್ಟೆ.

ಅಮ್ಮ ಎಣ್ಣೆ ಕಾಣದ ಅವಳ ಸುಕ್ಕುಕೂದಲನ್ನು ಒಪ್ಪಗೊಳಿಸಿದಳು. ಆಗಲೇ ಅವಳ ಕಣ್ಣಿನಿಂದ ಬಿಸಿಯಾದ ಒಂದು ಹನಿ ಕಣ್ಣೀರು ಉರುಳಿಬಿತ್ತು.

ಜಾನಮ್ಮನಿಗೆ ಅದು ಅರ್ಥವಾಗಿರಲಿಲ್ಲ. ನಿಷ್ಕಳಂಕವಾದ ಅರಳಿದ ಕಣ್ಣುಗಳಿಂದ ಅಮ್ಮನನ್ನೇ ವಿಸ್ಮಿತಳಾಗಿ ನೋಡಿದಳು. ಅಮ್ಮನ ಕಪೋಲಗಳಿಂದ ನೀರಿನ ಧಾರೆ ಹರಿಯುತ್ತಿತ್ತು. ಜಾನಮ್ಮನ ಕಣ್ಣುಗಳೂ ತೇವಗೊಂಡುವು, ನಿಷ್ಕಾರಣವಾಗಿ.

'ಮಗಳೇ, ಹೋಗು- ಇವರ ಮನೆಗೆ-- ಮಗಳಿಗೆ ಬೇಕಾದುದನ್ನೆಲ್ಲ ಇವರು ಕೊಡುತ್ತಾರೆ.'

ಆಗ ಮಾತ್ರ ಆ ಎಳೆಯ ಬುದ್ಧಿಗೆ ವಿಷಯ ಅರ್ಥವಾಗಿತ್ತು. ಆ ಗುರಿಕಾರ ಅವಳನ್ನು ಅವರ ಮನೆಗೆ ಸತ್ಕರಿಸಲು ಕರೆದುಕೊಂಡು ಹೋಗುತ್ತಾನೆ. ಅದು ಒಳ್ಳೆಯದು ತಾನೆ? ಅದಕ್ಕೇಕೆ ಅಮ್ಮ ಇಷ್ಟೊಂದು ದುಃಖಿಸಬೇಕು?

ಅವಳು ಹೋದಳು. ಬಾಗಿಲು ದಾಟುವಾಗ ಅವಳಿಗೆ ಅಮ್ಮ ಜೋರಾಗಿ ಬಿಕ್ಕಳಿಸಿ ಅಳುವುದು ಕೇಳಿಸಿತು. ಅವಳ ಹೃದಯ ಅತ್ಯಂತ ಅಸ್ವಸ್ಥಗೊಂಡಿತು.

ಅವಳು ಭಾವಿಸಿದಂತೆ ಆತ ಅವಳನ್ನು ಮನೆಗೆ ಕರೆದುಕೊಂಡು ಹೋಗಲಿಲ್ಲ. ತಲಚ್ಚೇರಿ ಪಟ್ಟಣದ ಒಂದು ಮೂಲೆಯಲ್ಲಿರುವ ಪುಟ್ಟ ಸರ್ಕಸ್ ಕಂಪೆನಿಗೆ ಅವಳನ್ನು ಕರೆದೊಯ್ದ.

ಅಪರಿಚಿತ ಮುಖಗಳು! ಅಪರಿಚಿತ ವಾತಾವರಣ! ಅಮ್ಮನನ್ನು ಕರೆದು ಜೋರಾಗಿ ಅಳಬೇಕೆನಿಸಿತು.

ಹದಿನಾರು ವರ್ಷಗಳ ಹಿಂದಿನ ಘಟನೆ. ಅನಂತರ ಏನೆಲ್ಲ ನಡೆದುಹೋದುವು!

ಸರ್ಕಸ್ ವಿದ್ಯೆಗಳನ್ನು ಕರಗತಮಾಡುತ್ತಿದ್ದ ದಿನಗಳನ್ನು ಎಣಿಸುತ್ತಿದ್ದಂತೆ ಈಗಲೂ ಜಾನಮ್ಮನಿಗೆ ಅಳು ಬರುತ್ತದೆ.

ಆಯಾಸದಿಂದ ಬೀಳುವಂತಾಗುತ್ತಿದ್ದರೂ ಆ ತರಬೇತುದಾರ ಬಿಡುತ್ತಿರಲಿಲ್ಲ. ಸ್ವಲ್ಪ ತಪ್ಪಿದರೂ ಸಾಕು ಆ ಮುದುಕನ ಕಣ್ಣುಗಳು ಕೆಂಡ ಸಂಪಿಗೆಯಂತೆ ಕೆಂಪಾಗುತ್ತಿದ್ದುವು. ಬೆರಳಿನ ಗಾತ್ರದ ಬೆತ್ತ ಮೃದುವಾದ ದೇಹಕ್ಕೆ ಮತ್ತೆ ಮತ್ತೆ ಬೀಳುತ್ತಿತ್ತು.

ಹಗಲಿಡೀ ಸರ್ಕಸ್ ಕಲಿಯಬೇಕು. ರಾತ್ರಿಯೆಲ್ಲ ಕಲಿತ ಕೆಲವುಗಳನ್ನು ಪ್ರದರ್ಶನವಾಡಲೂ ಬೇಕು. ಏನಾದರೂ ತಪ್ಪಿದರೂ ನೇಪಥ್ಯದಿಂದ ಹಿಂತಿರುಗಿದಾಗ ತರಬೇತುದಾರನ ಬೆತ್ತ ನಿರ್ದಾಕ್ಷಿಣ್ಯವಾಗಿ ಕಾದಿರುತ್ತಿತ್ತು.

ಸ್ನೇಹತುಂಬಿದ ಲಾಲನೆಪಾಲನೆಯಲ್ಲಿ ಬೆಳೆಯಬೇಕಾದ ವಯಸ್ಸಿನಲ್ಲಿ ಆಕೆ ವಿಶ್ರಾಂತಿಯೆಂದರೇನೆಂದೇ ತಿಳಿಯದಂತೆ ಜೀತಗೈದಳು.

ಬಟ್ಟೆ, ಊಟ ಸಿಗುತ್ತಿತ್ತು. ಆದರೂ ಜಾನಮ್ಮನಿಗೆ ಬದುಕಿನಲ್ಲಿ ತೃಪ್ತಿ ಇರಲಿಲ್ಲ.

ಎಲ್ಲವನ್ನೂ ಮೌನವಾಗಿ ಅವಳು ಸಹಿಸಿಕೊಂಡಳು.

ರಾತ್ರಿ ಆಟ ಮುಗಿಸಿ ಬಂದು ಮಲಗಿದರೂ ಅವಳಿಗೆ ನಿದ್ರೆ ಬರುತ್ತಿರಲಿಲ್ಲ. ಮೃಗಗಳ ಪಂಜರಗಳಿಂದ ರಾತ್ರಿಯ ನಿಶ್ಶಬ್ದದಲ್ಲಿ ಕೇಳಿಸುವ ಗರ್ಜನೆಗಳಿಗೆ ಅವಳು ಭಯದಿಂದ ನಡುಗುತ್ತಿದ್ದಳು. ಚಿಂತೆಯ ರೆಕ್ಕೆಗಳೊಳಗೆ ಹುದುಗಿಕೊಂಡು ಅವಳು ತನ್ನ ಪ್ರೀತಿಯ ತಾಯಿಯ ಸಾನ್ನಿಧ್ಯಕ್ಕಾಗಿ ಹಲುಬುತ್ತಿದ್ದಳು.

ಅಮ್ಮನ ಬಳಿಗೆ ಓಡಿಹೋಗಿ ಆ ಮಡಿಲಲ್ಲಿ ತಲೆಯೊರಗಿಸಿ ಮಲಗಿಕೊಂಡು ಬಿಕ್ಕಿಬಿಕ್ಕಿ ಅಳಬೇಕೆಂದು ಜಾನಮ್ಮನಿಗೆ ತೋರುತ್ತಿತ್ತು.

ಆದರೆ ಅವಳು ಹುಟ್ಟಿ ಬೆಳೆದ ಊರಿನಿಂದ ಎಷ್ಟೋ ದೂರ ಬಂದಾಗಿತ್ತು!

ಜಾನಮ್ಮ ದೊಡ್ಡವಳಾದಳು. ಅವಳೂ ಆಟಗಾರ್ತಿಯಾದಳು. ಅವಳ ಜಾಗಕ್ಕೆ ಹೊಸ ಬಾಲಕಿಯರು ಬಂದು ಸೇರಿದರು.

ಕಂಪೆನಿ ಅನಂತರದಲ್ಲಿ ಬೆಳೆಯುತ್ತಹೋಯ್ತು. ಮಲಬಾರ್ ಸರ್ಕಸ್ ಪ್ರಶಸ್ತಿಗಳನ್ನು ಪಡೆಯಿತು. ಮನುಷ್ಯರ, ಮೃಗಗಳ ಸಂಖ್ಯೆ ಏರಿತು. ಹಳೆಯ ಮ್ಯಾನೇಜರ್ ಹೊರಟುಹೋದರು. ಹೊಸಬ ಕಂಪೆನಿಯ ಜವಾಬ್ದಾರಿಯನ್ನು ವಹಿಸಿಕೊಂಡ. ಆದಾಗಿ ಐದುವರ್ಷ ಕಳೆಯಿತು.

ಈಗ ಕಂಪೆನಿಯಲ್ಲಿ ನಾಲ್ಕು ಸಿಂಹಗಳಿವೆ. ಐದು ಹುಲಿಗಳಿವೆ. ಕುದುರೆಗಳು ಆರಾದುವು. ಆನೆ ಮೂರು. ಎಲ್ಲ ಹೆಂಗಸರು, ಗಂಡಸರು ಸೇರಿದರೆ ಮನುಷ್ಯರ ಸಂಖ್ಯೆಯೇ ನೂರಕ್ಕಿಂತ ಹೆಚ್ಚು.

ಅವೆಲ್ಲವನ್ನೂ ಮೇನೇಜರ್ ಪದೇ ಪದೇ ಹೇಳುತ್ತಿರುತ್ತಾನೆ. ಸಂಖ್ಯೆಯ ವಿಷಯದಲ್ಲಿ ಅವನಲ್ಲಿ ಖಚಿತವಾದ ಲೆಕ್ಕಾಚಾರವಿದೆ. ಆ ಬಗ್ಗೆ ಆತನಿಗೆ ಹೆಮ್ಮೆಯಿದೆ. ಇಷ್ಟೊಂದು ಮೃಗಗಳು ಮನುಷ್ಯರೂ ಆತನ ಸ್ವಂತ ತಾನೆ?

ಹೊಸ ಮೇನೇಜರು ಬಂದಮೇಲೆ ಕಂಪೆನಿಗೆ ಅನೇಕ ವಿದಗ್ಧರೂ ಸೇರಿದ್ದಾರೆ. ಮೋಟಾರುಸೈಕಲ್ಲು ಓಡಿಸುವವರು, ಆನೆಯನ್ನು ಎದೆಮೇಲೆ ಹತ್ತಿಸುವವರು, ಜೀವಂತ ಮೀನನ್ನು ನುಂಗಿ ಹೊರಕ್ಕೆ ತೆಗೆಯುವವರು - ಇವರೆಲ್ಲ ಹಿಂದೆ ಇರಲಿಲ್ಲ.

ದೊಡ್ಡವಳಾದ ಮೇಲೆ ಜಾನಮ್ಮ ಸರ್ಕಸ್ ಕಂಪೆನಿಯ ಬಗ್ಗೆ ಯೋಚಿಸಲು ಆರಂಭಿಸಿದಳು. ಬದುಕು ಸಾವುಗಳ ಮಧ್ಯೆ ಒಂದು ನೂಲಿನ ಅಂತರದಲ್ಲಿ ನಿಂತುಕೊಂಡು ಗಂಡಾಂತರಕಾರಿಗಳಾದ ಕಸರತ್ತುಗಳನ್ನು ಪ್ರದರ್ಶಿಸಿ ಹಣ ಸಂಪಾದನೆ ಮಾಡುವ ಒಂದು ಸಮೂಹ! ಅವರ ಬಗ್ಗೆ ಯೋಚಿಸಿದಂತೆಲ್ಲ ಜಾನಮ್ಮನಿಗೆ ಅದರ ತಲೆಬುಡ ಅರ್ಥವಾಗುತ್ತಿರಲಿಲ್ಲ.

ಕೆಂಪು ಉಡುಪನ್ನು ಉಟ್ಟುಕೊಂಡು ತಲೆಯಲ್ಲಿ ಕೆಂಪು ಶಿರಸ್ತ್ರಾಣ ಧರಿಸಿಕೊಂಡು ಶಾಂತನಾಗಿ ಮೋಟಾರು ಸೈಕಲಲ್ಲಿ ಕುಳಿತುಕೊಂಡು ಮರಣಗುಳಿಯೊಳಗೆ ರಭಸವಾಗಿ ಸುತ್ತುವ ಆ ಮನುಷ್ಯ ಎಂಥ ವ್ಯಕ್ತಿಯೆಂದು ಜಾನಮ್ಮ ಯೋಚಿಸಿದಳು. ಆತ ಒಮ್ಮೆ ತನ್ನ ಜೀವನದ ಕತೆಯನ್ನು ಅವಳಿಗೆ ಹೇಳಿಕೊಂಡಿದ್ದ. ಅವನಿಗೆ ಒಂದು ಸಂಸಾರವಿದೆ. ಜೀವವನ್ನೇ ಪಣವಾಗಿಟ್ಟು ಸಿಗುವ ಹಣದಲ್ಲಿ ಅವನು ತನ್ನ ಕುಟುಂಬವನ್ನು ಸಾಕುತ್ತಿದ್ದಾನೆ.

'ನಿಮಗೆ ಹೆದರಿಕೆಯಾಗುವುದಿಲ್ಲವೇ?' ಕೆಲವರು ಕೇಳಿದ್ದರು.

'ಹೆದರಿಕೆ? ಅದೆಲ್ಲ ಯಾವತ್ತೋ ಹೊರಟು ಹೋಗಿದೆ. ಒಂದು ದಿನ ಹೆಜ್ಜೆ ಮುಗ್ಗರಿಸುತ್ತದೆ. ಅಂದಿಗೆ ಕೆಲಸ ಮುಕ್ತಾಯ.'

ಹೀಗೆ ದಿನಕ್ಕೆರಡು ಬಾರಿ ಮರಣದ ಅಂಚಿಗೆ ತಲುಪಿ ಅಲ್ಲಿಂದ ಹಿಂತಿರುಗುತ್ತಿದ್ದ ಆತ.

ಉಳಿದವರ ಗತಿಯೂ ಅದಕ್ಕಿಂತ ಬೇರೆಯಲ್ಲವೆಂದು ಜಾನಮ್ಮನಿಗೆ ಗೊತ್ತು. ಪದಕಗಳಿಂದ ಪ್ರಜ್ವಲಿಸುವ ಕಪ್ಪು ಬಟ್ಟೆಯುಟ್ಟುಕೊಂಡು ಸಿಂಹದ ಬೋನಿನೊಳಕ್ಕೆ ಪ್ರವೇಶಿಸುವ ಮನುಷ್ಯ ಸಾವನ್ನು ಸವರುತ್ತಿದ್ದ. ಆನೆಯ ಕಾಲಡಿಯಲ್ಲಿ ಮಲಗುವುದೂ ಮೀನನ್ನು ನುಂಗುವುದೂ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಆಪತ್ತುಗಳೆ. ಇವರೆಲ್ಲ ಮನುಷ್ಯರಲ್ಲವೇ? ಜಾನಮ್ಮ ಕೆಲವೊಮ್ಮೆ ಹೀಗೆಲ್ಲ ಆಲೋಚಿಸುತ್ತಾಳೆ.

ತಾನೂ ಅದೇ ವರ್ಗಕ್ಕೆ ಸೇರಿದವಳೆಂದು ಮತ್ತೊಂದು ಕ್ಷಣಕ್ಕೆ ಅವಳು ಯೋಚಿಸುತ್ತಾಳೆ. ತಂತಿಯ ಮೇಲೆ ಸೈಕಲ್ ಓಡಿಸುವಾಗ, ಟ್ರಪ್ಪೀಸಿನಲ್ಲಿ ಹಾರುವಾಗ ಅವಳೂ ಅಪಾಯಗಳನ್ನು ಆಶ್ರಯಿಸಿದ್ದಾಳೆ.

ಸರ್ಕಸ್ ಬದುಕಿನಲ್ಲಿ ಹೀಗೆ ಜಾನಮ್ಮ ಭಾರತದ ನಾನಾ ಭಾಗಗಳನ್ನು ಸುತ್ತಿದ್ದಾಳೆ.

'ಮಗೂ, ಇದು ಸರ್ಕಸ್ ಕಂಪೆನಿ. ಇಲ್ಲಿ ಮನುಷ್ಯರಿಲ್ಲ. ಎಲ್ಲ ಮೃಗಗಳು'

ಆ ಮಾತಿನೊಳಗೆ ಹುದುಗಿದ ಧ್ವನಿಯೇನೆಂಬುದು ಜಾನಮ್ಮನಿಗೆ ಸ್ಪಷ್ಟವಾದುದು ಅವಳು ದೊಡ್ಡವಳಾದ ಮೇಲೆಯೇ. ಅಲ್ಲಿ ಲಾಯ, ಬೋನಿನಲ್ಲಿ ವಾಸಿಸುವ ಮೃಗಗಳಿಗೂ ಅದರ ಹೊರಗೆ ವಾಸಿಸುವ ಮನುಷ್ಯರಿಗೂ ವ್ಯತ್ಯಾಸವಿಲ್ಲವೆಂದು ಜಾನಮ್ಮನಿಗೆ ಅರ್ಥವಾಯ್ತು. ಮನುಷ್ಯನನ್ನು ತೀವ್ರವಾದ ಹಗೆಯಿಂದ ನೋಡುವ ಆ ವನ್ಯಮೃಗಗಳು ನಾಣುಪಿನ ಚಾಟಿ ಅಂತರಿಕ್ಷದಲ್ಲಿ ಹಾರಾಡುವಾಗ ಅಂಜಿ ಹಿಮ್ಮೆಟ್ಟುತ್ತವೆ; ಹೇಳಿದಂತೆ ಕೇಳುತ್ತವೆ. ಒಂದು ವಿಷಯದಲ್ಲಿ ಮೃಗಗಳೇ ಮೇಲೆಂದು ಜಾನಮ್ಮ ಭಾವಿಸುತ್ತಾಳೆ. ಒಬ್ಬರ ಆದೇಶಕ್ಕೆ ಮಾತ್ರ ಅವುಗಳು ಮಣಿದರೆ ಸಾಕು. ಆದರೆ ಕಂಪೆನಿಯ ಮನುಷ್ಯರು ಅನೇಕರ ಆದೇಶಗಳಿಗೆ ಶಿರಬಾಗಬೇಕು.

ಸಂಬಳ ಬಟವಾಡೆಯ ದಿನ ಮಹಿಳೆಯರಲ್ಲಿ ಗೊಣಗಾಟ ಕೇಳಿಸುತ್ತದೆ. ಗಂಡಸರಲ್ಲಿ ಅಂಥ ಪ್ರತಿಭಟನೆಯಿಲ್ಲ. ಯಾಕೆಂದರೆ ಅವರಿಗೆ ನಿಗದಿತ ರೀತಿಯ ಸಂಬಳಕ್ಕೆ ತಕರಾರಿಲ್ಲ. ಆ ವಿಷಯದಲ್ಲಿ ಮೇನೇಜರ್ ಅಸಹಾಯಕ. ಮಹಿಳೆಯರಿಗೆ ಸಂಬಳ ಕಡಿಮೆ. ಅದಕ್ಕಾಗಿಯೇ ಅವರು ಪ್ರತಿಭಟಿಸುತ್ತಾರೆ. ಆದರೆ ಆ ಪ್ರತಿಭಟನೆ ಕೋಣೆಯಿಂದಾಚೆ ಕೇಳಿಸುವುದಿಲ್ಲ.

ಜಾನಮ್ಮನಿಗೆ ಸಂಬಳವೇ ಇಲ್ಲ. ಅದರ ಅಗತ್ಯವೂ ಅವಳಿಗೆ ಕಂಡು ಬರಲಿಲ್ಲ. ಊಟ, ಉಡುಗೆಗಳು ಹೇಗೂ ದೊರಕುತ್ತವೆ. ಹಣ ಯಾಕೆ? ಯಾರಿಗಾಗಿ ಅವಳು ಸಂಪಾದಿಸಬೇಕು? ಈ ಲೋಕದಲ್ಲಿ ಅವಳಿಗೆ ಬೇಕಾದ ಒಂದೇ ಒಂದು ಜೀವವಿತ್ತು. ಏಳು ವರ್ಷಗಳ ಹಿಂದೆ ಆ ತಾಯಿ ಜೀವವೂ ಮಣ್ಣಾಗಿ ಹೋಗಿದೆ. ಆ ದಿನ ಜಾನಮ್ಮ ತಮಿಳು ನಾಡಿನ ಯಾವುದೋ ಪಟ್ಟಣದಲ್ಲಿದ್ದಳು. ಊರಿನಿಂದ ಬಂದ ಒಬ್ಬಾತ ಆ ವಾರ್ತೆ ತಿಳಿಸಿದ್ದ. ಹೀಗೆ ಆ ವಿಶಾಲವಾದ ಪ್ರಪಂಚದಲ್ಲಿ ಕೋಟ್ಯನುಕೋಟಿ ಮಾನವ ಸಮುದಾಯದಲ್ಲಿ ಜಾನಮ್ಮ ಏಕಾಂಗಿಯಾಗಿದ್ದಳು.

ಒಂದು ಸಂದರ್ಭದಲ್ಲಿ ಅವಳು ಮೇನೇಜರಲ್ಲಿ ತನ್ನ ಸಂಬಳ ಕೇಳಿದ್ದಿದೆ. ಲಕ್ಷ್ಮಿಯ ಪ್ರೇರಣೆಯಿಂದಲೇ ಅವಳು ಆ ಕೆಲಸಕ್ಕೆ ಮುಂದುವರಿದಿದ್ದಳು.

ಲಕ್ಷ್ಮಿ ಹೇಳಿದ್ದು ಯಥಾರ್ಥವೆಂದು ಜಾನಮ್ಮ ಭಾವಿಸಿದಳು. 'ಜಾನಮ್ಮ, ಈ ಕಾಲವೆಲ್ಲ ಕಳೆದುಹೋಗ್ತದೆ. ಕೈಯಲ್ಲಿ ಕಾಸಿಲ್ಲದಿದ್ದರೆ ವೃದ್ಧಾಪ್ಯದಲ್ಲಿ ಯಾರು ನೆರವಾಗ್ತಾರೆ? ನನ್ನ ಸ್ಥಿತಿ ನೋಡ್ತಿಲ್ಲವೇ?

ಲಕ್ಷ್ಮಿಯ ಸ್ಥಿತಿ ಜಾನಮ್ಮನಿಗೆ ತಿಳಿದಿತ್ತು. ಅವಳೀಗ ಕೇವಲ ಒಬ್ಬ ಸೇವಕಿ. ಗತವೈಭವದ ಮಾಸಿದ ನೆನಪಿನೊಂದಿಗೆ ಸಿಗುವುದರಲ್ಲಿ ಸಂತೃಪ್ತಳಾಗಿ ಜೀವಿಸುತ್ತಿದ್ದಾಳೆ.

ಮೇನೇಜರನ್ನು ಭೇಟಿಯಾಗಬೇಕೆಂದರೆ ಜಾನಮ್ಮನಿಗೆ ಭಯ. ಮೇನೇಜರ್! ಅವಳ ಯೌವನಕ್ಕೆ ಮೊತ್ತಮೊದಲ ಆಕ್ರಮಣ ನಡೆಸಿದ ವ್ಯಕ್ತಿ ಆತ. ಆ ನೆನಪು ಜಾನಮ್ಮನ ಹೃದಯದಲ್ಲಿ ಮುಳ್ಳಿನಂತೆ ನಾಟಿ ಒಂದು ಕೆಟ್ಟ ಕನಸಾಗಿ ಉಳಿದಿತ್ತು. ಆ ವ್ಯಕ್ತಿಯೆಂದರೆ ಈಗಲೂ ಅವಳಿಗೆ ಭಯ.

ಆದರೆ ಅವಳು ಅವನ ಬಳಿಗೆ ಹೋದಳು. ಉಳಿದವರಂತೆ ತನಗೂ ಸಂಬಳ ಕೊಡಬೇಕೆಂದು ಕೇಳಿದಳು.

ಆತನಿಗೆ ದಿಗ್ಭ್ರಮೆಯಾಯ್ತು. ಆತ ಕೇಳಿದ: 'ಜಾನಮ್ಮನಿಗೆ ಬೇಕಿದ್ದೆಲ್ಲ ಇಲ್ಲಿ ಸಿಗುವುದಿಲ್ಲವೇ?'

'ಸಿಗುತ್ತೆ. ಆದರೂ....'

'ಇನ್ನೇತಕ್ಕೆ ಹಣ? ನಿನಗೆ ಸಂಬಂಧಿಕರು ಯಾರೂ ಇಲ್ಲವೆಂದು ಕಣ್ಣನ್ ಮಾಸ್ತರ್ ಹೇಳಿದ್ದಾರಲ್ಲ? ಏನಾದರೂ ಅಗತ್ಯವಿದ್ದರೆ ಕೇಳು.'

ಜಾನಮ್ಮ ಹಿಂತಿರುಗಿದಳು.

ಅವಳು ಅಳಲಿಲ್ಲ. ಅವಳ ಸಹನಶಕ್ತಿ ವೃದ್ಧಿಸಿತ್ತು. ತೀವ್ರವಾದ ನೋವಿನ ಅನುಭವಗಳು ಅವಳನ್ನು ಈ ಹಿಂದೆಯೆ ಹಿಂಡಿಹಿಪ್ಪೆ ಮಾಡಿದ್ದುವು. ಕಂಪೆನಿಯಿಂದ ತಪ್ಪಿಸಿಕೊಂಡು ಎಲ್ಲಿಗಾದರೂ ಓಡಿಹೋದರೇನೆಂದು ಅವಳಿಗೆ ಅನ್ನಿಸಿದ್ದಿದೆ. ಅವೆಲ್ಲವೂ ಕಂಬನಿಯ ಮೊನಲನ್ನು ಎಬ್ಬಿಸಿಕೊಂಡು ಅವಳ ನೆನಪಿನ ಭಿತ್ತಿಯಲ್ಲಿ ಪ್ರತ್ಯಕ್ಷವಾಗುತ್ತವೆ.

ಅವಳಲ್ಲಿ ಯೌವನ ಅರಳಿದ ಕಾಲವಾಗಿತ್ತದು. ಹಸಿವಿನಿಂದ ತುಂಬಿದ ನೋಟಗಳು ಅಂಗಾಂಗಗಳನ್ನು ಚುಚ್ಚುವ ಅನುಭವವಾಗುತ್ತಿತ್ತು. ನಿಜ ಹೇಳಬೇಕೆಂದರೆ ಕಂಪೆನಿಯ ಎಲ್ಲ ಪುರುಷರ ಮೇಲೂ ಅವಳಿಗೆ ತಿರಸ್ಕಾರವಿತ್ತು. ಅದನ್ನವಳು ಲಕ್ಷ್ಮಿಯೊಂದಿಗೆ ಮಾತನಾಡುವಾಗ ಹೇಳಿದ್ದೂ ಇದೆ.

'ನೋಡು ಒಬ್ಬೊಬ್ಬರ ನೋಟ.'

'ನಾನು ಹೇಳಲಿಲ್ಲವೇ ಜಾನಮ್ಮ. ಇಲ್ಲಿ ಮನುಷ್ಯರಿಲ್ಲವೆಂದು.'

ಲಕ್ಷ್ಮಿಯ ಜೀವನದ ಕತೆ ಜಾನಮ್ಮನಿಗೆ ಗೊತ್ತಿದೆ. ಅವಳ ಶರೀರದಲ್ಲಿ ಯೌವನ ತುಂಬಿದ ಕಾಲದಲ್ಲಿ ಅವಳಿಂದ ದೇಹಸುಖವನ್ನು ಸಾಧ್ಯವಾದಷ್ಟೂ ಹೀರಿದವರು ಕೊನೆಯಲ್ಲಿ ಹಣ್ಣು ತಿಂದು ತೊಗಟೆ ಬಿಸಾಡಿದಂತೆ ಅವಳನ್ನು ಮೂಲೆಗುಂಪಾಗಿಸಿದ್ದರು.

ಅನುಭವಗಳೇ ಮೂರ್ತಿವೆತ್ತಂತಿರುವ ಆ ದಾಸಿ ಹೇಳುತ್ತಿದ್ದಳು.

'ಮಗೂ, ಇದೆಲ್ಲ ಇಲ್ಲಿ ಸಾಮಾನ್ಯ.'

ಜಾನಮ್ಮ ಹೆದರಿದಳು. ಯೌವನ ಒಂದು ಶಾಪವೆಂದು ಅವಳಿಗೆ ತೋರಿತು. ಮ್ಯಾನೇಜರ್ ಮೊದಲ್ಗೊಂಡು ಕ್ಲೌನ್‌ವರೆಗೆ ಪ್ರತಿಯೊಬ್ಬರನ್ನೂ ತೃಪ್ತಿಪಡಿಸಬೇಕೆಂಬುದನ್ನು ಯೋಚಿಸಿದಾಗಲೇ ಅವಳು ನಡುಗಿದಳು.

ಅಸಹ್ಯಪಟ್ಟುಕೊಂಡು ಅವಳು ತನ್ನ ಸಂಗಾತಿಗಳತ್ತ ನೋಡಿದಳು. ಇಡೀ ಮುಳುಗಿದವನಿಗೆ ಚಳಿಯೇನು? ಎಂಬ ಅವಸ್ಥೆ ಅವರದಾಗಿತ್ತು. ಗಂಡಸರೊಂದಿಗೆ ದೇಹಸ್ಪರ್ಶ ಮಾಡುವುದಕ್ಕಾಗಲೀ, ಚೆಲ್ಲಾಟವಾಡುವುದಕ್ಕಾಗಲೀ ಅವರು ಅಸಹ್ಯಪಟ್ಟುಕೊಳ್ಳುತ್ತಿರಲಿಲ್ಲ. ಒಬ್ಬೊಬ್ಬರ ಅನುಭವವೂ ಜಾನಮ್ಮನ ಅಜ್ಞಾನಕ್ಕೆ ಉತ್ತರ ನೀಡಿದುವು.

'ಬರಲಿ ಕಣೇ.. ನಿನಗೂ ಅನುಭವವಾಗುತ್ತದೆ.'

ಜಾನಮ್ಮನ ಹೃದಯದಲ್ಲಿಯೂ ಸುಂದರಸ್ವಪ್ನಗಳೂ, ಮೃದುಲವಾದ ಭಾವನೆಗಳೂ ತುಂಬಿದ ಕಾಲವೊಂದಿತ್ತು. ಅವಳು ಚಂದ್ರನನ್ನು ನೆನೆದಳು. ಪ್ರದರ್ಶನ ರಂಗದಲ್ಲಿ ಕಸರತ್ತುಗಳನ್ನು ಮಾಡಿತೋರಿಸುವ ಗೌರವವರ್ಣದ ದೃಢಗಾತ್ರವುಳ್ಳ ಯುವಕ ಆತ. ಹೊಸದಾಗಿ ಕಂಪೆನಿಗೆ ಸೇರಿದ್ದ.

ಇತರರಿಗಿಂತ ಭಿನ್ನವಾಗಿರುವ ಅನೇಕ ಗುಣಗಳು ಆತನಲ್ಲಿದ್ದುವು. ಅವಳನ್ನು ನೋಡುವ ನೋಟದಲ್ಲಿ ಹಸಿವಿನ ಕೆನ್ನಾಲಗೆ ಪ್ರಜ್ವಲಿಸುತ್ತಿರಲಿಲ್ಲ. ಬದಲಾಗಿ ಹೃದಯಾಂತರದೊಳಗೆ ನುಸುಳುವ ಯಾವುದೋ ಆಹ್ಲಾದತೆಯು ನೋಟ ಅವುಗಳಲ್ಲಿರುತ್ತಿತ್ತು. ಅವನ ಉದ್ದವಾದ ಕೈಬೆರಳುಗಳು ಅವಳನ್ನು ಸ್ಪರ್ಶಿಸಿದಾಗ ಅವಳು ಕಂಪಿಸಿದ್ದಳು. ಅವನು ಕಸರತ್ತುಗಳನ್ನು ಪ್ರದರ್ಶಿಸುವ ಸಮಯದಲ್ಲಿ ಆಕೆ ತೆರೆಯನ್ನು ಸರಿಸಿ ಅರಳಿಸಿದ ಕಣ್ಣುಗಳಿಂದ ಅವನನ್ನೇ ನೋಡಿ ನಿಲ್ಲುತ್ತಿದ್ದಳು. ಅವರು ಪರಸ್ಪರ ಪ್ರೀತಿಸುತ್ತಿದ್ದರು.

ಒಂಟಿಯಾದ ತನ್ನ ಬಾಳಪಯಣದಲ್ಲಿ ಹೃದಯವಿರುವ ಓರ್ವ ಯುವಕ ತನಗೆ ಲಭಿಸಿದನೆಂದು ಅವಳು ಅತ್ಯಂತ ಸಂತೃಪ್ತಳಾಗಿದ್ದಳು. ಆದರೆ ಆ ಸಂತೋಷ ಬಹಳ ಕಾಲ ಉಳಿಯಲಿಲ್ಲ.

ಅದನ್ನು ನೆನಸುವಾಗ ಇವತ್ತಿಗೂ ಜಾನಮ್ಮನ ಕರುಳು ನೋವಿನಿಂದ ಹಿಂಡುತ್ತದೆ.

ಡಿಸೆಂಬರ್ ತಿಂಗಳ ಒಂದು ರಾತ್ರಿ. ಉತ್ತರ ಭಾರತ ಪ್ರವಾಸವನ್ನು ಮುಗಿಸಿ ಕೇರಳಕ್ಕೆ ಹಿಂತಿರುಗಿದ ಮೇಲಿನ ಮೊತ್ತ ಮೊದಲ ಪ್ರದರ್ಶನದ ದಿನ.

ರಾತ್ರಿಯ ಪ್ರದರ್ಶನ ಮುಗಿಸಿ ಬಿಡಾರಕ್ಕೆ ಮರಳುವಾಗ ಮಧ್ಯರಾತ್ರಿ ಕಳೆದು ೨ಗಂಟೆಯಾಗಿತ್ತು. ಉಡುಪುಗಳನ್ನು ಕಳಚಿ ನಿದ್ದೆಮಾಡಬೇಕೆನ್ನುವಷ್ಟರಲ್ಲಿ ಮೇಲ್ವಿಚಾರಣೆ ನಡೆಸುವ ಹುಡುಗರಲ್ಲೊಬ್ಬ ಬಂದು ಹೇಳಿದ: 'ಜಾನಮ್ಮ, ಕರೆಯುತ್ತಾರೆ.'

'ಯಾರು?'

'ಮೇನೇಜರ್.'

ಜಾನಮ್ಮ ಅಧೀರಳಾದಳು. ಸಂಗಾತಿಗಳ ಮುಖ ನೋಡಿದಳು. ನಗು ಹಾಗೂ ವ್ಯಂಗ್ಯದ ಧ್ವನಿಯಷ್ಟೆ ಅವರ ಉತ್ತರವಾಗಿತ್ತು.

ಹೊಸ ಮೇನೇಜರ ಬಂದು ಒಂದು ತಿಂಗಳೂ ಆಗಿರಲಿಲ್ಲ. ಅವಳಿಗೆ ಅವರೆಂದರೆ ಯಾಕೋ ತುಂಬ ಭಯ. ಅದಕ್ಕೆ ಕಾರಣ ಆತನ ನೋಟ. ಆತ ತನ್ನನ್ನು ನೋಡುವಾಗ ಆ ನೋಟ ಮಾಂಸವನ್ನು ತರುವ ಸೇವಕನ ಕಡೆಗೆ ಹಸಿವಿನಿಂದ ಬಾಯಗಲಿಸಿ ನೋಡುವ ಭಯಂಕರವಾದ ಒಂದು ಹುಲಿಯ ಕಣ್ಣುಗಳಂತೆ ತನಗೆ ಭಾಸವಾಗುತ್ತಿತ್ತು.

ಜಾನಮ್ಮ ಹೇಳಿದಳು. 'ನಾನು ಹೋಗುವುದಿಲ್ಲ.'

ಅವಳಿಗಿಂತ ಮೂರು ವರ್ಷ ದೊಡ್ಡವಳಾದ ಮಾಧವಿ ಹೇಳಿದಳು

'ಹೋಗದೆ ಬಿಡಲಾರರು.' ಉಳಿದವರು ನಕ್ಕರು.

ಜಾನಮ್ಮನನ್ನು ಕರೆಯಲು ಆತ ಪುನಃ ಬಂದ.

ಒಬ್ಬಳು ಉಪದೇಶಿಸಿದಳು: 'ಹೋಗಿ ಏನೆಂದು ವಿಚಾರಿಸಿ ಬಾ ಜಾನಮ್ಮ.'

ಜಾನಮ್ಮ ಎದ್ದು ಹೊರಟಳು. ಯಾಂತ್ರಿಕವಾದ ಚಲನೆ. ಅವಳ ಹೃದಯದಲ್ಲಿ ಒಂದು ಬಿರುಗಾಳಿ ಬೀಸುತ್ತಿತ್ತು. ಚಂದ್ರನಾದರೂ ಕಾಣಿಸುತ್ತಿದ್ದರೆ ಅವಳು ಹಂಬಲಿಸಿದಳು.

ಮೇನೇಜರರ ಕೊಠಡಿಯ ಮುಂದೆ ಅವಳು ಒಂದು ಶಿಲಾಪ್ರತಿಮೆಯಂತೆ ನಿಂತಳು.

ಮೇನೇಜರ್ ಸುಖಾಸೀನರಾಗಿದ್ದರು. ಸಿಗರೇಟಿನ ಹೊಗೆ, ಮದ್ಯದ ವಾಸನೆ ಕೊಠಡಿಯೊಳಗೆ ತುಂಬಿತ್ತು.

'ಜಾನಮ್ಮ, ಬಾ.. ಒಳಗೆ ಬಾ.. ಇಲ್ಲಿಗೆ.. 'ಕುಡಿದ ಅಮಲಿನಲ್ಲೇ ಆತ ಆಹ್ವಾನಿಸಿದ.

'ಯಾಕೆ ಕರೆದುದು? 'ಆಕೆ ನಡುಗುತ್ತ ಕೇಳಿದಳು.

'ಒಳಗೆ ಬಾ-- ನಿನ್ನೊಂದಿಗೆ ಮಾತನಾಡಬೇಕು.'

ಅವಳು ಮೆಲ್ಲನೆ ಒಳಗೆ ಹೆಜ್ಜೆಯಿಟ್ಟಳು. ಮೇನೇಜರ್ ಎದ್ದುಬಂದು ಬಾಗಿಲ ಅಗಳಿ ಹಾಕಿದ.

'ನಾನು.. ನಾನು. ಹೋಗಬೇಕು- ಬಾಗಿಲು ತೆರೆಯಿರಿ.'

'ಇರಲಿ ಬಿಡು ಜಾನಮ್ಮ- ನೀನು ಜಾಣೆ-.. ನನಗೆ ನೀನೆಂದರೆ ಇಷ್ಟ..'

ಆತನ ಕೈಗಳು ಹಾವಿನಂತೆ ಅವಳ ಶರೀರವನ್ನು ಬಳಸಿದುವು.

ಜಾನಮ್ಮ ಬಿಡಿಸಿಕೊಳ್ಳಲು ಹೆಣಗಿದಳು. ಕೊನೆಗೆ ಬೇರೆ ದಾರಿ ಕಾಣದೆ ಜೋರಾಗಿ ಕಿರುಚಿದಳು.

ಆತನ ಬಿಗಿ ಸಡಲಿತು. ಆತ ರೋಷದಿಂದ ತಪ್ತನಾಗಿ ಅವಳತ್ತ ನೋಡಿದ. ಕೆಂಪಾಗಿ ಉರುಳುವ ಆತನ ಕಣ್ಣುಗಳಲ್ಲಿ ಬೆಂಕಿಯ ನಾಲಗೆ ಪ್ರಜ್ವಲಿಸುತ್ತಿತ್ತು.

'ಹೆಣ್ಣೇ--- ಮೊದಲೊಬ್ಬಳು-'

ಓಹ್! ಮುಚ್ಚಿದ ಬಾಗಿಲಿನ ಮೇಲೆ ಜೋರಾದ ಒದೆ. ಆತ ತಕ್ಷಣ ಹಿಂಜರಿದ. ಜಾನಮ್ಮನನ್ನು ಮತ್ತೊಮ್ಮೆ ಕ್ರೂರವಾಗಿ ನೋಡಿ ಬಾಗಿಲು ತೆರೆದ. ಚಂದ್ರ!

ಜಾನಮ್ಮ ಒಂದು ಪುಟ್ಟ ಅಳಿಲಿನ ಮರಿಯಂತೆ ಮೂಲೆಯಲ್ಲಿ ಮುದುರಿ ನಿಂತಿದ್ದಳು. ಚಂದ್ರನನ್ನು ನೋಡಿದಾಕ್ಷಣ ಜೋರಾಗಿ ಅತ್ತುಬಿಟ್ಟಳು.

'ನಿನಗೇನಾಗಬೇಕಿತ್ತು?.. ಹೋಗೆಲೋ--- 'ಮೇನೇಜರ್ ಗರ್ಜಿಸಿದ.

'ಸರ್, ಇದು ತೀರಾ ಅತಿಯಾಯ್ತು.'

'ಇದು ನನ್ನ ಸ್ವಂತ ವಿಷಯ. ಯೂ, ಗೆಟೌಟ್..'

ರೋಷಾವೇಶಗಳಿಂದ ಕಂಪಿಸುತ್ತ ಆ ಯುವಕ ನೋಡುತ್ತಿದ್ದಂತೆ ಒಮ್ಮೆಗೇ ಬಾಗಿಲು ಮುಚ್ಚಿತು.

'ಒತ್ತೊತ್ತಿ ಬರುವ ನೆನಪುಗಳು....!'

ಮರುದಿನ ಚಂದ್ರ ಕಂಪೆನಿ ತ್ಯಜಿಸಿದ. ಆತ ಈಗೆಲ್ಲಿದ್ದಾನೋ?

ಜಾನಮ್ಮ ಮರುದಿನ ಹಗಲಿಡೀ ಅತ್ತಳು. ರಾತ್ರಿಯೆಲ್ಲ ಕಂಪೆನಿಗೆ ಬೆಂಕಿ ಹಚ್ಚಿದರೇನು ಎಂದು ಕೂಡ ಯೋಚಿಸಿದ್ದಿದೆ. ಸಿಂಹಗಳ, ಹುಲಿಗಳ ಬೋನಿನ ಬಾಗಿಲುಗಳನ್ನು ತೆರೆದರೇನು? ನಾಶವಾಗಲಿ, ಎಲ್ಲರೂ ಸಾಯಲಿ- ಜತೆಯಲ್ಲಿ ತಾನೂ ಸಾಯಬೇಕು.

ಆದರೆ ಕಣ್ಣೀರು ಹರಿಸಿಕೊಂಡು ಮೌನವಾಗಿ ಕುಳಿತದ್ದಲ್ಲದೆ ಅವಳೇನೂ ಮಾಡಲಿಲ್ಲ. ಅವಳನ್ನು ಸಂತೈಸಲು ಲಕ್ಷ್ಮಿಯಲ್ಲದೆ ಬೇರಾರೂ ಇರಲಿಲ್ಲ.

ಸಂಜೆಯಾಗುತ್ತಿದ್ದಂತೆ ಕಣ್ಣುಗಳನ್ನು ಒರಸಿ ಮುಖತೊಳೆದು ಪೌಡರ್ ಹಾಕುವ ಆದೇಶಕ್ಕೆ ಅವಳು ತಿರಬಾಗಲೇಬೇಕಾಯ್ತು. ಓಹ್! ಅನಂತರ ಅದೆಷ್ಟೋ ಕಹಿ ಅನುಭವಗಳನ್ನು ಅವಳು ಸಹಿಸಲೇಬೇಕಾಯ್ತು. ತನ್ನಲ್ಲಿ ಹೆಣ್ತನವೆಂಬುದು ಹೆಪ್ಪುಗಟ್ಟಿದೆ ಎಂದು ಅವಳು ತಿಳಿದುಕೊಂಡಳು.

ಆಟ ಮುಗಿಸಿ ಹಿಂತಿರುಗಿದರೆ ಜಾನಮ್ಮನಿಗೆ ಇಂದು ಸ್ವಯಿಚ್ಛೆಯಂತೆ ನಿದ್ರಿಸಬಹುದು. ಕಾರಣವಿದೆ. ಅವಳ ಯೌವನದ ಸೊಬಗು ಈಗ ಕಡಿಮೆಯಾಗಿದೆ. ಅವಳ ಶರೀರವನ್ನು ವಯಸ್ಸು ಆವರಿಸಿದೆ. ಕಣ್ಣುಗಳ ಹೊಳಪು, ಕೆನ್ನೆಯ ಕೆಂಪು ಮಾಯವಾಗಿದೆ. ಅವಳನ್ನು ಕರೆಯಲು ಈಗ ಯಾರೂ ಬರುವುದಿಲ್ಲ. ಕಂಪೆನಿಯಲ್ಲಿ ಯೌವನ ತುಂಬಿದ ಮೊಗ್ಗುಗಳು ಹೊಸದಾಗಿ ಅರಳಿದ್ದುವು.

ಭವಿಷ್ಯದ ಬಗ್ಗೆ ಯೋಚನೆ ಮಾಡದಿರಲು ಜಾನಮ್ಮ ಪ್ರಯತ್ನಿಸುತ್ತಿದ್ದಳು. ತನ್ನ ಮುಂದೆ ಶೂನ್ಯವಾದ ವಿಶಾಲ ಬಯಲೊಂದು ಹರಡಿದೆಯೆಂದು ಅವಳು ಬಲ್ಲಳು.

ಹೆಣ್ಣಿಗೆ ಸಹಜವಾದ ಎಲ್ಲ ಅಭಿಲಾಷೆಗಳೂ ಅವಳಲ್ಲಿದ್ದುವು. ಪ್ರೀತಿ ತುಂಬಿದ ಒಂದು ಪುರುಷ ಹೃದಯದ ಬಡಿತವನ್ನು ಕೇಳಲು ಅವಳ ಹೃದಯವೂ ಒಂದು ಕಾಲದಲ್ಲಿ ಕಾತರಿಸಿತ್ತು. ಸುಖವಾದ ದಾಂಪತ್ಯ ಜೀವನವನ್ನು ಅನುಭವಿಸುವ ಕನಸುಗಳು ಅವಳಲ್ಲಿದ್ದುವು. ಪುಟ್ಟಕಂದನ ತುಟಿಗಳೆಡೆಯಿಂದ ಸೂಸಿಬರುವ ಅಮ್ಮಾ ಎಂಬ ಕರೆಯಿಂದ ಪುಲಕಗೊಳ್ಳಬೇಕೆಂದು ಅವಳಲ್ಲಿ ಸುಪ್ತವಾಗಿದ್ದ ತಾಯ್ತನ ಹಂಬಲಿಸಿತ್ತು.

ಅವಳ ಕನಸುಗಳೆಲ್ಲ ಸುಟ್ಟು ಕರಕಲಾಗಿದ್ದುವು.

ಜಾನಮ್ಮ ಸರ್ಕಸ್ ನೋಡಲು ಬರುವ ಹೆಂಗಸರನ್ನು ಕೆಲವೊಮ್ಮೆ ನೋಡಿ ನಿಲ್ಲುತ್ತಿದ್ದಳು. ಅವರಲ್ಲಿ ಯಾವ್ಯಾವ ಬಗೆಯ ಹೆಂಗಸರಿರಬಹುದು? ಕಾಮುಕಿಯರು, ಪತ್ನಿಯರು, ಗೃಹಿಣಿಯರು, ಅವಿವಾಹಿತರು ಎಲ್ಲರೂ. ಪ್ರತಿಯೊಬ್ಬರಿಗೂ ಬದುಕಿನಲ್ಲಿ ಒಂದೊಂದು ಗುರಿಗಳಿವೆ.

ಒಂದು ಸಾಕಿದ ಮೃಗವಾಗಿ ಎಷ್ಟು ದಿನ ಹೀಗೆ ಜೀವಿಸಬಹುದೆಂದು ಜಾನಮ್ಮ ಯೋಚಿಸುವುದಿದೆ.

ಜಾನಮ್ಮ ನಿಧಾನವಾಗಿ ಒಮ್ಮೆ ಮಗ್ಗುಲು ಹೊರಳಿ ಮಲಗಿದಳು. ನಿದ್ರೆ ಬರುವುದಿಲ್ಲ. ಬೆಳಕು ಹರಿದಿರಬಹುದೇ? ಆಕಾಶದ ಕಪ್ಪು ಕರಗಿ ಬೆಳಕು ಕಾಣುತ್ತಿತ್ತು. ದೂರ ಆಕಾಶದೆತ್ತರದ ದೇವಾಲಯದ ಮುಗಳಿ ಅಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅದರ ನೇರಕ್ಕೆ ನಿಂತುಕೊಂಡು ಒಂಟಿನಕ್ಷತ್ರವೊಂದು ಅವಳನ್ನು ನೋಡಿ ನಗುತ್ತಿತ್ತು-ಒಂದು ಪೇಲವ ನಗೆ.

ಅವಳು ಕಣ್ಣು ಮುಚ್ಚಿದಳು.

ಮೂರು ವಾರಗಳ ಬಳಿಕ ಜಾನಮ್ಮನ ಬ್ಯಾಂಡೇಜು ಬಿಚ್ಚಿದರು. ಮೊಣಕೈಯ ಬಾವು, ಬಳುಕು ಹೋಗಿರಲಿಲ್ಲ. ಕೈಯನ್ನು ಕೆಳಗೆ ಬಿಡುವುದು ಕಷ್ಟವಾಗುತ್ತಿತ್ತು.

ಡಾಕ್ಟರ್ ಹೇಳಿದರು: 'ಹೆದರಬೇಡ. ಕೈ ಚಾಚುವುದು ಸಾಧ್ಯವಾಗುತ್ತದೆ ನಿಧಾನವಾಗಿ. ಆದರೆ..'

ಅವಳು ಸಂದೇಹದಿಂದ ಡಾಕ್ಟರತ್ತ ನೋಡಿದಳು. ಆತ ತಮಾಶೆಯೆಂಬಂತೆ ಹೇಳಿದರು: 'ಇನ್ನು ಕಸರತ್ತುಗಳನ್ನೇನೂ ತೋರಿಸಲು ಸಾಧ್ಯವಿಲ್ಲ, ಅಷ್ಟೆ.'

ಮೇನೇಜರ್ ಹತ್ತಿರದಲ್ಲೇ ಇದ್ದರು. ಆತ ಸಂದೇಹ ಬಗೆಹರಿಸಲು ಕೇಳಿದರು: 'ಸಾಧ್ಯವಿಲ್ಲವೆ ಡಾಕ್ಟರ್?'

'ಸಾಧ್ಯವಿಲ್ಲ. ಈ ವೃತ್ತಿ ಬಿಡಲೇಬೇಕಾಗುತ್ತದೆ. ಮೇನೇಜರ್ ಹೆಬ್ಬೆಟ್ಟು ಕಚ್ಚಿ ಹಣೆ ಉಜ್ಜುತ್ತ ಒಂದು ನಿಮಿಷ ಏನನ್ನೋ ಯೋಚಿಸಿದರು.

ಜಾನಮ್ಮನ ಕೈ ಮುರಿದುದು ಕಂಪೆನಿಗೆ ಒಂದು ನಷ್ಟವೇ. ಅವಳು ಒಳ್ಳೆಯ ಆಟಗಾರ್ತಿ. ಅದೆಲ್ಲ ನಿಜವೇ. ಆದರೆ ಇನ್ನವಳು ಕಂಪೆನಿಗೆ ಒಂದು ಹೊರೆಯಾಗುತ್ತಾಳೆ.

ಅಲ್ಲಿಯ ಆಟ ಮುಗಿಯಿತು. ಮರುದಿನ ಬೆಳಗ್ಗೆ ಅವರು ಆ ಸ್ಥಳವನ್ನು ಬಿಡಬೇಕು. ಬಿಡಾರವನ್ನೆಲ್ಲ ಬಿಚ್ಚಿದ್ದಾಯ್ತು. ರಾತ್ರಿಯೇ ಸಾಮಾನುಗಳನ್ನು ಸಾಗಿಸಲು ಆರಂಭವಾಯ್ತು.

ಮುಂದಿನ ಆಟ ಅಲ್ಲಿಂದ ೨೪ ಗಂಟೆ ದೂರದ ಪ್ರಯಾಣದ ಬಳಿಕ ಸಿಗುವ ಒಂದು ನಗರದಲ್ಲೆಂದು ನಿಶ್ಚಯವಾಗಿತ್ತು.

ವನಜಾ ಆ ವಾರ್ತೆ ತಂದಿದ್ದಳು. ಜಾನಮ್ಮನನ್ನು ಏನು ಮಾಡುವುದೆಂದು ಮ್ಯಾನೇಜರ್ ಯೋಚಿಸುತ್ತಿದ್ದಾರೆ. ಅವಳು ಹಿಂದಿನ ರಾತ್ರಿ ಮೇನೇಜರ್ ಕೋಣೆಯಲ್ಲಿದ್ದಾಗ ಸಿಕ್ಕಿದ ಸುದ್ದಿಯಾಗಿತ್ತದು.

ಅವರು ಮೇನೇಜರ ಉದ್ದೇಶಗಳ ಬಗ್ಗೆ ಅನೇಕ ಊಹಾಪೋಹಗಳನ್ನು ಹೆಣೆದರು. ಜಾನಮ್ಮ ಆ ಸಂಭಾಷಣೆಗಳೊಂದಿಗೆ ಸೇರಲಿಲ್ಲ. ಕಿಟಕಿಯ ಸರಳುಗಳನ್ನು ಹಿಡಿದುಕೊಂಡು ಎತ್ತಲೋ ನೋಟವಿಟ್ಟು ಅವಳು ನಿಂತಿದ್ದಳು. ಹೃದಯದಲ್ಲಿ ಏನೋ ಭಾರವಾದುದು ತೂಗುತ್ತಿದ್ದಂತೆ.

ಜಾನಮ್ಮನನ್ನು ಕರೆಯಲು ಸೇವಕ ಬಂದ. ಅವಳು ಮ್ಯಾನೇಜರ ಬಳಿಗೆ ಹೋದಳು. ಅವಳಿಗೀಗ ಆತನನ್ನು ಭೇಟಿಯಾಗಲು ಭಯವಿಲ್ಲ. ನಷ್ಟವಾಗುವಂಥದ್ದು ಈಗ ತನ್ನಲ್ಲೇನೂ ಉಳಿದಿಲ್ಲವೆಂಬುದು ಅವಳಿಗೆ ಗೊತ್ತು.

'ಮ್ಯಾನೇಜರ್ ಬೆಂಚಿನ ಮೇಲೆ ಗೋಡೆಗೊರಗಿ ಕುಳಿತಿದ್ದರು. ಆತ ಔಪಚಾರಿಕವಾಗಿ ನಕ್ಕ.

'ಜಾನಮ್ಮ, ಕೈ ಹೇಗಿದೆ?'

'ಗುಣವಾಗಿದೆ.'

ಪೈಜಾಮಕ್ಕೆ ಬಿದ್ದ ಸಿಗರೇಟಿನ ಬೂದಿಯನ್ನು ಕೊಡವಿ ಆತ ಕೇಳಿದ: 'ಆಮೇಲೆ ಡಾಕ್ಟರು ಹೇಳಿದ್ದು ಗೊತ್ತಿದೆಯಲ್ಲ?' ಅವಳು ನಿರ್ವಿಕಾರ ಚಿತ್ತಳಾಗಿ ಆತನ ಮುಖ ನೋಡಿದಳು.

'ಜಾನಮ್ಮನಿಗೆ ಇನ್ನು ಕೆಲಸಮಾಡಲು ಆಗುವುದಿಲ್ಲವೆಂದರು. ಕೇಳಿದ್ದೀಯಲ್ಲ?'

'ಹೂಂ.'

ಉತ್ತರ ಭಾರವಾಗಿತ್ತು.

'ಕಂಪೆನಿ ಒಟ್ಟಾರೆ ತುಂಬ ತೊಂದರೆಯಲ್ಲಿದೆ. ಮೃಗಗಳೂ ಸರಿಯಾಗಿಲ್ಲ. ಸಿಂಹಗಳಲ್ಲಿ ಒಂದು ಸಾಯುವಂತಿದೆ. ಆರ್ಥಿಕ ವಿಷಯದಲ್ಲೂ ತುಂಬ ಮುಗ್ಗಟ್ಟು. ಎಲ್ಲ ಯೋಚಿಸುವಾಗ ಕೆಲವರನ್ನು ಬಿಡಿಸಿದರೆ ಏನು ಅಂತ ತೋರುತ್ತದೆ.' ಆತ ಇನ್ನೂ ಏನೇನೋ ಹೇಳಿದರು. ಅವಳಿಗೆ ಅವು ಯಾವುವೂ ಕೇಳಿಸಲಿಲ್ಲ.

'ಕಂಪೆನಿಯಲ್ಲಿ ಇರುವುದಕ್ಕೆ ಅಭ್ಯಂತರವಿಲ್ಲ. ಆದರೆ ಹಿಂದಿನಂತೆ...'

ಅದರ ಅರ್ಥ ಅವಳಿಗಾಯ್ತು. ಲಕ್ಷ್ಮಿಯಂತೆ ಉಳಿದವರ ಸೇವೆ ಮಾಡ್ತಾ ಸಿಕ್ಕಿದ್ದನ್ನು ಅನುಭವಿಸುತ್ತ ಜೀವಿಸುವುದು...'

'ಏನು ಹೇಳ್ತಿ ಜಾನಮ್ಮ?'

'ನಾನು ಹೋಗುತ್ತೇನೆ.'

ಅದು ಅವಳದೇ ಧ್ವನಿ ಎಂದು ಊಹಿಸುವುದೂ ಕಷ್ಟವಾಗಿತ್ತು.

ಅವಳ ಅಂತರಂಗದಿಂದ ಇನ್ನೊಂದು ಪ್ರಶ್ನೆ ಉದಿಸಿದಂತೆ ಅವಳಿಗೆ ತೋರಿತು.

'ಎಲ್ಲಿಗೆ?'

ಜಾನಮ್ಮ ನಡುಗಿದಳು.

ಸರ್ಕಸ್ ಕಂಪೆನಿಯ ಹೊರಗಿರುವ ವಿಶಾಲವಾದ ಪ್ರಪಂಚ ಮೊಣಕೈಯ ಶಕ್ತಿಯನ್ನು ಕಳೆದುಕೊಂಡ ಸರ್ಕಸ್ ಕಂಪೆನಿಯ ಆಟಗಾರ್ತಿಯನ್ನು ಸ್ವೀಕರಿಸಲು ತಯಾರಿರಬಹುದೇ? ಅವಳು ಯೋಚಿಸಿದಳು, ಒಂದು ನಿಮಿಷ.

ಮ್ಯಾನೇಜರ ವಿಜೇತ ಭಾವದಿಂದ ಮುಗುಳ್ನಕ್ಕರು.

ವಿಷಯವನ್ನು ಬಿಡಿಸಿ ಹೇಳದೆಯೇ ಕೆಲಸವಾಯ್ತಲ್ಲ. ಆತ ಮೇಜು ತೆರೆದು ಪರ್ಸ್ ತೆಗೆದು ಐದು, ಹತ್ತರ ನೋಟುಗಳನ್ನು ಎಣಿಸಿದರು.

ಮೇನೇಜರರ ಔದಾರ್ಯ ನೀಡಿದ ಆ ಕಾಗದದ ಚೂರುಗಳನ್ನು ತೀಕ್ಷ್ಣವಾಗಿ ನೋಡುತ್ತ ಒಂದು ಶಿಲಾಪ್ರತಿಮೆಯಂತೆ ಜಾನಮ್ಮ ನಿಂತಳು.

ಡಾ. ಪ್ರಮೀಳಾ ಮಾಧವ್, ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು, ಎ.ಪಿ.ಎಸ್. ವಾಣಿಜ್ಯ ಕಾಲೇಜು, ಬೆಂಗಳೂರು-೫೬೦ ೦೧೯

ಅಬಾರ್ಷನ್ ಸ್ಟೇಟ್‌ಮೆಂಟ್

ತೆಲಗು ಮೂಲ: **ಪಾಟಿಬಂಡ್ಲ ರಜನಿ,**
ಅನುವಾದ: **ಡಾ. ಅಣ್ಣಮ್ಮ**

ಭದ್ರತಾ ವಲಯವನ್ನು ದಿಕ್ಕು ತಪ್ಪಿಸಿ,
ಅಕ್ರಮವಾಗಿ ಸರಹದ್ದು ನುಸುಳುವ ಉಗ್ರಗಾಮಿಯಂತೆ,
ಆ ಹದಿನಾಲ್ಕನೆ ದಿನದಂದು ಹಾಗೋ - ಹೀಗೋ
ಬೇಡಬೇಡವೆನ್ನುತ್ತಲೆ
ಅಜಾಗರೂಕತೆಯಿಂದ, ನಾನು ಸಹಕರಿಸಿದ ಅಸಮ್ಮತಿ ಕಣಗಳಿಂದ
ಮತ್ತೊಂದು ಭಾಗವಾಗಿ ನೀನೇಕೆ ಬಂದೆಯೋ ಕಂದಾ?
ನಿನಗೆ ಹಂಚಲಿಕ್ಕೆ ರಕ್ತ ಇಲ್ಲ ಎಂದಲ್ಲವೆ,
ನಿನ್ನನ್ನು ಪೋಷಿಸಲಿಕ್ಕೆ ಬಿಡುವಿಲ್ಲ ಎಂದಲ್ಲವೆ,
ನಿನ್ನ ಅಕ್ಕನಿಗೆ ಇನ್ನೂ ದೇಕುವುದಕ್ಕೂ ಬರಲಿಲ್ಲ ಎಂದಲ್ಲವೆ,
ನಾನು ನಿನ್ನನ್ನು ಬೇಡವೆಂದುಕೊಂಡದ್ದು!
ಅನುಮತಿ ಇಲ್ಲದೆ ಅಸ್ತಿತ್ವಗೊಂಡ ನಿನ್ನ ತಪ್ಪಿಗೆ-
ನನ್ನ ಟೆಂಪರರಿ ಉದ್ಯೋಗವೂ, ಆರೋಗ್ಯವೂ,
ನಿನಗೆ ಮರಣ ಶಿಕ್ಷೆಯನ್ನು ಖಾಯಂ ಮಾಡಿದರೆ,
ತಲ್ಲಣಿಸುತ್ತಲೆ, ತಪ್ಪೊಪ್ಪುಗಳ ಮಧ್ಯೆ ಚಡಪಡಿಸುತ್ತಲೆ
ತಳವಾರನ ಬಲಿಪೀಠವನ್ನೇರಿ

ಅನಿಕೇತನ–೪೩

ಕೈಗವಸಿನ ಮುಸುಕು ನಿನ್ನ ಮುಖವನು ಮುಚ್ಚಿ,
ಅಭಿಮನ್ಯುವಿನ ಬಾಣಗಳಿಗೆ ಒಪ್ಪಿಸಿ
ಅಸಹಾಯಕರಾದ ಪಾಂಡವರಂತೆ ರೋಧಿಸುತ್ತಾ,
ಪೆಥಿಡ್ರಿನ್ ಸೆಡೇಷನ್‌ನಿಂದ ನಿನ್ನನ್ನು ತೊಳೆದುಕೊಂಡು,
ಒಡೆದ ಬೂರುಗದ ಕಾಯಿಂದ ಹೊರಬಂದ ಹತ್ತಿಯಂತೆ ಹಗುರಾಗಿ,
ನನ್ನೊಳಗಿನ ತಾಯ್ತನವನ್ನು ಹೂತಿಟ್ಟುಕೊಂಡು,
ಕಬ್ಬಿನ ಜಲ್ಲೆಯಾಗಿ ತೂರಾಡುತ್ತಾ,
ಕಂಸನ ಕತ್ತಿಯಂತಿರುವ ಪ್ಲಾಸ್ಟಿಕ್ ಬಕೆಟ್ ನುಂಗಿದ
ಪ್ಲಾಸ್ಟರ್ ಆಫ್ ಪ್ಯಾರಿಸ್ ಮುದ್ದೆಯಂತಿರುವ ನಿನ್ನನ್ನು ನೋಡಿ
ಮತ್ತೆ ನನ್ನ ಕಿಬ್ಬೊಟ್ಟೆಯಲ್ಲಿ ಹುದುಗಿಸಿಕೊಳ್ಳಬೇಕೆಂದೂ
ಹಾಲಿಗಾಗಿ ಪರದಾಡುವ ತುಟಿಗಳಿಗಾಗಿ
ತಾಯಿಗಾಗಿ ಹುಡುಕಾಡುವ ನೋಟಕ್ಕಾಗಿ
ಛಿದ್ರಕಲಶವನ್ನು ಪೂರ್ಣಶಿಲ್ಪವಾಗಿ ತಿದ್ದಿಕೊಳ್ಳಬೇಕೆಂದೂ
ಇಷ್ಟು ಸುಲಭವಾಗಿ ನಿನ್ನನ್ನು ಕೊಲ್ಲುವ ಮಾರ್ಗ
ಕಂಡು ಹಿಡಿದ ಇವರ ಮುಖಗಳ ಮೇಲೆ
ಉಗುಳ ನೀರಿಂದ ಉಗಿಯಬೇಕೆಂದೂ,
ಹುಚ್ಚು ಆವೇಶದಿಂದ ಹೊಟ್ಟೆಯನ್ನು ಕಿವುಚಿಕೊಂಡೆ
ಮನಸ್ಸು ಗಾಯವಾಗಿ, ಕಂದಾ! ಗಡಿಗೆ ಕಣ್ಣೀರ ದುಃಖವಾಗಿದೆ
ಅಯ್ಯೋ!
ಹಾಲು ಇಂಗಿ ಹೋಗಲಿಕ್ಕಿರುವಂತೆ
ಮನಸ್ಸು ಇಂಗಿ ಹೋಗಲಿಕ್ಕೆ
ಮಾತ್ರೆಗಳಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ಡಾ. ಅಣ್ಣಮ್ಮ, ಕನ್ನಡ ಅಧ್ಯಾಪಕಿ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು-೧.

ನಾನು ಮಹಿಳೆ

ದಕ್ಷಿಣ ಅಮೇರಿಕಾ ಮೂಲ: **ಮಾಯಾ ಯಾಂಜಿಲೋ**
ಅನುವಾದ: **ಪ್ರೊ. ಪರಿಮಳಾ ನಾಯಕ**

ಸುಂದರಿ ತನ್ನ ಸೌಂದರ್ಯ ಎಲ್ಲಿ
ಅಡಗಿರಬಹುದು ಎಂದು ಕೇಳಿ ಕೊಳ್ಳುತ್ತಾಳೆ.

ನಾನು ಮುದ್ದು ಮುದ್ದಾಗಿಲ್ಲ
ಫ್ಯಾಶನ್ನಿನ ಅಳತೆಗೆ ಹೊಂದಿಕೊಳ್ಳುವದಿಲ್ಲ
ಇದನ್ನು ಅವರಿಗೆ ಹೇಳ ತೊಡಗಿದರೆ
ನಾನು ಸುಳ್ಳು ಹೇಳಿಕೊಳ್ಳುತ್ತಿದ್ದೇನೆ ಎಂದುಕೊಳ್ಳುತ್ತಾರೆ
ನಾನು ಹೇಳುತ್ತೇನೆ
ಇದು ನನ್ನ ಅಪ್ಪುಗೆಯ ಸಂಪರ್ಕದಲ್ಲಿ
ನನ್ನ ನಿತುಂಬಗಳ ಅಳತೆಯಲ್ಲಿ
ನನ್ನ ತುಟಿಯ ಕೊಂಕಿನಲ್ಲಿ ಇದೆ.
ನಾನು ಮಹಿಳೆ ಆದಕಾಗಿ ವಿಶೇಷತೆಯ
ವಿಶೇಷ ಮಹಿಳೆ ನಾನು.
ನಾನು ಸಹಜವಾಗಿಯೇ
ಕೋಣೆಯಲ್ಲಿ ಕಾಲಿಟ್ಟರೂ
ಗಂಡಸರ ಗಮನ ಸೆಳೆಯುತ್ತೇನೆ.

ಆ ಗಂಡಸು ಎದ್ದು ನಿಲ್ಲುತ್ತಾನೆ
ಅಥವಾ ನನಗಾಗಿ ತಲೆಬಾಗುತ್ತಾನೆ
ನಂತರ ನನ್ನ ಸುತ್ತಲೇ ಸುತ್ತುತ್ತಾನೆ
ಥೇಟ ಜೇನು ನೊಣಗಳ ಹಾಗೆ
ನಾನು ಹೇಳುತ್ತೇನೆ
ಇದು ನನ್ನ ಕಣ್ಣ ಮಿಂಚು
ನನ್ನ ಹಲ್ಲುಗಳ ಹೊಳಪು
ನನ್ನ ಸೊಂಟದ ಬಳುಕಾಟ
ನನ್ನ ಪಾದದ ಉಲ್ಲಾಸದಲ್ಲಿದೆ.
ನಾನು ಮಹಿಳೆ ವಿಶೇಷತೆಯ ವಿಶೇಷ ಮಹಿಳೆನಾನು.

ನನ್ನಲ್ಲಿ ಏನು ಅಡಗಿದೆ ಎಂದು
ಗಂಡಸರು ತಮಗೆ ತಾವೇ ಪ್ರಶ್ನೆ ಮಾಡಿಕೊಳ್ಳುತ್ತಾರೆ.
ಅವರು ಬಹಳ ಪ್ರಯತ್ನ ಪಡುತ್ತಾರೆ.
ಆದರೆ ಅವರು ನನ್ನೊಳಗಿನ
ನಿಗೂಢತೆಯನ್ನು ಮುಟ್ಟಲಾರರು
ನಾನು ಅವರಿಗೆ ತೋರಿಸಲು ಪ್ರಯತ್ನಿಸಿದರೆ
ಅವರಿಗೆ ಅದು ಕಾಣುವದಿಲ್ಲ.
ಅದು ನನ್ನ ಬೆನ್ನ ಹುರಿಯ ಬಾಗುವಿಕೆಯಲ್ಲಿದೆ
ನನ್ನ ನಗೆಯ ಸೂರ್ಯನಲ್ಲಿದೆ
ನನ್ನ ಎದೆಯ ಕುಲುಕಾಟದಲ್ಲಿದೆ
ನನ್ನ ನಡತೆಯ ಘನತ್ವದಲ್ಲಿದೆ
ನಾನು ಮಹಿಳೆ ಅದಕಾಗಿ ವಿಶೇಷತೆಯ
ವಿಶೇಷ ಮಹಿಳೆ ನಾನು
ಈಗ ನಿಮಗೆ ತಿಳಿದಿರ ಬಹುದು
ಯಾಕೆ ನನ್ನ ತಲೆ ಬಾಗಲಾರದು ಎಂದು
ನಾನು ಚೀರ ಬೇಕಿಲ್ಲ, ಜಿಗಿಯ ಬೇಕಿಲ್ಲ.
ಜೋರಾಗಿ ಮಾತಾಡ ಬೇಕಿಲ್ಲ.
ಯಾವಾಗ ನೀವು ನಾನು ಎದ್ದು ಹೋಗುವದನ್ನು
ನೋಡುತ್ತೀರೋ

ನಿಮಗೆ ಹೆಮ್ಮೆ ಅನಿಸುತ್ತದೆ
ಆ ಹೆಮ್ಮೆ ನನ್ನ ಚಪ್ಪಲಿಯ ಸಪ್ಪಳದಲ್ಲಿದೆ
ನನ್ನ ಹೆರಳಿನ ತೂಗಾಟದಲ್ಲಿದೆ
ನನ್ನ ಅಂಗೈಯಲ್ಲಿದೆ
ನನ್ನ ಆರೈಕೆಯ ಅವಶ್ಯಕತೆಯಲ್ಲಿದೆ
ಯಾಕೆಂದರೆ
ನಾನು ಮಹಿಳೆ ವಿಶೇಷತೆಯ ವಿಶೇಷ ಮಹಿಳೆ ನಾನು.

ಪ್ರೊ. ಪರಿಮಳಾ ನಾಯಕ, ಇಂಗ್ಲೀಷ್ ಪ್ರಾಧ್ಯಾಪಕಿ, ಆರ್.ಟಿ.ಇ. ಎಸ್. ಕಾಲೇಜ್, ರಾಣೆಬೆನ್ನೂರು,
ಹಾವೇರಿ ಜಿಲ್ಲೆ.

ಮರದ ವೇದನೆ

ತೆಲುಗು ಮೂಲ: **ರಾವೆಳ್ಳ ಶ್ರೀನಿವಾಸರಾವ್**
ಅನುವಾದ: **ಡಾ. ಅಂಜನಪ್ಪ**

ಅಂದೆಂದೋ ನನ್ನ ಬಾಲ್ಯದಲ್ಲಿ
ನಾನು ಹಸಿಕಂದನಾಗಿದ್ದಾಗ
ನನ್ನನ್ನು ಅಕ್ಕರೆಯಿಂದ ಹತ್ತಿರಕ್ಕೆ ಸೇರಿಸಿಕೊಂಡು
ಇಲ್ಲದ ಪ್ರೀತಿಯನ್ನು ಸುರಿಸಿ
ಕೀರ್ತಿ ಪ್ರತಿಷ್ಠೆಗಾಗಿ
ನನ್ನನ್ನು ನೆಟ್ಟು ನೀರು ಹೊಯ್ದು
ಫೋಟೋಗಳು ತೆಗೆಸಿಕೊಂಡ
ದೊಡ್ಡ ಮನುಷ್ಯನಿಗೆ ನಾನು ಗುರ್ತಿಲ್ಲ!
ಆದರೆ ನನಗೆಲ್ಲಾ ಗೊತ್ತು.
ಆ ದೊಡ್ಡ ಮನುಷ್ಯನ ವಾಹನ ಕೆಟ್ಟು ಹೋಗಿ
ನನ್ನ ನೆರಳಲ್ಲೇ ವಿಶ್ರಾಂತಿ ಪಡೆದ ದಿನವೂ ನನಗೆ ಗೊತ್ತಿದೆ.
ಇಷ್ಟು ದೊಡ್ಡ ನಗರದಲ್ಲಿ
ದಿನವೂ ನನ್ನ ಮುಂದೆಯೇ ಹೋಗುವ
ಸಾವಿರಾರು ಜನಗಳೂ ನನಗೆ ಗೊತ್ತಿದೆ,
ಅವರ ವಾಹನಗಳು ಉಗುಳಿ ಹೋಗುವ

ಹೊಗೆಯೂ ನನಗೆ ಗೊತ್ತಿದೆ!
ಕರೆಂಟ್ ಪೋಲ್‌ಗಿಂತಲೂ ಎತ್ತರ ಬೆಳೆದಿದ್ದೇನೆಂದು
ರಹದಾರಿಗೆ ಅಡ್ಡ ಬಂದಿದ್ದೇನೆಂದೂ
ತುಂಬಾ ಸಾರಿ ನನ್ನನ್ನು ಚಿತ್ರವಧೆ ಮಾಡಿದ್ದೂ ಗೊತ್ತಿದೆ.
ನನ್ನ ನೆರಳಲ್ಲೇ ಜೀವಿಸುತ್ತಾ
ನಿತ್ಯವೂ ನನ್ನನ್ನು ಪರಿಶೀಲಿಸುತ್ತಾ
ಎಲ್ಲಿ ಬೆಳವಣಿಗೆ ಕುಂಟುತ್ತದೋ ಎಂದೂ,
ಯಾವುದಾದರೂ ಭಾರೀವಾಹನ ಬಂದು ನನ್ನ ಅವಯವಗಳನ್ನು
ಮುರಿದು ಹಾಕುವುದೋ ಎಂದು
ಈ ಮೂರುಕಾಲಿನ ಮುದುಕಿ ಪಡುವ ವೇದನೆಯೂ ಗೊತ್ತಿದೆ
ಆದರೆ ನನ್ನಲ್ಲಿ ಅಪಾರವಾದ ಆತ್ಮವಿಶ್ವಾಸವಿದೆ.
ಮತ್ತು ಅಷ್ಟೇ ಎತ್ತರಕ್ಕೆ ಬೆಳೀಬೇಕೆಂದೂ,
ಈ ಜನಗಳಿಗೆ ಪ್ರಾಣವಾಯುವ ಹಂಚಬೇಕೆಂದೂ,
ಅವನಿವನೆಂಬ ಭೇದಭಾವವೆ ಇಲ್ಲದೆ,
ಎಲ್ಲರೂ ಒಂದೆ ಎಂಬ ಭಾವದಿಂದ
ಕೊನೆಯುಸಿರು ಇರುವ ತನಕ
ನೆರವಾಗಬೇಕೆಂಬುದೇ ನನ್ನ ಗುರಿ.
ಆದರೆ ನೀನಾರಿಗಾದೆಯೋ ಎಲೆ ಮಾನವ?

ಡಾ. ಆಂಜನಪ್ಪ, ನಂ. ೮೪, ೫ನೇ ಮುಖ್ಯ ರಸ್ತೆ, ೩ನೇ ಕ್ರಾಸ್, ೩ನೇ ಹಂತ, ಭೋವಿಕಾಲನಿ, ಬಸವೇಶ್ವರ ನಗರ, ಬೆಂಗಳೂರು-೭೯

ಕುರುಬನ ಮಗಳು

ಇಂಗ್ಲಿಷ್ ಮೂಲ: **ವಿಲಿಯಂ ಸಾರೋಯಾನ್**
ಅನುವಾದ: **ಶ್ರೀನಿವಾಸ್ ಎ. ಸುತ್ರಾವೆ**

ನನ್ನ ಅಜ್ಜಿಯ ಅಭಿಪ್ರಾಯದಲ್ಲಿ (ದೇವರು ಅವಳಿಗೆ ಒಳ್ಳೇದು ಮಾಡಲಿ) ಪ್ರತಿಯೊಬ್ಬ ಮನುಷ್ಯನು ಕಷ್ಟಪಟ್ಟು ದುಡೀಬೇಕು. ಈಗ ತಾನೆ - ಒಂದು ನಿಮಿಷದ ಕೆಳಗೆ - ಅವಳು ನನಗೆ ಹೇಳಿದಳು : ನೀನು ಯಾವುದಾದರೂ ಒಂದು ಒಳ್ಳೆ ಕೆಲಸ ಕಲೀಬೇಕು; ಅಂದರೆ, ಮನುಷ್ಯನ ಉಪಯೋಗಕ್ಕೆ ಬರೋವಂಥ ಯಾವುದಾದರೂ ಒಂದು ಕೆಲಸ ; ಆದರೆ ಮಣ್ಣಿಂದಾನೋ, ಮರದಿಂದಲೋ, ಲೋಹದಿಂದ ಅಥವಾ ಬಟ್ಟೆಯಿಂದ - ಹೀಗೆ ಯಾವುದಾದರೂ ಒಂದು ವಸ್ತುವಿನಿಂದ ಯಾವುದೇ ಒಂದು ಗೌರವದ ಕೆಲಸ ಮಾಡಲಿಕ್ಕೆ ಬರಲ್ಲ ಅಂದ್ರೆ, ಅದು ಸರಿಯಲ್ಲ. ನಿನಗೆ ಯಾವುದಾದರೂ ಕೆಲಸ ಬರುತ್ತಾ? ಒಂದು ಸಾದಾ ಟೇಬಲ್ಲೋ, ಕುರ್ಚೀನೋ, ಒಂದು ಕಂಬಳೀನೋ ಅಥವಾ ಒಂದು ಕಾಫಿ ಪಾತ್ರೇನೋ ಮಾಡಲಿಕ್ಕೆ ಬರುತ್ತಾ?

ಹೀಗೆ ಹೇಳಿ ನನ್ನ ಅಜ್ಜಿ ನನ್ನ ಕಡೆ ಸಿಟ್ಟಿನಿಂದ ನೋಡಿದಳು. ಅವಳು ಹೇಳಿದಳು : ನೀನೇನೋ ಲೇಖಕ ಅಂತೆ? ಇರಬಹುದು ಅನ್ಸುತ್ತೆ. ಯಾಕೆಂದ್ರೆ, ನೀನಂತೂ ವಿಪರೀತ ಸಿಗರೇಟು ಸೇದ್ತೀಯ - ಏನೋ ದೊಡ್ಡ ಕೆಲಸ ಮಾಡೋವರ ಹಾಗೆ. ಮನೆ ತುಂಬ ಸಿಗರೇಟಿನ ಹೊಗೆ. ಆದರೆ, ಅದೇನೇ ಇರಲಿ, ನೀನು ಯಾವುದಾದರೂ ಕೆಲ್ಸಕ್ಕೆ ಬರೋವಂಥ ಕೆಲಸ ಮಾಡಬೇಕು. ಕಣ್ಣಿಗೆ ಕಾಣುವಂಥದ್ದು ಮತ್ತೆ ಮುಟ್ಟಿ ನೋಡಬಹುದಾದಂಥದ್ದು.

ಆಮೇಲೆ, ನಮ್ಮಜ್ಜಿ ಒಂದು ಕಥೆ ಹೇಳಿದಳು; ಒಬ್ಬ ಪರ್ಷಿಯನ್ ರಾಜ ಇದ್ದನಂತೆ. ಅವನಿಗೊಬ್ಬ ಮಗ ಇದ್ದನಂತೆ. ಸರಿ, ಈ ಹುಡುಗ ಒಬ್ಬ ಕುರಿಕಾಯುವವನ ಮಗಳನ್ನು ಪ್ರೀತಿಸಿದ. ಅವನು ಅಪ್ಪನ ಹತ್ತಿರ ಹೋಗಿ ಹೇಳಿದ: ಅಪ್ಪಾಜಿ, ನಾನೊಬ್ಬ ಕುರಿಕಾಯುವವನ ಮಗಳನ್ನ ಪ್ರೀತಿಸ್ತಾ ಇದೀನಿ. ಮತ್ತೆ ನಾನವಳನ್ನ ಮದುವೆ ಮಾಡ್ಕೋಬೇಕು ಅಂತ ಇದೀನಿ. ಆಗ ರಾಜ ಹೇಳಿದ: ಇಲ್ನೋಡು, ನಾನು ಒಬ್ಬ ರಾಜ, ಮತ್ತು ನೀನು ನನ್ನ ಮಗ, ಆಮೇಲೆ ನಾನು ಸತ್ತನಂತರ ನೀನು ರಾಜ ಆಗೋವನು, ಹಾಗಾಗಿ ನೀನು ಒಬ್ಬ ಕುರುಬನ ಮಗಳನ್ನ ಮದುವೆಯಾಗೋದು ಅಂದ್ರೆ ಏನು? ಆಗ ಮಗ ಹೇಳಿದ : ಅಪ್ಪಾಜಿ, ಅದೇನೋ ನನಗೆ ಗೊತ್ತಿಲ್ಲ, ಆದರೆ ನಾನು ಆ ಹುಡುಗೀನ ಪ್ರೀತಿಸ್ತೀನಿ ಅನ್ನೋದು ಮಾತ್ರ ಗೊತ್ತು; ಮತ್ತೆ ಅವಳು ನನ್ನ ರಾಣಿಯಾಗ್ಬೇಕು ಅನ್ನೋದು ನನ್ನ ಆಸೆ.

ರಾಜನಿಗೆ ಅರ್ಥವಾಯ್ತು - ತನ್ನ ಮಗ ಆ ಹುಡುಗೀನ ಪ್ರೀತಿಸ್ತಾನೆ ಅಂದ್ರೆ, ಅದು ದೇವರ ಇಚ್ಛೆ ಅಂತ. ಹಾಗಾಗಿ ಅವನು ಹೇಳಿದ: ನಾನು ಅವಳಿಗೆ ಸಂದೇಶ ಕಳಿಸ್ತೀನಿ. ಸರಿ, ಅವನು ಹಾಗೆ ಹೇಳಿ ಒಬ್ಬ ದೂತನನ್ನು ಕರೆದು ಹೇಳಿದ: ನೀನು ಹೋಗಿ ಆ ಕುರುಬನ ಮಗಳಿಗೆ ಹೇಳು - ನನ್ನ ಮಗ ಅವಳನ್ನ ಪ್ರೀತಿಸ್ತಾ ಇದಾನೆ ಮತ್ತೆ ಅವನು ಅವಳನ್ನ ಮದುವೆ ಮಾಡ್ಕೋಬೇಕಂತಿದ್ದಾನೆ ಅಂತ. ಸರಿ, ದೂತ ಅವಳಲ್ಲಿಗೆ ಹೋದ ಮತ್ತೆ ಅವಳಿಗೆ ಈ ವಿಷಯ ಹೇಳಿದ. ಆಗ ಆ ಹುಡುಗಿ ಕೇಳಿದಳು : ಆತ ಏನು ಕೆಲ್ಸ ಮಾಡ್ತಾನೆ? ದೂತ ಹೇಳ್ದ - ಯಾಕೆ, ಅವನ್ಯಾಕೆ ಕೆಲ್ಸ ಮಾಡ್ಬೇಕು? ಅವನು ರಾಜನ ಮಗ ಅಲ್ವೆ? ಆಗ ಆ ಹುಡುಗಿ ಹೇಳಿದಳು: ಅವನು ಯಾವುದಾದರೂ ಒಂದು ಕೆಲ್ಸ ಕಲೀಬೇಕು. ಸರಿ, ದೂತ ವಾಪಸ್ಸು ಹೋದ, ಹೋಗಿ ಅವಳು ಹೇಳಿದ್ದ ಮಾತನ್ನೇ ರಾಜನಿಗೆ ಹೇಳಿದ.

ರಾಜ ತನ್ನ ಮಗನಿಗೆ ಹೇಳ್ದ : ಆ ಕುರುಬನ ಮಗಳು ನೀನ್ಯಾವುದಾದರೂ ಕೆಲಸ ಕಲಿಬೇಕು ಅಂತ ಹೇಳ್ತಾಳೆ. ಅವಳು ಹಾಗಂದ್ರೂ, ನೀನು ಅವಳನ್ನೇ ಮದುವೆ ಮಾಡ್ಕೋಬೇಕು ಅಂತೀಯಾ? ಆಗ ಮಗ ಹೇಳ್ದ: ಹೌದು. ನಾನು ಕಂಬಳಿ ಮಾಡೋದನ್ನ ಕಲೀತೀನಿ. ಆ ಮೇಲೆ, ಆ ಹುಡುಗ ಆ ಕೆಲ್ಸ ಕಲಿತ. ಒಳ್ಳೊಳ್ಳೆ ಬಣ್ಣಬಣ್ಣದ, ಸೊಗಸಾದ ಡಿಸೈನುಗಳ ಸುಂದರವಾದ ಕಂಬಳಿಗಳನ್ನ ಮಾಡೋದು ಕಲಿತ. ಮೂರು ದಿವಸದಲ್ಲಿಲ್ಲ ಕಲಿತ. ದೂತ ಪುನಃ ಆ ಕುರುಬನ ಮಗಳ ಹತ್ತಿರ ಹೋದ. ಹೋಗಿ, ಆ ಹುಡುಗಿಗೆ ಹೇಳ್ದ: ಈ ಕಂಬಳಿಗಳನ್ನ ನೋಡು, ಇವನ್ನ ರಾಜನ ಮಗ ಮಾಡಿದ್ದು.

ಹುಡುಗಿ ದೂತನ ಜೊತೆ ಅರಮನೆಗೆ ಹೋದಳು, ಮತ್ತೆ ರಾಜನ ಮಗನನ್ನು ಮದುವೆ ಮಾಡ್ಕೊಂಡಳು.

ನಮ್ಮಜ್ಜಿ ಹೇಳಿದಳು - ಒಂದು ದಿನ ರಾಜನ ಮಗ ಬಾಗ್ದಾದಿನ ರಸ್ತೆಗಳಲ್ಲಿ ಹೋಗ್ತಾ ಇದ್ದನಂತೆ. ಆಗ ಒಂದು ಹೋಟಲು ಅವನ ಕಣ್ಣಿಗೆ ಬಿತ್ತಂತೆ. ತುಂಬ ಕ್ಲೀನಾದ, ತಂಪಾದ ಹೋಟಲ್ಲಂತೆ ಸರಿ, ಅವನು ಒಳಗೆ ಹೋಗಿ ಒಂದು ಟೇಬಲ್ಲ ಹತ್ತಿರ ಕೂತನಂತೆ.

ನನ್ನ ಅಜ್ಜಿ ಹೇಳಿದಳು : ಆ ಜಾಗ ಕಳ್ಳರ, ಕೊಲೆಗಡುಕರ ಸ್ಥಳವಾಗಿತ್ತು. ಅವರು ರಾಜನ ಮಗನನ್ನ ಹಿಡಕೊಂಡು ಹೋಗಿ ಒಂದು ನೆಲ ಮಾಳಿಗೆಯ ಕತ್ತಲು ಕೋಣೆಯಲ್ಲಿಟ್ಟರು. ಅಲ್ಲಿ ಅವರು ನಗರದ

ದೊಡ್ಡದೊಡ್ಡ ಮನುಷ್ಯರನ್ನ ಹಿಡಕೊಂಡು ಬಂದು ಇಡ್ತಾ ಇದ್ದರು. ಅವರು ಹಿಡಿದು ತಂದ ಜನರಲ್ಲಿ ದಪ್ಪದಪ್ಪಗಿದ್ದವರನ್ನ ಕೊಂದು, ಅವರನ್ನ ತುಂಬ ತೆಳ್ಳಗಿದ್ದವರಿಗೆ ಉಣಬಡಿಸುತ್ತಿದ್ದರು. ಅದು ಅವರಿಗೊಂದು ಆಟವಾಗಿತ್ತು. ರಾಜನ ಮಗ ಎಲ್ಲರಿಗಿಂತ ತೆಳ್ಳಗಿದ್ದ, ಮತ್ತೆ ಅವನು ಪರ್ಷಿಯನ್ ರಾಜನ ಮಗ ಅನ್ನೋದು ಅವರಿಗೆ ಗೊತ್ತಿರಲಿಲ್ಲ, ಹಾಗಾಗಿ ಅವನನ್ನು ಕೊಲ್ಲದೇ ಹಾಗೆ ಬಿಟ್ಟರು. ಅವನು ಆ ಕಳ್ಳರಿಗೆ ಮತ್ತೆ ಕೊಲೆಗಡುಕರಿಗೆ ಹೇಳ್ದ - ನಾನೊಬ್ಬ ಕಂಬಳಿಗಳನ್ನ ನೇಯೋವನು, ಮತ್ತೆ ಅವಕ್ಕೆ ತುಂಬ ಬೆಲೆ ಇದೆ ಅಂತ. ಆ ಮೇಲೆ, ಆ ಜನ ಅವನಿಗೆ ಉಣ್ಣೆ ತಂದುಕೊಟ್ಟರು, ಕೊಟ್ಟು ನೇಯಲಿಕ್ಕೆ ಹೇಳಿದರು. ಅವನು ಮೂರು ದಿನದಲ್ಲಿ ಮೂರು ಕಂಬಳಿಗಳನ್ನ ನೇಯ್ದು, ಅವರಿಗೆ ಹೇಳ್ದ - ಈ ಕಂಬಳಿಗಳನ್ನ ಪರ್ಷಿಯನ್ನರ ರಾಜನ ಅರಮನೆಗೆ ತಗೊಂಡು ಹೋಗಿ ಅವನು ಪ್ರತಿಯೊಂದು ಕಂಬಳಿಗೂ ನೂರು ಬಂಗಾರದ ನಾಣ್ಯ ಕೊಡ್ತಾನೆ ಅಂತ. ಸರಿ, ಅವರು ಕಂಬಳಿಗಳನ್ನ ಅರಮನೆಗೆ ತಗೊಂಡು ಹೋದರು. ರಾಜ ಅವನ್ನ ನೋಡ್ದಾಗ ಅವನಿಗೆ ಗೊತ್ತಾಯ್ತು - ಅವನ್ನ ತನ್ನ ಮಗಾನೇ ನೇಯ್ದಿರೋದು ಅಂತ. ಆಗ ಅವನು ಆ ಕಂಬಳಿಗಳನ್ನ ಕುರುಬನ ಮಗಳ ಹತ್ತಿರ ತಗೊಂಡು ಹೋದ, ಮತ್ತೆ ಅವಳಿಗೆ ಹೇಳಿದ : ಈ ಕಂಬಳಿಗಳನ್ನ ಯಾರೋ ಅರಮನೆಗೆ ತಂದಿದಾರೆ; ಇವು ನನ್ನ ಮಗಾನೇ ನೇಯ್ದಿರೋದು. ಕುರುಬನ ಮಗಳು ಪ್ರತಿಯೊಂದು ಕಂಬಳೀನೂ ಸರಿಯಾಗಿ ನೋಡಿದಳು. ಪ್ರತಿ ಕಂಬಳಿಯ ಡಿಸೈನ್‌ನಲ್ಲೂ ಅವಳ ಗಂಡ ಪರ್ಷಿಯನ್ ಭಾಷೆಯಲ್ಲಿ ಒಂದು ಸಂದೇಶ ಬರೆದಿದ್ದ. ಅದನ್ನ ಅವಳು ರಾಜನಿಗೆ ತೋರಿಸಿದಳು.

ಆಗ ರಾಜ, ಆ ಕಳ್ಳರು ಮತ್ತು ದರೋಡೆಕೋರರ ಸ್ಥಳಕ್ಕೆ ಕೆಲವು ಸೈನಿಕರನ್ನ ಕಳಿಸಿದ. ಅವರು ಬಂಧಿಗಳನ್ನೆಲ್ಲ ಬಿಡಿಸಿ ಎಲ್ಲಾ ಕಳ್ಳರನ್ನ ಮತ್ತೆ ಕೊಲೆಗಡುಕರನ್ನ ಕೊಂದು ಹಾಕಿದರು. ಆಗ ರಾಜನ ಮಗ ತನ್ನ ತಂದೆಯ ಅರಮನೆಗೆ ಸೌಖ್ಯವಾಗಿ ವಾಪಸ್ಸು ಬಂದ. ಅರಮನೆಯಲ್ಲಿ ತನ್ನ ಹೆಂಡತಿಯನ್ನು ಈಗ ಪುನಃ ಕಂಡಾಗ ಅವನು ಗೌರವದಿಂದ ಬಾಗಿ ಅವಳ ಕಾಲನ್ನ ನೇವರಿಸಿ ಹೇಳ್ದ : ಪ್ರಿಯೆ, ನಾನೀಗ ಬದುಕಿರೋದು ನಿನ್ನಿಂದಾಗಿಯೇ. ರಾಜ ಕುರುಬನ ಮಗಳ ಬಗ್ಗೆ ತುಂಬ ಸಂತೋಷ ಪಟ್ಟ.

ನಮ್ಮಜ್ಜಿ ಹೇಳಿದಳು : ಈಗ ನಿನಗೆ ಗೊತ್ತಾಯ್ತ - ಯಾಕೆ ಪ್ರತಿಯೊಬ್ಬರೂ ಯಾವುದಾದರೂ ಒಂದು ಗೌರವದ ಕೆಲಸ ಕಲೀಬೇಕು ಅಂತ?

ನಾನಂದೆ : ಹೌದು, ಗೊತ್ತಾಯ್ತು. ಆ ಮೇಲೆ, ನಾನು ಒಂದು ಗರಗಸ ಮತ್ತೆ ಸುತ್ತಿಗೆ ಮತ್ತೆ ಒಂದು ಮರದ ದಿಮ್ಮಿ ತಗೊಳ್ಳಿಕ್ಕೆ ಸಾಕಾಗುವಷ್ಟು ಹಣ ಸಂಪಾದಿಸಿದ ಕೂಡಲೇ ಒಂದು ಸಾದಾ ಕುರ್ಚೀನೋ ಅಥವಾ ಒಂದು ಪುಸ್ತಕದ ಬಡೂನೋ ತಯಾರಿಸೋದು ಕಲೀತೀನಿ.

ಪ್ರೊ. ಶ್ರೀನಿವಾಸ ಏ. ಸುತ್ರಾವೆ, ೧೬೪೬/೧೮ ಮಹಡಿ, ವಿದ್ಯಾನಗರ, ದಾವಣಗೆರೆ-೫೭೭ ೦೦೫

ಆ ಮಳೆ ಬಿದ್ದ ರಾತ್ರಿ

ಮೂಲ ಅಸ್ಸಾಮಿ: **ಬಿಜೊಯ್ ಸಾವನ್**
ಇಂಗ್ಲಿಷ್‌ದಿಂದ ಕನ್ನಡಕ್ಕೆ : **ಡಾ. ಬಾಳಾಸಾಹೇಬ ಲೋಕಾಪುರ**

ಕಿಡಕಿಗೆ ಜೋರಾಗಿ ಅಪ್ಪಳಿಸಿ ಹೊಡೆಯುತ್ತಿರುವ ಮಳೆಯನ್ನು ಆಕೆ ನೋಡಿದಳು. ಅಂತಹ ಆಕ್ರಮಣಕಾರಿ ಮಳೆ ಯಾವಾಗಲೂ ಅವಳನ್ನು ವಿಚಲಿತಳನ್ನಾಗಿ ಮಾಡುತ್ತಿತ್ತು. ಅವಳು ಮತ್ತೊಂದು ಗ್ಲಾಸನ್ನು ತನಗಾಗಿ ತುಂಬಿಕೊಂಡಳು. ಮತ್ತು ತನ್ನ ಗೆಳೆಯ ಲ್ಯಾಪಿಷ್ಟಾ ಕೊಟ್ಟ ಡಿನ್ನರ ಆಮಂತ್ರಣವನ್ನು ನಿರಾಕರಿಸಬಾರದು ಎಂದುಕೊಂಡಳು.

ವೈನನ್ನು ಗುಟುಕರಿಸಿದಳು. ತನ್ನ ಮನೆಯ ಮುಂದಿನ ಬೆಟ್ಟದ ಮೇಲೆ ಮನೆಯ ಬೆಳಕು ಬೆಳಕಿನ ಹುಳದ ಹಾಗೆ ಬಿದ್ದಿರುವದನ್ನು ನೋಡಿದಳು. ಬಹಳ ಅಹ್ಲಾದಕರವಾದ ದೃಶ್ಯ ಅದಾಗಿತ್ತು. ತಾನು ಸಿಮ್ಲಾದಲ್ಲಿ ಕಳೆದ ಬಾಲ್ಯದ ದಿನಗಳು ನೆನಪಿಗೆ ಬಂದವು.

ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕೇಂದ್ರ ಸೇವಾ ಆಫೀಸರ್ ಆಗಿ ಅವಳ ತಂದೆ ಅಲ್ಲಿಗೆ ವರ್ಗವಾಗಿದ್ದರು. ಅವಳು ಬಹಳವೆಂದರೆ ಬಹಳ ಸಿಮ್ಲಾವನ್ನು ಪ್ರೀತಿಸುತ್ತಿದ್ದಳು. ತನ್ನ ತಂದೆಗೆ ಮತ್ತೊಮ್ಮೆ ಸಿಲ್ಲಾಂಗಕ್ಕೆ ವರ್ಗವಾದಾಗ ಅವಳು ಸಿಮ್ಲಾವನ್ನು ಬಹಳ ಮಿಸ್ ಮಾಡಿಕೊಂಡಿದ್ದಳು. ಅವಳು ಆಗ ಆರು ವರ್ಷದ ಚಿಕ್ಕ ಹುಡುಗಿ. ತನ್ನ ನೋವನ್ನೂ ಕೂಡ ತೋಡಿಕೊಳ್ಳಲು ಅಸಮರ್ಥವಾಗಿದ್ದ ಬಾಲ್ಯ. ಅದು ಅವಳನ್ನು ಹೊಸ ಗಾಯದಂತೆ ನೋಯಿಸುತ್ತಲೇ ಇತ್ತು. ತಿಂಗಳಾನುಗಟ್ಟಲೆ ಮಧ್ಯರಾತ್ರಿ ಧಡಕ್ಕನೇ ಎದ್ದು ಕುಳಿತು ಅಳುತ್ತಾ ಇಲ್ಲವೇ ಹೆಬ್ಬೆರಳು ಚೀಪುತ್ತಾ ರಾತ್ರಿಯೆಲ್ಲಾ ಕಳೆಯುತ್ತಿದ್ದಳು. ಅದೇ ತರಹದ

ನೋವನ್ನು ಇಂದು ಕೂಡಾ ಅವಳು ಅನುಭವಿಸಿದಳು. ಆದರೆ ಯಾಕೆ ಎಂದು ಆಶ್ಚರ್ಯಗೊಂಡಳು. ಬಹುಶಃ ಅವಳ ಮಗ ಎರಿಕ್‌ಲ್ಯಾಗನಿಗಾಗಿ ಇರಬೇಕು. ಇಂದು ಬೇಗನೆ ಮನೆಗೆ ಬರುತ್ತೇನೆ ಎಂದು ಹೇಳಿದ್ದ. ಆದರೆ ಬಂದಿರಲಿಲ್ಲ. ಅವಳ ತುಂಟ ಹಟಮಾರಿ ಮಗನನ್ನು ಅವಳು ಬಹಳ ನೆನಪಿಸಿಕೊಳ್ಳ ತೊಡಗಿದಳು. ಅವನೊಂದಿಗೆ ಇರಲು ಅವನಿಗೆ ಪ್ರಿಯವಾದ ತಿಂಡಿ ತಿನಿಸುಗಳನ್ನು ತಯಾರಿಸುತ್ತಾ ಈ ಶನಿವಾರವನ್ನು ಅದೆಷ್ಟು ಸಲ ಅವಳು ಎದುರು ನೋಡಿಲ್ಲ? ಇಡೀ ವಾರ ಆತನನ್ನು ನೋಡಲು ಅವಳಿಗೆ ಸಾಧ್ಯವೇ ಆಗಲಿಲ್ಲ. ಅವಳು ತನ್ನ ಆಫೀಸಿನ ಕೆಲಸದಲ್ಲಿ ಮತ್ತು ಅವನು ತನ್ನ ಕಾಲೇಜದಲ್ಲಿ ಓದುವಾಗ ವಾರದಲ್ಲಿ ಎಷ್ಟು ಸಲ ನೋಡಲು ಸಾಧ್ಯ? ಅವಳಿಗೆ ಆಶ್ಚರ್ಯವಾಗತೊಡಗಿತು. ಯಾಕೆ ಅವನು ಮಾತು ಕೊಟ್ಟಂತೆ ಬೇಗ ಮನೆಗೆ ಬರಲಿಲ್ಲ? ಅವಳಿಗೆ ತನ್ನ ಹೊಟ್ಟೆಯಲ್ಲಿ ಖಾಲಿತನ ಅನುಭವಕ್ಕೆ ಬರತೊಡಗಿತು. ಅದು ಅವಳನ್ನು ಇಡಿಯಾಗಿ ಹಿಡಿಯಿತು. ಅವಳ ಕಣ್ಣಿನಿಂದ ನೀರು ಧಾರೆಯಾಗಿ ಸುರಿಯತೊಡಗಿದವು.

ಶಿಲ್ಲಾಂಗದ ವಿಚಿತ್ರದಂತೆ ಹೊರಗೆ ಮಳೆ ಒಮ್ಮೆಲೆ ನಿಂತಿತು. ಮತ್ತು ಕೇವಲ ಗಾಳಿಮಾತ್ರ ಭರ್‌ನೆ ಬೀಸುತ್ತಾ ರಾತ್ರಿಯ ಸಂಗೀತವನ್ನು ನುಡಿಸತೊಡಗಿತು. ಗಿಡಗಳ ಪೊದೆಗಳ ನಡುವಿನಿಂದ ಸಾವಿರಾರು ಚಿಟ್ಟೆಗಳ ಧ್ವನಿ ಆ ಶಾಂತತೆಯನ್ನು ಕಲಕತೊಡಗಿತು. ಅವಳು ಒಮ್ಮೆಲೆ ಖುರ್ಚಿಯ ಮೇಲಿಂದ ಎದ್ದು ಅವಳಿಗೆ ಯಾವಾಗಲೂ ಪ್ರಿಯವಾಗಿದ್ದ ಹಾಡನ್ನು ಟೇಪದಲ್ಲಿ ಹಾಕಿದಳು. ಆ ಮೃದುವಾದ ನೆಲಹಾಸಿಗೆಯ ಮೇಲೆ ಒಂದು ಗ್ಲಾಸಿನಲ್ಲಿ ಬಿಸಿ ವೈನ ಹಾಗು ಇನ್ನೊಂದು ಖಾಲಿ ಗ್ಲಾಸ ಹಿಡಿದು ಸಣ್ಣ ನೃತ್ಯ ಮಾಡಿದಳು.

×××××

ಪ್ರಾರಂಭದಲ್ಲಿ ಅವಳು ತನ್ನ ಹರೆಯದ ಗಂಡ ಅರ್ಲಾಂಗನನ್ನು ನೆನಪಿಸಿಕೊಂಡಳು. ಮೂರುವರ್ಷಗಳ ಹಿಂದೆಯೆ ಅವನನ್ನು ಕ್ಯಾನ್ಸರ್ ಎಂಬ ವಿಧಿ ಕಿತ್ತುಕೊಂಡು ಅವಳನ್ನು ಎಂದೂ ತುಂಬಲಾಗದ ದೊಡ್ಡದಾದ ಶೂನ್ಯದಲ್ಲಿ ಬಿಟ್ಟು ಹೋಗಿತ್ತು. ಆಗಲೇ ಅವಳ ಮಗ ಎರಿಕ್ ಸಿಲ್ಲಾಂಗದಲ್ಲಿಯೇ ಗ್ರ್ಯಾಜುವೇಟ್ ಮಾಡಲಿ ಎಂದು ನಿಶ್ಚಯಿಸಿದಳು. ಅವಳ ಗಂಡ ಹಾಸಿಗೆಯಲ್ಲಿ ಸಾವು ಬದುಕಿನೊಂದಿಗೆ ಹೋರಾಡುತ್ತಿರುವಾಗಲೆ ತನ್ನ ಮಗಳಾದ ಕ್ಲಾರಿಸಾಳ ರೋಮ್ಯಾನ್ಸನ್ನು ಪ್ರಾರಂಭದಲ್ಲಿಯೇ ಚೂಟಿಹಾಕಲು ಪ್ರಯತ್ನಿಸಿದ್ದಳು. ಅವಳ ಚಲುವಗಾರ ಇಂಗ್ಲೆಂಡಿನಲ್ಲಿ ಡಾಕ್ಟರನಾಗಿದ್ದ. ಆತ ಕ್ರೈಸ್ತ ಖಾಲಿಜಾತಿಗೆ ಸೇರಿದವನು. ಅದೇನು ಅಂತಹ ತೊಂದರೆ ಅಲ್ಲ. ಅವನೂ ಕೂಡಾ ಇವರದೇ ಚರ್ಚ ಬಳಗಕ್ಕೆ ಸೇರಿದವನು. ಆದರೆ ಸಾವಿರಾರು ಮೈಲು ದೂರದಲ್ಲಿ ಇದ್ದಾನೆ. ಆದರೆ ಅವರ ರೋಮ್ಯಾನ್ಸನ್ನು ನಿಲ್ಲಿಸುವಲ್ಲಿ ಹೀನಾಯವಾಗಿ ಸೋತಿದ್ದಳು. ಗಂಡ ಸಾಯುವ ಮೂರು ತಿಂಗಳ ಮುಂಚೆಯೆ ಕ್ಲಾರಿಸಾ ಅವನನ್ನು ಮದುವೆಯಾಗಿ ಇಂಗ್ಲೆಂಡಿಗೆ ಹೋಗಿ ಬಿಟ್ಟಿದ್ದಳು. ಅರ್ಲಾಂಗ ನಿಜಕ್ಕೂ ಆ ಜೋಡಿ ನೋಡಿ ಖುಷಿಯಾಗಿದ್ದ. ಅವನ ಅನಾರೋಗ್ಯದಲ್ಲೂ ಅವನು ಮದುವೆಯಲ್ಲಿ ಸಂತೋಷವಾಗಿ ಹೆಚ್ಚು ಕಳಕಳಿಯಾಗಿ ಕಂಡಿದ್ದ. ಅವನೂ ಯಾವಾಗಲೂ ವೃತ್ತಿ ನಿರತರನ್ನು ಪ್ರೀತಿಸುವವನಾಗಿದ್ದ. ತನ್ನ ಮಗಳು ಇಂಗ್ಲೆಂಡಿನಲ್ಲಿ ಇರುತ್ತಾಳೆ ಎಂಬ ವಿಚಾರವೇ ಅವನನ್ನು ಸಂತೋಷಗೊಳಿಸಿತ್ತು. ಅಂದು ಅವಳು ಬಹಳ ಸಮಾಧಾನಗೊಂಡಿದ್ದಳು.

ಮಗ ಎರಿಕ್ ಪ್ರಾರಂಭದಲ್ಲಿ ಸಂತೋಷವಾಗಿದ್ದ ಮತ್ತು ಕಾಲೇಜ್‌ದಲ್ಲಿ ಹೊಂದಿಕೊಂಡಿದ್ದ. ಆದರೆ ಅದು ಬಹಳ ದಿನ ಅಲ್ಲ. ಅವನು ಕಾಲೇಜಕ್ಕೆ ಸೇರಿಕೊಂಡ ಕೆಲವೇ ದಿನದಲ್ಲಿ ಅವನ ಹಿಮಾಚಲದ ಗೆಳೆಯರೊಂದಿಗಿನ ಸಂಪರ್ಕವನ್ನು ಕಳೆದುಕೊಂಡಿದ್ದ. ಅವರು ಅವನಿಗೆ ಅನೇಕ ಸಲ ಫೋನ ಮಾಡಿದ್ದರು. ಇ-ಮೇಲ್ ಕಳಿಸಿದ್ದರು. ಹುಡುಗಿಯರು ಕಾರ್ಡ್ಸ್ ಕಳಿಸಿದ್ದರು. ಆದರೆ ಯಾವುದಕ್ಕೂ ಎರಿಕ್ ಉತ್ತರಿಸಿರಲಿಲ್ಲ. ಅವಳು ಎರಿಕ್‌ಗೆ ಅವರೊಂದಿಗೆ ಸಂಪರ್ಕ ಇಟ್ಟುಕೋ ಎಂದು ಹೇಳಿ ಅದಕ್ಕಾಗಿ ಪ್ರಯತ್ನ ಪಟ್ಟಿದ್ದಳು. ತನ್ನ ಜೀವನದಿಂದ ಅವರನ್ನು ಹೊರಗಿಡುವ ನಿರ್ಣಯದಲ್ಲಿ ಅವನು ದೃಢವಾಗಿದ್ದ. ಅದಾದ ಬಳಿಕ ರಾತ್ರಿ ತಡವಾಗಿ ಬರತೊಡಗಿದ. ಒಂದೊಂದು ಸಲ ತುಂಬ ತಡವಾಗಿ. ಕೆಲವು ಸಲ ಬರದೆಯೇ ಹೊರಗಡೆಯೇ ಉಳಿಯುತ್ತಿದ್ದ. ಅವಳು ಅವನಿಗಾಗಿ ಮೂರು ಪಾರ್ಟಿಗಳನ್ನು ಮನೆಯಲ್ಲಿಯೇ ವ್ಯವಸ್ಥೆ ಮಾಡಿದ್ದಳು. ಅದರಿಂದ ಅವನ ಹೊಸ ಗೆಳೆಯರು ಖುಶಿಯಾಗುವಂತೆ ಪ್ರಯತ್ನಿಸಿದ್ದಳು. ಅವನ ಹೊಸ ಗೆಳೆಯರು ಎಂದಿನ ಹುಡುಗರಂತೆ ಇಲ್ಲ ಎನಿಸಿತು. ಆದರೂ ಮಗನ ಹುಟ್ಟು ಹಬ್ಬದಲ್ಲಿ ಅತ್ಯುತ್ತಮ ತಿಂಡಿ ಎರಡು ಬಾಟಲ್ ಸ್ಮಿರ್ನಾಫ್ ಇತ್ಯಾದಿಗಳ ಜೋಡಣೆಯಲ್ಲಿ ಅವಳು ಸಂತೋಷ ಪಟ್ಟಿದ್ದಳು.

ಮರುದಿನದ ಮುಂಜಾನೆ ಎಂದಿನಂತೆ ಕೆಲಸಕ್ಕೆ ತೊಡಗಿದ್ದಳು. ರೂಮು ಮೊದಲಿನಂತೆ ಯಥಾ ಸ್ಥಿತಿಗೆ ಬಂದಾಗ ಅವಳಿಗೆ ಒಮ್ಮೆಲೇ ನೆನಪಾಯಿತು. ನಿನ್ನೆಯ ರಾತ್ರಿಯ ಪಾರ್ಟಿಯಲ್ಲಿ ಎರಿಕ್‌ನ ಮೂವರು ಗೆಳೆಯರಾದ ಸುಜಯ್ ಮಿಶ್ರಾ, ಬಾಬ್ಬಿ ಸಿಂಗ ಮತ್ತು ರಿತಿಕ್ ಗೋಸ್ವಾಮಿ ಗಮನ ಸೆಳೆಯುವಂತೆ ಪಾರ್ಟಿಯನ್ನು ತಪ್ಪಿಸಿದ್ದರು. ಮತ್ತು ಇತ್ತೀಚೆಗೆ ಫೋನ್ ಮಾಡುವದನ್ನು ಕೂಡಾ ನಿಲ್ಲಿಸಿದ್ದರು. ಪಾರ್ಟಿಯಲ್ಲಿ ಹುಡುಗರನ್ನು ಗ್ರೀಟ್ ಮಾಡಲು ಹೋದಾಗ ಇದು ಅವಳ ಗಮನಕ್ಕೆ ಬಂದಿತ್ತು. ಅವಳು ಅವರನ್ನು ಹುಡುಕಿದ್ದಳು. ಏಕೆಂದರೆ ಆ ಹುಡುಗರು ಅವಳಿಗೆ ಬಹಳ ಇಷ್ಟವಾಗಿದ್ದರು. ಹಾಲಿನ ಮಧ್ಯದಲ್ಲಿ ಕುಷನ್ ಖುರ್ಚಿಯನ್ನು ಹಿಡಿದು ನಿಂತು ನಾಳೆ ಮುಂಜಾನೆ ಈ ವಿಷಯದ ಬಗ್ಗೆ ಎರಿಕ್‌ನನ್ನು ಕೇಳಬೇಕು ಎಂದುಕೊಂಡಿದ್ದಳು. ಆದರೆ ಮುಂಜಾನೆ ಅದನ್ನು ಮರೆತು ಬಿಟ್ಟಿದ್ದಳು.

ಪಾರ್ಟಿಯ ಸಾಮಾನುಗಳನ್ನು ತೆಗೆದು ರೂಮನ್ನು ಸ್ವಚ್ಛಮಾಡುವಾಗ ಈ ಕೆಲಸದಿಂದ ಸ್ವಲ್ಪ ನಾಚಿಕೊಂಡಿದ್ದಳಾದರೂ ತಮ್ಮ ಹೆಣ್ಣಾಳು ಬನಿ ತಮ್ಮ ಮಗ ಎರಿಕ್‌ನ ಬಗ್ಗೆ ಹಾಗು ಅವನ ಕನಿಕರದ ತಾಯಿಯ ಬಗ್ಗೆ ಊರಲ್ಲಿ ಪುಕಾರು ಹಬ್ಬಿಸುವದನ್ನು ಅವಳು ಇಚ್ಛಿಪಟ್ಟಿರಲಿಲ್ಲ. ಅವಳು ತಾನೇನು ಅಂತಹ ಕನಿಕರದ ಪಾತ್ರಳೆ ಅಲ್ಲ ಎಂದುಕೊಂಡಳು. ಸ್ವಲ್ಪ ಕಾರಣ ಉಳ್ಳವಳು ಖರೇ ಇದ್ದೀತು. ಅವಳು ಎರಿಕ್‌ನ ಬಗ್ಗೆ ವಿಶೇಷ ಮಮತೆ ಇಟ್ಟುಕೊಂಡಿದ್ದಳು. ಯಾಕೆಂದರೆ ಅವನು ಬಾಲ್ಯದಲ್ಲಿ ರೋಗಿಷ್ಟ ಹುಡುಗನಾಗಿದ್ದ. ಮತ್ತು ಅವನು ತನ್ನಂತೆ ಅಕ್ಟೋಬರ್ ತಿಂಗಳಲ್ಲಿ ಹುಟ್ಟಿದ್ದ. ಅವನು ಹುಟ್ಟಿದ್ದ ನಾಲ್ಕು ತಿಂಗಳ ತನಕ ಅವನ ಹೊಟ್ಟೆ ನಿರಂತರ ತೊಂದರೆ ಕೊಡುತ್ತಿತ್ತು. ಚಸ್ಮಾ ಹಾಕಿಕೊಳ್ಳುವ ಆ ಬೆಂಗಾಲಿ ಚಿಕ್ಕ ಮಕ್ಕಳ ಡಾಕ್ಟರ ಅವಳ ಅತ್ಯುತ್ತಮ ಗೆಳತಿಯಾಗಿದ್ದಳು. ಅವಳ ಮೇಲೆ ಇವಳಿಗೆ ಅಪಾರವಾದ ನಂಬಿಕೆ ಬಂದಿತ್ತು. ಯಾಕೆಂದರೆ ಮೇಲಿಂದ ಮೇಲೆ ಅವಳನ್ನು ಭೇಟಿ ಮಾಡುತ್ತಿದ್ದಳು. ಮತ್ತು ಪ್ರತಿಯೊಂದಕ್ಕೂ ಡಾಕ್ಟರಗಳನ್ನು

ಅವಲಂಬಿಸಿದ್ದಳು. ಡಾಕ್ಟರ ಅಂಜಲಿ ಘೋಸ್ ಕೇವಲ ವೈದ್ಯ ಮಾತ್ರ ಆಗಿರಲಿಲ್ಲ. ನೈಸರ್ಗಿಕ ಮನೋವಿಜ್ಞಾನಿಯೂ ಅತ್ಯುತ್ತಮ ಅಡಿಗೆ ಮಾಡುವವಳೂ, ಹುರುಪಿನಿಂದ ಕೈದೋಟ ಬೆಳೆಸುವವಳೂ ಮತ್ತು ಜಗತ್ತನ್ನೆಲ್ಲಾ ಸುತ್ತಿ ಬಂದವಳೂ ಆಗಿದ್ದಳು. ಅವಳ ಪ್ರೀತಿಯ ಹಿಲ್ ಸ್ಟೇಶನ್ ಕೂಡಾ ಸಿಮ್ಲಾ ಆಗಿತ್ತು.

ಯಾವಾಗ ಎರಿಕ್ ಹನ್ನೊಂದು ವರ್ಷದವನಾದನೋ ಆಗ ಅವನು ಸಿಮ್ಲಾದ ಬೆಟ್ಟದ ಮೇಲಿರುವ ಬೋರ್ಡಿಂಗ ಶಾಲೆಗೆ ಹೋದ. ಅಲ್ಲಿಗೆ ಹೋಗುವವರೆಗೂ ಅವಳು ಮೌನವಾಗಿ ಅಳುತ್ತಲೇ ಇದ್ದಳು. ಜೀವಾ ಮತ್ತು ಅಂಜಲಿ ಗೌಹಾತಿಗೆ ಹೋಗುವವರೆಗೂ ಅವಳ ಮನಸ್ಸು ಬೇರೆ ಕಡೆಗೆ ತಿರುಗುವಂತೆ ಮಾಡಿ ಜೋಕ್ ಮಾಡುತ್ತ ಇದ್ದರು. ಅಲ್ಲಿಂದ ಗೌಹಾತಿಗೆ ಪ್ಲೇನಿನಲ್ಲಿ, ಕಾಲ್ಕಾಗೆ ಟ್ರೇನಿನಲ್ಲಿ ಹೋಗಿದ್ದ ತುಂಬಿದ ನೆನಪು ಅವಳಿಗೆ ನುಗ್ಗಿ ಬಂದಿತು.

ಎರಿಕ್ ಅಲ್ಲಿ ಬಹಳ ಚನ್ನಾಗಿ ಹೊಂದಿಕೊಂಡ. ಶಾಲೆಯಲ್ಲಿ ಆಟದ ಕ್ಯಾಪ್ಟನ್ ಆಗಿ ಅಭ್ಯಾಸದಲ್ಲಿ ಕ್ಲಾಸಿಗೆ ಪ್ರಥಮ ಬಂದು ಶಾಲೆ ಮುಗಿಸಿದ. ದೆಹಲಿ ಕಾಲೇಜದಲ್ಲಿ ಅವನಿಗೆ ಸುಲಭವಾಗಿಯೇ ಸೀಟು ಸಿಗಬಹುದಾಗಿತ್ತು. ಅವನ ಪರೀಕ್ಷೆಯ ಫಲಿತಾಂಶ ಬಂದ ಮೇಲಿನ ಆ ಎರಡು ತಿಂಗಳುಗಳು ಭಯಂಕರವಾಗಿದ್ದವು. ಏಕೆಂದರೆ ಅವಳು ಒಂದು ತೀವ್ರವಾದ ತನ್ನ ಸ್ವಾರ್ಥ ನಿರ್ಣಯಕ್ಕೆ ಒತ್ತಾಯದಿಂದ ಜೋತು ಬಿದ್ದಿದ್ದಳು. ಅವಳು ಆ ಮನೆಯಲ್ಲಿ ಒಬ್ಬಂಟಿ ಮತ್ತು ಅಸಹಾಯಕಳಾಗಿದ್ದಳು. ಕೊನೆಯ ಪಕ್ಷ ಕುಟುಂಬದಲ್ಲಿ ಒಬ್ಬನಾದರೂ ಜೊತೆಗೆ ಇರಲಿ ಎಂದು ತೀವ್ರವಾಗಿ ಬಯಸಿದ್ದಳು. ಆದ್ದರಿಂದ ಎರಿಕ್‌ನನ್ನು ಸಿಲ್ಲಾಂಗದ ಆಚೆಗೆ ಕಾಲೇಜ್ ಕಲಿಯಲು ಕಳಿಸಲಿಲ್ಲ.

×××××

ಹೊರಗೆ ಗಾಳಿ ಜೋರಾಗಿ ಬೀಸುತ್ತಿತ್ತು. ಮತ್ತು ಗಿಡದ ಎಲೆಗಳನ್ನು ತೀವ್ರವಾಗಿ ಅಲ್ಲಾಡಿಸುತ್ತಿತ್ತು. ಎರಿಕ್ ಯಾಕೆ ಇನ್ನೂ ಮನೆಗೆ ಬಂದಿಲ್ಲ? ತನ್ನ ಮನೆಯ ಸುತ್ತಲೂ ಬೀಸುವ ಗಾಳಿಯ ಸಪ್ಪಳವನ್ನು ಅವಳು ಕೇಳಿದಳು. ಪ್ರಕೃತಿಯಲ್ಲಿ ಪ್ರಶ್ನೆಗಳಿಲ್ಲ. ಉತ್ತರಗಳಿಲ್ಲ. ಕಾಲದ ಪ್ರಾರಂಭದ ಕೊನೆಯವರೆಗೂ ಪ್ರತಿಯೊಂದು ಅದರದೇ ಆದ ಪರಿಪೂರ್ಣತೆ ಆ ವ್ಯವಸ್ಥೆಯಲ್ಲಿ ಇರುತ್ತದೆ.

×××××

ಎರಿಕ್ ಮುಂಜಾನೆ ತಡವಾಗಿ ಎದ್ದು ಕಣ್ಣು ಮುಚ್ಚಿ ಚಹಾ ಚಪ್ಪರಿಸಿದ. ಸೂರ್ಯನ ಕಿರಣಗಳು ತನ್ನ ದೇಹದ ಎಲ್ಲಕಡೆಗೆ ಬೀಳಲಿ ಎಂದು ಕಾಯ್ದ. ನಂತರ ಅವನು ಅಟ್ಟದ ಮೇಲಿನ ತನ್ನ ರೂಮಿಗೆ ಸ್ನಾನ ಮಾಡಲು ಬಟ್ಟೆ ಬದಲಾಯಿಸಲು ಹೋಗುವದನ್ನು ಗಮನಿಸಿದಳು. ನಿನ್ನೆ ಶನಿವಾರ ಕಾಲೇಜಿಗೆ ರಜೆ ಇದ್ದರೂ ಮನೆಗೆ ಬರದೆ ಎಲ್ಲಿಗೆ ಹೋಗಿದ್ದೆ ಎಂದು ಕೇಳುವದಕ್ಕಾಗಿ ಅವನ ಬಾಗಿಲಿನ ಹೊರಗೆ ಅವಳ ಎಂದಿನ ಮುದ್ದಾದ ನಗೆಯನ್ನು ಹೊತ್ತು ಅವನಿಗಾಗಿ ಕಾಯುತ್ತ ನಿಂತಳು. ಅವಳ ಪ್ರಶ್ನೆಯನ್ನು ಕೇಳಿಸಿಕೊಂಡು ಅವನು ನಿಶ್ಚಲನಾದ ಮತ್ತು ಅವಳ ಕಡೆಗೆ ತಿರುಗಿ ನಿಂತ. ಕಣ್ಣುಗಳು ತೀಕ್ಷ್ಣವಾಗಿದ್ದವು.

ಆತ ಒಂದೇ ಒಂದು ಶಬ್ದವನ್ನು ಉಚ್ಚರಿಸಿದ. ಯಾಕೆ? ಎನ್ನುವದೆ ಆ ಶಬ್ದ. ಆವನ ಆ ರೀತಿಯ ಉತ್ತರದಿಂದ ಆಕೆ ತೀವ್ರ ವಿಚಲಿತಳಾದಳು. ಅವಳಿಗೆ ಉತ್ತರ ಸಿಗಲಿಲ್ಲ. ಸುಮ್ಮನೆ ಗಾರ್ಡನ್ನಿನಲ್ಲಿಯ ಗಿಡದ ಕೆಳಗಿನ ಬೆಂಚಿನ ಮೇಲೆ ಕುಳಿತಳು. ಅವಳ ಕಣ್ಣುಗಳಲ್ಲಿ ವೇದನೆ ತುಂಬಿತು. ಆಕಾಶದ ಕಡೆಗೆ ನೋಡಿದಳು. ಅದರ ಬಣ್ಣ ಸಿಮ್ಲಾದ ಸಮೀಪ ಇರುವ ಹಳ್ಳಿಯ ನೆನಪನ್ನು ತಂದಿತು. ಸೂರ್ಯಪಾನ ಹೂವಿನ ಗಿಡಗಳ ಸಾಲು ಸಾಲುಗಳ ಮುಂದೆ ರಸ್ತೆಯ ಪಕ್ಕದ ಚಿಕ್ಕ ಗುಡಿಸಲು ಮುಂಜಾನೆಯ ಬೆಳಕಿನ ಕಿರಣಗಳಲ್ಲಿ ತೆರೆದು ನಿಂತಿತ್ತು. ಆಗ ಕಾರಿನಲ್ಲಿ ಬಹಳ ಜನರಿದ್ದ ಕಾರಣ ಅವಳಿಗೆ ಅಲ್ಲಿ ನಿಲ್ಲಿಸಲಾಗಿರಲಿಲ್ಲ. ಆದರೂ ಆ ದೃಶ್ಯ ಅವಳ ಮನದಲ್ಲಿ ಅಳಿಸಿ ಹಾಕದಂತೆ ಮನದಲ್ಲಿ ಅಚ್ಚೊತ್ತಿ ನಿಂತಿತ್ತು. ಅವಳು ನೆನಪನ್ನು ಧ್ಯಾನಿಸಿದಳು. ತನ್ನ ಮಗ ಮಾರುತಿ ಕಾರು ಹೊಡೆಯುತ್ತಾ ಒಮ್ಮೆಯೂ ತಿರುಗಿ ನೋಡದೆ ಕಾರನ್ನು ಚಲಾಯಿಸಿದ್ದು ನೆನಪಿಗೆ ಬಂದಿತು.

ಗೊಂದಲ ಮತ್ತು ಶೂನ್ಯ ಮನಸ್ಸಿನಿಂದ ಅವನ ರೂಮಿನ ಕಡೆಗೆ ನಡೆದು ಹೋದಳು. ರೂಮಿನಲ್ಲಿ ಇನ್ನೂ ಅಹ್ಲಾದವನ್ನುಂಟು ಮಾಡುತ್ತ ಹರಡಿದ್ದ ಆಫ್ಟರ ಸೇವ ವಾಸನೆಯನ್ನು ಆಘ್ರಾಣಿಸಿದಳು. ಮತ್ತು ಕಿಡಕಿಯನ್ನು ತೆರೆದಳು. ಅದು ಪಶ್ಚಿಮಕ್ಕೆ ಮುಖಮಾಡಿದ್ದ ಖೋಲಿಯಾಗಿದ್ದರಿಂದ ಸೂರ್ಯಾಸ್ತದ ಕಿರಣಗಳು ರೂಮಿನಲ್ಲಿ ನುಗ್ಗಿದವು. ಅವಳು ಕಾಟನ್ನು ಕೈಯಿಂದ ಜಾಡಿಸಿದಳು. ತಲೆದಿಂಬನ್ನು ಎದೆಗೆ ಅವುಚಿಕೊಂಡಳು. ಅಲ್ಲಿ ಅವಳ ಮಗ ಎರಿಕ್ ಇನ್ನೂ ಕೂಸಾಗಿಯೇ ಇದ್ದಾನೆ ಎನ್ನುವ ಭಾವನೆಯಿಂದ ನಿಧಾನವಾಗಿ ಶಾಂತವಾಗಿ ಹಾಸಿಗೆಯ ಮೇಲೆ ಹೊರಳಿದಳು. ಖುರ್ಚಿ ಮೇಲಿನ ಬೆಡ್ ಸೀಟನ್ನು ಎತ್ತಿ ಜಾಡಿಸಿದಾಗ ಅವನ ಸ್ವೇಟರ ಜಾರಿ ಕೆಳಗೆ ಬಿದ್ದಿತು. ಅದನ್ನು ಎತ್ತಿ ಕೊಂಡಳು. ಕಿಡಕಿಗೆ ಎದುರಾಗಿ ಹಲವಾರು ಬಾರಿ ಅದರ ಮೇಲಿನ ಧೂಳನ್ನು ಒರೆಸಿದಳು. ನಂತರ ತನ್ನ ಮುಖವನ್ನು ಅದರಲ್ಲಿ ಒತ್ತಿಕೊಂಡು ಅದು ವಾಶ್‌ಗಾಗಿ ಹೋಗಬೇಕಾಗಿರುವ ವಾಸನೆಯನ್ನು ಪಡೆದಿರುವದನ್ನು ಖಚಿತಪಡಿಸಿಕೊಂಡಳು. ಇದು ಯಾವಾಗಲೂ ಅವಳ ಒಂದು ಚಟವಾಗಿತ್ತು. ಗಂಡ ಅಲ್ಬರ್ಟ ಅದನ್ನು ಯಾವತ್ತೂ ಹಾಸ್ಯಮಾಡುತ್ತಿದ್ದ. ಡ್ರಾಯರದಲ್ಲಿ ಸ್ವೇಟರನ್ನು ಇಡಲು ಅದನ್ನು ಮಡಿಸುತ್ತಾ ಹಿಂದಿನದನ್ನು ನೆನೆಸುತ್ತಾ ಮುಗುಳು ನಕ್ಕಳು.

ಪಾಲಿಸ್ ಮಾಡಿದ ಕಪ್ಪು ಕಟ್ಟಿಗೆ ಮತ್ತು ಹೊಳೆಯುವ ಹಿತ್ತಾಳೆಯ ಹಿಡಿ ಇರುವ ಆ ಡ್ರಾಯರ ಅವಳ ಅಜ್ಜಿಯಿಂದ ಅವಳಿಗೆ ಬಳುವಳಿಯಾಗಿ ಬಂದಿತ್ತು. ಅವಳ ಅವ್ವ ಅದನ್ನು ಎರಡನೆಯ ಜಾಗತಿಕ ಯುದ್ಧಾನಂತರ ಸಿಮ್ಲಾಂಗ ಬಿಟ್ಟು ಇಂಗ್ಲೆಂಡಿಗೆ ಹೋಗುವ ಬ್ರಿಟೀಷ್ ಕುಟುಂಬದಿಂದ ಪಡೆದು ತಂದಿದ್ದಳು. ಅವಳು ಕೊನೆಯ ಡ್ರಾಯರನ್ನು ತೆಗೆಯಲು ಪ್ರಯತ್ನಿಸಿದಳು. ಕೆಲವು ಕಾರಣಕ್ಕಾಗಿ ಉಲ್ಲನ್ ಬಟ್ಟೆಗಳು ಹಾಗು ಶಾಲುಗಳನ್ನು ಕೊನೆಯ ಡ್ರಾಯರದಲ್ಲಿಯೇ ಇಡುವ ಪದ್ಧತಿ ಇತ್ತು. ಅವಳು ಆಶ್ಚರ್ಯ ಪಡುವಂತೆ ಅದು ತೆರೆದು ಕೊಳ್ಳಲಿಲ್ಲ. ಖುರ್ಚಿಯ ಮೇಲೆ ಸ್ವೇಟರನ್ನು ಇಟ್ಟಳು. ಕಾರ್ಪೇಟ ಮೇಲೆ ಕುಳಿತು ಜೋರಾಗಿ ಅವಳಿಗೆ ಸಾಧ್ಯವಿರುವಷ್ಟು ಜೋರಾಗಿ ಅದರ ನಾಬ್ ಎಳೆದಳು. ಅದು ಜಾಮ್ ಆಗಿರಲಿಲ್ಲ. ಜೋರಾಗಿ ಕುಳಿತಿರಲಿಲ್ಲ. ಅದಕ್ಕೆ ಕೀಲಿ ಹಾಕಲ್ಪಟ್ಟಿತ್ತು. ಅದಕ್ಕೆ ಕೀಲಿ ಹಾಕುವ

ಅನುಕೂಲವಿದ್ದರೂ ಕೂಡಾ ಎಂದೂ ಡ್ರಾಯರಿಗೆ ಕೀಲಿ ಹಾಕುತ್ತಿರಲಿಲ್ಲ. ಯಾಕೆ ಎರಿಕ್ ಅದನ್ನು ಕೀಲಿ ಹಾಕಿದ್ದಾನೆ? ಯಾವಾಗ ಹಾಕಿದ್ದಾನೆ?

ಹೊರಗೆ ಗಾಳಿ ಬೀಸುವದು ನಿಂತಿತ್ತು. ಅವಳು ಕಿಡಕಿಯನ್ನು ತೆರೆದಳು. ಮಳೆಬಿದ್ದ ಮಣ್ಣಿನ ಪರಿಮಳವನ್ನು ದೀರ್ಘವಾಗಿ ಆಘ್ರಾಣಿಸಿದಳು. ಪ್ರತಿ ಉಸಿರಿನಲ್ಲೂ ಸಿಕ್ಕಿಕೊಂಡಿರುವ ದುಗುಡ ಹೊರಹೋಗುವಂತೆ ಮಣ್ಣಿನ ಆ ಆಹ್ಲಾದಕರವಾದ ಪರಿಮಳವನ್ನು ಆಘ್ರಾಣಿಸುತ್ತಲೇ ಹೋದಳು. ಎಷ್ಟೋ ದಿನಗಳ ನಂತರ ನಕ್ಷತ್ರಗಳಿಂದ ತುಂಬಿದ ಆಕಾಶವನ್ನು ದಿಟ್ಟಿಸಿದಳು. ಕಲ್ಕತ್ತಾ ಕ್ಲಬ್ಬಿಗೆ ಒಂದೊಮ್ಮೆ ಹೋದಾಗ ತಾನು ಹಾಕಿಕೊಂಡಿದ್ದ ಟಿಕಳಿಗಳಿಂದ ಕೂಡಿದ ಕಪ್ಪು ಗೌನಿನಂತೆ ಆ ಆಕಾಶ ಅವಳಿಗೆ ಕಂಡಿತ್ತು. ಆಗ ಗಂಡ ಎರಿಕ್ ಕೂಡ ಕಪ್ಪು ಸೂಟ ಹಾಕಿಕೊಂಡು ಅವಳ ಫೆವರೇಟ ಹೊಟೇಲಾದ ಕೆನಿಲ್‌ವರ್ತ್‌ದಲ್ಲಿ ಕಳೆದ ಸಂತೋಷದ ಗಳಿಗೆ ನೆನಪಿಗೆ ಬಂದಿತು.

ಈಗ ಸರಿಯಾಗಿ ಹತ್ತು ಗಂಟೆ. ಎರಿಕ್ ಈಗಲೂ ಮನೆಗೆ ಬಂದಿಲ್ಲ. ಫೋನ್ ಕೂಡಾ ಮಾಡಿಲ್ಲ. ಎಲ್ಲಿದ್ದಾನೆ ಆತ? ಯಾಕೆ ಮುಂಜಾನೆ ಅಷ್ಟೇಕೆ ಅವಿನಯದಿಂದ ಮಾತಾಡಿದ? ಯಾಕೆ? ಯಾಕೆ ಆ ಒಂದು ಡ್ರಾಯರ್ ಕೀಲಿಹಾಕಿದ್ದಾನೆ? ಗೆಳತಿ ಕ್ಲಾರಿಸಾ ಕಳಿಸಿದ ಗೋಡಂಬಿ ಬೀಜ ಒಂದನ್ನು ಬಾಯಲ್ಲಿ ಹಾಕಿಕೊಂಡಳು. ಸಪ್ಪಳ ಬರುವಂತೆ ಅಗಿದು ತಿನ್ನ ತೊಡಗಿದಳು. ಅಟ್ಟದ ಮೇಲಿರುವ ಅವಳ ಮಗನ ರೂಮಿಗೆ ನಡೆದಳು.

ಅವಳಿಗೆ ವಿಚಿತ್ರ ಎನಿಸಿತು. ಅವಳಿಗೆ ತಾನೊಬ್ಬ ಅಧಿಕ ಪ್ರಸಂಗಿ ಎನಿಸ ತೊಡಗಿತು. ಅವಳ ಕಾಲುಗಳು ಆ ಕಟ್ಟಿಗೆಯ ಮೆಟ್ಟಿಲುಗಳನ್ನು ದೃಢವಾಗಿ ಹತ್ತುತ್ತಿರುವಾಗಲೇ ಅವಳಿಗೆ ನಾಚಿಕೆ ಎನಿಸಿ ತನ್ನ ಕೆಳ ತುಟಿಯನ್ನು ಕಚ್ಚಿಕೊಂಡಳು. ರೂಮು ಕತ್ತಲೆಮಯವಾಗಿತ್ತು. ಸ್ವಿಚ್‌ಗಾಗಿ ತಡಕಾಡಿದಳು. ಯಾಕೆಂದರೆ ಎಲೆಕ್ಟ್ರಿಸಿಯನ್ ಅದನ್ನು ಅನಾನುಕೂಲ ಜಾಗವಾದ ಕಪ್‌ಬೋರ್ಡ್‌ದ ತೀರ ಸಮೀಪದ ಜಾಗದಲ್ಲಿ ಫಿಟ್ ಮಾಡಿದ್ದ. ಬೆಳಕು ರೂಮಿನ ತುಂಬ ತುಂಬಿಕೊಂಡಿತು. ನೀಲಿ ಮತ್ತು ಬೂದು ಬಣ್ಣದ ಫ್ಯಾಬ್ ಇಂಡಿಯಾ ಬೆಡ್‌ಸೀಟ್ ಕವರ ಮತ್ತು ಚೆಗುವೆರಾದ ಗೂಢಾರ್ಥ ಸೂಸುವ ಸ್ಕೆಚ್‌ಗಳಿಂದ ಕೂಡಿದ ಗಾಢ ಕಪ್ಪು ಬಿಳುಪು ಚಿತ್ರಗಳಿರುವ ಗೋಡೆಯ ಮೇಲೆ ಬಿದ್ದಿತ್ತು.

ಅವಳು ಮತ್ತೆ ಮತ್ತೆ ಆ ಡ್ರಾಯರನ್ನು ಎಳೆದಳು. ಆದರೆ ಅದು ಅವಳ ಧೀರ ಪ್ರಯತ್ನವನ್ನು ತಡೆಹಿಡಿಯಿತು. ಅವಳು ಕಾರ್ಪೆಟ್ ಮೇಲೆ ಕುಸಿದು ಕುಳಿತಳು. ಮತ್ತು ಅವಳ ಹೊಟ್ಟೆಯಲ್ಲಿ ಎದ್ದ ಏಕಾಏಕಿ ನೋವನ್ನು ಅನುಭವಿಸತೊಡಗಿದಳು. ಅವಳು ಭ್ರಾಂತಿಗೆ ಒಳಗಾಗಿ ಬಿಕ್ಕತೊಡಗಿದಳು. ತನ್ನ ಗಂಡನನ್ನು ಬಹಳ ನೆನಪಿಸಿಕೊಳ್ಳತೊಡಗಿದಳು. ಅವಳ ಮನಸ್ಸಿನಲ್ಲಿಯೆ ಅವಳು ದಯವಿಟ್ಟು ಸಹಾಯ ಮಾಡು ಅಲ್ಲಾಂಗ ಇಲ್ಲಿ ಏನಾಗುತ್ತಿದೆ? ಎಂದು ಅಳತೊಡಗಿದಳು. ಅಲ್ಲಿ ಏನೋ ಗಂಭೀರವಾದ ತೊಂದರೆಯೇ ಘಟಿಸಿದೆ ಎನ್ನುವದು ಅವಳಿಗೆ ತಿಳಿದುಹೋಯಿತು. ಆ ಡ್ರಾಯರದಲ್ಲಿ ಹಾದಿತಪ್ಪಿದ ಹುಡುಗರ ಹುಚ್ಚಾದ ಡ್ರಿಂಕ್ಸ್ ಅಥವಾ ಡ್ರಗ್ಸ್ ಅಥವಾ ಅಶ್ಲೀಲ ಪುಸ್ತಕಗಳು ತುಂಬಿರಲಿಲ್ಲ. ಎರಿಕ್

ಖಂಡಿತವಾಗಿಯೂ ಅಲ್ಕೋಹಾಲಿಕ್ ಅಲ್ಲ. ಮತ್ತು ಡ್ರಗ್‌ಗಳ ದಾಸನಾಗಿಲ್ಲ ಎನ್ನುವಂತೆ ತುಂಬಿದ ಗಲ್ಲದ ಆರೋಗ್ಯಪೂರ್ಣ ಹುಡುಗನಾಗಿದ್ದ.

ಮುಂಜಾನೆ ಅವಳು ಮುಟ್ಟದೇ ಇರುವ ಕೀರ ಎತ್ತರದಲ್ಲಿರುವ ಡ್ರಾಯರ ಕಾಣಿಸಿತು. ಅದು ಬಹಳ ಸೂ ವ್ಯವಸ್ಥಿತ ಮತ್ತು ಸ್ವಚ್ಛವಾಗಿತ್ತು. ಶರ್ಟ ಮತ್ತು ಟಿ-ಶರ್ಟಗಳನ್ನು ಬಹಳ ನೀಟಾಗಿ ಅದರಲ್ಲಿ ಒಂದರ ಮೇಲೊಂದು ಇಡಲಾಗಿತ್ತು. ಅದಕ್ಕಾಗಿ ಅವನ್ನು ಹಾಗೆಯೇ ಬಿಟ್ಟಳು. ಖುರ್ಚಿಯ ಮೇಲೆ ಸಿಕ್ಕ ಆ ಸ್ವೇಟರಿಗೆ ಅದರಲ್ಲಿಯೇ ಜಾಗ ಮಾಡುವದಕ್ಕಾಗಿ ಸ್ವೇಟರ ಮತ್ತು ಮೇಲುಡುಪುಗಳನ್ನು ಅಸ್ತವ್ಯಸ್ತವಾಗಿಟ್ಟದ್ದ ಎರಡನೆಯ ಡ್ರಾಯರದ ಕಡೆಗೆ ಲಕ್ಷ ವಹಿಸಿದಳು.

ಕೀರ ಮೇಲಿನ ಡ್ರಾಯರ ಸರಳವಾಗಿ ತೆರೆದುಕೊಂಡಿತು. ಅದರಲ್ಲಿಯ ವಸ್ತುಗಳನ್ನು ನೋಡಿ ಅವಳು ಬೆಚ್ಚಿ ಬಿದ್ದಳು. ಮುಂಜಾನೆಯ ಗಡಿಬಿಡಿಯಲ್ಲಿ ಅವಳು ಎರಿಕ್‌ನ ಶಾಲಾ ದಿನಗಳ ಟಿ-ಶರ್ಟಗಳನ್ನು ಹಳೆಯ ಅಂಗಿಗಳನ್ನು ಪ್ರತ್ಯೇಕವಾಗಿ ಒಟ್ಟಿದ್ದನ್ನು ಗಮನಿಸಿರಲಿಲ್ಲ. ಅದರ ನಡುವಿನ ಗುಂಪಿನಲ್ಲಿ ಬಹಳ ಸ್ಟೈಲಿಶ್ ಆದ ಡಿಜಾಯಿನ್‌ಗಳಿಂದ ಕೂಡಿದ ದಿನದ ಉಡುಪುಗಳಿದ್ದವು. ಬಹಳ ಮುಗ್ಧವಾಗಿ ನಿದ್ದೆ ಮಾಡುತ್ತ ಮಲಗಿದ ಮಗುವಿನಂತೆ ಇರುವ ಅವುಗಳನ್ನು ನೋಡಿದಳು. ಮತ್ತು ಅಲ್ಲಿ ತಾನೇನು ಮಾಡುತ್ತಿದ್ದೇನೆ ಎಂದು ಆಶ್ಚರ್ಯಗೊಂಡಳು. ಆದಾಗ್ಯೂ ಕೂಡಾ ಬೂದು ಮತ್ತು ಕಡು ನೀಲಿ ಬಣ್ಣದ - ಎದೆಯ ಮೇಲೆ ಗೇಮ ಕ್ಯಾಪ್ಟನ್ ಎಂಬ ಹೊಗಳಿಕೆ ಇರುವ ಟೀ-ಶರ್ಟ-ನೋಡಿ ಅವಳ ಹೃದಯ ಯಾತನೆಗೊಂಡಿತು. ಮತ್ತು ಅವಳ ಕಣ್ಣುಗಳು ಹನಿಗೂಡಿದವು. ತನ್ನ ಕೈಗಳನ್ನು ಚಾಚಿ ಸ್ವಲ್ಪವೇ ಸ್ವಲ್ಪ ಬಾಗಿ ಅದನ್ನು ಹೊರಗೆಳೆದಳು. ಏನೋ ಒಂದು ಸಣ್ಣದಾದ ಹೊಳೆಯುವ ವಸ್ತು ಕೆಳಗೆ ಬಿದ್ದಿತು. ಅದು ಕೀಲಿ ಕೈ ಯಾಗಿದ್ದಿತು.

ತೇವ ಗೊಂಡಿದ್ದ ಆ ಡ್ರಾಯರ ಸುಲಭವಾಗಿ ತೆರೆದುಕೊಳ್ಳಲಿಲ್ಲ. ಯಾರೋ ತನ್ನನ್ನು ಓರೆಯಾಗಿ ನೋಡುತ್ತಿದ್ದಾರೆ ಎನ್ನುವಂತೆ ಮೂಲೆಯಲ್ಲಿ ಅದು ಬಾಯಿ ಬಿಟ್ಟಿತ್ತು. ಅದು ಪೂರ್ಣ ತೆರೆಯುವ ವರೆಗೂ ಅವಳು ಅದನ್ನು ತೆರೆಯುವದನ್ನೂ ಮುಚ್ಚುವದನ್ನೂ ಮಾಡುತ್ತ ಇರುವಾಗ ಅವಳ ಹೃದಯ ಹೊಡೆದುಕೊಳ್ಳತೊಡಗಿತು. ತಲೆ ತಿರುಗತೊಡಗಿತು. ಕೊನೆಗೂ ಅದು ಸಡಿಲಾಗಿ ತೆರೆದುಕೊಂಡಿತು. ಚೈನಾದಲ್ಲಿ ಮಾಡಿದ ಸಣ್ಣ ಆಯುಧಗಳು ಹಾಗು ಕೆಲವು ಕಾರ್ಟೇಜ್‌ಗಳ ಮಧ್ಯದಲ್ಲಿ ಜಡವಾದ ಮಲಗಿದ ಹಾವಿನಂತೆ ಎ.ಕೆ.೪೭ ಬಂದೂಕ ತಣ್ಣಗೆ ಬಿದ್ದುಕೊಂಡಿತ್ತು. ಅವಳು ಭಯದಿಂದ ಏದುಸಿರು ಬಿಡುತ್ತಾ ಹಿಂದಕ್ಕೆ ಹಾರಿದಳು.

ಅವಳ ಮನಸ್ಸಿನಲ್ಲಿ ದೃಶ್ಯಗಳು ಮಿಂಚಿನಂತೆ ಹರಿದು ಹೋದವು. ಎರಿಕ್ ಮನೆಗೆ ತಡವಾಗಿ ಬರುವ ಬರದೇ ಇರುವ, ಅವಳಿಂದ ಮತ್ತು ಅವನ ಹಳೆಯ ಗೆಳೆಯರಿಂದ ದೂರವಾಗಿರುವ ಸಂಗತಿಗಳು ಅವನ ಮುಗ್ಧ ಮತ್ತು ಸಹಜವಾದ ನಡುವಳಿಕೆ ಎಂದು ತಿಳಿದುಕೊಂಡಿದ್ದಳೋ ಅದು ಅಲ್ಲ ಎನ್ನುವದು ಅವಳಿಗೆ ತಿಳಿಯತೊಡಗಿತು. ಕೀರ ಆಳದಿಂದ ಬಂದ ನೆನಪು ಅವಳ ಮನಸ್ಸನ್ನು ತುಂಬಿತು. ಒಂದು

ಚಳಿಗಾಲದ ರಾತ್ರಿ ಟಿವಿಯಲ್ಲಿ ಸಿನೇಮಾ ನೋಡಿ ಮಲಗುವ ತಯಾರಿಯಲ್ಲಿರುವಾಗ ಎರಿಕ್ ತನ್ನ ಗೆಳೆಯರ ಮನೆಯಿಂದ ತಿರುಗಿ ಬರುವ ಸಪ್ಪಳನ್ನು ಕೇಳಿದಳು. ಆಗ ಅವಳಿಗೆ ಬಹಳ ಸಮಾಧಾನವಾಗಿತ್ತು. ಏಕೆಂದರೆ ಆಗ ಊರಲ್ಲಿ ಕರ್ಫ್ಯೂ ಇತ್ತು. ಅದು ಚಳಿಗಾಲ ಎನ್ನುವದನ್ನು ನೆನಪಿಸಿಕೊಂಡಳು. ಏಕೆಂದರೆ ಆಗ ಅವಳು ತನ್ನ ಕೌದಿಯನ್ನು ಉಪಯೋಗಿಸತೊಡಗಿದ್ದಳು. ಅದರ ನಂತರ ಅವಳು ಕೇಳಿಸಿಕೊಂಡದ್ದನ್ನು ಕೇಳಿ ಗರಬಡಿದವರಂತೆ ಕುಳಿತಿದ್ದಳು. ಎರಿಕ್‌ನ ಬಾತ್ ರೂಮಿನಲ್ಲಿ ನೀರು ಸಾಕಷ್ಟು ಹರಿದು ಬೀಳುತ್ತಿತ್ತು. ಅವನು ಸ್ನಾನ ಮಾಡುತ್ತಿದ್ದ. ಮತ್ತು ಕೆಲವು ಬಟ್ಟೆಗಳನ್ನು ತೊಳೆಯುತ್ತಿದ್ದ. ಅದು ರಾತ್ರಿಯ ಒಂದುಗಂಟೆಯ ಸಮಯ. ಸಿಲ್ಲಾಂಗದಲ್ಲಿ ರಾತ್ರಿ ಒಂದುಗಂಟೆಯಲ್ಲಿ ಯಾರೂ ಸ್ನಾನ ಮಾಡುವದಿಲ್ಲ.

ಮುಂಜಾನೆ ಆಯಾ ಮನೆ ಸ್ವಚ್ಛ ಮಾಡಲು ಮತ್ತು ಬಟ್ಟೆ ಒಗೆಯಲು ಬಂದಾಗ ಅವನು ಇನ್ನು ಗಾಢ ನಿದ್ದೆಯಲ್ಲಿದ್ದ. ಅವಳು ಆಯಾಳಿಗೆ ಮನೆಯನ್ನು ಸ್ವಚ್ಛ ಮಾಡುವಂತೆ ಹೇಳಿ ತನ್ನ ಮಗನ ರೂಮಿಗೆ ಹೆಜ್ಜೆ ಹಾಕಿದಳು. ನಿನ್ನೆ ಅವನು ಹಾಕಿಕೊಂಡ ಬಟ್ಟೆಗಳಾದ ಒಂದು ಜೊತೆ ನೀಲಿ ಜೀನ್ಸ, ಉದ್ದ ತೋಳಿನ ನೀಲಿ ಮತ್ತು ಬಿಳಿ ಚೆಕ್ಸ ಶರ್ಟ, ಬಿಳಿ ಕಾಟನ್ ಕಾಲುಚೀಲುಗಳು ಮತ್ತು ಒಂದು ಅಂಡರವೆಯರ್ ತೊಳೆದು ಸ್ವಚ್ಛ ಮಾಡಿದ್ದನ್ನು ಕಂಡಳು. ಬಕೆಟ್ ಅನ್ನು ಹೊರಗೆ ತಂದಳು. ಅವನ್ನು ಮತ್ತೊಮ್ಮೆ ತೊಳೆದು ಒಣ ಹಾಕಬೇಕೆಂದು ನಿಶ್ಚಯಿಸಿದಳು. ಜಗತ್ತಿನಲ್ಲೆಲ್ಲಾ ಒಳ್ಳೆಯದೆ ಇದೆ ಯಾವುದಕ್ಕೂ ಚಿಂತಿಸುವದು ಅಗತ್ಯವಿಲ್ಲ ಎನ್ನುವಂತೆ ನಾನು ಒಳ್ಳೆಯ ತಾಯಿ ಎನ್ನುವ ಹಾಡನ್ನು ತನ್ನಷ್ಟಕ್ಕೆ ಗುನುಗುನಿಸತೊಡಗಿದಳು. ಹಾಗೆಯೇ ಆ ಹಾಡನ್ನು ಎತ್ತರದ ಧ್ವನಿಯವರೆಗೂ ಮುಂದುವರೆಸಿದಳು. ಅಂಗಿಯನ್ನು ಬೀಸಿ ಬೀಸಿ ಕಲ್ಲಿಗೆ ಬಡಿಯುವಾಗಲೂ ಅವಳು ಹಾಡುತ್ತಲೇ ಇದ್ದಳು. ನಂತರ ಅದನ್ನು ತೊಳೆದು ಬಿಸಿಲಿಗೆ ಹಿಡಿದಳು. ಅಂಗಿಯ ಮೇಲೆ ಹಳದಿಯಾದ ಕಲೆಗಳು ಕಾಣಿಸಿದವು. ಸಾರಿನ ಕಲೆಗಳು ಕೆಂಪಾಗಿಯೂ ರಕ್ತದ ಕಲೆಗಳು ಹಳದಿಯಾಗಿಯೂ ಬದಲಾಗುತ್ತವೆ ಎಂಬುದು ಅವಳಿಗೆ ಪಕ್ಕಾ ಗೊತ್ತಿತ್ತು. ತೊಯ್ದು ತಂಪಾದ ಮತ್ತು ನಡುಗುವ ಕೈಗಳಿಂದ ಅವಳು ಹಳೆಯ ಪ್ಲ್ಯಾಸ್ಟಿಕ್ ಬ್ಯಾಗಲ್ಲಿ ಅವುಗಳನ್ನು ತುರುಕಿ ಬೂಟು ಇಡುವ ರ್‍ಯಾಕರಿನ ಹಿಂದೆ ಇಟ್ಟಳು. ಬಹುಶಃ ಅವನು ಎಲ್ಲಿಯೋ ಬಿದ್ದು ಗಾಯ ಮಾಡಿಕೊಂಡಿರಬೇಕು ಎಂದುಕೊಂಡಳು. ದೀರ್ಘ ಉಸಿರನ್ನು ತೆಗೆದುಕೊಂಡಳು.

ಅಫೀಸುಗಳಲ್ಲಿಯ ಕೆಲಸದ ರೀತಿಯೇ ಒಂದು ತರಹ ಅದು ನಮ್ಮನ್ನು ಬೇರೆ ಜಗತ್ತಿಗೆ ಕೊಂಡೊಯ್ಯುತ್ತದೆ. ಸಂಸಾರಿಕ ತೊಂದರೆಗಳು, ವ್ಯಕ್ತಿಗತ ತೊಂದರೆಗಳನ್ನೆಲ್ಲಾ ನೂರಾರು ಫೈಲುಗಳ ನಡುವೆ ಉಗಿಯಾಡುವ ಚಹಾ ಕಪ್ಪುಗಳು ಮತ್ತು ಮನಸ್ಸಿಲ್ಲದ ಮನಸ್ಸುಗಳೊಂದಿಗೆ ಹರಟೆ ಹೊಡೆಯುವದರಲ್ಲಿ ಮುಗಿದು ಬಿಡುತ್ತದೆ. ಅಂದು ಅವಳಿಗೆ ಹಾಗೆಯೇ ಆಯಿತು. ಅವಳು ಮನೆಗೆ ಹೋಗುವದರ ಒಳಗಾಗಿ ಸಂಜೆ ಸಮೀಪಿಸುತ್ತಿತ್ತು. ಆ ಸಂಜೆ ಇನ್ನೆಂದೂ ಹಾಗೆ ಇರದು ಎನ್ನುವಂತೆ ಅವಳಿಗೆ ಕಾಣಿಸಿತು. ಆ ವಾತಾವರಣದಲ್ಲಿ ನಗೆ ಮತ್ತು ಆನಂದಗಳು ಬೆರೆತುಕೊಂಡಿದ್ದವು. ಶೂ ರ್‍ಯಾಕರಿನ ಹಿಂದೆ ಮುಂಜಾನೆ ಇಟ್ಟಿದ್ದ ಪ್ಯಾಕೆಟನ್ನು ಹೊರಗೆಳೆದು ಗಾರ್ಡನ್ನಿನ ಮೂಲೆಯಲ್ಲಿರುವ ಓಕ್ ಗಿಡದ ಕೆಳಗಿನ ಕಸದ

ತೊಟ್ಟಿಯಲ್ಲಿ ಚೆಲ್ಲಿ ಬಂದಳು. ನಂತರ ತನ್ನ ಅಚ್ಚು ಮೆಚ್ಚಿನ ಖುರ್ಚಿಯಲ್ಲಿ ಕುಳಿತು ಬಹಳ ಹಿಂದೆ ಬಹಳ ದೂರದಲ್ಲಿ ಎತ್ತರದ ಬೆಳಕಲ್ಲಿ ಬೆಳೆಗಳ ಸಾಲು ಕುಣಿಯುವದನ್ನು ಸ್ಮೃತಿಗೆ ತಂದು ಕೊಂಡಳು. ಅವಳು ಎಲ್ಲವನ್ನೂ ನೆನಪಿಸಿಕೊಂಡಳು.

×××××

ಯಾಕೆ ನನ್ನ ಮಗನೆ ಯಾಕೆ? ಅವಳು ಉಸಿರಿದಳು. ಅವಳ ಕಣ್ಣುಗಳು ಆ ರೂಮಿನ ಎಲ್ಲ ಕಡೆಗೂ ಓಡಾಡಿದವು. ಕೊನೆಗೆ ತನ್ನ ಮಗನ ವಸ್ತುಗಳ ಮೇಲೆ ನೆಲೆ ನಿಂತವು. ನಿನಗೆ ಗೊತ್ತಿದೆಯೋ ಇದೆಲ್ಲಾ ಏನು ಎಂದು? ಇದೆಲ್ಲವನ್ನೂ ನೀನು ನಂಬಿರುವಿಯಾ..........? ಅಥವಾ ಇದೆಲ್ಲವನ್ನು ಸುಮ್ಮನೆ ನೀನು ಒಪ್ಪಿಕೊಂಡು ಬಿಟ್ಟಿರುವಿಯಾ? ಓ ದೇವರೆ ಎರಿಕ್ ನನ್ನ ಮಗುವೇ ನೀನು ನೀನಾಗಿಯೆ ಈ ಸಮಸ್ಯೆಯನ್ನು ನಿನ್ನದಾಗಿಸಿಕೊಂಡೆಯಾ? ನಿಜಕ್ಕೂ ಹಾಗೆ ಮಾಡಿದ್ದಿ ಏನೋ? ಎರಿಕ್ ನಾನು ಎಲ್ಲಿಯಾದರೂ ಹೇಗಾದರೂ ಸೋತಿದ್ದೇನೆ ಏನೋ? ದಯಪಿಟ್ಟು ಬೇಗ ಹಿಂದುರುಗಿ ಬಾ ನನ್ನ ಮಗುವೆ. ಕೊನೆಯ ಪಕ್ಷ ನನಗೆ ಹೇಳು...... ನೀನು ಮಾಡಬೇಕಾಗಿರುವದೆಂದರೆ ದಯವಿಟ್ಟು ನನಗೆ ಹೇಳು....ಹೇಳು..... ಮಗುವೇ ಹೇಳು.....

ಆದಾದ ಕೆಲವೇ ಕ್ಷಣದಲ್ಲಿ ಫೋನು ರಿಂಗಾಯಿತು. ಎರಿಕ್‌ನ ರೂಮಿನ ಮಗ್ಗುಲಲ್ಲಿರುವ ಎಕ್ಷಟೆನ್ಶನ್‌ದಿಂದ ರಿಸೀವರ ಎತ್ತಿ ಕೊಂಡಳು. ಗುಡ್ ಮಾರ್ನಿಂಗ ಮೇಡಂ... ನಾನು ಪೋಲಿಸ ಸ್ಟೇಶನ್ ದಿಂದ ಮಾತಾಡುತ್ತಿದ್ದೇನೆ...... ಕೆಲವು ಉಗ್ರವಾದಿಗಳು ಈಗ ನಮ್ಮ ಸೆರೆ......

ಅವಳ ಕೈಯಿಂದ ರಿಸೀವರ ಜಾರಿ ಕೆಳಗೆ ಬಿದ್ದಿತು. ಅಲ್ಲಾಡುವ ತಲೆಯಂತೆ ಅದು ಜೋತಾಡತೊಡಗಿತು. ನಿಶ್ಚೇದಿತಳಾಗಿ ಅವಳು ನೆಲದ ಮೇಲೆ ಉರುಳಿ ಬಿದ್ದಳು. ಮತ್ತು ಅಳತೊಡಗಿದಳು. ಅವಳಿಗೆ ಗೊತ್ತಿತ್ತು ಅವಳಿಗೆ ಎಂದೂ ಆ ಉತ್ತರ ಸಿಗುವದಿಲ್ಲವೆಂದು.

ಮನೆಯ ಬೂದುಬಣ್ಣದ ತಗಡಿನ ಸೀಟುಗಳ ಮೇಲೆ ಮತ್ತೆ ಮಳೆ ಸುರಿಯಲು ಪ್ರಾರಂಭವಾಯಿತು. ಮಳೆಯೊಂದಿಗೆ ಗಾಳಿ ಕೂಡಿಕೊಂಡಿತು ಮತ್ತು ಈ ಎರಡು ನಿಸರ್ಗದ ಸಭ್ಯ ದೈತ್ಯಗಳು ಆ ಮನೆಯನ್ನು ತಮ್ಮ ದುಃಖದ ತೋಳುಗಳಿಂದ ಆವರಿಸಿಕೊಂಡವು.

ಡಾ. ಬಾಳಾಸಾಹೇಬ ಲೋಕಾಪುರ, ರತ್ನತ್ರಯ, ೧೫ನೇ ಕ್ರಾಸ್, ವಿದ್ಯಾಗಿರಿ, ಬಾಗಲಕೋಟೆ

'ಶರ್ಟ್'ಗಳು

ಮೂಲ ಇಂಗ್ಲೀಷ್: **ಕರಲ್‌ಕೆಪಕ್**
ಅನುವಾದ: **ನೀಳಾದೇವಿ**

('ಕರೆಲ್ ಕೆಪಕ್' ಜಕೋಸ್ಲಾವಾಕಿಯಾದ ೧೯ನೇ ಶತಮಾನದ ಲೇಖಕ. ಈತನ 'The shirts' ಸಣ್ಣಕಥೆಯ ಅನುವಾದವಿದು. 'The Insect play'ಈತನ ಪ್ರಸಿದ್ಧವಾದ ಕೃತಿ. ಮಹಾಯುದ್ಧದ ಬಳಿಕ ಇವನು ನಾಟಕ ರಚನೆಯಲ್ಲಿ ತೊಡಗಿಕೊಂಡನಾದರೂ, ಇವನ ಒಲವು ಸಣ್ಣ ಕಥೆಗಳ ರಚನೆಯಲ್ಲೇ ಇತ್ತು. ಈ ಕತೆ ಜಗತ್ತಿನ ಅತ್ಯಂತ ಪ್ರಸಿದ್ಧ ಸಣ್ಣ ಕಥೆಗಳ ಬೃಹತ್ ಸಂಗ್ರಹದಲ್ಲಿ ಆಯ್ಕೆಗೊಂಡಿತ್ತು.)

ಆ ಮುದುಕ ಇತರೇ ಅನೇಕ ಮುಖ್ಯ ಕೆಲಸಗಳಿದ್ದರೂ ಎಲ್ಲವನ್ನೂ ಬಿಟ್ಟು, ತಲೆ ತುಂಬಾ ಮನೆಕೆಲಸದಾಕೆ ಜೊಹಾಂಕ ತನ್ನ ಅನೇಕ ಪದಾರ್ಥಗಳನ್ನು ಕದಿಯುತ್ತಿದ್ದರ ಬಗ್ಗೆಯೇ ಚಿಂತಿಸುತ್ತಾ ಇರುತ್ತಾನೆ. ಸೇವಕಳಾಗಿ ಅನೇಕ ವರ್ಷಗಳಿಂದ ಮನೆಯಲ್ಲೇ ಅವಳು ಇರುತ್ತಿದ್ದರಿಂದ, ಹೆಂಡತಿ ಸತ್ತ ಮೇಲೆ ಸಕಲ ಜವಾಬ್ದಾರಿಗಳನ್ನು ಅವಳಿಗೆ ಬಿಟ್ಟು ಬಿಟ್ಟಿದ್ದಾನೆ.

ಇದೊ, ಇಲ್ಲಿದೆ ಅವನ ಬಟ್ಟೆಗಳ ಕಪಾಟು. ಪ್ರತಿ ಬೆಳಗ್ಗೆ ಅದರಲ್ಲಿ ಪೇರಿಸಿಟ್ಟಿರುವ ಇಸ್ತ್ರೀಮಾಡಿದ ಶರ್ಟನ್ನು ಎಳೆದು ತೊಟ್ಟುಕೊಳ್ಳುತ್ತಾನೆ. ಆಗಾಗ್ಗೆ ಜೊಹಾಂಕ ಆ ಶರ್ಟುಗಳಲ್ಲಿ ಹರಿದು ಹೋದದ್ದನ್ನು ಎತ್ತಿತೋರಿಸಿ, ಹೊಸ ಶರ್ಟು ಖರೀದಿಸಿ ತರುವಂತೆ ಪ್ರಚೋದಿಸುತ್ತಾಳೆ. ಆಗೆಲ್ಲಾ ಈ ಯಜಮಾನ ಅಂಗಡಿಗೆ ಹೋಗಿ ಅರ್ಧಡಜನ್ ಶರ್ಟ್‌ಗಳನ್ನು ಖರೀದಿಸಿ ತಂದು ಬಿಡುತ್ತಾನೆ. ಆಗ ಆತನಿಗೆ ತಾನು ಈಗಷ್ಟೇ ಕೆಲವು ದಿನಗಳ ಹಿಂದಷ್ಟೇ ಕಾಯಕಮಾಡಿದ್ದದ್ದು ನೆನಪಲ್ಲಿ ಉಳಿದಿರುವದಿಲ್ಲ. ಇದೇ ರೀತಿ

ಟೈಗಳು, ಬೂಟುಗಳು, ಕಾಲರ್‌ಗಳು, ಸಾಬೂನು ಇಂತಹ ಹತ್ತಾರು ಪದಾರ್ಥಗಳನ್ನು ಅವಳು ಕೇಳಿದಾಗ ಲೆಲ್ಲಾ ತರುತ್ತಲೇ ಇರುತ್ತಾನೆ. ಪಾಪ, ವಯಸ್ಸಾದ ವಿಧುರನಾದರೂ ಅವನಿಗೂ ಈ ವಸ್ತುಗಳ ಉಪಯುಕ್ತತೆ ಇದ್ದೇ ಇರುತ್ತದೆಯಲ್ಲವೇ? ಆದರೆ ಈ ಮುದಿಯನ ವಸ್ತುಗಳು ಪದೇ ಪದೇ ಬಲು ಬೇಗ ಹಳತಾಗಿ ಬಿಡುತ್ತಿತ್ತು ಅದೇಕೊ!?

ಅವನು ತನಗೆ ಉಪಯೋಗಕ್ಕೆ ಬರುವ ವಸ್ತುಗಳನ್ನು ಪದೇ ಪದೇ ಖರೀದಿಸಿ ತರುತ್ತಲೇ ಇದ್ದರೂ, ಕಪಾಟು ತೆರೆದಾಗಲೆಲ್ಲಾ ಅವನ ಕೈಗೆ ಹರಿದ, ಮಲಿನಗೊಂಡ ವಸ್ತ್ರಗಳೇ ಬರುತ್ತಿದ್ದವು. ಅವುಗಳ ಬದಲಿಗೆ ಏನನ್ನು ಅಂಗಡಿಯಿಂದ ತರಬೇಕೆಂದು ಅವನು ಚಿಂತಿಸುತ್ತಿರಲಿಲ್ಲ. ಅಂತದ್ದನ್ನೆಲ್ಲಾ ಗಮನಿಸಿಕೊಂಡು, ಪಟ್ಟಿಮಾಡಿಕೊಡಲು ಸೇವಕಿ ಜೊಹಾಂಕ ಇದ್ದೇ ಇರುವಳು.

ಆದರೆ ಈಗೇಕೊ ಎಷ್ಟೋ ಕಾಲದ ಮೇಲೆ ಮೊದಲ ಬಾರಿಗೆ ಅವಳು ತನಗೆ ಒಂದೇ ಸಮನೆ ಮೋಸ ಮಾಡುತ್ತಿದ್ದಾಳೆಂಬ ಅನುಮಾನ ಬರತೊಡಗಿತ್ತು.

ಅದು ಆದದ್ದು ಹೀಗೆ:

ಒಂದು ಬೆಳಗು ಅವನಿಗೆ ಒಂದು ವಿಶಿಷ್ಟ ಕೂಟದಿಂದ ಭೋಜನದ ಪಾರ್ಟಿಗಾಗಿ ಆಹ್ವಾನ ಬಂದಿತ್ತು. ಇಂತಹ ಸಾರ್ವಜನಿಕ ಸಮಾರಂಭಗಳಿಗೆ ಸಾಧಾರಣವಾಗಿ ಅವನಿಗೆ ಆಹ್ವಾನ ಬರುತ್ತಿರಲಿಲ್ಲ, ಅವನ ಸಾಮಾಜಿಕ ಒಡನಾಟ ಬಹಳ ಸಣ್ಣದಾದ ಕೆಲವೆ ಗೆಳೆಯರ ಸಣ್ಣವೃತ್ತವಾಗಿತ್ತು. ಇಂದಿನ ಸಮಾರಂಭದ ಆಹ್ವಾನ ಅವನನ್ನು ಗಲಿಬಿಲಿಗೆ ಒಡ್ಡಿತು. ಜೊತೆಗೆ ಸಂಭ್ರಮವೂ ಆಯಿತು. ಈ ವಿಶೇಷ ದಿನಕ್ಕೆ ಒಳ್ಳೆಯ ಶರ್ಟ್ ಏನಾದರೂ ಇದೆಯೇ ಎಂದು ಹುಡುಕುತ್ತಾ ಇಡೀ ಬಟ್ಟೆ ಬೀರುವನ್ನೇ ಜಾಲಾಡಿಸಿ ಬಿಟ್ಟ. ಆದರೆ ಕಾಲರು, ಮಣಿಕಟ್ಟಿನ ಬಳಿ ಸವೆಯದ ಒಂದೂ ಶರ್ಟು ಅವನಿಗೆ ಸಿಗಲಿಲ್ಲ. ಜೊಹಾಂಕಾಳನ್ನು ಕರೆದು ಅಲ್ಲಿ ಒಂದೂ ಒಳ್ಳೆ ಶರ್ಟ್ ಇರದಿದ್ದರ ಬಗ್ಗೆ ಪ್ರಶ್ನೆ ಮಾಡಿದ. ಆಕೆ ಉಗುಳುನುಂಗಿಕೊಂಡು, ಕೆಲನಿಮಿಷ ಮೌನವಾಗಿದ್ದು ನಂತರ, ಪಾರ್ಟಿಗೆ ಯೋಗ್ಯವಾದ ಶರ್ಟ್‌ಗಳಿಲ್ಲ, ಬೇರೆಯೇ ಹೊಸತಾಗಿ ಕೊಂಡುಕೊಳ್ಳಬೇಕು ಎಂದು ಸಲಹೆ ಕೊಟ್ಟಳು.

ಅವನ ನೆನಪಿನಾಳದಲ್ಲಿ ಈಗಷ್ಟೇ ಈಚೆಗೆ ಕೆಲ ಹೊಸ ಶರ್ಟ್‌ಗಳನ್ನು, ಬಟ್ಟೆಗಳನ್ನೂ ಕೊಂಡುಕೊಂಡಿದ್ದಂತೆ ಅನ್ನಿಸಿತು. ಆದರೆ ಮುದಿವಯಸ್ಸಿನ ಮರವೆ. ಅವನ ನೆನಪಿಗೆ ಅವನೇ ಬೆಲೆ ಕೊಡಲಾರದೆ ಅವಳು ಹೇಳುವಂತೆ ಹೊಸ ಬಟ್ಟೆ ಕೊಂಡರಾಯಿತೆಂದು ಅಂಗಡಿಗೆ ಹೋಗಲು ಸಿದ್ಧನಾದ. ಕೋಟು ಧರಿಸಿಕೊಳ್ಳುವಾಗ ಅದರ ಜೇಬಿನೊಳಗೆ ಕೆಲವು ಚೀಟಿಗಳಿದ್ದದ್ದು ಕಂಡಿತು. ತೆಗೆದು ನೋಡಿದಾಗ ಏಳುವಾರದ ಹಿಂದಷ್ಟೇ ಖರೀದಿಸಿದ್ದ ಶರ್ಟ್ ಮತ್ತು ಇತರ ಬಟ್ಟೆಗಳ ಬೆಲೆ ಪಟ್ಟಿ ಅದಾಗಿತ್ತು.

ಆರು ಶರ್ಟ್‌ಗಳು... ಏಳುವಾರದ ಹಿಂದಷ್ಟೇ ಕೊಂಡದ್ದರ ದಾಖಲೆ ಅಲ್ಲಿ ಸಿಕ್ಕಿ ಬಿಟ್ಟಿತು.

ಆ ದಿನ ಅವನು ಮತ್ತೆ ಬಟ್ಟೆ ಅಂಗಡಿಗೆ ಹೋಗಲಿಲ್ಲ. ಬದಲಾಗಿ, ತನ್ನ ಹೊಸ ಶರ್ಟುಗಳೇನಾದವು ಎಂದು ಚಿಂತಿಸುತ್ತಾ ಶತಪಥ ಹಾಕಿದ. ಅವನ ಹೆಂಡತಿ ತೀರಿಕೊಂಡಾಗಿನಿಂದ ಜೊಹಾಂಕಳದ್ದೇ ಸಂಸಾರ

ನಿರ್ವಹಣೆಯಾಗುತ್ತಿದ್ದು, ಒಮ್ಮೆ ಸಹಾ ಅವಳ ಬಗ್ಗೆ ಆತ ಏನೂ ಅನುಮಾನ ಇಟ್ಟುಕೊಂಡಿರಲಿಲ್ಲ. ಆದರೆ ಈಗ ಮೊದಲ ಬಾರಿಗೆ ಅವಳು ಕಳ್ಳತನಮಾಡುತ್ತಿದ್ದಾಳೆಂದು ಸಂಶಯ ಬಂದು ಬಿಟ್ಟಿತು.

ಅವನು ತನ್ನ ಮನಸ್ಸನ್ನು ಪರೀಕ್ಷಿಸಿಕೊಂಡ. ಆಗ ಸುತ್ತಲೂ ಎಲ್ಲ ಶೂನ್ಯವಾಗಿ ಹೋದಂತೆ ಭಾಸವಾಯಿತು. ನಂಬಿಕೆಯ ದ್ರೋಹ ಅವನಿಗೆ ಒಂದು ರೀತಿ ದಿಗಿಲುತಂದಿತು. ಈಗವನು ತನ್ನ ಪತ್ನಿಯ ಕಪಾಟನ್ನು ತೆರೆದುನೋಡಿದ. ಅದರ ತುಂಬಾ ಅವಳ ನೆನಪಿತ್ತು. ಅವಳ ಬಟ್ಟಬರೆಗಳು, ಅಮೂಲ್ಯ ಒಡವೆಗಳು ಇಲ್ಲಿ ಇದ್ದದರ ಜ್ಞಾಪಕವೂ ಬಂದಿತು. ಆದರೆ ಈಗ ಕಪಾಟಿನಲ್ಲಿ ಕೆಲವೇ ಹಾಳು ಮೂಳು ಪದಾರ್ಥಗಳು ಅಣಕಿಸಿದವು. ಅಯ್ಯೊದೇವರೇ!.... ಆಕೆ ಇದರಲ್ಲಿ ಎಷ್ಟೊಂದು ವಸ್ತುಗಳನ್ನು ತುಂಬಿಟ್ಟಿದ್ದಳು. ಅದೆಲ್ಲಾ ಈಗ ಏನಾಯಿತು?

ಅವನು ಕಪಾಟಿನ ಬಾಗಿಲು ಜಡಿದು, ಬಲವಂತವಾಗಿ ಬೇರೆ ಏನೊ ಚಿಂತನೆ ಮಾಡತೊಡಗಿದ. ನಿದರ್ಶನಕ್ಕೆ, ಅಂದಿನ ಸಂಜೆಯ ಔತಣಕೂಟದ ಬಗ್ಗೆ ಚಿಂತಿಸಲು ಯತ್ನಿಸಿದ. ಆದರೆ ನೆನಪು ಮಾತ್ರ ಹಿಂದಕ್ಕೆ ಸರಿದು ಹೋಯಿತು. ಅನುಭವಿಸಿಯಾಗಿ ಹೋಗಿದ್ದ ದಿನಗಳ ಕಷ್ಟಕ್ಕಿಂತಾ ಆ ನೆನಪೇ ಹೆಚ್ಚು ಕಹಿ ಅನ್ನಿಸಿತು. ಯಾರೊ ನೆಮ್ಮದಿಯಾಗಿ ಮಲಗಲುಯತ್ನಿಸಿದವನ ತಲೆದಿಂಬನ್ನೇ ಕಸಿದುಕೊಂಡತ್ತಿತ್ತು. ಮಡದಿಯನ್ನು ಮಣ್ಣುಮಾಡಿ ಬಂದಾಗಿನ ಅನಾಥಭಾವನೆ ಈ ದಿನವೂ ಆಯಿತು. ತನಗೆ ಯಾರೂ ಇಲ್ಲ, ತನ್ನ ನೋವು ಹಂಚಿಕೊಳ್ಳುವವರಿಲ್ಲ. ಆ ಒಂದೆ ದಿನದಲ್ಲಿ ಮತ್ತೂ ಮುದಿಯಾಗಿಬಿಟ್ಟಂತೆ ಅನ್ನಿಸಿತು.

ಅವನಿಗೆ ಒಂದು ಅನುಮಾನ. ಈ ಕೆಲಸದಾಕೆ ಹೀಗೇಕೆ ನನ್ನ ಮನೆ ಪದಾರ್ಥಗಳನ್ನು ಕದಿಯಬೇಕು? ಕದ್ದು ಅವಳೇನು ಮಾಡಿಕೊಳ್ಳಬೇಕಿದೆ?... ಹಾಂ, ಹೌದು ಹೀಗಾಗಿರ ಬೇಕು..... ಸರಿ, ... ಯಾವುದೊ ಒಂದನ್ನು ಹೊಸದಾಗಿ ಕಂಡುಕೊಂಡ ತೃಪ್ತಿ ಅವನಿಗಾಯಿತು. ಅವನವನಿಗೇ ಅವಳು ಕದಿಯುವ ಕಾರಣ ತಿಳಿದುಹೋಯಿತು. ಈಕೆಗೆ ಒಬ್ಬ ಸೋದರಳಿಯ ಇದ್ದಾನೆ. ಅವನನ್ನು ಕಂಡರೆ, ಯಾರೂ ಬಂಧುಗಳಿಲ್ಲದ ಇವಳಿಗೆ ಮೇರೆ ಮೀರಿದ ಪ್ರೀತಿ, ವಾತ್ಸಲ್ಯ. ಅವನ ಬಗ್ಗೆ ಅದೆಷ್ಟು ಸಲ ಜಂಭಕೊಚ್ಚಿಕೊಳ್ಳುತ್ತಿದ್ದಳು!

ಆ ಹುಡುಗನ ಫೋಟೋಗಳ ಮಳೆಯನ್ನೇ ಕಣ್ಣಮುಂದೆ ಸುರಿದು ಹಾಕಿಬಿಡುತ್ತಿದ್ದಳು. ಗುಂಗುರು ಮೊಟಕು ಕೂದಲು, ಹೊಸ ಮೀಸೆ ಇದ್ದ ಈ ಪಡ್ಡೆಹುಡುಗನ ಬಗ್ಗೆ ಹೇಳುವಾಗ ಅವಳ ಕಣ್ಣು ತುಂಬಿಬಿಡುವುದು. ಅವನಿಗಾಗಿಯೇ ಎಲ್ಲ ವಸ್ತುಗಳನ್ನೂ ಅವಳು ಕಳುವು ಮಾಡುತ್ತಿರಬೇಕು ಎನ್ನುವ ಮಹಾಕೋಪ ಅವನ ಮನದ ತುಂಬಾ ಬಂದು ತುಂಬಿಕೊಂಡಿತು. ಆತ ಅಡುಗೆ ಮನೆಗೆ ಹೋಗಿ, ಜೊಹಾಂಕಳಿಗೆ ಇಷ್ಟು ಮಾತ್ರ ಗದರಿಸಿ ಹೇಳಿ ಹೊರಟುಹೋದ, ''ನೀನೊಂದು ಮುದಿಗೊಡ್ಡು...''

ಇದನ್ನು ಕೇಳಿ, ಅವಳಿಗೆ ಕಣ್ಣು ತುಂಬಾ ಕಣ್ಣೀರು ತುಂಬಿಕೊಂಡು ಕನ್ನಡಕದ ಮೇಲೂ ಬಿದ್ದಿತು.

ಆ ದಿನವೆಲ್ಲಾ ಅವಳೊಂದಿಗೆ ಅವನು ಮತ್ತೆ ಮಾತಾಡಲಿಲ್ಲ. ಆತನ ಬೈಗುಳದಿಂದ ತನ್ನ ಆತ್ಮಾಭಿಮಾನಕ್ಕೆ ಧಕ್ಕೆ ಉಂಟಾದಂತೆ ಅವಳು ಸಿಟ್ಟುಗೊಂಡು ಪಾತ್ರೆಪರಡಿಗಳನ್ನು ಕುಕ್ಕಿದಳು. ಅವಳಿಗೆ ಮಾತ್ರ ತನ್ನ ತಪ್ಪೇನೆಂದು ಅರಿವೇ ಬಂದಿರಲಿಲ್ಲ.

ಆ ಮಧ್ಯಾಹ್ನ ಅತ್ರ ತನ್ನ ಮನೆ ಬೀರುಗಳನ್ನೆಲ್ಲಾ ಮತ್ತೊಮ್ಮೆ ಜಾಲಾಡಿಸಿದ. ತನ್ನದಾಗಿದ್ದ ಅನೇಕ ವಸ್ತುಗಳು ಒಂದೊಂದಾಗಿ ಅವನಿಗೆ ನೆನಪಾಗತೊಡಗಿದವು. ಅವನ ಎಷ್ಟೋ ಅಮೂಲ್ಯ ವಸ್ತುಗಳು ಇಟ್ಟಲ್ಲಿ ಇಲ್ಲದೆ ಹೋದದ್ದು ಧೃಢವಾಯಿತು. ಮನಸ್ಸಿಗೆ ಬೆಂಕಿಬಿದ್ದಂತಾಗಿ ಅವನು ಕುಸಿಯುವಂತಾದ.

ಬೀರು, ಕಪಾಟುಗಳ ಬಾಗಿಲು ತೆರೆದದ್ದು ತೆರೆದಂತೆಯೇ ಇಟ್ಟುಕೊಂಡು, ಧೂಳಲ್ಲಿ ಮೆತ್ತಿಕೊಂಡ ಪದಾರ್ಥ ಒಂದನ್ನು ಕೈಗೆ ತೆಗೆದುಕೊಂಡ. ಅದು ಅವನ ತಂದೆಯ ಕೈ ಚೀಲವಾಗಿತ್ತು. ಮಣಿಯಲ್ಲಿ ಮಾಡಿದ್ದ ಚೀಲ ಈಗ ತೂತು ತೂತಾಗಿತ್ತು. ಇವಳು ಅದೆಷ್ಟು ಕಾಲದಿಂದ ಕಳ್ಳತನಮಾಡುತ್ತಿದ್ದಾಳೋ! ಸಿಟ್ಟು ತಡೆದುಕೊಂಡ ಈ ಕ್ಷಣ ಆ ಕೆಲಸದಾಕೆ ಅವನ ಪಕ್ಕ ಇದ್ದಿದ್ದರೆ, ಅವಳ ದವಡೆಗೆ ಅವನ ಬೆರಳಚ್ಚು ಮೂಡಿಬಿಡುತ್ತಿತ್ತು.

ಅವಳನ್ನೇನು ಮಾಡಲಿ?

ಮನೆಯಿಂದ ಒದ್ದೋಡಿಸಿಬಿಡಲಿ?

ಪೋಲೀಸಿಗೆ ಹಿಡಿದುಕೊಡಲಿ?

ಹಾಗೇನಾದರೂ ಮಾಡಿದರೆ ನಾಳೆ ನನಗೆ ಬೇಯಿಸಿ ಹಾಕುವವ್ರ್ಯಾರು? ಹೋಗಲಿ, ಹೋಟೇಲಿಗೆ ಹೋಗಿ ಊಟ ಮುಗಿಸಬಹುದು. ಆದರೆ, ನನಗೆ ಸ್ನಾನಕ್ಕೆ ಬಿಸಿನೀರು ಮಾಡಿಕೊಡುವವರ್‍ಯಾರು? ತಣ್ಣಗಿನ ಮನೆಗೆ ಬೆಂಕಿಗೂಡಲ್ಲಿ ಉರಿಹಚ್ಚಿಟ್ಟು ಮನೆ ಬೆಚ್ಚಗೆ ಮಾಡುವವರ್‍ಯಾರು?

ಬಹಳ ಕಷ್ಟಪಟ್ಟು ಅವಳನ್ನು ಓಡಿಸಿಬಿಡುವ ನಿರ್ಧಾರ ಅಲ್ಲಿಗೇ ಕೈಬಿಟ್ಟ.

ನಾಳೆಗೆ ಏನಾದರೂ ನಿರ್ಧಾರ ಮಾಡುತ್ತೇನೆ ಎಂದುಕೊಂಡು ಸಮಸ್ಯೆ ಮುಂದೂಡಿಕೊಂಡನಾದರೂ, ತಾನು ಅದೆಷ್ಟು ಅವಳನ್ನೇ ಅವಲಂಬಿಸಿದ್ದೇನೆ ಎಂದು ಆಶ್ಚರ್ಯ ಪಟ್ಟುಕೊಂಡ. ಏನೇ ಆದರೂ, ಅವಳನ್ನು ಶಿಕ್ಷಿಸಲಿದ್ದೇನೆ ಎಂಬುದು ಅವನಿಗೆ ಸಮಾಧಾನ ಕೊಟ್ಟಿತು.

ಸಂಜೆ ವೇಳೆಗೆ ತನ್ನೆಲ್ಲ ಭಾವನೆಗಳನ್ನು ಬಿಟ್ಟು ಗೂಡಿಸಿಕೊಂಡು, ಅಡಿಗೆ ಮನೆಗೆ ಹೋಗಿ ಜೊಹಾಂಕಳಿಗೆ ಹೇಳಿಯೇಬಿಟ್ಟ,

''ನೀನು ಈ ಮನೆಬಿಟ್ಟು ಎಲ್ಲಾದರೂ ಹೋಗು... ಇಲ್ಲಿರಬೇಡ...'' ಎಂದು ಹೇಳಿದವನೇ, ಕೆಲವು ಅವಶ್ಯಕತೆ ಇಲ್ಲದ ಹೆಚ್ಚುವರಿ ಹೊರಗಿನ ಕಾರ್ಯಗಳನ್ನು ಈಗಲೇ ಮಾಡೆಂದು ಹೊರೆ ಹೊರೆಸಿ ಕೋಣೆಗೆ ಹೊರಟುಬಿಟ್ಟ. ಕೆಲಸದಾಕೆ ತಬ್ಬಿಬ್ಬಾಗಿ ಅವನಮಾತಿಗೆ, ಆಣತಿಗೆ ಏನನ್ನೂ ಪ್ರತಿಕ್ರಿಯೆ ತೋರಗೊಡದೆ, ಹುತಾತ್ಮಳಂತೆ ಮೌನದಿಂದ ಅವನು ಮಾಡಿದ ಆಣತಿ ಮೇರೆಗೆ ಆ ಕೆಲಸಗಳನ್ನು ಕೈಕೊಳ್ಳಲು ಬಾಗಿಲು ಎಳೆದುಕೊಂಡು ಹೊರಕ್ಕೆ ಹೊರಟು ಹೋದಳು. ಮನೆಗೆಲ್ಲಾ ಈಗ ಅವನೊಬ್ಬನೇ ಆದಾಗ, ಕಳ್ಳ ಬೆಕ್ಕಿನಂತೆ ಅಡುಗೆ ಮನೆಗೆ ಅಡಿ ಇಟ್ಟ. ಅಲ್ಲಿ ಅವಳ ಕಪಾಟನ ಚಿಲಕ ತೆಗೆಯಲು

ಮುಟ್ಟಿದ. ಕಳ್ಳತನವೊದಲ ಬಾರಿಗೆ ಮಾಡುವವನಂತೆ ಅವನ ಹೃದಯ ಭಯದಿಂದ ಮುದುಡಿಕೊಳ್ಳತೊಡಗಿತು. ಆದರೂ, ಅವಳ ಅಪರಾಧ ಅವಳಿಗೆ ತೋರಿಸಲೇಬೇಕು ಎಂಬ ನಿರ್ಧಾರ ಧೈರ್ಯ ತುಂಬಿಕೊಟ್ಟಿತು.

ಅಡುಗೆ ಮನೆ ಫಳಗುಟ್ಟುತ್ತಿತ್ತು. ಕಪಾಟು ಕಣ್ಣೆದುರೇ ಇದ್ದರೂ ಅದರ ಬೀಗ ಹಾಕಿಬಿಟ್ಟಿರಬೇಕು. ಬೀಗದ ಕೈಯನ್ನು ಇಲ್ಲೇ ಎಲ್ಲೋ ಇಟ್ಟಿರಬೇಕು. ತರಕಾರಿ ಕೊಯ್ಯುವ ಚಾಕು ತೆಗೆದುಕೊಂಡು ಕಪಾಟಿನ ಬಾಗಿಲು ಎಬ್ಬಲು ಯತ್ನಿಸಿದ. ಆದರದು ತೆರೆದು ಕೊಳ್ಳದೇ ಬರೀ ಮರದ ಚಿಬ್ಬುಗಳನ್ನು ಪ್ರಕಟ ಪಡಿಸಿತು. ಬೀಗದಕೈಗಾಗಿ ಎಲ್ಲ ಮೂಲೆಗಳನ್ನೂ ತಡಕಾಡಿದ. ತನ್ನದೇ ಬೀಗದಕೈಯಲ್ಲಿ ತೆರೆಯಲು ನೋಡಿದ. ಕೊನೆಗೆ ಎಲ್ಲ ಮುಗಿದು ನೋಡಿದಾಗ, ಆ ಕಪಾಟಿಗೆ ಬೀಗವನ್ನೇ ಹಾಕಿರಲಿಲ್ಲ! ಬಾಗಿಲು ಬಲವಾಗಿ ಕಚ್ಚಿಕೊಂಡಿತ್ತಷ್ಟೆ. ಅದನ್ನು ಒಂದು ಸಣ್ಣ ಕೊಕ್ಕೆ ಸಹಾಯದಿಂದ ಇದೀಗ ಬಿಚ್ಚಿಕೊಂಡ.

ಆ ಕಪಾಟಿನಲ್ಲಿ ಒಂದೊಂದು ಹಲಗೆಯಮೇಲೂ ಅಚ್ಚುಕಟ್ಟಾಗಿ ಬಟ್ಟೆಗಳು ಪೇರಿಸಲ್ಪಟ್ಟಿದ್ದವು. ಮೇಲಿದ್ದ ಹಲಗೆ ಮೇಲೆ ಅವನ ಹೊಚ್ಚ ಹೊಸಾ ಆರು ಶರ್ಟ್‌ಗಳಿದ್ದವು. ಅವಕ್ಕೆ ಅಂಗಡಿಯವನು ಕಟ್ಟಿದ್ದ ನೀಲಿ ಬಣ್ಣದ ನೂಲು ಸಹಾ ಹಾಗೆಯೇ ಇತ್ತು.

ಇನ್ನೊಂದು ರಟ್ಟಿನ ಪೆಟ್ಟಿಗೆಯಲ್ಲಿ ಅವನ ಹೆಂಡತಿಯ ನೀಲಮಣಿ ಬ್ರೂಚು ಪಿನ್ನು, ತಂದೆ ಉಪಯೋಗಿಸುತ್ತಿದ್ದ ಕಪ್ಪೆಚಿಪ್ಪಿನ ತೋಳುಗಳ ಮಣಿಕಟ್ಟು ಗುಂಡಿಗಳು, ದಂತದ ಮೇಲೆ ಬಿಡಿಸಿದ ತಾಯಿಯ ವರ್ಣಚಿತ್ರ, ಅಯ್ಯೋರಾಮಾ.. ಇವೆಲ್ಲವೂ ಈ ಮನೆಗೆಲಸದ ಹೆಂಗಸಿಗೆ ಬೇಕಾಗಿತ್ತೆ?...

ಆತ ಎಲ್ಲವನ್ನು ಕಪಾಟನಿಂದ ತೆಗೆದು ಬಿಟ್ಟ. ಆಗ ಅವನದ್ದೇ ಕಾಲುಚೀಲಗಳು, ಸಾಬೂನಿನ ಬಿಲ್ಲೆ, ಹಲ್ಲುಜ್ಜುವ ಬ್ರಷ್, ರೇಶ್ಮೆಕೋಟು, ದಿಂಬುಚೀಲ, ಹಳೇಪಿಸ್ತೂಲು, ಉಪಯೋಗಕ್ಕೆ ಬಾರದ ಶಿಲಾರಾಳದ ಕೊಳವೆ,... ಇವೆಲ್ಲಾ ಹೊರಬಿದ್ದವು. ಇವೆಲ್ಲಾ ತನ್ನ ಬೀರುವಿನಲ್ಲಿದ್ದ ಸಾಮಾನುಗಳು; ಇಂತಹ ಇನ್ನೂ ಎಷ್ಟೋ ವಸ್ತುಗಳು ಈಗಾಗಲೇ ಆ ಗುಂಗುರು ಕೂದಲ ಹುಡುಗನಿಗೆ ತಿಲುಪಿಬಿಟ್ಟಿರಬೇಕು. ಅವನಿಗೆ ಉಕ್ಕಿದ ಕೋಪ ಕುಣಿಯುತ್ತಿತ್ತು, ಆದರೆ ಕೋಪವಿದ್ದ ಜಾಗದಲ್ಲಿಗೋಳು ಕಟ್ಟಿಕೊಂಡಿತು..... ಹೀಗೊ ವಿಷಯ ಜೊಹಾಂಕಾ?.... ಜೊಹಾಂಕಾ... ನನಗೆ ನೀನು ಹೀಗೆ ಮೋಸ ಮಾಡಬೇಕಿತ್ತೇನು?

ಒಂದೊಂದಾಗಿ ಎಲ್ಲ ಸಾಮಾನುಗಳನ್ನು ತನ್ನ ಕೋಣೆಗೆ ಸಾಗಿಸಿ, ಮೇಜಿನ ಮೇಲೆ ಹರಡಿದ. ಅದೊಂದು ವರ್ಣಮಯ ವಸ್ತು ಪ್ರದರ್ಶನವಾಯಿತು. ಅದರಲ್ಲಿದ್ದ ಅವಳ ಪದಾರ್ಥಗಳನ್ನು ಆರಿಸಿ ತೆಗೆದುಕೊಂಡು ಹೋಗಿ ಅಡುಗೆ ಮನೆಯಲ್ಲಿ ಹಾಕಿಬಿಟ್ಟ. ಅವನು ಒಪ್ಪವಾಗಿಡುವ ಮನಸ್ಸು ಅವನಿಗಿರಲಿಲ್ಲ. ತೆರೆದು ಹಾರುಬಡೆದೇ ಇದ್ದ ಆಕೆ ಕಪಾಟು, ಈ ಚೆಲ್ಲಿದ ಸಾಮಾನು ಇವೆಲ್ಲಾ ಕಳ್ಳಬಂದು ಹೋದಂತೆ ಚಿತ್ರಣಕೊಟ್ಟಿತ್ತು.

ನಂತರ ಜೊಹಾಂಕ ಆಗಮನವಾದ ಮೇಲೆ ಹೇಗೆ ಮಾತನ್ನು ಸುರುವು ಮಾಡಬೇಕೆಂದು ಚಿಂತಿಸಿಕೊಂಡ... ಅದರ ಕಲ್ಪನೆಯೇ ಬೇಸರವಾಗಿ, ಹೊರಕ್ಕೆ ಹೋಗಲು ಬೇಗ ಬೇಗನೆ ಉಡುಪು ತೊಟ್ಟು ಸಜ್ಜಾಗತೊಡಗಿದ.

ನಾಳೆ ಅವಳನ್ನು ತರಾಟೆಗೆ ತೆಗೆದುಕೊಳ್ಳುತ್ತೇನೆ. ಈದಿನ ನಾನು ಮಾಡಿರುವ ಕಾರ್ಯವಷ್ಟನ್ನೇ ಅವಳು ನೋಡಲಿ!

ಒಂದು ಕಡಕ್ಕಾದ ಶರ್ಟನ್ನು ತೆಗೆದುಕೊಂಡು ಹಾಕಿಕೊಂಡ. ಅದು ರಟ್ಟಿನಷ್ಟು ಮುರುಮುರುವಾಗಿತ್ತು. ಕಂಠಪಟ್ಟಿ ಹಾಕಿ ಕೊಳ್ಳಲು ಕಷ್ಟಪಡಬೇಕಾಯಿತು.

ಇನ್ನೇನು ಜೊಹಾಂಕ ಬರುವವಳಿದ್ದಳು.

ಅವನೀಗ, ಬೇಗ ತನ್ನ ಹಳೇ ಶರ್ಟೊಂದನ್ನೇ ಅದು ಹರಿಯುತ್ತ ಇದ್ದರೂ, ಅದನ್ನೇ ಸೆಳೆದು ಹಾಕಿಕೊಂಡು ಕಳ್ಳನಂತೆ ಜಾಗ ಬಿಟ್ಟು, ಹೊರಗಡೆ ಮಳೆ ಹನಿಯುತ್ತಿದ್ದರೂ ಲೆಕ್ಕಿಸದೆ ನಡೆದು ಭೋಜನ ಕೂಟದ ಸಮಾರಂಭಕ್ಕೆ ಹೋಗಿ ಸೇರಿಬಿಟ್ಟ. ಅಲ್ಲಿ ಮಾತ್ರ ಅವನಿಗೆ ತಾನು ಒಬ್ಬಂಟಿಗ ಎಂದು ಮತ್ತೆ ಅನ್ನಿಸಿತು. ಹಳೇ ಪರಿಚಿತರನ್ನು ಸೇರಿಕೊಳ್ಳಲು ಯತ್ನಿಸಿದ. ಆದರೆ ಏಕೊ ಸಾಧ್ಯವಾಗಲಿಲ್ಲ. ಸುಮ್ಮನೆ ಮುಗುಳ್ನಗುತ್ತಾ ಆ ಪ್ರಖರ ದೀಪಗಳ ಅಡಿಯಲ್ಲಿ, ಗದ್ದಲದ ನಡುವೆ ಉಳಿದ... ಯಾರಾದರೂ ತನ್ನ ಶರ್ಟಿನ ಹರುಕು ನೋಡಿ ಬಿಟ್ಟರೆ!..... ಶರ್ಟಿನಿಂದ ನೂಲು ನೇತಾಡುವುದು ಕಾಣುತ್ತಿತ್ತು, ಕೋಟಿನ ಮೇಲೆ ಕಲೆ ಇದೆ, ಪಾದರಕ್ಷೆ ದೇವರಿಗೇ ಪ್ರೀತಿ... ಎಲ್ಲಾದರೂ ಮುಚ್ಚಿಟ್ಟುಕೊಂಡುಬಿಡಬೇಕೆನ್ನಿಸಿತು. ಆದರೆ ಬಾಗಿಲು ಸಮೀಪಿಸುವುದಕ್ಕೂ ಅವನಿಗಾಗದೇ ಬೆವತುಬಿಟ್ಟ. ಬಾಗಿಲಕಡೆಗೆ ಇಂಚಿಂಚಾಗಿ ಸರಿದ. ಅಲ್ಲಿ, ಅವನ ಹೈಸ್ಕೂಲ ಸಹಪಾಠಿಯಾಗಿದ್ದವನೊಬ್ಬನ ಕೈಲಿ ಸಿಗಹಾಕಿಕೊಂಡುಬಿಟ್ಟನವನು. ಅವನನ್ನು ತಪ್ಪಿಸಿಕೊಂಡು ಬಾಗಿಲಾಚೆ ಹೆಜ್ಜೆ ಇಡಲು ಬಹಳವೇ ಶ್ರಮ ಪಡಬೇಕಾಯಿತು. ಕೊನೆಗೊಮ್ಮೆ ಎಲ್ಲದರಿಂದ ಪಾರಾಗಿ, ಮಧ್ಯರಾತ್ರಿ ವೇಳೆಗೆ ಮನೆಗೆ ಹಿಂದಿರುಗಿಬಿಟ್ಟ. ಹಾದಿಯಲ್ಲಿ ಜೊಹಾಂಕ ಮತ್ತೆ ನೆನಪಾದಳು. ನಡೆಯುವ ರಭಸಕ್ಕೆ ಬುದ್ಧಿಯೂ ಚುರುಕಾಗಿ, ಅವಳನ್ನು ಹೇಗೆ ಮಾತಿಗೆ ಎಳೆಯಬಹುದು. ಎಂದು ಆಲೋಚನೆ ಮಾಡಿಟ್ಟುಕೊಂಡ. ಅವಳಿಗೆ ಕರುಣೆ ತೋರಬೇಕೆ? ಹೌದು... ಅವಳನ್ನು ಬೀದಿಗೆ ಅಟ್ಟಬಾರದು. ಕ್ಷಮಿಸಿ ಬಿಡಬೇಕು. ಅವಳು ಅಳಬಹುದು, ತನ್ನನ್ನು ತಾನೇ ತಿದ್ದಿಕೊಳ್ಳುತ್ತೇನೆ ಎನ್ನಬಹುದು. ಅವಳ ಮಾತುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಬೇಕು. ಕೊನೇಗೆ ಒಮ್ಮೆ ಹೀಗೆ ತಾನವಳಿಗೆ ಹೇಳಬೇಕು.

'ಜೊಹಾಂಕ,...... ನಾನು ನಿನ್ನನ್ನು ಕ್ಷಮಿಸಲು ಯತ್ನಿಸುತ್ತೇನೆ ಇನ್ನು ಮುಂದೆ ಸತ್ಯವಂತೆಯಾಗಿರು. ಪ್ರಾಮಾಣಿಕಳಾಗು. ನಾನು ಇದಕ್ಕಿಂತಾ ಹೆಚ್ಚೇನೂ ನಿರೀಕ್ಷಿಸುವದಿಲ್ಲ. ನನಗೂ ವಯಸ್ಸಾಗಿದೆ. ಕ್ರೂರಿಯಾಗಲು ನಾನು ಇಷ್ಟಪಡುವುದಿಲ್ಲ...'

ಹೀಗೆಲ್ಲಾ ಆಲೋಚಿಸಿಕೊಂಡು ಹೋದಾಗ, ಮನೆ ಬಹಳ ಬೇಗ ಸಿಕ್ಕಿಬಿಟ್ಟಿತೆನ್ನಿಸಿತು.

ಸಂದಿನಿಂದ ಅಡುಗೆ ಮನೆ ಒಳಗೆ ಇಣುಕಿನೋಡಿದ. ದೇವರೇ!, ಇದೇನಿದು?. ಅವಳು, ಸುತ್ತಾ ಹರಡಿಕೊಂಡಿರುವ ಸಾಮಾನುಗಳನ್ನು ಪೆಟ್ಟಿಗೆಯೊಳಕ್ಕೆ ತುಂಬುತ್ತಿದ್ದಾಳೆ. ಮುಖ ಅತ್ತು ಅತ್ತು ಊದಿಕೊಂಡಿದೆ.

ಅವನಿಗೆ ಗಾಬರಿಯಾಯಿತು. ಇವಳೇಕೆ ಅವಳ ಸಾಮಾನುಗಳನ್ನೆಲ್ಲಾ ಪೆಟ್ಟಿಗೆಗೆ ತುಂಬಿಕೊಳ್ಳುತ್ತಾ ಇದ್ದಾಳೊ?!

ಜೊಹಾಂಕಾ ಹೊರಟು ಹೋಗುತ್ತಿದ್ದಾಳೆಯೆ?

ಆತ ನಿಂತುಕೊಂಡಿದ್ದ ಸ್ಥಳದಲ್ಲಿದ್ದ ಮೇಜಿನ ತುಂಬಾ ಜೊಹಾಂಕಾ ಕದ್ದು ತೆಗೆದುಕೊಂಡಿದ್ದ ಪದಾರ್ಥಗಳೆಲ್ಲಾ ಹರಡಿಕೊಂಡಿದ್ದವು. ಅವುಗಳ ಮೇಲೆ ಕೈಯಾಡಿಸಿದ. ಆ ವಸ್ತುಗಳು ತನಗೆ ಮತ್ತೆ ದೊರಕಿದ್ದಕ್ಕಾಗಿ ಸಂತೋಷವೇನೂ ಆಗಲಿಲ್ಲ- ಅವಳಿಗೆ ತಾನು ಕಳ್ಳಿ ಎಂಬ ಪಟ್ಟ ರುಜುವಾತು ಮಾಡಿ ತೋರಿಸಿಬಿಟ್ಟೆ. ಅದಕ್ಕೆ ಅವಳುಹೊರಟು ನಿಂತಿದ್ದಾಳೆ - ಇರಲಿ, ನಾಳೆ ಬೆಳಗಿನ ತನಕ ಅವಳನ್ನು ಅದೇ ಕಳ್ಳಿ ಎಂಬ ಭಾವದಲ್ಲಿ ಇರಲು ಬಿಟ್ಟು ಬಿಡುತ್ತೇನೆ. ಇದೇ ಅವಳಿಗೆ ಸಾಕಷ್ಟು ಶಿಕ್ಷೆ ಆದಂತೆ ಆಗುತ್ತದೆ. ಹೌದು, ನಾಳೆ ಬೆಳಿಗ್ಗೆ ಅವಳೊಂದಿಗೆ ಮಾತನಾಡುತ್ತೇನೆ.

ಆದರೆ- ಬಹುಶಃ, ಈಗಲೇ ಅವಳು ಬಹುಶಃ ನನ್ನಲ್ಲಿ ಕ್ಷಮಾಪಣೆಯಾಚಿಸಬಹುದು. ನನ್ನ ಮುಂದೆ ಪಶ್ಚಾತ್ತಾಪದ ಕಣ್ಣೀರಿನ ನದಿಯನ್ನೇ ಹರಿಸಬಹುದು. 'ಹೋಗಲಿ ಬಿಡು ಜೊಹಾಂಕ, ನಿನ್ನನ್ನು ಕ್ಷಮಿಸಿ ಬಿಟ್ಟಿರುವೆ. ನೀನು ಕೆಲಸದಲ್ಲಿ ಮುಂದುವರಿಯುವಂತೆ ಅನುಮತಿಯನ್ನು ಕೊಡುತ್ತೇನೆ.' ಅನ್ನುತ್ತೇನೆ.

ಅವನು ಸಂಜೆ ಉಡುಪಿನಲ್ಲೇ ಹಾಗೇ ಅವಳೇನು ಮಾಡುತ್ತಾಳೆ ನೋಡೋಣ ಎಂದು ಕಾಯುತ್ತ ಕುಳಿತೇ ಇದ್ದ.

ಮೌನ.

ಮನತುಂಬಾ ಮೌನವೇ ತುಂಬಿ ಕೊಂಡಿತ್ತು.

ಅವನ ಕಿವಿಗೆ ಆ ಕೆಲಸದಾಕೆ ಪ್ರತಿಯೊಂದು ಹೆಜ್ಜೆ ಸಪ್ಪಳವೂ ಅಡುಗೆ ಮನೆಯಿಂದ ಕೇಳುತ್ತಲಿತ್ತು. ಪೆಟ್ಟಿಗೆ ಮುಚ್ಚಳವನ್ನು ಸಿಟ್ಟಿನಿಂದ ಧಢಾರನೆ ಮುಚ್ಚಿದ್ದೂ ಕೇಳಿಸಿ ಮತ್ತೆ ನಿಶ್ಯಬ್ಧ ಕವಿಯಿತು.

ಏನಿದು?

ಹಿಂದೆಯೇ ಅಪಸ್ವರದ ಅರಚುವಿಕೆ. ಪಟಕ್ಕನೆ ಎದ್ದು ನಿಂತು ಕೇಳಿಸಿಕೊಂಡ. ಅವನಿಗೆ ಹತಾಶೆ, ಪೇಚು ಆಯಿತು.

'ಈ ವಿಕಾರ ಅಳು ನಿಲ್ಲಿಸು ಜೊಹಾಂಕ... ನೀನಿಂದು ಪಾಠಕಲಿ... ಆದದ್ದನ್ನೆಲ್ಲಾ ನಾನು ಮರೆತು ಬಿಡುತ್ತೇನೆ.. ಮುಂದೆಯಾದರೂ ಪ್ರಾಮಾಣಿಕತೆ ಕಲಿ..' ಎಂದು ಹೇಳಬೇಕೆಂದುಕೊಂಡ.

ಅಷ್ಟರಲ್ಲಿ ಬಾಗಿಲ ಹಿರಿದಾಗಿ ತೆಗೆದುಕೊಂಡಿತು. ಅಲ್ಲಿ ಕಿರುಚುವ ಜೊಹಾಂಕ ಪ್ರತ್ಯಕ್ಷವಾಗಿಯೆ ಬಿಟ್ಟಳು. ಅವಳ ಮುಖನೋಡಲು ಹೆದರಿಕೆಯಾಯಿತು.

''ಜೊಹಾಂಕ...'' ಅವನು ಏದುಸಿರು ಬಿಟ್ಟು ಹೇಳುವಷ್ಟರಲ್ಲಿ ಆಕೆ ಗುಡುಗಿದಳು;

''ನನಗಿಂತಹದ್ದು ಬೇಕಾಗಿತ್ತೆ?... ಚನ್ನಾಗಿದೆ... ನೀವು ಮಾಡಿದ್ದು ತುಂಬಾ ಚನ್ನಾಯಿತು. ನಾನೊಬ್ಬಳು ಕಳ್ಳಿ ಹಾಗೆ!.... ನಾಚಿಕೆಕೇಡು..'' ''ಆದರೆ, ಜೊಹಾಂಕಾ...'' ಅವನು ತತ್ತರಿಸಿ ಹೇಳಿದ, ''ನೀನು ನನ್ನ ವಸ್ತುಗಳನ್ನೆಲ್ಲಾ ಹೇಳದೆಯೆ ತೆಗೆದುಕೊಂಡಿದ್ದೆ... ಇವನ್ನೆಲ್ಲಾ ನೋಡು.. ಈ ವಸ್ತುಗಳನ್ನೆಲ್ಲಾ ನೀನು ತೆಗೆದಿಟ್ಟುಕೊಂಡಿದ್ದೆಯೋ ಇಲ್ಲವೋ?.... ಹೇಳು!....''

ಅವಳು ಆತನ ಮಾತುಗಳನ್ನು ಕಿವಿಯೊಳಗೆ ಇಳಿಸಿಕೊಳ್ಳಲಿ ಇಲ್ಲ. ... ''ನಾನು ಎಷ್ಟು ತಡೆದು ಕೊಳ್ಳಬೇಕಾಯಿತು. ನನ್ನ ಕಪಾಟನ್ನೆಲ್ಲಾ ಜಪ್ತಿ ಮಾಡಿದಿರಿ.... ನಾನೇನು ಬೀದಿ ಪಾಲಾಗಿರೊ ಕಳ್ಳ ಹೆಂಗಸೇನು?... ನನಗೂ ಮರ್ಯಾದೆ ಇದೆ. ನೀವು ನನ್ನನ್ನು ಅಪಮಾನಗೊಳಿಸಿದಿರಿ... ನೀವು ಹೀಗೆ ಮಾಡಬಾರದಾಗಿತ್ತು. ಹಾಗೆ ನಡೆದುಕೊಳ್ಳಲು ನಿಮಗೇನು ಹಕ್ಕು? ನನಗಾದ ಅಪಮಾನ ಎಂದಿಗೂ ತಕ್ಕುದಲ್ಲ. ನಾನು ನಿಜವಾದ ಕಳ್ಳಿ ಏನು?!.. ನಾನು!... ಕಳ್ಳಿ ನಾನಾಗಲು ಹೇಗೆ ಸಾಧ್ಯ.... ನಾನೇನು, ನಮ್ಮ ವಂಶವೇನು!.... ಈ ರೀತಿ ಅವಮಾನವನ್ನು ನಾನು ನಿರೀಕ್ಷಿಸಿಯೇ ಇರಲಿಲ್ಲ... ಇದು ನನ್ನಂತಹ ಮರ್ಯಾದಸ್ಥಳಿಗಲ್ಲ!''

''ಆದರೆ ಜೊಹಾಂಕಾ...'' ಅವನು ಶಾಂತವಾಗಿ ಹೇಳಿದ, ''ಸ್ವಲ್ಪ ವಿವೇಕದಿಂದ ಆಲೋಚಿಸು. ಈ ನನ್ನ ಸಾಮಾನುಗಳೆಲ್ಲಾ ನಿನ್ನ ಕಪಾಟಿಗೆ ಹೇಗೆ ಹೋದವು? ಇವೆಲ್ಲಾ ನನ್ನದೊ ಇಲ್ಲ ನಿನ್ನದ್ದೊ?.. ಹೇಳು..... ನೀನೇ ಹೇಳು.. ಇವೆಲ್ಲ ನಿನ್ನದ್ದೇನು?..''

''ನಾನು ಯಾವುದನ್ನೂ ಕೇಳಿಸಿಕೊಳ್ಳಲು ಸಿದ್ಧಳಿಲ್ಲ...'' ಎಂದು ಬಿಕ್ಕಿ ಬಿಕ್ಕಿ ಅತ್ತಳು ಆ ಸೇವಕ ಹೆಣ್ಣು, ''ಓ!... ದೇವರೇ... ಎಷ್ಟು ನಾಚಿಕೆಗೇಡು... ನಾನೊಬ್ಬಳು ಅಲೆಮಾರಿಯೇ... ನನ್ನ ಕಪಾಟು ಶೋಧಿಸುವುದೆಂದರೇನು - ಆದರೆ ಕೇಳಿಸಿಕೊಳ್ಳಿ....'' ಅಳುತ್ತಾ ಉದ್ವೇಗಗೊಂಡು,'' ಈ ಕ್ಷಣದಿಂದ ನಾನು ಕೆಲಸ ಬಿಟ್ಟು ಹೊರಟೆ!.... ಬೆಳಗಾಗುವತನಕವೂ ನಾನಿಲ್ಲಿರೊಲ್ಲ.... ಇಲ್ಲ - ಇಲ್ಲ ಇರೊಲ್ಲ''. ''ಇಲ್ನೋಡಮ್ಮ....'' ಅವನು ತವಕದಿಂದ ಹೇಳಿದ, ''ನಿನ್ನನ್ನು ಹೊರದೂಡಲು ನಾನು ಇಷ್ಟಪಡುವುದಿಲ್ಲ. ನೀನು ಇಲ್ಲಿಯೆ ಇರಬಹುದು ಜೊಹಾಂಕಾ.. ಆದದ್ದು ಆಯಿತು. ಇದರಿಂದ ಮತ್ತಷ್ಟು ಕೇಡು ಸಂಭವಿಸುವುದು ಬೇಡ.... ನಾನು ಆ ವಿಚಾರದ ಬಗ್ಗೆ ಇನ್ನೂ ಈ ತನಕವೂ ಏನನ್ನೂ ದೂರಿಯೇ ಇಲ್ಲ.. ಅಳುವುದನ್ನು ಮೊದಲು ನಿಲ್ಲಿಸು.''

'ಬೇರೆ ಯಾರನ್ನಾದರೂ ಕೆಲಸಕ್ಕೆ ಗೊತ್ತುಮಾಡಿಕೊಳ್ಳಿ...'' ಕಣ್ಣು ತುಂಬಿದ್ದ ನೀರನ್ನು ತೊಡೆದುಹಾಕಿ ಹೇಳಿದಳು, ''ನಾಳೆ ಬೆಳಗಿನ ತನಕ ಸಹ ನಾನಿಲ್ಲಿ ಇರಲಾರೆ. ಏನೇ ಹೇಳಿದರೂ ತಡೆದುಕೊಳ್ಳುವ ನಾಯಿ ಜಾತಿನಾನಲ್ಲ.. ನನಗೆ ಇವು ಯಾವುದನ್ನು ಸಹಿಸಲು ಸಾಧ್ಯವಿಲ್ಲ. ನೀವು

ಸಾವಿರದಷ್ಟು ಸಂಬಳಕೊಟ್ಟರೂ ನಾನು ಇರೋಲ್ಲ. ಬೀದಿ ಫುಟ್‌ಪಾತಿನ ಮೇಲಾದ್ರೂ ಇರ್ತೀನಿ... ಆದರೆ ನಿಮ್ಮ ಈ ಮನೇಲಿ ಇರೋದಿಲ್ಲ..''

''.... ಆದ್ರೆ, ಯಾಕೆ ಜೊಹಾಂಕಾ...'' ಆತ ನಿಸ್ಸಹಾಯಕತೆಯಲ್ಲಿ ವಾದ ಪ್ರಾರಂಭಿಸಿದ ''ನನ್ನಿಂದ ನಿನ್ನ ಮನಸ್ಸಿಗೆ ಬೇಸರವಾಯಿತೆ?... ಆದರೂ.. ನೀನು... ನೀನು... ಮಾಡಿದ್ದನ್ನು ಒಪ್ಪಿಕೊಳ್ಳದೇ ಇರಲಾಗದು''

''ಇಲ್ಲ. ನನ್ನ ಮನಸ್ಸಿಗೆ ನೋವು ಕೊಡಬೇಡಿ'' ನೋವಿಂದಲೇ ಕೂಗಾಡಿದಳು'' ಮನಸ್ಸಿಗೆ ನೋವಾದ ವಿಷಯ ಬಿಡಿ, ನನ್ನ ಕಪಾಟನ್ನು ಕೆದಕಿದ್ದು... ಅದೂ ನಾನೊಬ್ಬಳು ಕಳ್ಳಿ ಎಂಬ ಅನುಮಾನದ ರೀತಿ ಇಟ್ಟುಕೊಂಡು... ಯಾರೂ ನನಗೆ ಇಂತಹ ಪಟ್ಟ ಕೊಟ್ಟದ್ದು ಇಲ್ಲ- ನಾಚಿಕೆಗೇಡು..... ನಾನು ತಿರುಕಿ ಏನಲ್ಲ... ''ಜೋರಾಗಿ ಕೂಗಿ ಕಣ್ಣು ತುಂಬಾ ನೀರು ತಂದುಕೊಂಡುಬಿಟ್ಟಳು. ಬಾಗಿಲನ್ನು ಧಡಾರನೆ ಜಡಾಯಿಸಿ ಕೊಂಡಳು.

ಅವನು ತೀರಾ ತಬ್ಬಿಬ್ಬಾದ. ಪಶ್ಚಾತ್ತಾಪವನ್ನು ಪಡೆಯದ ಇವಳ ನಡವಳಿಕೆ ಇದೇನು ವಿಚಿತ್ರ? ಡೊಂಬ ಕಾಗೆಯಂತೆ ಕದ್ದು, ಕಳ್ಳತನ ಮಾಡಿಬಿಟ್ಟದ್ದಾಳೆ. ಅದರಲ್ಲಿ ಅನುಮಾನವೆ ಇಲ್ಲ. ಆದರೆ ಅದು ತನಗೆ ತಿಳಿದು ಹೋಯಿತೆಂದು ಅವಳಿಗೆ ರೇಗಿಹೋಗಿದೆ. ಕಳ್ಳತನ ಮಾಡಿದ್ದಕ್ಕೆ ಪಡದ ಅವಮಾನ ಅವಳನ್ನು ಕಳ್ಳಿ ಎಂದು ತೋರಿಸಿ ಕೊಟ್ಟದ್ದಕ್ಕೆ ವಿಪರೀತ ಮಾನಭಂಗವಾಗಿ ಬಿಟ್ಟಿದೆ... ಇವಳಿಗೆ ತಲೆ ಸರಿ ಇದೆಯ?

ಆದರೆ ನಿಧಾನವಾಗಿ ಆತನಿಗೆ ಅವಳ ಬಗ್ಗೆ ಅನುಕಂಪ ಮೂಡಲಾರಂಭಿಸಿತು. ಆತ ತನ್ನಲ್ಲಿ ತಾನು ಅಂದುಕೊಂಡು ಪ್ರತಿಯೊಬ್ಬರಿಗೂ ಅವರದ್ದೇ ಆದ ಒಂದು ದುರ್ಬಲತೆ ಇರುತ್ತದೆ. ಆದರೆ ಅದನ್ನು ಯಾರಾದರೂ ಎತ್ತಿ ತೋರಿಸುವತನಕ ಅದರ ಅರಿವೇ ಅವರಿಗಿರುವುದಿಲ್ಲ. ಹಾ! ಮನುಷ್ಯ ತನಗೆ ನೀತಿ ಇರದಿದ್ದರೂ. ಆ ನೀತಿ ಬಗ್ಗೆ ಅದೆಷ್ಟು ಸೂಕ್ಷ್ಮ ಸಂವೇದನೆ ಇಟ್ಟು ಕೊಂಡಿರುತ್ತಾನೆ! ಅದೆಷ್ಟು ನಾಜೂಕಾಗಿ ಅವನ ಅಪರಾಧ ಮುಚ್ಚಿಕೊಂಡು ಮೃದುತ್ವ ತೋರಿ ಕಣ್ಣೀರು ತುಂಬಿಕೊಳ್ಳುತ್ತಾನೆ. ಅವನ ಗುಪ್ತತೆಗೆ ಸ್ವಲ್ಪ ಸ್ಪರ್ಷಮಾಡಿ ತೋರಿಸಿದರೂ ಸಾಕು, ನೋವು ಕೋಪದ ಸಮೇತ ಉಕ್ಕಿ ಬಂದುಬಿಡುತ್ತೆ. ಅಪರಾಧಿಗಳನ್ನು ವಿಚಾರಿಸುವಾಗ ನೀವು ಕೋಪಗೊಂಡವನನ್ನು ವಿಚಾರಿಸುತ್ತಿರುವರೆಂದು ನಿಮಗೆ ತಿಳಿಯುವುದಿಲ್ಲ ಅಲ್ಲವೆ?

ಅಡುಗೆ ಮನೆಯಲ್ಲಿದ್ದ ಮಂಚದ ಮೇಲೆ ಹೊರಳಾಡಿ ಅಳುತ್ತಿದ್ದ ಅವಳ ದನಿ ಆತನಿಗೆ ಕೇಳಿಬಂದಿತು. ಅವನಿಗೆ ಒಳಗೆ ಹೋಗಿ ಆ ಕೋಪದವಳನ್ನು ಸಮಾಧಾನ ಪಡಿಸಬೇಕೆನ್ನಿಸಿತು. ಆದರೆ ಅವಳು ಒಳಗಿಂದ ಬಾಗಿಲ ಚಿಲಕ ಹಾಕಿಕೊಂಡು ಬಿಟ್ಟದ್ದಳು. ಹೊರಗಿಂದಲೇ ಅವಳ ಕೋಪ ಶಮನ ಮಾಡುವ ಮಾತುಗಳನ್ನಾಡಿದನು.

ಅದಕ್ಕುತ್ತರವಾಗಿ ಒಳಗಿದ್ದವಳ ಅಳುವಿನ ಶಬ್ಧ ಮತ್ತೂ ಹೆಚ್ಚಾಯಿತು.

ಅವನು ತುಂಬಿದ ಕರುಣೆ ಹೊತ್ತು ತನ್ನ ಕೋಣೆಗೆ ಹಿಂದಿರುಗಿದ. ಅಲ್ಲಿ ಅವನ ಮೇಜಿನ ಮೇಲೆ ಆಕೆ ಕಳ್ಳಿದ್ದ ವಸ್ತುಗಳೆಲ್ಲಾ ಹರಡಿಕೊಂಡಿದ್ದವು: ಆತನ ಹೊಚ್ಚ ಹೊಸಾ ಶರ್ಟ್‌ಗಳು, ಹಾಸು ಬಟ್ಟೆಗಳು, ನೆನಪಿನಕಾಣಿಕೆಗಳು, ... ಒಂದೇ, ಎರಡೆ? ಅವುಗಳನ್ನು ಮೃದುವಾಗಿ ತಡವಿದಾಗ ಆ ಸ್ಪರ್ಶದಲ್ಲಿ ಯಾವುದೋ ಶೋಕ, ದೀನತೆ ಇತ್ತು.

ನೇರಳೆ ಮರ

ಮೂಲ ಉರ್ದು: **ಕೃಷನ್ ಚಂದ್ರ**
ಅನುವಾದ: **ಡಾ. ಮುಹಮ್ಮದ್ ಸಿಬ್ಘತುಲ್ಲಾ**

ರಾತ್ರಿ ಬಹಳ ಜೋರಾಗಿ ಬಿರುಗಾಳಿ ಬೀಸಿತು. ಸೆಕ್ರೆಟೆರಿಯಟ್ ಲಾನ್‌ನಲ್ಲಿ ನೇರಳೆ ಮರ ಬಿದ್ದಿತು. ಬೆಳಗ್ಗೆ ಮಾಲಿ ನೋಡಿದಾಗ ಅವನು ಕಂಡಿದ್ದು ಒಬ್ಬ ಮನುಷ್ಯ ಅದರ ಕೆಳಗೆ ಸಿಕ್ಕಿ ಬಿದ್ದಿದ್ದಾನೆ.

ಮಾಲಿ ಓಡಿ ಓಡಿ ಜವಾನನ ಬಳಿ ಹೋದ, ಜವಾನ ಓಡಿ ಓಡಿ ಗುಮಾಸ್ತನ ಬಳಿ ಹೋದ, ಗುಮಾಸ್ತ ಓಡಿ ಓಡಿ ಸೂಪರಿಂಟೆಂಡೆಂಟ್ ಬಳಿ ಹೋದ. ಸೂಪರಿಂಟೆಂಡೆಂಟ್ ಓಡಿ ಓಡಿ ಲಾನ್‌ಗೆ ಬಂದ. ಕೆಲವೇ ನಿಮಿಷಗಳಲ್ಲಿ ಮರದ ಕೆಳಗೆ ಸಿಕ್ಕಿಬಿದ್ದ ಮನುಷ್ಯನ ಸುತ್ತಲೂ ಸಾಕಷ್ಟು ಜನ ಸೇರಿದರು.

ಅಯ್ಯೋ ನೇರಳೆ ಮರ ಎಷ್ಟೊಂದು ರಸಮಯವಾಗಿತ್ತು. ಮತ್ತೊಬ್ಬ ಕ್ಲರ್ಕ್ ನೆನೆಸಿಕೊಳ್ಳುತ್ತಾ ಹೇಳಿದ.

ನಾನು ಹಣ್ಣಿನ ಕಾಲದಲ್ಲಿ ಜೋಳಿಗೆ ತುಂಬ ತುಂಬಿಕೊಂಡು ಹೋಗುತ್ತಿದ್ದೆ. ನನ್ನ ಮಕ್ಕಳು ನೇರಳೆ ಹಣ್ಣುಗಳನ್ನು ಎಷ್ಟು ಸುಖ ಸಂತೋಷದಿಂದ ತಿನ್ನುತ್ತಿದ್ದರು. ಮೂರನೇ ಕ್ಲರ್ಕ್ ಅಳುವ ಧ್ವನಿಯಲ್ಲಿ ಹೇಳಿದ.

ಆದರೆ ಈ ಮನುಷ್ಯ? ಮಾಲಿ ಮರದ ಕೆಳಗೆ ಸಿಕ್ಕಿಹಾಕಿಕೊಂಡಿರುವವನ ಕಡೆ ಸನ್ನೆ ಮಾಡಿದ.

ಹೌದು ಈ ಮನುಷ್ಯ: ಸೂಪರಿಂಟೆಂಡೆಂಟ್ ಯೋಚನೆಯಲ್ಲಿ ಮುಳುಗಿದನು. ಅವನು ಜೀವಂತವಾಗಿದ್ದಾನೆಯೋ ಅಥವಾ ಸತ್ತಿದ್ದಾನೆಯೋ? ಒಬ್ಬ ಜವಾನ ಕೇಳಿದನು.

ಸತ್ತಿರಬೇಕು. ಇಷ್ಟು ದೊಡ್ಡ ಮರ ಅವನ ಬೆನ್ನಿನ ಮೇಲೆ ಬಿದ್ದಿದೆ. ಅವನು ಉಳಿಯಲು ಸಾಧ್ಯವೇ? ಮತ್ತೊಬ್ಬ ಜವಾನ ಹೇಳಿದನು.

''ಇಲ್ಲಿ ನಾನು ಜೀವಂತವಾಗಿದ್ದೇನೆ.'' ಸಿಕ್ಕಿಹಾಕಿಕೊಂಡಿರುವವನು ಬಹಳ ಕಷ್ಟ ಪಟ್ಟು ನರಳುತ್ತಾ ಹೇಳಿದನು. ಜೀವಂತವಾಗಿದ್ದಾನೆ- ಒಬ್ಬ ಕ್ಲರ್ಕ್ ಆಶ್ಚರ್ಯದಿಂದ ಹೇಳಿದನು.

ಮರವನ್ನು ತಳ್ಳಿ ಅವನನ್ನು ಬೇಗ ಹೊರಗೆ ತೆಗೆಯಬೇಕು- ಮಾಲಿ ಸಲಹೆ ನೀಡಿದನು.

''ತುಂಬ ಕಷ್ಟ'' - ಒಬ್ಬ ಸ್ಥೂಲ ಹಾಗೂ ಸೋಮಾರಿ ಜವಾನ ಹೇಳಿದನು.

''ಮರ ಬಹಳ ದಪ್ಪ ಹಾಗೂ ತೂಕವಾಗಿದೆ''

''ಏನು ಕಷ್ಟ?'' ಮಾಲಿ ಕೇಳಿದನು. ಸೂಪರಿಂಟೆಂಡೆಂಟ್ ಸಾಹೇಬರು ಆಜ್ಞೆ ಮಾಡಿದರೆ ಹತ್ತು ಹದಿನೈದು ಮಾಲಿ, ಜವಾನರು ಮತ್ತು ಕ್ಲರ್ಕ್‌ಗಳನ್ನು ಸೇರಿಸಿ ಮರದ ಕೆಳಗೆ ಸಿಕ್ಕಿರುವ ಮನುಷ್ಯನನ್ನು ಹೊರಗೆ ತೆಗೆಯಬಹುದು.

ಮಾಲಿ ಸರಿ ಹೇಳುತ್ತಾನೆ ''ಬಹಳಷ್ಟು ಕ್ಲರ್ಕ್‌ಗಳೆಲ್ಲ ಒಂದೇಸಲ ಹೇಳಿದರು. ಎಲ್ಲರೂ ಸೇರಿ ಕೈ ಹಾಕಿ ನಾವೆಲ್ಲ ಸಿದ್ಧರಾಗಿದ್ದೇವೆ.''

ಬಹಳಷ್ಟು ಜನ ಮರ ಎತ್ತಲು ಒಂದೇ ಸಲ ತಯಾರಾದರು.

''ನಿಲ್ಲಿ.'' ಸೂಪರಿಂಟೆಂಡೆಂಟ್ ಹೇಳಿದ ನಾನು ಅಂಡರ್ ಸೆಕ್ರೆಟರಿಯವರಿಂದ ಸಲಹೆ ತೆಗೆದುಕೊಳ್ಳುತ್ತೇನೆ.

ಸೂಪರಿಂಟೆಂಡೆಂಟ್, ಅಂಡರ್ ಸೆಕ್ರೆಟರಿ ಬಳಿ ಹೋದ. ಅಂಡರ್ ಸೆಕ್ರೆಟರಿ ಡೆಪ್ಯುಟಿ ಸೆಕ್ರೆಟರಿ ಬಳಿ ಹೋದ. ಡೆಪ್ಯುಟಿ ಸೆಕ್ರೆಟರಿ ಜಾಯಿಂಟ್ ಸೆಕ್ರೆಟರಿ ಬಳಿ ಹೋದ. ಜಾಯಿಂಟ್ ಸೆಕ್ರೆಟರಿ ಛೀಪ್ ಸೆಕ್ರೆಟರಿ ಬಳಿ ಹೋದ, ಚೀಪ್ ಸೆಕ್ರೆಟರಿ ಮಿನಿಷ್ಟರ್ ಬಳಿ ಹೋದ. ಮಿನಿಸ್ಟರ್ ಚೀಪ್ ಸೆಕ್ರೆಟರಿಗೆ ಏನೋ ಹೇಳಿದ. ಚೀಪ್ ಸೆಕ್ರೆಟರಿ ಜಾಯಿಂಟ್ ಸೆಕ್ರೆಟರಿಗೆ ಏನೋ ಹೇಳಿದ. ಜಾಯಿಂಟ್ ಸೆಕ್ರೆಟರಿ ಡೆಪ್ಯುಟಿ ಸೆಕ್ರೆಟರಿಗೆ ಏನೋ ಹೇಳಿದ, ಡೆಪ್ಯುಟಿ ಸೆಕ್ರೆಟರಿ ಅಂಡರ್ ಸೆಕ್ರೆಟರಿಗೆ ಏನೋ ಹೇಳಿದ. ಹೀಗೆ ಫೈಲ್ ಓಡಾಡುತ್ತಲೇ ಅರ್ಧ ದಿನ ಕಳೆದುಹೋಯಿತು.

ಅಪರಾಹ್ನ ಸಿಕ್ಕಿರುವ ಮನುಷ್ಯನ ಸುತ್ತಲೂ ಜನಜಂಗುಳಿ ಸೇರಿತು. ಅಲ್ಲಿದ್ದವರೆಲ್ಲರೂ ಏನೇನೋ ಮಾತನಾಡುತ್ತಿದ್ದರು. ಕೆಲವು ಕ್ಲರ್ಕ್‌ಗಳು ನಾವೇ ಈ ಸಮಸ್ಯೆ ಬಗೆಹರಿಸುತ್ತೇವೆ ಎಂದು ಮುಂದೆ ಬಂದರು. ಅವರು ಸರ್ಕಾರದ ತೀರ್ಪನ್ನು ನಿರೀಕ್ಷಿಸದೇ ಮರವನ್ನು ತಾವೇ ತಳ್ಳಿ ಹಾಕಬೇಕೆಂದು ನಿಶ್ಚಯಿಸುತ್ತಿದ್ದಾಗ ಸೂಪರಿಂಟೆಂಡೆಂಟ್ ಫೈಲ್ ತೆಗೆದುಕೊಂಡು ಓಡಿ ಬಂದು ನಾವು ಈ ಮರವನ್ನು ಇಲ್ಲಿಂದ ತೆಗೆಯಲು ಸಾಧ್ಯವಿಲ್ಲ ನಾವು ವಾಣಿಜ್ಯ ವಿಭಾಗಕ್ಕೆ ಸಂಬಂಧಪಟ್ಟವರು. ಈ ಸಮಸ್ಯೆ ಮರಕ್ಕೆ ಸಂಬಂಧಿಸಿದ್ದು, ಅದು ಕೃಷಿ ಇಲಾಖೆಯ ಸ್ವಾಧೀನದಲ್ಲಿ ಇರುವುದರಿಂದ ನಾನು ಈ ಫೈಲ್‌ಗೆ ಅರ್ಜಂಟ್ ಮಾರ್ಕ್ ಮಾಡಿ ಕೃಷಿ ವಿಭಾಗಕ್ಕೆ ಕಳುಹಿಸುತ್ತಿದ್ದೇನೆ. ಅಲ್ಲಿಂದ ಉತ್ತರ ಬರುತ್ತಿದ್ದಂತೆ ಮರ ಎತ್ತಿ ಬಿಡಬಹುದು ಎಂದು ಹೇಳಿದನು.

ಮರುದಿನ ಕೃಷಿ ವಿಭಾಗದಿಂದ ಉತ್ತರ ಬಂದಿದ್ದೇನೆಂದರೆ, ''ಮರ ವಾಣಿಜ್ಯ ವಿಭಾಗದ ಲಾನ್‌ನಲ್ಲಿ ಬಿದ್ದಿರುವುದರಿಂದ ಮರ ತೆಗೆಯುವ ಜವಾಬ್ದಾರಿಯು ವಾಣಿಜ್ಯ ವಿಭಾಗದ್ದು.''

ಈ ಉತ್ತರ ಓದಿ ವಾಣಿಜ್ಯ ವಿಭಾಗಕ್ಕೆ ಕೋಪ ಬಂತು. ಮರು ಉತ್ತರದಲ್ಲಿ ಮರಗಳನ್ನು ತೆಗೆಯುವುದು ಬಿಡುವುದರ ಹೊಣೆ ಕೃಷಿ ವಿಭಾಗದ್ದು, ವಾಣಿಜ್ಯ ವಿಭಾಗಕ್ಕೆ ಇದರ ಬಗ್ಗೆ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಲಾಯಿತು. ಮರುದಿನವೂ ಫೈಲ್ ಓಡಾಡುತ್ತಲೇ ಇದ್ದು ಸಾಯಂಕಾಲ ಉತ್ತರ ಬಂತು. ನಾವು ಈ ವಿಷಯವನ್ನು ಹಾರ್ಟಿಕಲ್ಚರ್ ಡಿಪಾರ್ಟಮೆಂಟ್‌ಗೆ ಒಪ್ಪಿಸುತ್ತಿದ್ದೇವೆ. ಏಕೆಂದರೆ ಇದು ಹಣ್ಣು ಕೊಡುವ ಮರದ ವಿಷಯ. ಕೃಷಿ ವಿಭಾಗ ಕೇವಲ ದವಸ ಧಾನ್ಯ ಮತ್ತು ಕೃಷಿ ಸಂಬಂಧ ವಿಷಯಗಳ ಬಗ್ಗೆ ಏನಾದರೂ ತೀರ್ಪು ತೆಗೆದುಕೊಳ್ಳಬಹುದೇ ಹೊರತು ಬೇರೇನೂ ಮಾಡಲು ಸಾಧ್ಯವಿಲ್ಲ. ನೇರಳೆ ಮರ ಒಂದು ಫಲ ಕೊಡುವಂತಹ ಮರವಾಗಿರುವುದರಿಂದ ಇದು ಹಾರ್ಟಿಕಲ್ಚರ್ ಡಿಪಾರ್ಟಮೆಂಟ್ ವ್ಯಾಪ್ತಿಯಲ್ಲಿ ಬರುತ್ತದೆ.

ರಾತ್ರಿ ಮಾಲಿಯು ಮರಕ್ಕೆ ಸಿಕ್ಕಿರುವ ಮನುಷ್ಯನಿಗೆ ಬೇಳೆ ಸಾರು, ಭಾತ್ ತಿನ್ನಿಸಿದನು. ಜನ ಕಾನೂನು ಎಲ್ಲಿ ತಮ್ಮ ಕೈಯಲ್ಲಿ ತೆಗೆದುಕೊಂಡು ಮರ ತಳ್ಳಲು ಪ್ರಯತ್ನಿಸುವರೋ ಎಂದು ಲಾನಿನ ಸುತ್ತಲೂ ಪೋಲೀಸ್ ಪಹರೆ ಹಾಕಲಾಗಿತ್ತು. ಆದರೂ ಒಬ್ಬ ಕಾನಿಸ್ಟೇಬಲ್‌ಗೆ ಕನಿಕರ ಬಂದು ಮರಕ್ಕೆ ಸಿಕ್ಕಿರುವ ಮನುಷ್ಯನಿಗೆ ಊಟ ಮಾಡಿಸುವ ಅಪ್ಪಣೆ ಮಾಲಿಗೆ ನೀಡಿದನು.

ಮರಕ್ಕೆ ಸಿಕ್ಕಿರುವ ಮನುಷ್ಯನಿಗೆ ಮಾಲಿ ಹೇಳಿದ "ನಿನ್ನ ಫೈಲ್ ಓಡಾಡುತ್ತಿದೆ. ನಾಳೆ ಇದರ ಸಂಬಂಧವಾಗಿ ಏನಾದರೂ ತೀರ್ಮಾನವಾಗುವ ನಿರೀಕ್ಷೆ ಇದೆ."

ಮರಕ್ಕೆ ಸಿಕ್ಕಿರುವ ಮನುಷ್ಯ ಏನೂ ಮಾತನಾಡಲಿಲ್ಲ.

ನಿನ್ನ ವಾರಸ್‌ದಾರರು ಯಾರಾದರೂ ಇದ್ದರೆ ಅವರ ವಿಳಾಸ ಕೊಡು, ನಾನು ಅವರಿಗೆ ಸುದ್ದಿ ತಿಳಿಸಲು ಪ್ರಯತ್ನಿಸುತ್ತೇನೆಂದನು ಮಾಲಿ.

"ನನಗೆ ಯಾರು ವಾರಸ್‌ದಾರರಿಲ್ಲ" ಸಿಕ್ಕಿರುವ ಮನುಷ್ಯ ಬಹಳ ಕಷ್ಟ ಪಟ್ಟು ಹೇಳಿದನು.

ಮಾಲಿ ಇದನ್ನು ಕೇಳಿ ಬೇಜಾರು ಪಟ್ಟುಕೊಂಡು ಅಲ್ಲಿಂದ ಸರಿದನು.

ಮಾರನೇ ದಿನ ಹಾರ್ಟಿಕಲ್ಚರ್ ಡಿಪಾರ್ಟಮೆಂಟ್‌ನಿಂದ ಉತ್ತರ ಬಂತು. ಬಹಳ ಕಡಕ್ ಹಾಗು ವ್ಯಂಗ್ಯವಾದ ಉತ್ತರ. ಹಾರ್ಟಿಕಲ್ಚರ್ ಸೆಕ್ರೆಟರಿ ಸಾಹಿತ್ಯಾತ್ಮಕ ಮನುಷ್ಯನ ಹಾಗೆ ಕಾಣಿಸುತ್ತಿದ್ದ. ಅವನು ಬರೆದಿದ್ದ "ಇದು ಎಂತಹ ಆಶ್ಚರ್ಯಕರ ಸಂಗತಿ ಎಂದರೆ ನಾವು ದೊಡ್ಡ ಪ್ರಮಾಣದಲ್ಲಿ ಗಿಡ ಮರ ನೆಡುಸುವ ಚಳವಳಿ ನಡಿಸುತ್ತಿರುವಾಗ ನಮ್ಮ ದೇಶದಲ್ಲಿ ಇಂತಹ ಸರ್ಕಾರಿ ಅಧಿಕಾರಿಗಳು ಇದ್ದಾರೆ. ಅವರು ಮರ ಕಡಿಯುವ ಸಲಹೆ ಕೊಡುತ್ತಿದ್ದಾರೆ ಅದುವೇ ಫಲ ಕೊಡುವ ಮರವನ್ನು ಅದರಲ್ಲು ನೇರಳೆ ಮರ. ಅದರ ಹಣ್ಣು ಜನ ಇಷ್ಟಪಟ್ಟು ತಿನ್ನುತ್ತಾರೆ.

ನಮ್ಮ ಇಲಾಖೆ ಯಾವುದೇ ಕಾರಣಕ್ಕೆ ಈ ಫಲ ಕೊಡುವ ಮರವನ್ನು ಕಡಿಯುವ ಅಪ್ಪಣೆ ಕೊಡಲು ಸಾಧ್ಯವಿಲ್ಲ."

ಈಗ ಏನು ಮಾಡುವುದು? ಒಬ್ಬ ತರಲೆ ಮನುಷ್ಯ ಹೇಳಿದ "ಮರ ಕಡಿಯಲು ಸಾಧ್ಯವಾಗದೆ ಇರುವಾಗ, ಮನುಷ್ಯನನ್ನು ಕೊಯ್ದು ತೆಗೆದು ಕೊಳ್ಳಿ."

ಇಲ್ಲಿ ನೋಡಿ, ಅವನು ಸನ್ನೆಯಿಂದ ತೋರಿಸುತ್ತಾ "ಇವನನ್ನು ಈ ಮಧ್ಯದಿಂದ ಕೊಯ್ದರೆ ಅರ್ಧ ಮನುಷ್ಯ ಈ ಕಡೆಯಿಂದ ಹೊರಗೆ ಬರುತ್ತಾನೆ. ಮರ ಅಲ್ಲೇ ಇರುತ್ತದೆ."

"ಆದರೆ ನಾನು ಸತ್ತುಹೋಗುತ್ತೇನೆ" ಸಿಕ್ಕಿರುವ ಮನುಷ್ಯನು ವಿರೋಧಿಸಿದನು.

"ಇವನು ಹೇಳುವುದು ಸರಿ" ಒಬ್ಬ ಗುಮಾಸ್ತ ಹೇಳಿದನು.

ಮನುಷ್ಯನನ್ನು ಕೊಯ್ಯುವ ಸಲಹೆ ನೀಡಿದವನು ಬಹಳ ತೀವ್ರವಾಗಿ ವಿರೋಧಿಸುತ್ತಾ, ಇಂದು ಪ್ಲಾಸ್ಟಿಕ್ ಸರ್ಜರಿ ಎಷ್ಟೊಂದು ಅಭಿವೃದ್ಧಿ ಹೊಂದಿದೆ ಎಂದು ನಿಮಗೆ ತಿಳಿದಿಲ್ಲವೆ? ಈ ಮನುಷ್ಯನನ್ನು ಮಧ್ಯದಿಂದ ಕೊಯ್ದು ಹೊರಗೆ ತೆಗೆದುಕೊಂಡರೆ ಪ್ಲಾಸ್ಟಿಕ್ ಸರ್ಜರಿ ಮೂಲಕ ಮಧ್ಯದಿಂದ ಈ ಮನುಷ್ಯನನ್ನು ಮತ್ತೆ ಜೋಡಿಸಿಕೊಳ್ಳಬಹುದು.

ಈಗ ಫೈಲ್ ಮೆಡಿಕಲ್ ಡಿಪಾರ್ಟಮೆಂಟ್‌ಗೆ ಕಳುಹಿಸಲಾಯಿತು. ಮೆಡಿಕಲ್ ಡಿಪಾರ್ಟಮೆಂಟ್ ಈ ಫೈಲ್ ಮೇಲೆ ಬೇಗನೆ ಆಕ್ಷನ್ ತೆಗೆದುಕೊಂಡಿತು. ಯಾವ ದಿನ ಫೈಲ್ ಅವರ ವಿಭಾಗಕ್ಕೆ ಬಂದಿತೋ ಅದರ ಮಾರನೇ ದಿನವೇ ಅವರು ತಮ್ಮ ವಿಭಾಗದಲ್ಲಿ ಉತ್ತಮವಾದ ಪ್ಲಾಸ್ಟಿಕ್ ಸರ್ಜನ್‌ಗೆ ತನಿಖೆಗ ಕಳುಹಿಸಿದರು. ಸರ್ಜನ್ ಸಿಕ್ಕಿರುವ ಮನುಷ್ಯನ ಆರೋಗ್ಯವನ್ನು ಚೆನ್ನಾಗಿ ಪರೀಕ್ಷಿಸಿ, ರಕ್ತದ ಒತ್ತಡ, ಉಸಿರಿನ ಆಮದು ರಫ್ತು, ಹೃದಯ ಮತ್ತು ಶ್ವಾಸಕೋಶವನ್ನೆಲ್ಲಾ ಪರೀಕ್ಷಿಸಿ ರಿಪೋರ್ಟ್ ಕಳುಹಿಸಿಕೊಟ್ಟನು. ಈ ಮನುಷ್ಯನನ್ನು ಪ್ಲಾಸ್ಟಿಕ್ ಆಪರೇಷನ್ ಏನೋ ಮಾಡಬಹುದು, ಆಪರೇಷನ್ ಸಹ ಸಕ್ಸ್ ಆಗಬಹುದು, ಆದರೆ ಮನುಷ್ಯ ಉಳಿಯುವುದಿಲ್ಲ.

ಆದ್ದರಿಂದ ಈ ಸಲಹೆಯನ್ನು ಸಹ ತಿರಸ್ಕರಿಸಲಾಯಿತು.

ರಾತ್ರಿ, ಮಾಲಿ ಸಿಕ್ಕಿರುವ ಮನುಷ್ಯನ ಬಾಯಿಯಲ್ಲಿ ಖಿಚಡಿಯ ತುತ್ತುಗಳನ್ನು ಕೊಡುತ್ತಾ ಹೇಳಿದ. ಈಗ ವಿಷಯ ಮೇಲೆ ಹೋಗಿದೆ. ನನಗೆ ತಿಳಿದ ಹಾಗೆ ನಾಳೆ ಸೆಕ್ರೆಟರಿಯಟ್‌ನ ಎಲ್ಲ ಸೆಕ್ರೆಟರಿಗಳ ಸಭೆ ಸೇರುತ್ತದೆ. ಅದರಲ್ಲಿ ನಿಮ್ಮ ಕೇಸ್ ಇಡಲಾಗುವುದು. ಎಲ್ಲ ಕೆಲಸ ಸರಿಹೋಗುವ ಭರವಸೆ ಇದೆ. ಎಂದು ಮಾಲಿ ಹೇಳಿದ. ನೀವೇನೋ ಪೂರ್ತಿಯಾಗಿ ನಮ್ಮನ್ನು ಮರೆಯುವುದಿಲ್ಲ ಎಂದು ನಾವು ತಿಳಿಯುತ್ತೇವೆ, ಆದರೆ ನಿಮಗೆ ಸುದ್ದಿ ಮುಟ್ಟುವರೆಗೆ ನಾವೇ ಮಣ್ಣಾಗಿ ಹೋಗುತ್ತೇವೆಯೇ? ಎಂದು ಕವಿತೆಯ ರೂಪದಲ್ಲಿ ಹೇಳಿದ. ಮಾಲಿ ಆಶ್ಚರ್ಯದಿಂದ ಬಾಯಿಯಲ್ಲಿ ಬೆರಳಿಟ್ಟು, ನೀವು ಕವಿ ಏನು ಎಂದು ಕೇಳಿದ.

ಸಿಕ್ಕಿರುವ ಮನುಷ್ಯನು ನಿಧಾನವಾಗಿ ತಲೆ ಅಲ್ಲಾಡಿಸಿದನು.

ಮರು ದಿನ ಈ ಮಾತನ್ನು ಮಾಲಿ ಜವಾನನಿಗೆ ಹೇಳಿದನು, ಜವಾನ ಕ್ಲರ್ಕ‌ಗೆ, ಕ್ಲರ್ಕ್ ಹೆಡ್‌ಕ್ಲರ್ಕ‌ಗೆ, ಕೆಲವೇ ಸಮಯದಲ್ಲಿ ಇಡೀ ಸೆಕ್ರೆಟೇರಿಯಟ್‌ನಲ್ಲಿ, ಸಿಕ್ಕಿರುವ ಮನುಷ್ಯ ಕವಿ ಎಂಬ ವದಂತಿ ಹರಡಿಕೊಂಡಿತು. ಸಾಯಂಕಾಲದವರೆಗೆ ಬೇರೆ ಬೇರೆ ಮೊಹಲ್ಲಾಗಳಿಂದ ಕವಿಗಳು ಸೇರಲು

ಪ್ರಾರಂಭಿಸಿದರು. ಸೆಕ್ರೆಟೇರಿಯಟ್ ಲಾನ್ ಬಗೆಬಗೆಯ ಕವಿಗಳಿಂದ ಆವರಿಸಿತು. ಸಿಕ್ಕಿರುವ ಮನುಷ್ಯನ ಸುತ್ತಲೂ ಕವಿ ಸಮ್ಮೇಳನವೇ ಪ್ರಾರಂಭವಾಯಿತು. ಸೆಕ್ರೆಟೇರಿಯಟ್‌ನ ಬಹಳಷ್ಟು ಕ್ಲರ್ಕ್‌ಗಳು ಹಾಗೂ ಅಂಡರ್ ಸೆಕ್ರೆಟ್ರಿಗಳು, .ಯಾರಿಗೆ ಸಾಹಿತ್ಯದಲ್ಲಿ ಹಾಗೂ ಕವನಗಳಲ್ಲಿ ಆಸಕ್ತಿ ಇತ್ತೋ ಅವರೂ ತಂಗಿದರು. ಕೆಲವು ಕವಿಗಳು ಸಿಕ್ಕಿಹಾಕಿಕೊಂಡಿರುವ ಕವಿಗಾಗಿ ತಮ್ಮ ಘಜಲ್ ಹಾಗೂ ಕವನಗಳನ್ನು ಓದಲಾರಂಭಿಸಿದರು. ಬಹಳಷ್ಟು ಕ್ಲರ್ಕ್‌ಗಳು ತಮ್ಮ ಘಜಲ್‌ಗಳನ್ನು ಅವನಿಗೆ ತೋರಿಸಿ ಸರಿಪಡಿಸಲೇಬೇಕೆಂದು ಹಟ ಹಿಡಿದರು.

ಸಿಕ್ಕಿಹಾಕಿ ಕೊಂಡಿರುವ ಮನುಷ್ಯ ಕವಿ ಯಾರೆಂದು ಗೊತ್ತಾದ ನಂತರ ಸೆಕ್ರೆಟೇರಿಯಟ್ ಸಬ್ ಕಮಿಟಿ ಒಂದು ತೀರ್ಮಾನಕ್ಕೆ ಬಂತು, ಅಂದರೆ ಸಿಕ್ಕಿ ಹಾಕಿಕೊಂಡಿರುವ ಮನುಷ್ಯ ಒಬ್ಬ ಕವಿಯಾಗಿರುವುದರಿಂದ ಅವನ ಫೈಲ್ ಅಗ್ರಿಕಲ್ಚರ್ ಡಿಪಾರ್ಟಮೆಂಟ್‌ಗೆ ಆಗಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಆಗಲಿ ಸಂಬಂಧಿಸುವುದಿಲ್ಲ. ಅದು ಕೇವಲ ಕಲ್ಚರಲ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿರುತ್ತದೆ. ಆದ್ದರಿಂದ ಕಲ್ಚರಲ್ ಡಿಪಾರ್ಟ್‌ಮೆಂಟ್‌ಗೆ ಮನವಿ ಸಲ್ಲಿಸಿ ಆದಷ್ಟು ಬೇಗನೆ ಈ ಸಂಬಂಧದಲ್ಲಿ ತೀರ್ಮಾನ ಕೈಗೊಂಡು, ಈ ಅದೃಷ್ಟಹೀನ ಕವಿಯನ್ನು ಮರದಿಂದ ಮುಕ್ತಿಗೊಳಿಸಬೇಕು.

ಫೈಲ್ ಕಲ್ಚರಲ್ ಡಿಪಾರ್ಟ್ಮೆಂಟಿನ ಬೇರೆ ಬೇರೆ ಭಾಗಗಳಿಂದ ಹೊರಟು ಸಾಹಿತ್ಯ ಸೆಕ್ರೆಟರಿಯ ಬಳಿ ಬಂತು. ಪಾಪ ಆ ಸೆಕ್ರೆಟರಿ ತಕ್ಷಣವೇ ತನ್ನ ವಾಹನದಲ್ಲಿ ಸೆಕ್ರೆಟರಿಯಟ್‌ಗೆ ಬಂದು ಸಿಕ್ಕಿಹಾಕಿಕೊಂಡಿರುವವನ ಇನ್ಟರ್‌ವ್ಯೂ ತೆಗೆದುಕೊಳ್ಳಲಾರಂಭಿಸಿದನು.

''ನೀವು ಕವಿ ಏನು?'' ಅವನು ಕೇಳಿದನು.

''ಹೌದು'', ಸಿಕ್ಕಿಹಾಕಿ ಕೊಂಡಿರುವವನು ಉತ್ತರಿಸಿದನು.

''ನಿಮ್ಮ ಕವಿನಾಮ''?

''ಓಸ್''

''ಹಾಗಾದರೆ ನೀವು ಆ ಓಸನೇ? ಅವನ ಸಂಗ್ರಹ ''ಓಸ್ ಕೆ ಫೂಲ್'' ಕೆಲವು ದಿನಗಳ ಮುಂಚೆ ಪ್ರಕಟವಾಗಿದೆ.

ಸಿಕ್ಕಿಹಾಕಿ ಕೊಂಡಿರುವ ಕವಿ, ಹೌದು ಎಂಬುವ ರೀತಿಯಲ್ಲಿ ತಲೆ ಅಲ್ಲಾಡಿಸಿದನು.

''ಹಾಗಾದರೆ ನೀವು ನಮ್ಮ ಅಕಾಡೆಮಿ ಸದಸ್ಯರೇನು?''

''ಇಲ್ಲ''

''ತುಂಬ ಆಶ್ಚರ್ಯ'' ಸೆಕ್ರೆಟರಿ ಜೋರಾಗಿ ಕಿರಿಚಿದನು. ''ಇಷ್ಟು ದೊಡ್ಡ ಕವಿ 'ಓಸ್ ಕೆ ಫೂಲ್' ಪುಸ್ತಕದ ಲೇಖಕ ನಮ್ಮ ಅಕ್ಯಾಡಮಿ ಸದಸ್ಯನಲ್ಲ. ಉಫ್, ಉಫ್ ನಮ್ಮಿಂದ ಎಂತಹ ತಪ್ಪಾಯಿತು. ಇಂತಹ ದೊಡ್ಡ ಕವಿ ಎಂತಹ ಕಷ್ಟದಲ್ಲಿದ್ದಾನೆ.''

''ಕಷ್ಟವಲ್ಲ ಅಲ್ಲ, ಒಂದು ಮರದ ಕೆಳಗೆ ಸಿಕ್ಕಿಹಾಕಿಕೊಂಡಿದ್ದೇನೆ, ದಯವಿಟ್ಟು ನನಗೆ ಈ ಮರದ ಕೆಳಗಡೆಯಿಂದ ತೆಗೆಯಿರಿ.''

''ನಾವು ಈಗಲೇ ವ್ಯವಸ್ಥೆ ಮಾಡುತ್ತೇನೆ.'' ಸೆಕ್ರೆಟರಿ ಹೇಳಿದನು. ಅಲ್ಲಿಂದ ತಕ್ಷಣವೇ ಹೋಗಿ ತನ್ನ ವಿಭಾಗದಲ್ಲಿ ರಿಪೋರ್ಟ್ ಮಾಡಿದನು.

ಮರುದಿನ ಸೆಕ್ರೆಟರಿ ಓಡಿ ಓಡಿ ಕವಿಯ ಬಳಿ ಬಂದು- ''ಶುಭಾಶಯಗಳು ಮಿಠಾಯಿ ತಿನ್ನಿಸಿ, ನಮ್ಮ ಸರ್ಕಾರಿ ಅಕ್ಕಾಡಮಿಯು ನಿಮ್ಮನ್ನು ತನ್ನ ಕೇಂದ್ರೀಯ ಕಮಿಟಿಗೆ ಆಯ್ಕೆ ಮಾಡಿದ್ದಾರೆ. ಇದು ತೆಗೆದುಕೊಳ್ಳಿ ಇದರ ಸಂಬಂಧ ಕಾಗದ ಪತ್ರ'' ಎಂದು ಹೇಳಿದನು.

''ಆದರೆ ನನಗೆ ಈ ಮರದ ಕೆಳಗಡೆಯಿಂದ ಮೊದಲು ಹೊರಗೆ ತೆಗೆಯಿರಿ,'' ಸಿಕ್ಕಿಹಾಕಿಕೊಂಡಿರುವ ಮನುಷ್ಯನು ನೋವಿನಿಂದ ನರಳುತ್ತಾ ಹೇಳಿದನು. ಬಹಳ ಕಷ್ಟದಿಂದ ಅವನು ಉಸಿರಾಡುತ್ತಿದ್ದನು. ಅವನ ಕಣ್ಣುಗಳನ್ನು ನೋಡಿದರೆ ಅವನು ತೀವ್ರ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆಂದು ತಿಳಿಯುತ್ತಿತ್ತು.

''ಆದರೆ ನಾವು ಇದನ್ನು ಮಾಡಲು ಸಾಧ್ಯವಿಲ್ಲ'' ಸೆಕ್ರೆಟರಿ ಹೇಳಿದನು.

''ನಮ್ಮಿಂದ ಏನು ಸಾಧ್ಯವಾಗುತ್ತಿತ್ತೋ ಅದನ್ನು ನಾವು ಮಾಡಿದ್ದೇವೆ. ಮತ್ತೆ ಹೆಚ್ಚು ಎಂದರೆ ನೀವು ಸತ್ತೇ ಹೋದರೆ ನಾವು ನಿಮ್ಮ ಹೆಂಡತಿಗೆ ಪಿಂಚಣಿ ಸಹ ಕೊಡಿಸಬಲ್ಲೆವು. ನೀವು ಅರ್ಜಿ ಕೊಟ್ಟರೆ ನಾವು ಅದನ್ನು ಸಹ ಮಾಡಬಲ್ಲೆವು.''

''ನಾನು ಇನ್ನು ಜೀವಂತವಾಗಿದ್ದೇನೆ'' ಕವಿ ನಿಧಾನವಾಗಿ ತಡೆದು ತಡೆದು ಹೇಳಿದನು. ''ನನ್ನನ್ನು ಬದುಕಿಸಿ''.

ಆದರೆ ಕಷ್ಟವೇನೆಂದರೆ, ಸರ್ಕಾರಿ ಸಾಹಿತ್ಯ ಅಕ್ಕಾಡೆಮಿಯ ಸೆಕ್ರೆಟರಿ ಕೈಗಳನ್ನು ಸವರುತ್ತಾ ಹೇಳಿದ'' ನಮ್ಮ ವಿಭಾಗ ಕೇವಲ ಕಲ್ಚರ್‌ಗೆ ಸಂಬಂಧಿಸಿದೆ. ಮರ ಕಡಿಯುವ ಕೆಲಸ ಲೇಖನಿಯಿಂದ ಮಾಡಲು ಸಾಧ್ಯವಿಲ್ಲ. ಅದು ಗರಗಸ ಮತ್ತು ಕೊಡಲಿಗೆ ಸಂಬಂಧಿಸಿದೆ. ಆದ್ದರಿಂದ ನಾವು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಬರೆದು 'ಅರ್ಜೆಂಟ್' ಮಾರ್ಕ್ ಮಾಡಿದ್ದೇವೆ.''

ಮಾಲಿ ಬಂದು ಸಿಕ್ಕಿರುವ ಮನುಷ್ಯನಿಗೆ ಹೇಳಿದ, ''ನಾಳೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಜನ ಬಂದು ಈ ಮರವನ್ನು ಕುಯ್ಯುವರು ನಿಮ್ಮ ಪ್ರಾಣ ಉಳಿಯುತ್ತದೆ.''

ಮಾಲಿ ಬಹಳ ಸಂತೋಷದಿಂದ ಇದ್ದನು. ಸಿಕ್ಕಿರುವ ಮನುಷ್ಯನ ಆರೋಗ್ಯ ನಿಧಾನವಾಗಿ ಕೆಡುತ್ತಾ ಬಂದಿತು. ಆದರೆ ಅವನು ತನ್ನ ಜೀವನ ಸಂಘರ್ಷ ನಡೆಸುತ್ತಿದ್ದನು. ನಾಳೆ, ಬೆಳಗ್ಗಿನವರಿಗೆ ಹೇಗಾದರೂ ಅವನು ಜೀವಂತವಾಗಿರಬೇಕು.

ಮರುದಿನ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಜನ ಗರಗಸ ಮತ್ತು ಕೊಡಲಿಗಳನ್ನು ತೆಗೆದುಕೊಂಡು ಬಂದರೆ ಅವರಿಗೆ ತಡೆಯಲಾಯಿತು. ಏಕೆಂದರೆ ಫಾರಿನ್ ಅಫೇರ್ಸ್ ಮಿನಿಸ್ಟ್ರಿಯಿಂದ ಮರ

ಕಡಿಯಬಾರದೆಂದು ಆಜ್ಞೆ ಬಂದಿತ್ತು. ಏಕೆಂದರೆ ಆ ಮರವನ್ನು ಹತ್ತು ವರ್ಷಗಳ ಮುಂಚೆ ಪಿಟೋಟಿಯ ಸರ್ಕಾರದ ಪ್ರಧಾನಮಂತ್ರಿಯವರು ಸೆಕ್ರೆಟೇರಿಯಟ್ ಲಾನ್‌ನಲ್ಲಿ ನೆಟ್ಟಿದ್ದರು. ಈಗ ಆ ಮರವನ್ನು ಕಡಿದರೆ ಪಿಟೋಟಿಯ ಸರ್ಕಾರದಿಂದ ನಮ್ಮ ಸಂಬಂಧಗಳು ಕೆಡುವ ಭಯವಿದೆ.

''ಆದರೆ ಇಲ್ಲಿ ಒಬ್ಬ ಮನುಷ್ಯನ ಪ್ರಾಣದ ಪ್ರಶ್ನೆಯಿದೆ''? ಒಬ್ಬ ಕ್ಲರ್ಕ್ ಕೋಪದಿಂದ ಕಿರಿಚಿದನು.

''ಮತ್ತೊಂದು ಕಡೆ ಎರಡು ಸರ್ಕಾರಗಳ ಸಂಬಂಧದ ಪ್ರಶ್ನೆ ಇದೆ.'' ಮತ್ತೊಬ್ಬ ಕ್ಲರ್ಕ್ ಮೊದಲನೆ ಕ್ಲರ್ಕ್‌ಗೆ ಸಮಾಧಾನ ಮಾಡುತ್ತ ಹೇಳಿದನು........ ಮತ್ತೆ ಪಿಟೋಟಿಯ ಸರ್ಕಾರ ನಮ್ಮ ಸರ್ಕಾರಕ್ಕೆ ಎಷ್ಟೊಂದು ಸಹಾಯ ನೀಡುತ್ತಿದೆ ಎಂಬುದನ್ನು ಸಹ ಗಮನಿಸಿ. ಆ ಸ್ನೇಹಕ್ಕೆ ನಾವು ಪ್ರಾಣವನ್ನು ಬಲಿ ಕೊಡಲು ಸಾಧ್ಯವಿಲ್ಲವೇ?''

''ಕವಿ ಸಾಯಲೇಬೇಕು''

''ನಿಸ್ಸಂದೇಹವಾಗಿ''

ಅಂಡರ್ ಸೆಕ್ರೆಟರಿ ಸೂಪರಿಂಟೆಂಡೆಂಟ್‌ಗೆ ಹೇಳಿದ. ಇಂದು ಬೆಳಿಗ್ಗೆ ಪ್ರಧಾನಮಂತ್ರಿಯವರು ಪ್ರವಾಸದಿಂದ ಹಿಂದಿರುಗಿದ್ದಾರೆ. ಇಂದು ನಾಲ್ಕು ಘಂಟೆಗೆ ಫಾರಿನ್ ಅಫೇರ್ಸ ಇಲಾಖೆಯವರು ಈ ಮರದ ಫೈಲ್ ಅವರ ಮುಂದೆ ಇಡುತ್ತಾರೆ. ಅವರ ಈ ತೀರ್ಮಾನ ಎಲ್ಲರಿಗೆ ಒಪ್ಪಿಗೆಯಾಗುತ್ತದೆ.

ಸಾಯಂಕಾಲ ೫ ಘಂಟೆಯ ಸಮಯದಲ್ಲಿ ಸೂಪರಿಂಟೆಂಡೆಂಟ್ ಹೆಮ್ಮೆಯಿಂದ ಫೈಲ್ ಅಲುಗಾಡಿಸುತ್ತಾ ಕೂಗಿದ- ''ಪ್ರಧಾನ ಮಂತ್ರಿಯವರು ಆ ಮರ ಕಡಿಯುವ ಆದೇಶ ನೀಡಿದ್ದಾರೆ. ಈ ಸಂಬಂಧವಾದ ಎಲ್ಲ ರೀತಿಯ ಅಂತರರಾಷ್ಟ್ರೀಯ ಹೊಣೆಯನ್ನು ತಾವೇ ತೆಗೆದುಕೊಂಡಿದ್ದಾರೆ. ನಾಳೆ ಈ ಮರ ಕಡಿದುಹಾಕಲಾಗುವುದು. ನೀವು ಈ ಕಷ್ಟದಿಂದ ಪಾರಾಗುವಿರಿ.

''ಕೇಳುತ್ತಿದ್ದೀರಾ? ಇಂದು ನಿಮ್ಮ ಫೈಲ್ ಪೂರ್ಣಗೊಂಡಿದೆ.'' ಸೂಪರಿಂಟೆಂಡೆಂಟ ಕವಿಯ ಭುಜವನ್ನು ಅಲ್ಲಾಡಿಸುತ್ತಾ ಹೇಳಿದನು.

ಆದರೆ ಕವಿಯ ಮೈ ತಣ್ಣಗಾಗಿತ್ತು. ಕಣ್ಣಿನ ಗೊಂಬೆಗಳಲ್ಲಿ ಜೀವವಿರಲಿಲ್ಲ. ಇರುವೆಗಳ ಒಂದು ದೊಡ್ಡ ಸಾಲು ಅವನ ಬಾಯಿಯಲ್ಲಿ ಹೋಗುತ್ತಿತ್ತು.........

ಅವನ ಜೀವನದ ಫೈಲ್ ಸಹ ಪೂರ್ಣಗೊಂಡಿತು.

ಡಾ. ಮುಹಮ್ಮದ್ ಸಿಬ್ಘತುಲ್ಲಾ, ಉರ್ದು ಪ್ರಾಧ್ಯಾಪಕರು, ಬಾಲಕರ ಸರ್ಕಾರಿ ಕಾಲೇಜ್, ಕೋಲಾರ.

ಭಲ್ಲೂಕ (ಕರಡಿ) (ಏಕಾಂಕ ಪ್ರಹಸನ)

ಮೂಲ : **ಆಂಟನ್ ಚೆಕೋಫ್**
ಅನುವಾದ: **ವಿ. ಶ್ರೀನಿವಾಸ**

ಪಾತ್ರಗಳು :

ಎಲ್‌ನಾಪೊಪೊವ, ಕುಳಿಗೆನ್ನೆಯ ವಿಧವೆ.

ಗ್ರಿಗೊರಿ ಸ್ಮಿರ್‌ನೋಫ್, ಅಷ್ಟೇನೂ ವಯಸ್ಸಾಗಿಲ್ಲದ ಗ್ರಾಮೀಣ ಗೃಹಸ್ಥ ಲೂಕ, ಪೊಪೊವಳ ವೃದ್ಧ ಸೇವಕ.

ಶ್ರೀಮತಿ ಪೊಪೊವಳ ಗ್ರಾಮೀಣ ನಿವಾಸದ ದಿವಾನ್‌ಖಾನೆ.

ಶ್ರೀಮತಿ ಪೊಪೊವ ಗಾಢಶೋಕದ ಉಡುಪನ್ನು ಧರಿಸಿ, ಒಂದು ಭಾವಚಿತ್ರವನ್ನೂ ಲೂಕನನ್ನೂ ನೋಡುತ್ತಿದ್ದಾಳೆ.

ಲೂಕ: ಅಮ್ಮಾ, ಇದು ಸರಿಯಲ್ಲ-ನಿಮಗೆ ನೀವು ತುಂಬ ಹಾನಿ ಮಾಡಿಕೊಳ್ಳುತ್ತೀರಿ. ಅಡಿಗೆ ಭಟ್ಟ, ಪರಿಚಾರಿಕೆ ಹಣ್ಣು ಕೀಳಲು ಹೋಗಿದ್ದಾರೆ. ಎಲ್ಲ ಜೀವಿಗಳೂ ಸಂತೋಷದಿಂದ ನಲಿದಾಡುತ್ತಿವೆ. ಬೆಕ್ಕು ಕೂಡ ಅಂಗಳದಲ್ಲಿ ಕುಣಿದು, ಕುಪ್ಪಳಿಸುತ್ತ, ಪುಟ್ಟ ಹಕ್ಕಿಗಳನ್ನು ಬೆನ್ನಟ್ಟಿ ಹೋಗುತ್ತ ಆನಂದ ಪಡುತ್ತಿದೆ. ನೀವಾದರೋ ದಿನವೆಲ್ಲ ಮನೆಯೊಳಗೆ ಗೂಡು ಸೇರಿಕೊಂಡು, ಮಠದಲ್ಲಿರುವಂತೆ ಇದ್ದೀರಿ. ನೀವು ಮನೆಯಿಂದ ಹೊರಗೆ ಕಾಲಿಟ್ಟು ಒಂದು ವರ್ಷವೇ ಆಯಿತಲ್ಲ!

ಪೊಪೊವ: ನಾನಿನ್ನು ಎಂದೆಂದಿಗೂ ಹೊರಗೆ ಹೋಗುವುದಿಲ್ಲ - ಏಕೆ ಹೋಗಬೇಕು? ನನ್ನ ಜೀವನ ಮುಗಿಯಿತು. ಅವರು ತಮ್ಮಗೋರಿಯಲ್ಲಿದ್ದಾರೆ. ನಾನು ಈ ನಾಲ್ಕು ಗೋಡೆಗಳ ಮಧ್ಯೆ ಸಮಾಧಿಯಾಗಿದ್ದೇನೆ. ನಾವಿಬ್ಬರೂ ಸತ್ತಿದ್ದೇವೆ.

ಲೂಕ: ಮತ್ತೆ ನಿಮ್ಮದು ಅದೇ ಮಾತು, ಅದೆ ಧಾಟಿ! ಯಜಮಾನರು ತೀರಿಹೋದರು. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ. ಅವರನ್ನು ಕರೆದೊಯ್ಯುವುದು ಸರಿಯೆನಿಸಿದೆ, ಆ ಭಗವಂತನಿಗೆ. ಆದರೆ, ನೀವು ಎಂದೆಂದಿಗೂ ಅಳುತ್ತ ಶೋಕದ ಉಡುಪನ್ನು ಧರಿಸಿಕೂರುವುದು ಸಾಧ್ಯವಿಲ್ಲ. ನಿಮಗೆ ಗೊತ್ತಲ್ಲ. ನನ್ನ ಮುದುಕಿಯೂ ತೀರಿಕೊಂಡಳು. ನಾನೇನು ಮಾಡಿದೆ? ಒಂದೆರಡು ತಿಂಗಳು ದುಃಖಿಸಿದೆ, ಗೋಳಾಡಿದೆ. ಅಲ್ಲಿಗೆ ಮುಗಿಯಿತು. ಆಕೆಗಾಗಿ ಅದಕ್ಕಿಂತ ಹೆಚ್ಚು ಗೋಳಾಡುವುದಾಗಲಿ, ನರಳಾಡುವುದಾಗಲಿ ಬೇಕಿರಲಿಲ್ಲ (ನಿಟ್ಟುಸಿರು ಬಿಡುವನು). ನೀವು ನಿಮ್ಮ ನೆರೆ-ಹೊರೆಯವರನ್ನು ಎಂದೂ ನೋಡುವುದೇ ಇಲ್ಲ- ನೀವು ಅವರ ಮನೆಗಳಿಗೆ ಹೋಗುವುದಿಲ್ಲ. ಅವರನ್ನೂ ನಿಮ್ಮ ಮನೆಗೆ ಕರೆಯುವುದಿಲ್ಲ. ಕ್ಷಮಿಸಿ, ಅಮ್ಮಾ, ಆದರೆ, ನಾವಿಲ್ಲಿ ಜೇಡರ ಹುಳುಗಳಂತೆ, ಹಗಲನ್ನೇ ಕಾಣದೆ ಬದುಕುತ್ತಿದ್ದೇವೆ. ಅಷ್ಟೇಕೆ, ಇಲಿಗಳು ನನ್ನ ಸಮವಸ್ತ್ರಗಳನ್ನು ಕೂಡ ಕಡಿದು ತೂತುಮಾಡಿವೆ. ಸುತ್ತ-ಮುತ್ತ ಒಳ್ಳೆಯ ಜನರಿಲ್ಲವೆಂದೇನೂ ಅಲ್ಲ-ಇಲ್ಲಿ ಸಾಕಷ್ಟು ಮಂದಿ ಒಳ್ಳೆಯ ಜನರಿದ್ದಾರೆ. ರಿಬ್ಲೋವೋದಲ್ಲಿ ಸೇನಾಪಡೆಯ ನೆಲೆಯಿದೆ - ಪಟ್ಟಿ ಕಟ್ಟಿಕೊಂಡ ತರುಣ ಅಧಿಕಾರಿಗಳನ್ನು ನೋಡುವುದು ಕಣ್ಣಿಗೊಂದು ಹಬ್ಬವೇ ಸರಿ - ದಂಡಿನ ಪಾಳೆಯದಲ್ಲಿ ಪ್ರತಿ ಶುಕ್ರವಾರ ರಾತ್ರಿ ನರ್ತನಗಳು, ಪ್ರತಿದಿನ ಹಿತ್ತಾಳೆ ವಾದ್ಯಗಳು......... ನನ್ನ ಎದೆಯೇ ಒಡೆದು ಹೋಗುತ್ತಿದೆ, ಅಮ್ಮಾ! ನೀವೊಬ್ಬ ತುಂಬು ಜವ್ವನದ ಚೆಂದುಳ್ಳಿ ಚೆಲುವೆ ಇದು ಬದುಕಿನಲ್ಲಿ ನೀವು ಸುಖ-ಸಂತೋಷಗಳನ್ನು ಅನುಭವಿಸಬೇಕಾದ ಕಾಲ. ನಿಮಗೆ ಗೊತ್ತಿದೆ, ಚೆಲುವು ಶಾಶ್ವತವಲ್ಲ - ಎಲ್ಲ ಕಾಲಕ್ಕೂ ಇರುವಂಥದಲ್ಲ. ಇನ್ನು ಹತ್ತು ವರ್ಷಗಳು ಕಳೆದನಂತರ ನೀವು ತರುಣ ಅಧಿಕಾರಿಗಳ ಕಣ್ಣುಗಳನ್ನು ಸೆಳೆದು, ಅವರನ್ನು ನಿಮ್ಮ ಕಿರುಬೆರಳಿನ ಸುತ್ತ ತಿರುಗಿಸಲು ಹವಣಿಸುತ್ತೀರಿ. ಆದರೆ, ಕಾಲ ಮಿಂಚಿ ಹೋಗಿರುತ್ತದೆ.

ಪೊಪೊವ : (ದೃಢವಾಗಿ) ಲೂಕ, ದಯವಿಟ್ಟು ಮತ್ತೊಮ್ಮೆ ಇಂತಹ ವಿಷಯಗಳನ್ನೆತ್ತಬೇಡ. ಯಜಮಾನರು ತೀರಿಕೊಂಡಾಗಲೇ ನನ್ನ ಬದುಕು ಅರ್ಥಹೀನವಾಯಿತೆಂಬುದನ್ನು ನೀನು ಬಲ್ಲೆ. ನಾನು ಇನ್ನೂ ಬದುಕಿದ್ದೇನೆ ಎಂದು ನೀನು ತಿಳಿದಿದ್ದೀಯೆ, ಅದು ತಪ್ಪು, ಈ ಶೋಕದ ಉಡುಪನ್ನು ಎಂದಿಗೂ ತೆಗೆಯದಿರಲು, ಹಗಲಿನ ಬೆಳಕನ್ನು ಮತ್ತೊಮ್ಮೆ ನೋಡದಿರಲು ಪ್ರತಿಜ್ಞೆ ಮಾಡಿದ್ದೇನೆ. ಕೇಳುತ್ತಿದ್ದೀಯಾ? ನಾನು ಆತನನ್ನು ಹೇಗೆ ಪ್ರೀತಿಸುತ್ತೇನೆ ಎಂಬುದು ಆತನ ಆತ್ಮಕ್ಕೆ ತಿಳಿಯಲಿ. ಹೌದು, ನನಗೆ ಗೊತ್ತು. ಆತ ಎಷ್ಟೋ ವೇಳೆ ನನ್ನೊಂದಿಗೆ ತರವಲ್ಲದ ರೀತಿಯಲ್ಲಿ ಕ್ರೂರವಾಗಿ, ಅಷ್ಟೇಕೆ, ನಿಷ್ಠೆಯಿಲ್ಲದೆಯೂ ನಡೆದುಕೊಂಡರೆಂಬುದು ನಿನಗೆ ತಿಳಿಯದ ಗುಟ್ಟೇನಲ್ಲ. ಆದರೆ, ನಾನು ಗಾಢವಾಗಿ ಪ್ರೀತಿಸಬಲ್ಲೆನೆಂಬುದನ್ನು ನಾನು ಆತನಿಗೆ ತೋರಿಸುತ್ತೇನೆ. ಅಲ್ಲಿ, ಅತ್ತಗೋರಿಯಲ್ಲಿ, ಆತ ತನ್ನ ಸಾವಿಗೆ ಮುಂಚೆ ನಾನು ಹೇಗಿದ್ದೇನೋ ಹಾಗೆಯೇ ಇರುವುದನ್ನು ಕಾಣುತ್ತಾರೆ.

ಲೂಕ: ಅಮ್ಮಾ, ಹಾಗೆ ಮಾತಾಡುವ ಬದಲು ತೋಟದಲ್ಲಿ ಸೊಗಸಾದ ವಾಯು ವಿಹಾರ ಮಾಡಿ - ಇಲ್ಲವೇ, ಟೋಬಿ ಅಥವಾ ಜೆಯಂಟ ಕುದುರೆಗೆ ಸಜ್ಜು ಹಾಕಿಸಿಕೊಂಡು, ನೆರೆಹೊರೆಯವರ ಮನೆಗಳಿಗೆ ಸುತ್ತಾಡಿಕೊಂಡು ಬನ್ನಿ.

ಪೊಪೊವ: ಅವರಿಗೆ ಟೋಬಿಯೆಂದರೆ ಬಲು ಪ್ರೀತಿ. ಅವರು ಕೊರ್ಚ್ಯಾಗಿನ ಅಥವಾ ವ್ಲಾಸೋಪ್ಸ ಮನೆಗಳಿಗೆ ಭೇಟಿಯಿತ್ತಾಗ ಅದನ್ನೇ ಸವಾರಿ ಮಾಡಿಕೊಂಡು ಹೋಗುತ್ತಿದ್ದರು. ಅವರು ಅದೆಷ್ಟು ಅದ್ಭುತವಾಗಿ, ಆಶ್ಚರ್ಯಕರವಾದ ರೀತಿಯಲ್ಲಿ ಸವಾರಿ ಮಾಡುತ್ತಿದ್ದರು! ಅವರು ಲಗಾಮನ್ನು ಎಳೆಯುವ ವೈಖರಿಯೋ! ಆಟೋಪದಿಂದ ಲಗಾಮನ್ನು ಎಳೆದಾಗ ಅವರು ಅದೆಷ್ಟು ಚೆನ್ನಾಗಿ ಕಾಣಿಸುತ್ತಿದ್ದರು! ನಿನಗೆ ನೆನಪಿದೆಯೇ! ಇಂದು ಟೋಬಿಗೆ ಒಂದು ಚೀಲ ತೋಕೆಗೋಧಿ (Oats)ಯನ್ನು ಹೆಚ್ಚಾಗಿ ಹಾಕುವಂತೆ ತಿಳಿಸು.

ಲೂಕ: ಹಾಗೆಯೇ ಆಗಲಿ, ಅಮ್ಮಾ

ಬಾಗಿಲ ಬಳಿ ಜೋರಾಗಿ ಕರೆಗಂಟೆ ಸದ್ದು.

ಪೊಪೊವ (ಬೆಚ್ಚಿಬಿದ್ದು) ಯಾರಿರಬಹುದು? ನಾನು ಯಾರನ್ನೂ ನೋಡುವುದಿಲ್ಲವೆಂದು ತಿಳಿಸು.

ಲೂಕ: ಸರಿ, ಅಮ್ಮಾ (ನಿರ್ಗಮಿಸುವನು)

II. ಶ್ರೀಮತಿ ಪೊಪೊವ ಒಂಟಿಯಾಗಿ

ಪೊಪೊವ: (ಭಾವಚಿತ್ರವನ್ನು ನೋಡುತ್ತ) ಪತಿರಾಯ ನಿಕೋಲಸ್, ನಾನು ಎಷ್ಟು ಚೆನ್ನಾಗಿ ಪ್ರೀತಿಸಬಲ್ಲೆ, ಕ್ಷಮಿಸಬಲ್ಲೆ ಎಂಬುದನ್ನು ನೀನು ನೋಡುವೆ. ನಾನು ಸಾಯುವವರೆಗೆ, ಈ ಬಡ ಹೃದಯ ನಿಂತು ಹೋಗುವವರೆಗೆ ನನ್ನಪ್ರೇಮ ಸಾಯುವುದಿಲ್ಲ. (ಕಣ್ಣೀರು ಸುರಿಸುತ್ತಲೇ ನಗುತ್ತ) ನಿನಗೆ ನಾಚಿಕೆಯಾಗುವುದಿಲ್ಲವೇ? ಇಲ್ಲಿ ನನ್ನಂತಹ ಒಳ್ಳೆ ಹುಡುಗಿ, ನನ್ನಂತಹ ಪುಟ್ಟ ನಿಷ್ಠಾವಂತ ಹೆಂಡತಿ ಮನೆಯಿಂದ ಹೊರಗೆ ಕಾಲಿಡದೆ, ಮಸಣಕ್ಕೆ ಹೋಗುವವರೆಗೂ ನಿನಗೆ ನಿಷ್ಠಳಾಗಿ ಕುಳಿತಿದ್ದಾಳೆ. ಆದರೆ, ನೀನು.......... ಡೊಳ್ಳು ಹೊಟ್ಟೆಯವನೇ....... ನಿನಗೆ ನಾಚಿಕೆಯಾಗುವುದಿಲ್ಲವೇ? ನನಗೆ ವಂಚನೆಮಾಡಿ, ಮನೆಯಲ್ಲಿ ರಂಪಮಾಡಿ, ವಾರಗಟ್ಟಲೆ ನನ್ನೊಬ್ಬಳನ್ನೇ ಒಂಟಿಯಾಗಿ ಬಿಟ್ಟು ಹೋಗುತ್ತಿದ್ದೆಯಲ್ಲ.........

III. ಶ್ರೀಮತಿ ಪೊಪೊವ ಮತ್ತು ಲೂಕ

ಲೂಕ: (ಚಿಂತಾಕ್ರಾಂತನಾಗಿ ಪ್ರವೇಶಿಸುತ್ತಾನೆ) ಅಮ್ಮಾ, ಯಾರೋ ನಿಮ್ಮನ್ನು ಕೇಳಿಕೊಂಡು ಬಂದಿದ್ದಾರೆ. ನಿಮ್ಮನ್ನು ಕಾಣಬೇಕಂತೆ.

ಪೊಪೊವ: ನನ್ನ ಪತಿ ತೀರಕೊಂಡಾಗಿನಿಂದ ನಾನು ಯಾರನ್ನು ನೋಡಿಲ್ಲವೆಂದು ತಿಳಿಸಲಿಲ್ಲವೇ?

ಲೂಕ: ತಿಳಿಸಿದೆ. ಆದರೆ, ಆತ ಕೇಳುತ್ತಿಲ್ಲ. ಬಹಳ ಮುಖ್ಯವಾದ ವಿಷಯ ಎಂದು ಹೇಳುತ್ತಾರೆ.

ಪೊಪೊವ: ನಾನು ಯಾರನ್ನೂ, ಯಾ-ರ-ನ್ನೂ ನೋಡುವುದಿಲ್ಲ.

ಲೂಕ: ನಾನು ಹೇಳಿದೆ. ಅವನೊಬ್ಬ ಶುದ್ಧ ಧೂರ್ತ. ಬೈಯುತ್ತ, ನನ್ನನ್ನು ಒತ್ತರಿಸಿ, ಭೋಜನ ಗೃಹಕ್ಕೆ ನುಗ್ಗಿದ. ಈಗ ಅವನು ಅಲ್ಲಿಯೇ ಕುಳಿತಿದ್ದಾನೆ.

ಪೊಪೊವ: (ಸಿಟ್ಟಿನಿಂದ) ಸರಿ, ಅವನನ್ನು ಒಳಕ್ಕೆ ಕಳುಹಿಸು. ಜನರು ಎಷ್ಟು ಒರಟರಪ್ಪ!

ಲೂಕ: ನಿರ್ಗಮಿಸುವನು.

ಪೊಪೊವ: ಎಷ್ಟು ಕಠಿಣ ಈ ಜನರು! ನನ್ನಿಂದ ಅವರಿಗೇನಾಗಬೇಕಿದೆ? ಅವರೇಕೆ ನನ್ನನ್ನು ನನ್ನ ಪಾಡಿಗೆ ಬಿಡರು? (ನಿಟ್ಟುಸಿರು ಬಿಡುತ್ತಾಳೆ) ನಾನು ಯಾವುದಾದರೊಂದು ಮಠಕ್ಕೆ ಸೇರಿಕೊಳ್ಳದೆ ಬೇರೆ ಮಾರ್ಗವಿಲ್ಲ. (ಯೋಚಿಸುತ್ತಾಳೆ) ಹೌದು, ಒಂದು ಮಠ......

IV. ಶ್ರೀಮತಿ ಪೊಪೊವ, ಲೂಕ ಮತ್ತು ಗ್ರಿಗೊರಿ ಸ್ಮಿರ್ನೋಫ್.

ಸ್ಮಿರ್ನೋಫ್ (ಪ್ರವೇಶಿಸುತ್ತಾನೆ, ಲೂಕನನ್ನು ಉದ್ದೇಶಿಸಿ) ಲೋ, ದಡ್ಡ! ಬಾಯಿ ಬಿಗಿ ಹಿಡಿ! ಅವಿವೇಕಿ ಕತ್ತೆ! (ಪೊಪೊವಳನ್ನು ಕಂಡು ಗಂಭೀರ ಮುಖಮುದ್ರೆ ತಾಳುತ್ತಾನೆ) ಅಮ್ಮಾ, ನನ್ನ ಪರಿಚಯ ಮಾಡಿಕೊಡಲೇ? ನಾನು ಗ್ರಿಗೊರಿ ಸ್ಮಿರ್ನೋಫ್, ನಿವೃತ್ತ ಫಿರಂಗಿದಳದ ಲೆಫ್ಟಿನೆಂಟ್. ಅತ್ಯಂತ ಮುಖ್ಯವಾದ ಒಂದು ವಿಷಯದ ಬಗ್ಗೆ ನಾನು ತಮಗೆ ತೊಂದರೆ ಕೊಡಬೇಕಾಗಿದೆ.

ಪೊಪೊವ (ಹಸ್ತ ಲಾಘವಕ್ಕೆ ಕೈಚಾಚದೆ): ನಿಮಗೆ ಏನು ಬೇಕು?

ಸ್ಮಿರ್ನೋಫ್: ನಾನು ನಿಮ್ಮ ದಿವಂಗತ ಪತಿಯವರ ಪರಿಚಿತ. ಎರಡು ವಿನಿಮಯ ಬಿಲ್‌ಗಳ ಮೇಲೆ ಅವರು ನನಗೆ ೧೨೦೦ರೂ ಬಿಲ್‌ಗಳನ್ನು ಕೊಡಬೇಕಾಗಿತ್ತು. ನಾಳೆ ನಾನು ಭೂಬ್ಯಾಂಕಿಗೆ ಬಡ್ಡಿ ಕಟ್ಟಬೇಕಾಗಿರುವುದರಿಂದ ಇವತ್ತು ನೀವು ನನಗೆ ಆ ಹಣವನ್ನು ಹಿಂದಿರುಗಿಸುವುದಾದರೆ ನಾನು ನಿಮಗೆ ಕೃತಜ್ಞ.

ಪೊಪೊವ: ಹನ್ನೆರಡು ನೂರು! ನನ್ನ ಯಜಮಾನರು ನಿಮ್ಮಿಂದೇಕೆ ಅಷ್ಟು ಹಣವನ್ನು ಸಾಲವಾಗಿ ಪಡೆದರು?

ಸ್ಮಿರ್ನೋಫ್: ಅವರು ನನ್ನಿಂದ ತೋಕೆಗೋಧಿ (Oats) ಯನ್ನು ಖರೀದಿಸುತ್ತಿದ್ದರು.

ಪೊಪೊವ (ನಿಟ್ಟುಸಿರು ಬಿಡುತ್ತಾ) ಲೂಕಾ, ಇವತ್ತು ಟೋಬಿಗೆ ಹೆಚ್ಚುವರಿಯಾಗಿ ಒಂದು ಚೀಲ ತೋಕೆಗೋಧಿಯನ್ನು ಹಾಕುವಂತೆ ತಿಳಿಸಲು ಮರೆಯಬೇಡ.

(ಲೂಕ ಹೊರಗೆ ಹೋಗುತ್ತಾನೆ). ನನ್ನ ಪತಿ ನಿಮಗೆ ಹಣ ಕೊಡಬೇಕಾಗಿದ್ದರೆ, ನಾನು ಅದನ್ನು ಅವಶ್ಯಕೊಡುತ್ತೇನೆ. ಆದರೆ, ಇಂದು ನನ್ನ ಬಳಿ ನಗದು ಹಣವಿಲ್ಲದಿರುವುದರಿಂದ, ನಾನು ತಮ್ಮ ಕ್ಷಮೆಕೋರಬೇಕಾಗಿದೆ. ನಗರಕ್ಕೆ ಹೋಗಿರುವ ನನ್ನ ಕಾರ್ಯಭಾರಿ ನಾಡಿದ್ದು ಬರುವವರಿದ್ದಾರೆ.

ಕೊಡಬೇಕಾಗಿರುವ ಹಣವನ್ನು ಪಾವತಿಸುವಂತೆ ಅವರಿಗೆ ತಿಳಿಸುತ್ತೇನೆ. ಆದರೆ, ಸದ್ಯಕ್ಕೆ ನಾನು ತಮ್ಮ ಕೋರಿಕೆಯನ್ನು ಈಡೇರಿಸುವ ಸ್ಥಿತಿಯಲ್ಲಿಲ್ಲ. ಮೊದಲಾಗಿ, ನನ್ನ ಪ್ರೀತಿಯ ಯಜಮಾನರು ತೀರಿಕೊಂಡು ಇಂದಿಗೆ ಸರಿಯಾಗಿ ಏಳು ತಿಂಗಳು. ನನ್ನ ಈಗಿನ ಮನಃಸ್ಥಿತಿಯಲ್ಲಿ ನನಗೆ ಹಣಕಾಸು ವ್ಯವಹಾರಗಳಲ್ಲಿ ತೊಡಗಲು ನನಗೆ ಸ್ವಲ್ಪವೂ ಇಷ್ಟವಿಲ್ಲ.

ಸ್ಮಿರ್ನೋಫ್: ನನ್ನ ಈಗಿನ ಮನಸ್ಥಿತಿಯಲ್ಲಿ ನಾಳೆ ನಾನು ಬಡ್ಡಿ ಪಾವತಿಮಾಡದಿದ್ದರೆ, ನಾನು ನಾಶವಾಗುತ್ತೇನೆ, ನನ್ನನ್ನು ಕತ್ತುಹಿಡಿದು ಹೊರಗೆ ತಳ್ಳುತ್ತಾರೆ. ನನ್ನ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ.

ಪೊಪೊವ: ನಿಮಗೆ ನಾಡಿದ್ದು ಹಣ ಸಿಗುತ್ತದೆ.

ಸ್ಮಿರ್ನೋಫ್: ನನಗೆ ಇವತ್ತೇ ಹಣ ಬೇಕು.

ಪೊಪೋವ: ವಿಷಾದಿಸುತ್ತೇನೆ. ಆದರೆ, ನಾನು ಇವತ್ತು ನಿಮಗೆ ಹಣ ಕೊಡಲಾರೆ.

ಸ್ಮಿರ್ನೋಫ್: ನಾನೂ ವಿಷಾದಿಸುತ್ತೇನೆ. ಆದರೆ, ನಾನು ನಾಡಿದ್ದಿನವರೆಗೆ ಕಾಯಲಾರೆ.

ಪೊಪೋವ: ಈಗ ನನ್ನ ಬಳಿ ಹಣ ಇಲ್ಲದಿರುವಾಗ ನಾನೇನು ಮಾಡಲಿ?

ಸ್ಮಿರ್ನೋಫ್: ಹಾಗಾದರೆ, ನೀವು ನನಗೆ ಹಣ ಕೊಡಲಾರಿರಿ?

ಪೊಪೊವ: ಇಲ್ಲ, ಕೊಡಲಾರೆ.

ಸ್ಮಿರ್ನೋಫ್: ಹುಂ....... ಅದೇ ನಿಮ್ಮ ಕಡೆಯ ಮಾತೇ?

ಪೊಪೋವ: ಹೌದು, ಅದೇ ಕಡೆಯ ಮಾತು

ಸ್ಮಿರ್ನೋಫ್: ಖಂಡಿತವಾಗಿಯೂ ನಿಮ್ಮ ಕಡೆಯ ಮಾತೇ?

ಪೊಪೋವ: ಖಂಡಿತವಾಗಿ ನನ್ನ ಕಡೆಯ ಮಾತು.

ಸ್ಮಿರ್ನೋಫ್: ನಿಮಗೆ ತುಂಬ ವಂದನೆಗಳು. ನಾವು ಅದನ್ನು ಗಮನಿಸಬೇಕು. ಜನರು ಕೇಳುತ್ತಾರೆ, ನಾನು ಏಕೆ ಶಾಂತಚಿತ್ತನೂ ಸ್ಥಿರಮನಸ್ಸಿನವನೂ ಆಗಿರುವುದಿಲ್ಲ ಎಂದು. ಈಗ ತಾನೆ ದಾರಿಯಲ್ಲಿ ಸಿಕ್ಕಿದ್ದ ಎಕ್ಸೈಸ್ ಅಧಿಕಾರಿ ನೀನು ಏಕೆ ಯಾವಾಗಲೂ ಜನರ ಮೇಲೆ ಸಿಟ್ಟು ಮಾಡಿಕೊಂಡು ರೇಗಾಡುತ್ತೀಯೆ ಎಂದು ಕೇಳಿದರು. ದೇವರೇ, ನಾನಾದರೂ ಏನು ಮಾಡಲಿ? ಸಿಟ್ಟು ಮಾಡಿಕೊಳ್ಳದೆ, ಮನಸ್ಸನ್ನು ಕೆಡಿಸಿಕೊಳ್ಳದೆ ಇರುವುದಾದರೂ ಹೇಗೆ? ನನಗೆ ದುಡ್ಡಿನ ಅಗತ್ಯ ತೀವ್ರವಾಗಿದೆ. ನಾನು ನಿನ್ನೆ ಬೆಳಗಾಗುತ್ತಿದ್ದಂತೆ ಮನೆ ಬಿಟ್ಟವನು ನನ್ನ ಎಲ್ಲ ಸಾಲಗಾರರ ಮನೆಗಳನ್ನು ಸುತ್ತಿದೆ. ಒಬ್ಬರಾದರೂ ಹಣ ಬಿಚ್ಚಲಿಲ್ಲ. ಅಲೆದಲೆದು ಸಾಕಾಗಿ, ದಣಿದು ಸೊಪ್ಪಾಗಿ, ಜಿಗಟ-ಜಿಕ್ಕಾಡುಗಳ ತುಂಬಿದ ಕಿರುಜಾಗವೊಂದರಲ್ಲಿ ವೋಡ್ಕಾಪೀಪಾಯಿಯ ಪಕ್ಕದಲ್ಲಿ ರಾತ್ರಿಯನ್ನು ಕಳೆಯಬೇಕಾಯಿತು. ಕಡೆಗೆ

ಇಲ್ಲಿಗೆ- ಮನೆಯಿಂದ ನಲವತ್ತು ಮೈಲಿ ದೂರ-ನನ್ನ ಹಣ ದೊರೆತೀತೆಂದು ಬಂದರೆ, ಇಲ್ಲಿ ನನಗೆ ''ಒಂದು ಮನಃಸ್ಥಿತಿ''ಯ ಸತ್ಕಾರ! ನನಗಾದರೂ ಹೇಗೆ ಸಿಟ್ಟು ಬರದಿದ್ದೀತು?

ಪೊಪೊವ: ನಾನಂತೂ ನನ್ನ ಪರಿಸ್ಥಿತಿಯನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ನಗರದಿಂದ ನನ್ನ ಕಾರ್ಯಭಾರಿ ಹಿಂದಿರುಗಿದಾಗ ನಿಮ್ಮ ಹಣ ನಿಮಗೆ ದೊರಕುತ್ತದೆ.

ಸ್ಮಿರ್ನೋಫ್: ನಾನು ಬಂದದ್ದು ನಿಮ್ಮನ್ನು ಕಾಣಲಿಕ್ಕೆ, ನಿಮ್ಮ ಕಾರ್ಯಭಾರಿಯನ್ನು ಕಾಣಲಿಕ್ಕಲ್ಲ! ಆಧೂರ್ತ-ನನ್ನ ಮಾತನ್ನು ಕ್ಷಮಿಸಿ- ನಿಮ್ಮ ಕಾರ್ಯಭಾರಿಯನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ?

ಪೊಪೊವ: ಮಾನ್ಯರೆ, ಕ್ಷಮಿಸಿ ನನಗೆ ಅಂತಹ ಭಾಷೆಯಾಗಲಿ, ಧಾಟಿಯಾಗಲಿ ಹಿಡಿಸುವದಿಲ್ಲ. ನಿಮ್ಮ ಮಾತುಗಳನ್ನು ಕೇಳುವುದು ನನ್ನಿಂದ ಸಾಧ್ಯವಿಲ್ಲ. (ಬೇಗನೆ ನಿರ್ಗಮಿಸುವಳು)

V. ಸ್ಮಿರ್ನೋಫ್ ಒಂಟಿಯಾಗಿ

ಸ್ಮಿರ್ನೋಫ್: ಅದೂ ಸರಿಯೆ! ''ಮನಃಸ್ಥಿತಿ''! ಆಕೆಯಗಂಡ ಇವತ್ತಿಗೆ ಏಳು ತಿಂಗಳ ಹಿಂದೆ ತೀರಿಕೊಂಡ! ನಾನು ಆ ಬಡ್ಡಿಯನ್ನು ಕಟ್ಟಬೇಕೋ, ಕಟ್ಟಬೇಡವೋ? ನಾನು ನಿನ್ನನ್ನು ಕೇಳುತ್ತೇನೆ: ನಾನು ಕಟ್ಟಬೇಕೋ, ಕಟ್ಟಬೇಡವೋ? ಸರಿ, ನಿನ್ನ ಯಜಮಾನ ತೀರಿಕೊಂಡ, ನೀನು ಒಂದು ಸ್ಥಿತಿಯಲ್ಲಿದ್ದೀಯೆ. ಮತ್ತೇನೇನೋ. ನಿನ್ನ ಕಾರ್ಯಭಾರಿ ಎಲ್ಲೋ ಹೋಗಿದ್ದಾನೆ. ಅವನ ಕಣ್ಣು ಇಂಗಿಹೋಗಲಿ! ಆದರೆ, ಈಗ ನಾನೇನು ಮಾಡಬೇಕು? ನಾನು ನನ್ನ ಸಾಲಗಾರರ ಕಣ್ಣಿಗೆ ಬೀಳದೆ ಮಂಗಮಾಯವಾಗಿ ಬಿಡಲೇ? ಅಥವಾ ಇಟ್ಟಿಗೆ ಗೋಡೆಗೆ ತಲೆ ಚಚ್ಚಿಕೊಳ್ಳಲೇ? ಗ್ರುಸ್ಟೇಫನನ್ನು ಕಾಣಲು ಹೋದರೆ, ಅವನು ಮನೆಯಲ್ಲಿಲ್ಲ. ಯೂರೇಷೆವಿಚ್ ತಲೆ ಮರೆಸಿಕೊಂಡಿದ್ದಾನೆ. ಕುರಿಟ್ಸಿನ ಜೊತೆ ದೊಡ್ಡ ಜಗಳಕಾದು, ಅವನನ್ನು ಕಿಟಕಿಯಿಂದಾಚೆ ಎಸೆದು ಬಂದಂತೆಯೇ ಆಯಿತು. ಮಜುಟೋವನಿಗೆ ಹೊಟ್ಟೆಬೇನೆ. ಈಕೆ ''ಒಂದು ಸ್ಥಿತಿಯಲ್ಲಿ'' ಇದ್ದಾಳೆ. ಒಬ್ಬ-ಮಗನೂ (ಜಾರಜ) ಸಾಲವನ್ನು ಮರುಪಾವತಿ ಮಾಡುವುದಿಲ್ಲ. ನಾನು ಅವರೊಂದಿಗೆ ತುಂಬ ಮೃದುವಾಗಿ, ಒಳ್ಳೊಳ್ಳೆ ಮಾತಾಡುವ ಮುದುಕಿಯಂತೆ, ನಡೆದುಕೊಳ್ಳುತ್ತಿರುವುದೇ, ನಾನು ದಾಕ್ಷಿಣ್ಯಪರನಾಗಿರುವುದೇ ಇದಕ್ಕೆ ಕಾರಣ. ಇರಲಿ ಸ್ವಲ್ಪ ನಿಧಾನಿಸು! ನಾನು ತೋರಿಸುತ್ತೇನೆ! ನೀವು ನನ್ನ ಜೊತೆ ಆಟವಾಡುತ್ತಿದ್ದೀರಿ. ಇನ್ನು ನಿಮ್ಮ ಆಟ ನಡೆಯುವುದಿಲ್ಲ, ಹಾಳಾದವರೆ! ನಾನು ಇಲ್ಲಿದ್ದೇನೆ, ಆಕೆ ಹಣವನ್ನು ಕೊಡುವವರೆಗೂ ಇಲ್ಲಿಯೇ ಇರುತ್ತೇನೆ. ಛೆ! ಇವತ್ತು ಎಂತಹ ಕೋಪದಲ್ಲಿದ್ದೇನೆ! ಸಿಟ್ಟಿನಿಂದ ಕಂಪಿಸುತ್ತಿದ್ದೇನೆ, ಉಸಿರು ಕಟ್ಟಿಕೊಂಡಂತಾಗುತ್ತಿದೆ! ಈ ಸಿಟ್ಟಿನಿಂದ ನನ್ನ ಆರೋಗ್ಯವೇ ಕೆಟ್ಟುಹೋದಂತಿದೆ. (ಕರೆಯುತ್ತಾನೆ) ಎಯ್, ಯಾರಲ್ಲಿ?

VI. ಸ್ಮಿರ್ನೋಫ್ ಮತ್ತು ಲೂಕ

ಲೂಕ: (ಪ್ರವೇಶಿಸುತ್ತಾನೆ) ನಿಮಗೇನು ಬೇಕು?

ಸ್ಮಿರ್ನೋಫ್: ಸ್ವಲ್ಪಕ್ವಾಸ್ ಅನ್ನೋ, ಇಲ್ಲವೆ, ನೀರನ್ನೋ ತಾ.

ಲೂಕ ನಿರ್ಗಮಿಸುವನು.

ಸ್ಮಿರ್ನೋಫ್: ಎಂತಹ ತರ್ಕವಿದು! ಒಬ್ಬಾನೊಬ್ಬ ವ್ಯಕ್ತಿಗೆ ಹಣದ ಅಗತ್ಯ ಎಷ್ಟು ತೀವ್ರವಾಗಿದೆಯೆಂದರೆ ಆತ ನೇಣು ಹಾಕಿಕೊಳ್ಳಲೂ ಸಿದ್ಧನಾಗಿದ್ದಾನೆ. ಆಕೆಯಾದರೋ ಹಣವನ್ನು ಕೊಡುವುದಿಲ್ಲ. ಕಾರಣ; ಆಕೆಗೆ ಹಣಕಾಸು ವ್ಯವಹಾರಗಳಲ್ಲಿ ತೊಡಗಲು ಮನಸ್ಸಿಲ್ಲ. ಅಹಾ! ಎಂತಹ ವಿಶಿಷ್ಟ ಸ್ತ್ರೀತರ್ಕ! ಮಹಿಳೆಯರೊಂದಿಗೆ ಮಾತನಾಡಲು ಎಂದೂ ಇಷ್ಟಪಡಲಿಲ್ಲ, ಎಂದೂ ಇಷ್ಟಪಡುವುದೂ ಇಲ್ಲ. ಒಬ್ಬ ಮಹಿಳೆಯೊಂದಿಗೆ ಮಾತನಾಡುವದಕ್ಕಿಂತ ಸಿಡಿಮದ್ದಿನ ಒಂದು ಸಣ್ಣ ಪೀಪಾಯಿಯ ಮೇಲೆ ಕುಳಿತುಕೊಳ್ಳುವುದು ಎಷ್ಟೋ ಮೇಲು. ಅಹಾ! ಸ್ತ್ರೀಜಾತಿಯನ್ನು ಕಂಡರೆ ನನ್ನ ಮೈಯೆಲ್ಲ ಉರಿದು ಹೋಗುತ್ತದೆ, ನನ್ನ ಮೈಯೆಲ್ಲ ಕಂಪಿಸುತ್ತದೆ ಓರ್ವಭಾವಜೀವಿ ರಮಣಿ ಕಣ್ಣಿಗೆ ಬಿದ್ದರೆ ಸಾಕು, ನನಗೆ ಕಾಲುಗಳು ಕಂಪಿಸುವಷ್ಟು ಸಿಟ್ಟು ಉಕ್ಕೇರಿ ಬರುತ್ತದೆ, ಮತ್ತೊಬ್ಬರ ಸಹಾಯಕೋರಿ ಕಿರಿಚಿಕೊಳ್ಳುವಂತಾಗುತ್ತದೆ.

VII. ಸ್ಮಿರ್ನೋಫ್ ಮತ್ತು ಲೂಕ,

ಲೂಕ: (ಪ್ರವೇಶಿಸುತ್ತಾನೆ ಮತ್ತು ಆತನಿಗೆ ನೀರು ಕೊಡುತ್ತಾನೆ) ಅಮ್ಮಾವರು ಅಸ್ವಸ್ಥರಾಗಿದ್ದಾರೆ. ಅವರು ಯಾರನ್ನೂ ನೋಡುವುದಿಲ್ಲ,

ಸ್ಮಿರ್ನೋಫ್: ತೊಲಗಾಚೆ,

ಲೂಕ ನಿರ್ಗಮಿಸುತ್ತಾನೆ

ಸ್ಮಿರ್ನೋಫ್: ಅಸ್ವಸ್ಥತೆಯಂತೆ, ಯಾರನ್ನೂ ನೋಡುವುದಿಲ್ಲವಂತೆ! ಇರಲಿ, ನೀನು ನನ್ನನ್ನು ನೋಡಲೇಬೇಡ! ನೀನು ಹಣವನ್ನು ಕೊಡುವವರೆಗೂ ಇಲ್ಲಿಯೇ ನನ್ನ ಠಿಕಾಣಿ! ನೀನು ಒಂದು ವಾರ ಅಸ್ವಸ್ಥಳಾಗಿದ್ದರೆ, ನಾನು ಒಂದು ವಾರ ಇಲ್ಲಿಯೇ ಇರುತ್ತೇನೆ. ನೀನು ಒಂದು ವರ್ಷ ಅಸ್ವಸ್ಥಳಾಗಿದ್ದರೆ ನಾನು ಒಂದು ವರ್ಷ ಇಲ್ಲಿಯೇ ಉಳಿಯುತ್ತೇನೆ. ಮುದಿ ಹುಡುಗಿ, ನಿನಗೆ ತೋರಿಸುತ್ತೇನೆ, ನಿನಗೆ ಪಾಠ ಕಲಿಸುತ್ತೇನೆ. ನೀನು ನಿನ್ನ ಕಪ್ಪು ಉಡುಗೆ ಮತ್ತು ಕೆನ್ನೆಯ ಗುಳಿಗಳಿಂದ ನನ್ನನ್ನು ಮರುಳು ಮಾಡಿ, ಉಪಾಯದಿಂದ ತಪ್ಪಿಸಿಕೊಳ್ಳಲಾರೆ. ಈ ಕೆನ್ನೆಗುಳಿಗಳ ವಿಷಯವೆಲ್ಲ ನಮಗೆ ಕರತಲಾಮಲಕ! (ಕಿಟಕಿಯಿಂದ ಕೂಗುತ್ತಾನೆ) ಏ, ಸೆಮಿಯೋನ, ಕುದುರೆಗಳ ಸಜ್ಜನ್ನು ಬಿಚ್ಚು. ನಾವು ಇನ್ನೂ ಸ್ವಲ್ಪ ಕಾಲ ಇಲ್ಲಿಂದ ಹೊರಡುವಂತಿಲ್ಲ. ನಾನು ಇಲ್ಲಿಯೇ ಇರುತ್ತೇನೆ. ಕುದುರೆಗಳಿಗೆ ಒಂದಿಷ್ಟು ತೋಕೆಗೋಧಿಯನ್ನು ಹಾಕುವಂತೆ ಲಾಯದವರಿಗೆ ಹೇಳು. ಲೋ, ಮುಟ್ಠಾಳ, ನೋಡು, ಅದು ಮತ್ತೆ ಲಗಾಮಿನಲ್ಲಿ ಸಿಕ್ಕಿಹಾಕಿಕೊಂಡಿದೆ (ಅವನನ್ನು ಅಣಕಿಸುತ್ತಾನೆ) ''ಪರವಾಯಿಲ್ಲ, ನಿನಗೆ ಕೊಡುತ್ತೇನೆ, ಪರವಾಯಿಲ್ಲ'' (ಕಿಟಕಿಯಿಂದ ದೂರ ಸರಿಯುತ್ತಾನೆ) ಬೇಸರ, ಬೇಜಾರು ಈ ತಡೆಯಲಾಗದ ಸೆಖೆ, ಯಾರೂ ಹಣವನ್ನು ಬಿಚ್ಚದಿರುವುದು, ರಾತ್ರಿಯೆಲ್ಲ ನಿದ್ದೆಕೆಟ್ಟದ್ದು, ಈ ಮಹಿಳಾ ಮಣಿ ಶೋಕಾಚರಣೆಯಲ್ಲಿ ತನ್ನ ''ಸ್ಥಿತಿಗಳಲ್ಲಿ'' ಇರುವುದು. ಅಹಾ! ತಲೆನೋವು. ಬಹುಶಃ ಈಗ ನನಗೆ ಬೇಕಾಗಿರುವುದು ಒಂದು ಗುಟುಕು ವೋಡ್ಕಾ ಯಾಕಾಗಬಾರದು? (ಕರೆಯುತ್ತಾನೆ) ಏ, ಯಾರಲ್ಲಿ?

ಲೂಕ: (ಪ್ರವೇಶಿಸುತ್ತಾನೆ) ಏನು ಬೇಕು ನಿಮಗೆ?

ಸ್ಮಿರ್ನೋಫ್: ಒಂದು ಲೋಟ ವೋಡ್ಕಾ ತೆಗೆದುಕೊಂಡ ಬಾ.

ಲೂಕ ನಿರ್ಗಮಿಸುತ್ತಾನೆ.

ಸ್ಮಿರ್ನೋಫ್ (ಕುಳಿತು ತನ್ನನ್ನು ತಾನು ನೋಡಿಕೊಳ್ಳುತ್ತಾನೆ) ಅಹಾ, ಇದು ಒಳ್ಳೆಯ ದೃಶ್ಯವೇ! ನನ್ನ ವೇಷವೋ! ಮೈ ತುಂಬ ಧೂಳು, ಕೊಳಕಾದ ಬೂಟ್ಸ, ಸ್ನಾನವಿಲ್ಲ. ಸಿಕ್ಕಾಪಟ್ಟೆ ಕೆದರಿದ ತಲೆಗೂದಲು, ವೇಸ್ಟ ಕೋಟಿನ ಮೇಲೆಲ್ಲ ಹುಲ್ಲಿನ ತುಣುಕುಗಳು ಆ ಪುಟ್ಟ ಮಹಿಳೆ ನನ್ನನ್ನು ನಿಜವಾದ ಡಕಾಯಿತನೆಂದೇ ಭಾವಿಸಿರಬೇಕು. (ಆಕಳಿಸುತ್ತಾನೆ). ಈ ವೇಷದಲ್ಲಿ ಯಾರೊಬ್ಬರ ಮನೆಯ ದಿವಾನ ಖಾನೆಯನ್ನು ಪ್ರವೇಶಿಸುವದೂ ಸರಿಯಲ್ಲ. ಇರಲಿ. ನಾನು ಇಲ್ಲಿಗೆ ಬಂದಿರುವುದು ಸಾಲಿಗನಾಗಿ, ಈ ಮನೆಯ ಅತಿಥಿಯಾಗಿ ಅಲ್ಲ. ಸಾಲಿಗರಿಗೆ ವಿಶೇಷ ಮರ್ಯಾದೆ, ಸ್ಥಾನ ಮಾನಗಳೇನೂ ಇಲ್ಲವಷ್ಟೆ.

ಲೂಕ: (ಪ್ರವೇಶಿಸುತ್ತಾನೆ. ಆತನಿಗೆ ವೋಡ್ಕಾ ಪಾನೀಯವನ್ನು ನೀಡುತ್ತಾನೆ) ಸ್ವಾಮಿ, ನೀವು ತುಸು ಅತಿಯಾದ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದೀರಿ.

ಸ್ಮಿರ್ನೋಫ್: (ಸಿಟ್ಟಿನಿಂದ) ಏನೆಂದೆ?

ಲೂಕ: ಅ.... ಅ.... ಏನೂ ಇಲ್ಲ .... ನಾನು ಸುಮ್ಮನೆ.....

ಸ್ಮಿರ್ನೋಫ್: ನೀನು ಯಾರೊಡನೆ ಮಾತನಾಡುತ್ತಿದ್ದೀಯೆ, ತಿಳಿದಿದೆಯಾ? ಮುಚ್ಚು ಬಾಯಿ.

ಲೂಕ (ಸ್ವಗತ): ನಾವು ಇದೆಂತಹ ಅನಿಷ್ಟ ಪೇಚಾಟದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ? ದೆವ್ವವೇ ಇವನನ್ನು ನೇರವಾಗಿ ಕಳಿಸಿದಂತಿದೆ.

ಲೂಕ ನಿರ್ಗಮಿಸುವನು.

ಸ್ಮಿರ್ನೋಫ್: ಓಹೋ, ಎಂತಹ ಸಿಟ್ಟು ಬಂದಿದೆ, ನನಗೆ! ಇಡೀ ಜಗತ್ತನ್ನೇ ಪುಡಿ-ಪುಡಿ ಮಾಡಿಬಿಡುವಷ್ಟು ಸಿಟ್ಟು! ನನಗೇ ಸ್ವಾಸ್ಥವಿಲ್ಲ. (ಕಿರಿಚುತ್ತಾರೆ) ಹೇ, ಯಾರಲ್ಲಿ?

VIII. ಶ್ರೀಮತಿ ಪೊಪೊವ ಮತ್ತು ಸ್ಮಿರ್ನೋಫ್

ಪೊಪೊವ: (ದೃಷ್ಟಿಯನ್ನು ಕೆಳಗೆ ತಗ್ಗಿಸಿ ಪ್ರವೇಶಿಸುವಳು) ಮಾಸ್ಯರೆ, ನನ್ನ ಏಕಾಂತದಲ್ಲಿ ನನಗೆ ಜನರ ಧ್ವನಿಗಳ ಪರಿಚಯವೇ ತಪ್ಪಿ ಹೋಗಿದೆ. ನನ್ನಿಂದ ಕೂಗಾಟವನ್ನು ಸಹಿಸಿಕೊಳ್ಳಲಾಗುವುದಿಲ್ಲ. ನನಗೆ ತೊಂದರೆ ಕೊಡ ಬೇಡಿ. ಇದು ತಮ್ಮಲ್ಲಿ ನನ್ನ ಅತ್ಯಂತ ಪ್ರಾಮಾಣಿಕ ಬೇಡಿಕೆ.

ಸ್ಮಿರ್ನೋಫ್: ನನಗೆ ಹಣವನ್ನು ಕೊಟ್ಟು ಬಿಡಿ. ನಾನು ಹೊರಟು ಹೋಗುತ್ತೇನೆ.

ಪೊಪೊವ: ನಾನು ತಮಗೆ ಸರಳ ಭಾಷೆಯಲ್ಲಿ ತಿಳಿಸಿದ್ದೇನೆ. ಈ ಕ್ಷಣದಲ್ಲಿ ನನ್ನ ಹತ್ತಿರ ನಗದು ಹಣ ಇಲ್ಲ, ನಾಡಿದ್ದಿನವರೆಗೆ ಕಾಯಿರಿ.

ಕ್ರಿಸ್ಟೋಫ್: ನಾನೂ ತಮಗೆ ಸರಳ ಭಾಷೆಯಲ್ಲಿಯೆ ತಿಳಿಸಿದ್ದೇನೆ; ನನಗೆ ಹಣ ಬೇಕಾಗಿರುವುದು ಇವತ್ತು, ನಾಡಿದ್ದಲ್ಲ. ಇಂದು ನೀವು ಹಣ ಕೊಡದಿದ್ದರೆ ನಾಳೆ ನಾನು ನೇಣು ಹಾಕಿಕೊಳ್ಳಬೇಕಾಗುತ್ತದೆ.

ಪ್ರೊಪ್ರೊವ: ಆದರೆ, ನಾನೇನು ಮಾಡಲಿ, ನನ್ನ ಬಳಿ ಹಣ ಇಲ್ಲದಿರುವಾಗ? ಎಂತಹ ವಿಚಿತ್ರ ವ್ಯಕ್ತಿ ನೀವು!

ಕ್ರಿಸ್ಟೋಫ್: ಹಾಗಾದರೆ, ನೀವು ಈಗ ನನಗೆ ಹಣಕೊಡುವುದಿಲ್ಲ ಅಲ್ಲವೋ?

ಪ್ರೊಪ್ರೊವ: ನಾನು ಕೊಡಲಾರೆ.

ಕ್ರಿಸ್ಟೋಫ್: ಹಾಗಾದರೆ, ನೀವು ಹಣವನ್ನು ಕೊಡುವವರೆಗೆ ನಾನು ಇಲ್ಲಿಯೇ ಇರುತ್ತೇನೆ. (ಕುಳಿತುಕೊಳ್ಳುವನು) ನಾಡಿದ್ದು ನೀವು ನನಗೆ ಹಣವನ್ನು ಕೊಡುವಿರಿ, ತಾನೇ? ಸರಿ ಹಾಗಾದರೆ, ನಾನು ನಾಡಿದ್ದಿನವರೆಗೆ ಇಲ್ಲಿ ಹೀಗೆಯೇ ಇರುತ್ತೇನೆ. ಹೀಗೆ ಇಲ್ಲಿ ಕುಳಿತಿರುತ್ತೇನೆ. (ಮೇಲಕ್ಕೆ ನೆಗೆಯುವನು) ನಾನು ನಿಮ್ಮನ್ನು ಕೇಳುವುದಿಷ್ಟು: ನಾಳೆ ನಾನು ಬಡ್ಡಿಯನ್ನು ಪಾವತಿ ಮಾಡಬೇಕೋ, ಬೇಡವೋ? ಬಹುಶಃ ನೀವು ನಾನು ತಮಾಷೆ ಮಾಡುತ್ತಿದ್ದೇನೆಂದು ತಿಳಿದಿರುವಂತಿದೆ.

ಪ್ರೊಪ್ರೊವ: ಮಾನ್ಯರೆ, ದಯವಿಟ್ಟು ಕೂಗಾಡ ಬೇಡಿ. ಇದು ಕುದುರೆ ಲಾಯವಲ್ಲ.

ಕ್ರಿಸ್ಟೋಫ್: ನಾನು ಕುದುರೆ ಲಾಯದ ಬಗ್ಗೆ ಕೇಳುತ್ತಿಲ್ಲ. ನಾನು ಕೇಳುತ್ತಿರುವುದು: ನಾನು ನಾಳೆ ಬಡ್ಡಿಯನ್ನು ಕಟ್ಟಬೇಕೇ, ಬೇಡವೇ ಎಂದು.

ಪ್ರೊಪ್ರೊವ: ಕುಲೀನೆಯೊಬ್ಬರ ಸಹವಾಸದಲ್ಲಿ ಹೇಗೆ ನಡೆದುಕೊಳ್ಳ ಬೇಕೆಂಬುದು ನಿಮಗೆ ಗೊತ್ತಿಲ್ಲ.

ಕ್ರಿಸ್ಟೋಫ್: ಓಹೋ, ಕುಲೀನೆಯೊಬ್ಬರ ಸಹವಾಸದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದು ನನಗೆ ಗೊತ್ತೇ ಇದೆ.

ಪ್ರೊಪ್ರೊವ: ಇಲ್ಲ, ನಿಮಗೆ ಗೊತ್ತಿಲ್ಲ. ನೀವು ನಡತೆಗೆಟ್ಟ ಒರಟು ಮನುಷ್ಯ. ಮರ್ಯಾದಸ್ತರು ಒಬ್ಬ ಕುಲೀನ ಮಹಿಳೆಯೊಂದಿಗೆ ಹಾಗೆ ಮಾತನಾಡುವುದಿಲ್ಲ.

ಕ್ರಿಸ್ಟೋಫ್: ಸರಿ, ಇದೊಂದು ಸೋಜಿಗ! ಹಾಗಾದರೆ, ನಾನು ನಿಮ್ಮೊಡನೆ ಹೇಗೆ ಮಾತನಾಡಬೇಕೆಂದು ಇಷ್ಟ ಪಡುತ್ತೀರಿ? ಫ್ರೆಂಚ್ ಭಾಷೆಯಲ್ಲಿಯೆ? (ಸಿಟ್ಟಿನಿಂದ ಮತ್ತು ನಾಟಕೀಯವಾಗಿ) ಮ್ಯಾಡಂ, ನೀವು ನನ್ನ ಹಣವನ್ನು ಹಿಂದಿರುಗಿಸುವುದಿಲ್ಲವೆಂದು ನನಗೆ ಎಷ್ಟು ಸಂತೋಷವಾಗಿದೆ ಎಂದೇ? ನಿಮ್ಮನ್ನು ಗೋಳುಹೊಯ್ದುಕೊಳ್ಳುತ್ತಿರುವುದಕ್ಕಾಗಿ ಕ್ಷಮಿಸಿ ಇಂದು ಹವಾಮಾನ ಎಷ್ಟು ಸೊಗಸಾಗಿದೆ! ಈ ಕಪ್ಪು ಉಡುಪು ನಿಮಗೆ ಎಷ್ಟು ಚೆನ್ನಾಗಿ ಒಪ್ಪುತ್ತದೆ! (ವಿಪರೀತವಾಗಿ ತಲೆಬಾಗಿಸುತ್ತಾನೆ)

ಪೊಪೊವ: ತಿಳಿಗೇಡಿ ಮತ್ತು ನಡತೆಗೆಟ್ಟವ.

ಸ್ಮಿರ್ನೋಫ್: (ಆಕೆಯನ್ನು ಅಣಕಿಸುತ್ತ) ತಿಳಿಗೇಡಿ ಮತ್ತು ನಡತೆಗೆಟ್ಟವ! ಒಬ್ಬ ಕುಲೀನೆಯ ಸಹವಾಸದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದು ನನಗೆ ಗೊತ್ತಿಲ್ಲ! ಅಮ್ಮಾ, ನಾನು ನನ್ನ ಕಾಲದಲ್ಲಿ ಎಷ್ಟು ಮಹಿಳೆಯರನ್ನು ನೋಡಿದ್ದೇನೆಂದರೆ, ನೀವು ಅಷ್ಟು ಗುಬ್ಬಚ್ಚಿಗಳನ್ನು ಕೂಡ ನೋಡಿರಲಾರಿರಿ. ಅವರಿಗಾಗಿ ನಾನು ಮೂರು ದ್ವಂದ್ವ ಯುದ್ಧಗಳನ್ನು ಮಾಡಿದ್ದೇನೆ. ಒಂಭತ್ತು ಮಂದಿ ಮಹಿಳೆಯರು ನನಗೆ ಪ್ರಣಯ ದ್ರೋಹಮಾಡಿದ್ದಾರೆ. ಹೌದಮ್ಮಾ. ಒಂದು ಕಾಲದಲ್ಲಿ ನಾನು ಹುಚ್ಚನಂತೆ ಅವರ ಸುತ್ತ ಜಂಬದಿಂದ ನಡೆದಾಡುತ್ತಿದ್ದೆ, ಅವರನ್ನು ಪೂಜಿಸುತ್ತಿದ್ದೆ, ಮುದ್ದಿಸುತ್ತಿದ್ದೆ, ಹೊಗಳುತ್ತಿದ್ದೆ, ತಲೆಬಾಗಿ ಗೌರವಿಸುತ್ತಿದ್ದೆ. ಅವರಿಗಾಗಿ ನಾನು ನರಳಿದೆ, ನಿಟ್ಟುಸಿರು ಬಿಟ್ಟೆ, ಕರಗಿದೆ, ತಳಮಳದಿಂದ ಕುದಿದೆ. ನಾನು ಅವರನ್ನು ಗಾಢಾನುರಕ್ತನಾಗಿ, ಉನ್ಮತ್ತನಾಗಿ, ಎಲ್ಲ ವಿಧಗಳಿಂದಲೂ ಪ್ರೀತಿಸಿದೆ. ಹಾಳಾಗಲಿ! ಮಹಿಳಾ ವಿಮೋಚನೆಯ ಬಗ್ಗೆ ಹರಟೆಮಲ್ಲನಂತೆ ವಟಗುಟ್ಟಿದೆ. ನನ್ನ ಪ್ರೀತಿಪಾತ್ರರಿಗಾಗಿ, ನನ್ನ ಅರ್ಧ ಐಶ್ವರ್ಯವನ್ನೆ ಕಳೆದೆ. ಆದರೆ, ಈಗ ಇಡೀ ಜಗತ್ತನ್ನೇ ಕೊಡುವೆನೆಂದರೂ ಇಲ್ಲ! ಈಗ ನನ್ನನ್ನು ಮರುಳು ಮಾಡುವುದು ಸಾಧ್ಯವಿಲ್ಲ. ನನಗೆ ಸಾಕಾಗಿದೆ, ನಾನು ಸಾಕಷ್ಟು ಅನುಭವಿಸಿದ್ದೇನೆ. ಭಾವೋದ್ದೀಪಕ ಕಪ್ಪು ಕಣ್ಣುಗಳು, ಕೆಂಪು ತುಟಿಗಳು, ಗುಳಿಗಳಿಂದ ಕೂಡಿದ ಕೆನ್ನೆಗಳು, ಬೆಳದಿಂಗಳು, ಮೃದುವಾದ ಪಿಸುನುಡಿಗಳು, ಮೆಲ್ಲನೆಯನಿಟ್ಟುಸಿರು - ಇವಿಷ್ಟಕ್ಕೂ ನಾನು ಒಂದು ಬಿಡಿಕಾಸನ್ನೂ ಕೊಡುವುದಿಲ್ಲ. ಅಮ್ಮಾ, ಈ ಸಹವಾಸವನ್ನು - ನಿಮ್ಮೊಬ್ಬರನ್ನು ಹೊರತುಪಡಿಸಿ, ತರುಣಿಯರಾಗಲಿ, ವೃದ್ಧೆಯರಾಗಲಿ, ಎಲ್ಲ ಮಹಿಳೆಯರೂ ಒಯ್ಯಾರಿಗಳು, ಮತ್ಸರಿಗಳು, ಒಣಹೆಮ್ಮೆ, ಪ್ರತಿಷ್ಠೆಗಳಿಂದ ಬೀಗುವವರು, ಅಲ್ಪ ಮನಸ್ಸಿನವರು, ಹೃದಯ ಹೀನರು, ಸಿಟ್ಟೆಬ್ಬಿಸುವಷ್ಟು ಅತಾರ್ಕಿಕ, ಅಸಮಂಜಸ ಪ್ರಲಾಪದವರು, ಸುದ್ದಿಮಲ್ಲಿಯರು ಮತ್ತು ಹುಟ್ಟಾ ಸುಳ್ಳಿಯರು. (ತನ್ನ ಹಣೆಯನ್ನು ತಟ್ಟಿಕೊಳ್ಳುತ್ತ) ನಾನು ಅಷ್ಟು ಬಿಚ್ಚು ಮನಸ್ಸಿನಿಂದ ಮಾತ್ನಾಡುತ್ತಿರುವುದಕ್ಕಾಗಿ ಕ್ಷಮಿಸಿ, ಹಾಗೆ ನೋಡಿದರೆ, ಓರ್ವ ಮಹಿಳಾ ತತ್ವಜ್ಞಾನಿಯೊಂದಿಗೆ ಹೋಲಿಸಿದರೆ, ಯಾವುದೇ ಗುಬ್ಬಚ್ಚಿಯೂ ಒಂದು ಅಧಿದೇವತೆ! ಈ ಭಾವ ಜೀವಿ ಸ್ತ್ರೀಕುಲದ ಓರ್ವಳನ್ನು ಓರ್ವ ಮಸ್ಲಿನ್ ಧಾರಿ ಅಲೌಕಿಕ ಉಪದೇವತೆಯನ್ನು ಕಂಡಾಗ ನೀವು ಆನಂದಪರವಶರಾಗಿಬಿಡುತ್ತೀರಿ. ಆಕೆಯ ಆತ್ಮವನ್ನು ಒಳಹೊಕ್ಕುನೋಡಿ, ನಿಮಗೆ ಕಾಣುವುದು ಒಂದು ಕಿರುಬ ವಿಶ್ವಾಸ ಘಾತಕ ಸುಲಿಗೆಕೋರ. (ಕುರ್ಚಿಯ ಹಿಂಭಾಗವನ್ನು ಬಿಗಿಯಾಗಿ ಹಿಡಿಯುತ್ತಾನೆ. ಕುರ್ಚಿಸೀಳಿ ಮುರಿದು ಬೀಳುತ್ತದೆ.) ಸಿಟ್ಟನ್ನು ಕೆರಳಿಸುವ ಸಂಗತಿಯೆಂದರೆ, ಯಾವುದೋ ಕಾರಣಕ್ಕಾಗಿ ಈ ಕಿರುಬ ಪ್ರೀತಿಸುವುದು ತನ್ನ ವಿಶೇಷ ಸಾಮರ್ಥ್ಯ, ಹಕ್ಕು ಮತ್ತು ಏಕಸ್ವಾಮ್ಯವೆಂದು ಭಾವಿಸುತ್ತದೆ! ಅದೆಲ್ಲ ಹಾಳಾಗಲಿ ಒಬ್ಬ ಮಹಿಳೆಯ ಮುದ್ದಿನ ಸಾಕು ನಾಯಿಯೊಂದನ್ನು ಬಿಟ್ಟು, ಮತ್ತಾವುದಕ್ಕೆ ಆಗಲಿ ಕಿಂಚಿತ್ ಪ್ರೀತಿಯನ್ನು ತೋರಿಸಬಲ್ಲಳೆಂದಾದರೆ, ಅಗೋ ಅಲ್ಲಿರುವ ಮೊಳೆಗೆ ನನ್ನನ್ನು ತಲೆಕೆಳಗುಮಾಡಿ ನೇಣುಹಾಕಿಬಿಡಿ. ಆಕೆ ಪ್ರೀತಿಸುವಾಗ ಮಾಡುವುದಾದರೂ ಏನು? ಬೂಟಾಟಿಕೆಯ ರಾಗೋದ್ರೇಕ ತೋರಿಸುವುದು ಮತ್ತು ಗೋಳಾಡುವುದು ಅಷ್ಟೇ! ಪುರುಷನು ಕಷ್ಟ-ನಷ್ಟಗಳನ್ನು ಅನುಭವಿಸಿ ತ್ಯಾಗ ಮಾಡಿದರೆ ಆಕೆ ಪ್ರೀತಿಸುತ್ತಾಳೆ ಲಂಗವನ್ನು ಮುರಮುರ ಶಬ್ದ ಬರುವಂತೆ ಅಲ್ಲಾಡಿಸುತ್ತ, ತನ್ನ ಕಿರುಬೆರಳ

ಸುತ್ತ ಆತನನ್ನು ತಿರುಗಿಸಲೆತ್ನಿಸುತ್ತ! ಇದೇ ಅವಳ ಪ್ರೀತಿ! ಮಹಿಳೆಯಾಗಿರುವ ದೌರ್ಭಾಗ್ಯ ನಿಮ್ಮದಾದ್ದರಿಂದ, ನೀವು ನಿಮ್ಮ ಸ್ವಂತ ಸ್ವಭಾವದಿಂದಲೇ ಸ್ತ್ರೀಸ್ವಭಾವದ ಬಗ್ಗೆ ತಿಳಿದಿರಬೇಕು. ನಿಜವಾಗಿ ಹೇಳಿ: ನೀವು ಎಂದಾದರೂ ಓರ್ವ ಪ್ರಾಮಾಣಿಕಳೂ, ನಿಷ್ಠಾವಂತಳೂ, ಸ್ಥಿರಚಿತ್ತಳೂ ಆದ ಮಹಿಳೆಯನ್ನು ಕಂಡಿದ್ದೀರಾ? ಇಲ್ಲ, ನೀವು ಕಂಡಿಲ್ಲ. ವಯಸ್ಸಾದವರು ಮತ್ತು ಕುರೂಪಿಗಳಾದವರು ಮಾತ್ರ ನಿಷ್ಠಾವಂತರೂ ಸ್ಥಿರಚಿತ್ತರೂ ಆಗಿರುತ್ತಾರೆ. ಕೊಂಬಿರುವ ಬೆಕ್ಕನ್ನಾದರೂ ಕಾಣಬಹುದು, ಆದರೆ ಸ್ಥಿರಚಿತ್ತಳಾದ ಮಹಿಳೆಯನ್ನು ಕಾಣುವುದು ಸಾಧ್ಯವಿಲ್ಲ!

ಪೊಪೊವ: ನಿಮ್ಮ ಕ್ಷಮೆ ಕೋರುತ್ತೇನೆ. ಹಾಗಾದರೆ, ನಿಮ್ಮದೃಷ್ಟಿಯಲ್ಲಿ, ಕರಾರುವಾಕ್ಕಾಗಿ, ಯಾರು ಪ್ರೇಮದಲ್ಲಿ ನಿಷ್ಠಾವಂತರು ಅಚಂಚಲರು? ಪುರುಷನೇ?

ಸ್ಮಿರ್ನೋಫ್: ಹೌದು, ಪುರುಷನೇ

ಪೊಪೊವ: ಪುರುಷ! (ಮನೋವೇದನೆಯಿಂದ ನಗುತ್ತಾಳೆ) ಪುರುಷನು ಪ್ರೇಮದಲ್ಲಿ ನಿಷ್ಠಾವಂತ, ಅಚಂಚಲ! ಅದೊಂದು ಸುದ್ದಿಯೇಸರಿ. (ಉದ್ರೇಕದಿಂದ) ಹಾಗೆಂದು ಹೇಳಲು ನಿಮಗೆ ಯಾವ ಅಧಿಕಾರವಿದೆ? ಗಂಡಸರು ನಿಷ್ಠಾವಂತರು, ಸ್ಥಿರ ಚಿತ್ತರು! ನಾವು ಆ ವಿಷಯವನ್ನು ಚರ್ಚಿಸುತ್ತಿರುವುದರಿಂದ, ನಿಮಗೆ ನನ್ನ ಪತಿಯ ವಿಷಯವನ್ನು ತಿಳಿಸುತ್ತಿದ್ದೇನೆ. ನಾನು ಕಂಡ ಪುರುಷರಲ್ಲೆಲ್ಲ ನನ್ನ ದಿವಂಗತ ಪತಿ ಅತ್ಯುತ್ತಮ ಪುರುಷ. ಓರ್ವ ಚಿಕ್ಕವಯಸ್ಸಿನ, ಬುದ್ಧಿಶಾಲಿ ಮಹಿಳೆ ಮಾತ್ರ ಪ್ರೀತಿಸಬಲ್ಲಂತೆ, ನಾನು ಆತನನ್ನು ತುಂಬ ಅಕ್ಕರೆಯಿಂದ, ಆತ್ಮಪೂರ್ವಕವಾಗಿ ಪ್ರೀತಿಸಿದೆ. ನಾನು ಆತನಿಗೆ ಕೊಟ್ಟೆ- ನನ್ನ ಯೌವ್ವನವನ್ನು, ನನ್ನ ಸುಖವನ್ನು, ನನ್ನ ಜೀವನವನ್ನು ಮತ್ತು ನನ್ನ ಸಂಪತ್ತನ್ನು. ನಾನು ಆತನನ್ನು ದೇವರ ವಿಗ್ರಹವನ್ನು ಪೂಜಿಸುವಂತೆ ಪೂಜಿಸಿದೆ. ಮುಂದೆ..... ಮುಂದೆ ಆದದ್ದೇನು? ಗಂಡಸರಲ್ಲೆಲ್ಲ ಸರ್ವಶ್ರೇಷ್ಠನಾದ ಈ ಪುರುಷೋತ್ತಮ ಒಂದು ಸಣ್ಣ ಅವಕಾಶ ದೊರೆತರೂ ಸಾಕು, ತುಂಬ ಸಲೀಸಾಗಿ, ಅತ್ಯಂತ ಲಜ್ಜಾಹೀನ ರೀತಿಯಲ್ಲಿ ನನಗೆ ಮೋಸಮಾಡಿದ. ಆತನ ಮರಣಾನಂತರ, ಆತನ ಬಳಿಮೇಜ(desk)ನ ಒಂದು ಸೆಳೆಖಾನೆ (drawer)ಯು ತುಂಬ ಪ್ರಣಯ ಪತ್ರಗಳೇ ಇದ್ದುವು. ಆತ ಬದುಕಿದ್ದಾಗ-ನನಗೆ ನೆನೆಸಿಕೊಂಡರೆ ಮೈನಡುಗುತ್ತದೆ - ವಾರಗಟ್ಟಲೆ ನನ್ನನ್ನು ಒಂಟಿಯಾಗಿ ಬಿಟ್ಟು ಹೋಗಿಬಿಡುತ್ತಿದ್ದ! ಇತರ ಮಹಿಳೆಯರೊಂದಿಗೆ ಲಲ್ಲೆ ಹೊಡೆಯುತ್ತ, ನನ್ನ ಕಣ್ಣೆದುರಿಗೇ ನನ್ನನ್ನು ವಂಚಿಸುತ್ತಿದ್ದ. ಆತ ನನ್ನ ಹಣವನ್ನೆಲ್ಲ ಪೋಲು ಮಾಡಿದ, ನನ್ನ ಭಾವನೆಗಳನ್ನು ಅಣಕಿಸಿ, ಅಪಹಾಸ್ಯ ಮಾಡಿದ. ಆದಾಗ್ಯೂ, ಇಷ್ಟೆಲ್ಲ ನಡೆದರೂ, ನಾನು ಆತನನ್ನು ಪ್ರೀತಿಸಿದೆ, ಆತನಿಗೆ ನಿಷ್ಠಳಾಗಿ ಉಳಿದೆ. ಅದಕ್ಕಿಂತ ಮಿಗಿಲಾಗಿ, ಆತ ತೀರಿ ಹೋಗಿದ್ದಾಗ್ಯೂ, ನಾನಿನ್ನೂ ಆತನಿಗೆ ನಿಷ್ಠಳಾಗಿಯೆ, ಸ್ಥಿರಚಿತ್ತಳಾಗಿಯೇ ಇದ್ದೇನೆ. ಈ ನಾಲ್ಕು ಗೋಡೆಗಳ ನಡುವೆ ನಾನು ಎಂದೆಂದಿಗೂ ಸಮಾಧಿಸ್ಥಳಾಗಿದ್ದೇನೆ. ನಾನು ಸಾಯುವ ದಿನದವರೆಗೂ ಎಂದೂ ಈ ಶೋಕದ ಉಡುಪನ್ನು ವರ್ಜಿಸುವುದಿಲ್ಲ.......

ಸ್ಮಿರ್ನೋಫ್: (ತಿರಸ್ಕಾರ ಪೂರ್ವಕವಾಗಿ ನಗುತ್ತ) ಶೋಕಾಚರಣೆ! ನೀವು ನನ್ನನ್ನು ಏನೆಂದು ಕೊಂಡಿದ್ದೀರಿ? ನೀವೇಕೆ ಕಪ್ಪು ಬಣ್ಣದ ಹೆಡೆಯುಡುಗೆಯ ಮೇಲಂಗಿಯನ್ನು ತೊಟ್ಟು, ಈ

ನಾಲ್ಕುಗೋಡೆಗಳ ನಡುವೆ ಸಮಾಧಿಸ್ಥರಾಗಿದ್ದೀರೆಂಬುದು ನನಗೆ ತಿಳಿದಿಲ್ಲವೆಂದೇ? ಅದೆಲ್ಲ ತುಂಬ ನಿಗೂಢ, ಭಾವನಾತ್ಮಕ. ಯಾವನೋ ಒಬ್ಬ ಯುವ ಸೇನಾಧಿಕಾರಿ ಇಲ್ಲವೆ ಪೆದ್ದ ಕವಿ ಮನೆಯ ಮುಂದೆ ಸಾಗುವಾಗ, ಕಿಟಕಿಯತ್ತ ದೃಷ್ಟಿಹರಿಸಿ ''ಅಹಾ! ತನ್ನ ಮೃತ ಪತಿಯ ಮೇಲಿನ ಪ್ರೀತಿಗಾಗಿ ಈ ನಾಲ್ಕು ಗೋಡೆಗಳ ನಡುವೆ ಸಮಾಧಿಸ್ಥಳಾಗಿರುವ ನಿಗೂಢ ಟಮಾರಾ ಇಲ್ಲಿ ವಾಸಿಸುತ್ತಿದ್ದಾಳೆ'' ಎಂದು ಯೋಚಿಸುತ್ತಾನೆ. ಈ ಪುಟ್ಟತಂತ್ರಗಳೆಲ್ಲ ನಮಗೆ ತಿಳಿದಿವೆ.

ಪೊಪೊವ: ನನಗೆ ಇಂತಹ ವಿಷಯಗಳನ್ನು ಹೇಳಲು ನಿಮಗೆಷ್ಟು ಧೈರ್ಯ!

ಸ್ಮಿರ್ನೋಫ್: ನೀವು ಜೀವಂತವಾಗಿ ಸಮಾಧಿಯಾಗಿದ್ದೀರಿ ಆದರೆ ನಿಮ್ಮ ಮೂಗಿಗೆ ಪೌಡರ್ ಹಚ್ಚಲು ಮರೆಯಲಿಲ್ಲ.

ಪೊಪೊವ: ನನ್ನೊಡನೆ ಹಾಗೆ ಮಾತನಾಡಲು ನಿಮಗೆಷ್ಟು ಧೈರ್ಯ!

ಸ್ಮಿರ್ನೋಫ್: ದಯವಿಟ್ಟು ಕೂಗಾಡಬೇಡಿ. ನಾನು ನಿಮ್ಮ ಕಾರ್ಯಭಾರಿಯಲ್ಲ. ದಯವಿಟ್ಟು ನನಗೆ ಸ್ಪಷ್ಟವಾಗಿ ಮಾತನಾಡಲು ಅವಕಾಶ ಕೊಡಿ. ನಾನು ಮಹಿಳೆಯಲ್ಲ. ಮನಸ್ಸು ಬಿಚ್ಚಿ ಮಾತನಾಡುವುದು ನನಗೆ ಅಭ್ಯಾಸವಾಗಿ ಬಿಟ್ಟಿದೆ. ದಯವಿಟ್ಟು ಕೂಗಾಡಬೇಡಿ.

ಪೊಪೊವ: ಕೂಗಾಡುತ್ತಿರುವವರು ನೀವು, ನಾನಲ್ಲ, ದಯವಿಟ್ಟು ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿ!

ಸ್ಮಿರ್ನೋಫ್: ಹಣವನ್ನು ಕೊಡಿ, ನಾನು ಹೋಗುತ್ತೇನೆ.

ಪೊಪೊವ: ನಾನು ಕೊಡುವುದಿಲ್ಲ.

ಸ್ಮಿರ್ನೋಫ್: ಓಹೋ, ನೀವು ಕೊಡುತ್ತೀರಿ.

ಪೊಪೊವ: ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೇ ನಾನು ನಿಮಗೆ ಒಂದು ಚಿಕ್ಕಾಸನ್ನೂ ಕೊಡುವುದಿಲ್ಲ! ಹೊರಟುಹೋಗಿ, ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿ.

ಸ್ಮಿರ್ನೋಫ್: ನಾನು ನಿಮ್ಮ ಪತಿಯೂ ಅಲ್ಲ, ಪ್ರಿಯಕರನೂ ಅಲ್ಲ. ಆದ್ದರಿಂದ, ಸುಮ್ಮನೆ ರಂಪಾಟ ಮಾಡಬೇಡಿ. (ಕುಳಿತುಕೊಳ್ಳುವನು) ನನಗೆ ಸರಿಬರುವುದಿಲ್ಲ.

ಪೊಪೊವ: (ಆಕ್ರೋಶದಿಂದ ಕುದಿಯುತ್ತ) ಕುಳಿತುಕೊಳ್ಳುವಷ್ಟು ಧೈರ್ಯಬಂತೆ, ನಿಮಗೆ?

ಸ್ಮಿರ್ನೋಫ್: ಹೌದು.

ಪೊಪೊವ: ದಯವಿಟ್ಟು ಕೂಡಲೆ ಹೊರಡಿ.

ಸ್ಮಿರ್ನೋಫ್: ದಯವಿಟ್ಟು ನನ್ನ ಹಣ ನನಗೆ ಕೊಡಿ (ಸ್ವಗತ) ಓಹೋ, ನನಗೆ ಎಂತಹ ಸಿಟ್ಟು ಬಂದಿದೆ!

ಪೊಪೊವ: ನಾಚಿಕೆಗೆಟ್ಟ ಪೋಕರಿಗಳೊಂದಿಗೆ ನನಗೆ ಮಾತನಾಡಲು ಇಷ್ಟವಿಲ್ಲ! ದಯವಿಟ್ಟು ಹೊರಟು ಹೋಗಿ! (ವಿರಮಿಸಿ) ಹಾಗಾದರೆ, ನೀವು ಹೋಗುವುದಿಲ್ಲ?

ಸ್ಮಿರ್ನೋಫ್: ಇಲ್ಲ.

ಪೊಪೊವ: ಹೋಗುವುದಿಲ್ಲ?

ಸ್ಮಿರ್ನೋಫ್: ಇಲ್ಲ!

ಪೊಪೊವ: ಸರಿ, ಹಾಗಾದರೆ (ಗಂಟೆ ಹೊಡೆಯುತ್ತಾಳೆ)

IX. ಇತರರು ಮತ್ತು ಲೂಕ

ಪೊಪೊವ: ಲೂಕ, ಇವರನ್ನು ಹೊರಗೆ ಕಳಿಸು

ಲೂಕ: ಹೊರಡಿ ಎಂದು ಹೇಳಿದಾಗ ಹೊರಟು ಬಿಡಿ, ಸ್ವಾಮಿ. ಅದು ಸರಿಯಲ್ಲ.

ಸ್ಮಿರ್ನೋಫ್ (ಮೇಲಕ್ಕೆನೆಗೆದು) ಬಾಯಿ ಮುಚ್ಚು! ನೀನು ಯಾರೊಂದಿಗೆ ಮಾತನಾಡುತ್ತಿದ್ದೀಯೆ, ಗೊತ್ತೇ? ನಿನ್ನನ್ನು ಚೂರು-ಚೂರು ಮಾಡಿಬಿಟ್ಟೇನು!

ಲೂಕ: (ತನ್ನ ಎದೆಯನ್ನು ಹಿಡಿದುಕೊಂಡು) ಓ, ನನ್ನ ದೇವ ಪಿತೃಗಳೇ! (ತೋಳು ಕುರ್ಚಿಗೆ ಕುಸಿದು) ನಾನು ತಬ್ಬಿಬ್ಬಾಗಿದ್ದೇನೆ, ಉಸಿರು ಕಟ್ಟಿಕೊಂಡಿದೆ.

ಪೊಪೊವ: ಡಾಷಾ ಎಲ್ಲಿ? (ಕೂಗುತ್ತಾಳೆ) ಡಾಷಾ, ಮಾರ್ಫ! ಡಾಷಾ! (ಗಂಟೆ ಹೊಡೆಯುತ್ತಾಳೆ)

ಲೂಕ: ಅವರೆಲ್ಲ ಬೆರ್ರಿ ಹಣ್ಣು ಕೀಳಲು ಹೋಗಿದ್ದಾರೆ. ಓ, ನಾನು ಅಸ್ವಸ್ಥ! ನೀರು!

ಪೊಪೊವ: ದಯವಿಟ್ಟು ಇಲ್ಲಿಂದ ಹೊರಡುವಿರಾ?

ಸ್ಮಿರ್ನೋಫ್: ದಯವಿಟ್ಟು ಸ್ವಲ್ಪ ಹೆಚ್ಚು ಸಭ್ಯತೆಯಿಂದ ನಡೆದುಕೊಳ್ಳುವಿರಾ?

ಪೊಪೊವ (ಮುಷ್ಟಿಹಿಡಿದು ಪಾದದಿಂದ ನೆಲವನ್ನು ಕುಟ್ಟುತ್ತ) ನೀನೊಬ್ಬ ಹೆಡ್ಡ! ಭಲ್ಲೂಕ! ದೊಡ್ಡಕರಡಿ! ಬಾಯಿಬಡಕ ಕೀಡೆ! ಪಿಶಾಚಿ!

ಸ್ಮಿರ್ನೋಫ್: ಏನದು? ಏನು ಹೇಳಿದೆ?

ಪೊಪೊವ: ನೀನೊಬ್ಬ ಕರಡಿ, ಪಿಶಾಚಿ ಎಂದು ಹೇಳಿದೆ.

ಸ್ಮಿರ್ನೋಫ್: (ಆಕೆಯ ಬಳಿ ಸಾಗುತ್ತ) ನನ್ನನ್ನು ಅಪಮಾನಗೊಳಿಸಲು ನಿನಗೆ ಯಾವ ಹಕ್ಕಿದೆ? ದಯವಿಟ್ಟು ತಿಳಿಸು.

ಪೊಪೊವ: ನಾನು ನಿನ್ನನ್ನು ಅಪಮಾನಗೊಳಿಸುತ್ತಿದ್ರೆ ತಾನೇ ಏನಾಯಿತು? ನಾನು ನಿನ್ನನ್ನು ಕಂಡು ಹೆದರಿದ್ದೇನೆ ಎಂದು ತಿಳಿದಿರುವೆಯಾ?

ಸ್ಮಿರ್ನೋಫ್: ನೀನು ಮಹಿಳೆಯಾದ ಮಾತ್ರಕ್ಕೆ ನಿನಗೆ ಯಾರನ್ನಾದರೂ ಅಪಮಾನ ಗೊಳಿಸಿ, ಪಾರಾಗುವ ಹಕ್ಕಿದೆಯೆಂದು ತಿಳಿದಿರುವೆಯಾ? ಏ? ನಾನು ನಿನ್ನನ್ನು ದ್ವಂದ್ವ ಯುದ್ಧಕ್ಕೆ ಆಹ್ವಾನಿಸುತ್ತಿದ್ದೇನೆ!

ಲೂಕ: ನನ್ನ ದೇವಪಿತೃಗಳೇ! ನೀರು.

ಸ್ಮಿರ್ನೋಫ್: ಪಿಸ್ತೂಲುಗಳು!

ಪೊಪೊವ: ನಿನ್ನ ಕೈಗಳು ದಪ್ಪವಾಗಿವೆ, ನೀನು ಗೂಳಿಯಂತೆ ಗುಟುರು ಹಾಕುತ್ತೀಯೆ ಎಂಬ ಕಾರಣಕ್ಕಾಗಿ ನಾನು ನಿನಗೆ ಹೆದರಿದ್ದೇನೆ ಎಂದು ತಿಳಿದಿರುವೆಯಾ, ಎಲಾ ಪೀಡಕನೇ?

ಸ್ಮಿರ್ನೋಫ್: ದ್ವಂದ್ವ ಯುದ್ಧ! ನಾನು ಯಾರಿಂದಲೂ, ಅಬಲೆಯೇ ಆಗಿದ್ದರೂ ಸರಿಯೆ, ಅಪಮಾನವನ್ನು ಸಹಿಸುವುದಿಲ್ಲ.

ಪೊಪೊವ: (ಅವನಿಗಿಂತಲೂ ಜೋರಾಗಿ ಕೂಗುತ್ತ) ನೀನು ದೊಡ್ಡ ಕರಡಿ!ಕರಡಿ!

ಸ್ಮಿರ್ನೋಫ್: ಪುರುಷರು ಮಾತ್ರ ತಾವು ಇತರರನ್ನು ಅಪಮಾನಗೊಳಿಸಿದ್ದಕ್ಕಾಗಿ ಜವಾಬ್ದಾರರಾಗುತ್ತಾರೆ ಎಂಬ ಭಾವನೆಯನ್ನು ಆದಷ್ಟು ಬೇಗನೆ ದೂರಮಾಡಬೇಕು. ಸಮಾನ ಹಕ್ಕುಗಳು ಎಂದರೆ ಸಮಾನ ಹಕ್ಕುಗಳು! ಹಾಳಾಗಲಿ! ನಾನು ನಿನಗೆ ಸವಾಲು ಹಾಕುತ್ತೇನೆ!

ಪೊಪೊವ: ಹಾಗಾದರೆ, ದ್ವಂದ್ವಯುದ್ಧ ನಡೆಯಲೇಬೇಕೆನ್ನುವೆಯಾ? ಅದೇ ನಿನ್ನ ಇಷ್ಟವಾದರೆ, ನಾನು ಸಂತೋಷವಾಗಿ ಸಿದ್ಧ.

ಸ್ಮಿರ್ನೋಫ್: ಈ ಕ್ಷಣವೇ.

ಪೊಪೊವ: ಆಗಲಿ, ಈ ಕ್ಷಣವೇ ಆಗಲಿ ನನ್ನ ಪತಿ ಕೆಲವು ಪಿಸ್ತೂಲುಗಳನ್ನು ಇಟ್ಟುಕೊಂಡಿದ್ದರು. ನಾನು ಹೋಗಿ ಅವುಗಳನ್ನು ತೆಗೆದುಕೊಂಡು ಬರುತ್ತೇನೆ. (ಅವಸರವಸರವಾಗಿ ಹೊರಗೆ ಹೋಗಿ ಹಿಂದಿರುಗುವಳು) ನಿನ್ನ ಆ ದಪ್ಪ ತಲೆ ಬುರುಡೆಯೊಳಕ್ಕೆ ಗುಂಡನ್ನು ತೂರಿಸಲು ನನಗೆ ಅದೆಷ್ಟು ಸಂತೋಷವಾದೀತು! ಹಾಳಾಗಿ ಹೋಗು! (ನಿರ್ಗಮಿಸುವಳು)

ಸ್ಮಿರ್ನೋಫ್: ಕುಳಿತಿರುವ ಬಾತುಕೋಳಿಯನ್ನು ಹೊಡೆಯುವಂತೆ ಆಕೆಯ ಮೇಲೆ ಗುಂಡು ಹಾರಿಸುತ್ತೇನೆ. ನಾನೇನೂ ಹುಡುಗನಲ್ಲ, ಭಾವಾತಿರೇಕಕ್ಕೊಳಗಾಗುವ ನಾಯಿ ಕುನ್ನಿಯಲ್ಲ! ನನ್ನ ಮಟ್ಟಿಗೆ, ಅಬಲೆಯರೆಂಬುವರೇ ಇಲ್ಲ!

ಲೂಕ: (ಮಂಡಿಯೂರಿ) ಸ್ವಾಮಿ, ದಯಾಮಯರೇ, ಈ ಮುದುಕನ ಮೇಲೆ ದಯತೋರಿ. ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ. ಇಲ್ಲಿಂದ ಹೊರಟು ಹೋಗಿ, ನೀವು ನನ್ನನ್ನು ಸಾಯುವಂತೆ ಹೆದರಿಸಿದ್ದೀರಿ. ಈಗ ನೀವು ದ್ವಂದ್ವ ಯುದ್ಧಕ್ಕೆ ಸಿದ್ಧರಾಗಿದ್ದೀರಿ.

ಸ್ಮಿರ್ನೋಫ್: (ಅವನ ಮಾತಿಗೆ ಕಿವಿಗೊಡದೆ) ಒಂದು ದ್ವಂದ್ವಯುದ್ಧ. ನಿನಗೆ ಸಮಾನ ಹಕ್ಕುಗಳು, ಬಿಡುಗಡೆ ಉಂಟು. ಪುಲ್ಲಿಂಗ-ಸ್ತ್ರೀಲಿಂಗಗಳೆರಡೂ ಸಮಾಸಮ. ತತ್ವನಿಷ್ಠೆಯಿಂದ ನಾನು ಆಕೆಯ ಮೇಲೆ ಗುಂಡು ಹಾರಿಸುತ್ತೇನೆ. ಆದರೆ.... ಆದರೆ, ಎಂತಹ ಮಹಿಳೆ! (ಅವಳನ್ನು ಅಣಕಿಸುತ್ತಾನೆ) ''ಹಾಳಾಗಿ ಹೋಗು....... ನಿನ್ನ ಆ ದಪ್ಪ ತಲೆ ಬುರುಡೆಯೊಳಕ್ಕೆ ಗುಂಡು ತೂರಿಸುತ್ತೇನೆ'' ಎಂತಹ ಮಹಿಳೆ! ಆಕೆಯ ಮುಖ ಕೆಂಪೇರಿತು, ಕಣ್ಣು ಮಿನುಗಿದುವು. ಆಕೆ ಸವಾಲನ್ನು ಅಂಗೀಕರಿಸಿದಳು! ನಾನು ನನ್ನ ಇಡೀ ಜೀವನದಲ್ಲಿ ಅವಳಂತಹ ಮತ್ತೊಬ್ಬಳನ್ನು ಕಂಡಿಲ್ಲ.......

ಲೂಕ : ಸ್ವಾಮಿ, ದಯಾಳುಗಳೇ, ಹೊರಟು ಹೋಗಿ. ನನ್ನ ಬದುಕಿನ ಉಳಿದ ದಿನಗಳ ಕಾಲ ನಿಮಗಾಗಿ ಪ್ರಾರ್ಥಿಸುತ್ತೇನೆ.

ಸ್ಮಿರ್ನೋಫ್: ನಿನಗೆ ಸರಿ ಜೋಡಿಯಾದ ಮಹಿಳೆ! ಹಾಗೆನ್ನಲೇಬೇಕು! ನಿಜವಾದ ಮಹಿಳೆ! ನಿರುತ್ಸಾಹ, ನರಳಾಟಗಳಿಲ್ಲ- ಎಲ್ಲ ಬೆಂಕಿ, ಸಿಡಿಮದ್ದು, ಕಿಡಿಗಳು, ಆಕೆಯನ್ನು ಹೊಡೆದುರುಳಿಸಲು ಮನಸ್ಸು ಮರುಗುವಂತೆ ತೋರುತ್ತದೆ, ಅಯ್ಯೋ ಎನ್ನಿಸುತ್ತದೆ.

ಲೂಕ (ಅಳುತ್ತ) ಸ್ವಾಮಿ, ಸ್ವಾಮಿ, ದಯವಿಟ್ಟು ಹೊರಟುಹೋಗಿ.

ಸ್ಮಿರ್ನೋಫ್: ನಾನು ಆಕೆಯನ್ನು ಮೆಚ್ಚುತ್ತೇನೆ. ನಿಜವಾಗಿ ನಾನು ಆಕೆಯನ್ನು ಮೆಚ್ಚುತ್ತೇನೆ - ಕೆನ್ನೆಗಳಲ್ಲಿ ಕುಳಿಗಳಿದ್ದರೂ. ಸಾಲದ ಬಗ್ಗೆ ಮರೆತು ಬಿಡಲೂ ಅಭ್ಯಂತರವಿಲ್ಲ. ನನ್ನ ಸಿಟ್ಟು ಆರಿಹೋಗಿದೆ, ಇಳಿದು ಹೋಗಿದೆ. ಅದ್ಭುತ ಮಹಿಳೆ!

X. ಇತರರು ಮತ್ತು ಶ್ರೀಮತಿ ಪೊಪೊವ.

ಪೊಪೊವ (ಪಿಸ್ತೂಲುಗಳೊಂದಿಗೆ ಪ್ರವೇಶಿಸುವಳು) ಇಗೋ, ಇಲ್ಲಿವೆ ಪಿಸ್ತೂಲುಗಳು ನಾವು ದ್ವಂದ್ವ ಯುದ್ಧವನ್ನು ಪ್ರಾರಂಭಿಸುವುದಕ್ಕೆ ಮುಂಚೆ, ನನಗೆ ಅವುಗಳನ್ನು ಹೇಗೆ ಬಳಸಬೇಕೆಂಬುದನ್ನು ತಿಳಿಸಿಕೊಟ್ಟು ಉಪಕರಿಸುವೆ ತಾನೇ. ನನ್ನ ಜೀವನದಲ್ಲಿ ನಾನೆಂದೂ ಪಿಸ್ತೂಲು ಹಿಡಿದವಳಲ್ಲ.....

ಲೂಕ: ದಯಾಮಯನಾದ ಭಗವಂತನೇ, ನಾನು ಹೋಗಿ ತೋಟಗಾರನನ್ನೂ ಬಂಡಿ ಹೊಡೆಯುವವನನ್ನೂ ಕರೆದುಕೊಂಡು ಬರುತ್ತೇನೆ. ನಮಗೇಕೆ ಈ ಕೇಡು ಒದಗಿ ಬಂದಿತಪ್ಪ? (ನಿರ್ಗಮಿಸುವನು)

ಸ್ಮಿರ್ನೋಫ್: (ಪಿಸ್ತೂಲುಗಳನ್ನು ಪರೀಕ್ಷಿಸುತ್ತ) ಸರಿ ಪಿಸ್ತೂಲುಗಳಲ್ಲಿ ಹಲವಾರು ಬಗೆಗಳು ಮಾರ್ಟಿಮರ್ ಕೋಳ(capsuler) ಗಳಿರುವ, ದ್ವಂದ್ವ ಯುದ್ಧದ ವಿಶೇಷ ಪಿಸ್ತೂಲು. ನಿನ್ನ ಈ ಪಿಸ್ತೂಲುಗಳು ಸ್ಮಿತ್‌ವೆಸನ್ಸ್ ಪಿಸ್ತೂಲುಗಳು- ವಿಸರ್ಜಕ (ejector)ವಿದ್ದು ಮಧ್ಯದಿಂದ ಬೆಂಕಿ ಹೊರಹೊಮ್ಮುವ ತ್ರಿವಿಧ ಕ್ರಿಯೆಯ ಸೊಗಸಾದ ಪಿಸ್ತೂಲುಗಳು. ಒಂದು ಜೋಡಿಗೆ ಕನಿಷ್ಠ ಪಕ್ಷ ೯೦ರೂಬಲ್‌ಗಳು ಹೀಗೆ ಹಿಡಿದುಕೊ (ಸ್ವಗತ) ಏನು ಕಣ್ಣುಗಳು! ಏನು ಕಣ್ಣುಗಳು! ಆಕೆ ಗಂಡಸಿನ ಹೃದಯದಲ್ಲಿ ರಾಗೋದ್ರೇಕದ ಜ್ವಾಲೆಯನ್ನೇ ಹೊತ್ತಿಸಿಬಿಡುತ್ತಾಳೆ!

ಪೊಪೊವ: ಹೀಗೇನು?

ಸ್ಮಿರ್ನೋಫ್: ಅದು ಸರಿ. ಮದ್ದು ಹಾರಿಸುವ ಸುತ್ತಿಗೆಯನ್ನು ನಿಮಿರಿಸು.... ಹೀಗೆ ಗುರಿಯಿಡು ತಲೆ ಸ್ವಲ್ಪ ಹಿಂದಕ್ಕಿರಲಿ. ನಿನಗೆ ಸಾಧ್ಯವಾದಷ್ಟು ಮಟ್ಟಿಗೆ ತೋಳನ್ನು ಚಾಚು.... ಹಾಗೆ ನಂತರ ಇದನ್ನು ನಿನ್ನ ಬೆರಳಿನಿಂದ ಅದುಮು- ಅಷ್ಟೇ ಮಾಡಬೇಕಾದದ್ದು. ಮುಖ್ಯವಾದ ವಿಷಯವೆಂದರೆ, ಉದ್ರೇಕಗೊಳ್ಳಬಾರದು, ಗುರಿಯಿಡುವಾಗ ಅವಸರ ಪಡಬಾರದು. ಕೈನಡುಗದಂತೆ ನೋಡಿಕೊ.

ಪೊಪೊವ: ಸರಿ, ತಿಳಿಯಿತು. ಮನೆಯೊಳಗೆ ಗುಂಡು ಹಾರಿಸಲು ಅನುಕೂಲವಾಗುವುದಿಲ್ಲ. ತೋಟಕ್ಕೆ ಹೋಗೋಣ.

ಸ್ಮಿರ್ನೋಫ್: ಹಾಗೆಯೇ ಆಗಲಿ. ಆದರೆ ಒಂದು ಎಚ್ಚರಿಕೆ: ನಾನು ಗಾಳಿಯಲ್ಲಿ ಗುಂಡು ಹಾರಿಸುತ್ತೇನೆ.

ಪೊಪೊವ: ಅದು ಕಡೆಯ ಹುಲ್ಲು ಕಡ್ಡಿ! ಕಿಸೆಯಲ್ಲಿರುವ ಕಡೆಯ ಕಾಸು! ಏಕೆ?

ಸ್ಮಿರ್ನೋಫ್: ಏಕೆಂದರೆ....... ಏಕೆಂದರೆ....... ಅದು ನನ್ನ ಇಷ್ಟ.

ಪೊಪೊವ: ಧೈರ್ಯ ಕಳೆದುಕೊಂಡೆ, ಎದೆಗುಂದಿದೆ! ಅಲ್ಲವೇ? ಹಹ, ಇಲ್ಲ ನೆಪಗಳನ್ನು ಮುಂದೊಡ್ಡಬೇಡ. ನನ್ನ ಹಿಂದೆ ಬಾ. ನಿನ್ನ ಹಣೆಯಲ್ಲಿ, ನಾನು ಅಷ್ಟೊಂದು ದ್ವೇಷಿಸುವ ನಿನ್ನ ಹಣೆಯಲ್ಲಿ ತೂತು ಮಾಡುವವರೆಗೆ ನಾನು ವಿರಮಿಸುವುದಿಲ್ಲ. ಹಾಗಾದರೆ, ಎದೆಗುಂದಿದೆ ಎನ್ನು. ಹೌದೇ?

ಸ್ಮಿರ್ನೋಫ್: ಹೌದು.

ಪೊಪೊವ: ನೀನು ಸುಳ್ಳಾಡುತ್ತಿದ್ದೀಯೆ. ದ್ವಂದ್ವ ಯುದ್ಧದಲ್ಲಿ ತೊಡಗಲು ನಿನಗೇಕೆ ಇಷ್ಟವಿಲ್ಲ?

ಸ್ಮಿರ್ನೋಫ್: ಏಕೆಂದರೆ....... ಏಕೆಂದರೆ......... ನನ್ನ ಕಣ್ಣಿಗೆ ನೀನು ತುಂಬ ಮೋಹಕವಾಗಿ ಕಾಣಿಸುತ್ತೀಯೆ.

ಪೊಪೊವ: (ಸಿಟ್ಟಿನಿಂದ ನಗುತ್ತ) ನಾನು ಆತನಿಗೆ ತುಂಬ ಚಿತ್ತಾಕರ್ಷಕಳಾಗಿ ಕಾಣಿಸುತ್ತೇನಂತೆ! ನಾನು ಆತನಿಗೆ ಚಿತ್ತಾಕರ್ಷಕಳಾಗಿ ಕಾಣಿಸುತ್ತೆನೆ ಎಂದು ಹೇಳಲು ಆತನಿಗೆ ಎಷ್ಟು ದುರಹಂಕಾರ, ಸೊಕ್ಕು! (ಬಾಗಿಲನ್ನು ತೋರಿಸುತ್ತ) ಶುಭದಿನ, ಮಾನ್ಯರೆ,

ಸ್ಮಿರ್ನೋಫ್: (ಪಿಸ್ತೂಲನ್ನು ಸದ್ದಿಲ್ಲದೆ ಕೆಳಗಿಟ್ಟು, ತನ್ನ ಟೋಪಿಯನ್ನು ಕೈಗೆತ್ತಿಕೊಂಡು ಬಾಗಿಲ ಬಳಿಗೆ ಹೋಗುವನು; ನಿಲ್ಲುತ್ತಾನೆ. ಇಬ್ಬರೂ ಮಾತನಾಡದೆ ಮೂವತ್ತು ಸೆಕೆಂಡುಗಳ ಕಾಲ ಒಬ್ಬರನ್ನೊಬ್ಬರು ನೋಡುವರು; ನಂತರ ಆತ ಶಂಕೆಯಿಂದಲೇ ಪೊಪೊವಳ ಬಳಿಗೆ ಬಂದು ಹೇಳುವನು) ಕೇಳು .... ನಿನಗೆ ಇನ್ನೂ ಸಿಟ್ಟಿದೆಯೇ? ನಾನು ಭಯಂಕರ ಸಿಟ್ಟಿನಲ್ಲಿದ್ದೇನೆ. ಆದರೆ ನೋಡು.....

ನಾನು ಹೇಗೆ ಹೇಳಲಿ? ನಿಜವೆಂದರೆ, ಇಂತಹ ವಿಷಯಗಳಲ್ಲಿ...... (ಕೂಗಿ ಹೇಳುತ್ತಾನೆ) ನೀನು ನನಗೆ ಮನಮೋಹಕವಾಗಿ ಕಾಣಿಸುವುದಕ್ಕೆ ನಾನೇನು ಮಾಡಲಿ? (ಕುರ್ಚಿಯ ಹಿಂಭಾಗವನ್ನು ಬಿಗಿಯಾಗಿ ಹಿಡಿದೊಡನೆಯೇ ಅದು ಕೀಲಿ ಮುರಿದು ಹೋಗುತ್ತದೆ) ಛೆ! ಇಲ್ಲಿ, ನಿನ್ನ ಮನೆಯಲ್ಲಿ, ಮುರುಕುಲು, ತುಂಡು ತುಂಡಾಗುವ ಪೀಠೋಪಕರಣಗಳೇ ಇವೆ! ನನಗೆ ನೀನು ಚಿತ್ತಾಕರ್ಷಕಳಾಗಿ ಕಾಣಿಸುತ್ತೀಯೆ, ತಿಳಿಯಿತೇ?........ ನಾನು ನಿನ್ನನ್ನು ಬಹು ಮಟ್ಟಿಗೆ ಪ್ರೀತಿಸುತ್ತೇನೆ!

ಪೋಪೋವ: ನನ್ನಿಂದ ದೂರವಿರು. ನಾನು ನಿನ್ನನ್ನು ದ್ವೇಷಿಸುತ್ತೇನೆ.

ಸ್ಮಿರ್ನೋಫ್: ದೇವರೇ! ಎಂತಹ ಮಹಿಳೆ ಇವಳು! ಇವಳಂತಹ ಮತ್ತೊಬ್ಬ ಮಹಿಳೆಯನ್ನು ನಾನು ನನ್ನ ಜೀವಮಾನದಲ್ಲಿಯೇ ಕಂಡಿಲ್ಲ! ನನ್ನ ಕಥೆ ಮುಗಿಯಿತು! ನಾನು ಹಾಳಾದೆ! ಬೋನಿನಲ್ಲಿ ಸಿಕ್ಕಿದ ಇಲಿಯಂತೆ ಸಿಕ್ಕಿಬಿದ್ದೆ!

ಪೋಪೋವ: ದೂರವಿರು. ಇಲ್ಲದಿದ್ದರೆ ಗುಂಡು ಹಾರಿಸುತ್ತೇನೆ.

ಸ್ಮಿರ್ನೋಫ್: ಹಾಗಾದರೆ ಗುಂಡು ಹಾರಿಸು. ಆ ಬೆರಗು ಗೊಳಿಸುವ, ಮೋಹಕ ಕಣ್ಣುಗಳ ಎದುರಿಗೆ, ಆ ಪುಟ್ಟ, ಮೃದುವಾದ ಮಖಮಲ್ ಕೈಹಿಡಿದ ಪಿಸ್ತೂಲಿನಿಂದ ಸಾಯುವುದರಲ್ಲಿ ಅದೆಷ್ಟು ಸಂತೋಷ ಇದೆಯೆಂಬುದನ್ನು ನೀನು ಊಹಿಸಲಾರೆ. ನನಗೀಗ ಹುಚ್ಚು ಹಿಡಿದಿದೆ. ಈಗ ನೀನು ತೀರ್ಮಾನ ತೆಗೆದುಕೊಳ್ಳಬೇಕು. ನಾನು ಈ ಮನೆಯನ್ನು ಬಿಟ್ಟು ಹೊರಟರೆ ನಾವು ಮತ್ತೆಂದೆಂದಿಗೂ ಸಂಧಿಸುವುದಿಲ್ಲ! ತೀರ್ಮಾನವನ್ನು ತೆಗೆದುಕೊ. ನಾನು ಒಳ್ಳೆಯ ಮನೆತನಕ್ಕೆ ಸೇರಿದವನು, ಪ್ರಾಮಾಣಿಕ ವ್ಯಕ್ತಿ. ನನಗೆ ವರ್ಷಕ್ಕೆ ಹತ್ತು ಸಾವಿರ ರೂಬಲ್‌ಗಳ ವರಮಾನವಿದೆ. ನಾನು ಗಾಳಿಯಲ್ಲಿ ಹಣವನ್ನು ತೂರಬಲ್ಲೆ. ನನ್ನ ಬಳಿ ಕೆಲವು ಸೊಗಸಾದ, ಭರ್ಜರಿ ಕುದುರೆಗಳಿವೆ. ನೀನು ನನ್ನ ಪತ್ನಿಯಾಗುವೆಯಾ?

ಪೋಪೋವ: (ಸಿಟ್ಟಿನಿಂದ ತನ್ನ ಪಿಸ್ತೂಲನ್ನು ತೋರಿಸುವಳು) ದ್ವಂದ್ವಯುದ್ಧ! ನಾನು ನಿನಗೆ ಸವಾಲು ಹಾಕುತ್ತೇನೆ!

ಸ್ಮಿರ್ನೋಫ್: ನಾನು ಹುಚ್ಚನಾಗಿದ್ದೇನೆ! ನನಗೆ ಏನೂ ತಿಳಿಯುತ್ತಿಲ್ಲ! (ಕಿರಿಚುತ್ತಾನೆ) ಯಾರಲ್ಲಿ? ಸ್ವಲ್ಪ ನೀರು ತನ್ನಿ!

ಪೋಪೋವ: (ಕಿರಿಚುತ್ತಾಳೆ) ನಾನು ನಿನಗೆ ಸವಾಲು ಹಾಕುತ್ತೇನೆ!

ಸ್ಮಿರ್ನೋಫ್: ನಾನು ಹುಚ್ಚನಾಗಿದ್ದೇನೆ. ನಾನು ಪ್ರೇಮಪಾಶಕ್ಕೆ ಸಿಕ್ಕಿ ತಲೆಕೆಳಗಾಗಿ ಬಿಟ್ಟಿದ್ದೇನೆ- ಒಬ್ಬ ಹುಡುಗನಂತೆ, ಒಬ್ಬ ಮೂರ್ಖನಂತೆ. (ಆಕೆಯ ಕೈ ಹಿಡಿದುಕೊಳ್ಳುತ್ತಾನೆ. ಆಕೆ ನೋವಿನಿಂದ ಚೀರುತ್ತಾಳೆ) ನಾನು ನಿನ್ನನ್ನು ಪ್ರೀತಿಸುತ್ತೇನೆ! (ಮಂಡಿಯೂರಿ ಕೆಳಗೆ ಕೂರುವನು) ನಾನು ಹಿಂದೆಂದೂ ಪ್ರೀತಿಸದಂತೆ ನಿನ್ನನ್ನು ಪ್ರೀತಿಸುತ್ತೇನೆ, ನಾನು ಹನ್ನೆರಡು ಮಹಿಳೆಯರಿಗೆ ಪ್ರಣಯದ್ರೋಹ ಮಾಡಿದ್ದೇನೆ,

ಒಂಭತ್ತು ಮಹಿಳೆಯರು ನನಗೆ ಪ್ರಣಯ ದ್ರೋಹ ಮಾಡಿದ್ದಾರೆ. ಆದರೆ, ನಾನು ನಿನ್ನನ್ನು ಪ್ರೀತಿಸುವಂತೆ, ಅವರಾರನ್ನೂ ಎಂದೂ ಪ್ರೀತಿಸಲಿಲ್ಲ. ನಾನೀಗ ಕರಗಿ, ಸಕ್ಕರೆ ಪಾಕದಂತೆ, ಮೃದುವಾಗಿ ಹೋಗಿದ್ದೇನೆ.... ನಾನು ಮಂಡಿಯೂರಿ ಕುಳಿತಿದ್ದೇನೆ - ಒಬ್ಬ ಮೂರ್ಖನಂತೆ ನಾನು ನಿನ್ನೊಂದಿಗೆ ಮದುವೆ ಪ್ರಸ್ತಾಪ ಮಾಡುತ್ತಿದ್ದೇನೆ ಒಬ್ಬ ಮುಟ್ಠಾಳನಂತೆ. ಎಂತಹ ಆಘಾತಕಾರಿ ಅಪಮಾನ! ಐದು ವರ್ಷಗಳಿಂದ ನಾನು ಯಾರನ್ನೂ ಪ್ರೀತಿಸಿಲ್ಲ. ಪ್ರೀತಿಸುವುದಿಲ್ಲವೆಂದು ಪ್ರತಿಜ್ಞೆಮಾಡಿದ್ದೆ. ಈಗ ನಾನು ಕುಣಿಕೆಯಲ್ಲಿ ನನ್ನ ಕತ್ತನ್ನು ಸಿಕ್ಕಿಸಿಕೊಂಡು ಬಿಟ್ಟಿದ್ದೇನೆ! ಇಷ್ಟವಿಲ್ಲದಿದ್ದರೆ ನೀನು ನನ್ನ ಕೈ ಹಿಡಿಯಬೇಕಾಗಿಲ್ಲ (ಎದ್ದು ಬಾಗಿಲಿನತ್ತ ಚುರುಕಾಗಿ ನಡೆಯುವನು)

ಪೊಪೊವ: ನಿಲ್ಲು.

ಸ್ಮಿರ್ನೋಫ್ (ನಿಲ್ಲುವನು) ಮತ್ತೆ.......

ಪೊಪೊವ: ಏನೂ ಇಲ್ಲ..... ನೀನು ಹೋಗಬಹುದು...... ಆದರೆ, ನಿಲ್ಲು...... ಇಲ್ಲ, ನೀನು ಹೋಗಬಹುದು! ನಾನು ನಿನ್ನನ್ನು ದ್ವೇಷಿಸುತ್ತೇನೆ ಅಥವಾ ನಾನು ನಿನ್ನನ್ನು ದ್ವೇಷಿಸುವೆನೆ? ಹೋಗಬೇಡ! ಅಹಾ! ನನಗೆಷ್ಟು ಕೋಪಬಂದಿದೆಯೆಂದು ನಿನಗೆ ತಿಳಿದಿದ್ದರೆ! (ಪಿಸ್ತೂಲನ್ನು ಮೇಜಿನ ಮೇಲೆ ಎಸೆಯುತ್ತಾಳೆ) ಈ ಹಾಳಾದ್ದರಿಂದ ನನ್ನ ಬೆರಳುಗಳು ಮರಗಟ್ಟಿವೆ. (ಸಿಟ್ಟಿನಿಂದ ತನ್ನ ಕರವಸ್ತ್ರವನ್ನು ಹರಿಯುತ್ತಾಳೆ) ನೀನೇಕೆ ನಿಂತಿದ್ದೀಯೆ? ಹೊರಡು.

ಸ್ಮಿರ್ನೋಫ್: ಸ್ವಸ್ತಿ.

ಪೊಪೊವ: ಸರಿ, ಸರಿ, ಹೋಗು! (ಕಿರಿಚುತ್ತಾಳೆ) ಎಲ್ಲಿಗೆ ಹೋಗುತ್ತೀಯೆ? ನಿಲ್ಲು! ಓಹೋ, ಸರಿ, ಹೋಗು! ಅಹಾ! ನನಗೆಷ್ಟು ಸಿಟ್ಟು ಬಂದಿದೆ! ದೂರ ಇರು, ದೂರ ಇರು.

ಸ್ಮಿರ್ನೋಫ್: (ಅವಳ ಬಳಿಗೆ ಹೋಗುತ್ತಾನೆ) ನನ್ನ ಮೇಲೆಯೇ ನನಗೆಷ್ಟು ಆಕ್ರೋಶ! ನಾನೊಬ್ಬ ಶಾಲಾ ಬಾಲಕನಂತೆ ಪ್ರೀತಿಸುತ್ತಿದ್ದೇನೆ. ನಾನು ಮಂಡಿಯೂರಿ ಕೆಳಗಿಳಿದಿದ್ದೇನೆ. ನಿನ್ನನ್ನು ಉಬ್ಬಿಸಲು, ನಿನ್ನ ತಲೆತಿರುಗಿಸಲು ಅಷ್ಟೇಸಾಕು. (ಒರಟಾಗಿ) ನಾನು ನಿನ್ನನ್ನು ಪ್ರೀತಿಸುತ್ತೇನೆ! ಅತ್ಯಂತ ಅವಿವೇಕದ ಕೃತ್ಯಗಳಲ್ಲೊಂದು! ನಾಳೆ ನಾನು ಬಡ್ಡಿಯನ್ನು ಪಾವತಿಮಾಡಬೇಕಾಗಿದೆ, ಹುಲ್ಲನ್ನು ಕಟಾವು ಮಾಡುವ ಕೆಲಸ ಪ್ರಾರಂಭವಾಗಿದೆ. ಇಲ್ಲಿ ನೀನು..... (ಆಕೆಯ ಸೊಂಟದ ಸುತ್ತ ತನ್ನ ತೋಳುಗಳನ್ನು ಬಳಸುತ್ತಾನೆ) ನನ್ನನ್ನು ನಾನೆಂದೂ ಕ್ಷಮಿಸುವುದಿಲ್ಲ.

ಪೊಪೊವ: ದೂರವಿರು! ನನ್ನಿಂದ ನಿನ್ನ ಕೈಗಳನ್ನು ಸರಿಸು! ನಾನು...... ನಿನ್ನನ್ನು ದ್ವೇಷಿಸುತ್ತೇನೆ! ನಾನು ನಿನಗೆ ಸವಾಲು ಹಾಕುತ್ತೇನೆ! (ಸುದೀರ್ಘ ಚುಂಬನ)

XI. ಅದೇ ಲೂಕ ಕೊಡಲಿ ಹಿಡಿದು, ತೋಟಗಾರ ಕವಲುಗೋಲು ಹಿಡಿದು, ಕೆಲವು ಕಾರ್ಮಿಕರು ದೊಣ್ಣೆಗಳನ್ನು ಹಿಡಿದುಕೊಂಡು ಬರುವರು.

ಲೂಕ: (ತುಂಬಿಸುತ್ತಿರುವ ಜೋಂಬಿಯನ್ನು ನೋಡುತ್ತ) ನನ್ನ ದೇವಪಿತೃಗಳೇ! (ವಿರಾಮ)

ಪೊಪ್ಪೊವ: (ಕಣ್ಣುಗಳನ್ನು ತಗ್ಗಿಸಿ) ಲೂಕ ಇವತ್ತು ಟೋಂಬಿಗೆ ಯಾವ ತೋಂಕೆಗೋಂಧಿಯನ್ನು ಹಾಕಬೇಡವೆಂದು ತಿಳಿಸು

(೧೮೮೮) ಪರದೆ.

ಪ. ಶ್ರೀನಿವಾಸ, ಮನೆ ಸಂ. ೨೧೨, ೨ನೇ ಕ್ರಾಸ್, ೧ನೇ 'ಜೆ' ಮುಖ್ಯ ರಸ್ತೆ, ೧ನೇ ಬ್ಲಾಕ್, ೧ನೇ ಮೇನ್,
ಕೋರಮಂಗಲ, ಬೆಂಗಳೂರು-೫೬೦೦೩೪.

'ಗರಿಗಳು'

ಮೂಲ ತೆಲುಗು : ಎಂ.ಕೆ. ಸುಗಂಬಾಬು
ಅನುವಾದ : ಗುರುಮೂರ್ತಿ ಪೆಂಡಕೂರು

೧

ಅರ್ಥಿಸಲಾಗಲೀ
ಸಮರ್ಥಿಸಲಾಗಲೀ
ವಿರಹವೇ?
ಸಂದೇಶವೇ?
ಚಲಿಸುವ ಮೇಘ
'ಕಾಳಿದಾಸ'

೨

ಆಗದ ಕಾಲವೊಂದು
ಬರುತ್ತದೆ
ಎಲ್ಲ ಶಕ್ತಿಗಳೂ ವ್ಯರ್ಥ
ಹೊಸ ನೀರಿಗೆ
ವೇಗ ಹೆಚ್ಚು

ಅನಿಕೇತನ–೯೮

೩

ದೊಡ್ಡ ಮಾತಾಡಿದರೆ ಮಾತ್ರ
ಹದ್ದು
ಗರುಡನಾಗಲಾರದು
ಜನನವೂ
ಒಂದು ವರ!

೪

ಬೆಳಗಿನಲ್ಲಿ ಲೋಕವು
ಬ್ಲಾಕ್ ಅಂಡ್ ವೈಟ್
ರಂಗನೆರೆಯುತ್ತಾನೆ
ಸೂರ್ಯ!

೫

ಅಸಲು ಕೆಂಡವೆಂಬುದು
ಇದ್ದರೆ
ಒಲೆಹತ್ತಿ ಉರಿಯುತ್ತದೆ
ಕೆಂಡವೂ ಅರಿದು
ರುಚಿಯೂ ತಿಳಿಯದು

೬

ಎಲ್ಲವನ್ನೂ ನೋಡುತ್ತಾ
ಹೋಗುತ್ತಿರಬೇಕು.
ಇಷ್ಟವಾದರೇನು
ಇಷ್ಟವಿಲ್ಲವಾದರೇನು
ಇದು
ವನ್‌ವೇ!

೭

ಪಂಚಾಂಗವನ್ನು ತಿರುವಿದರೂ
ಶಕುನವನ್ನು ಸರಿ ನೋಡಿದರೂ
ಧಗೆಯು
ಧಗೆಯೇ.

ಅನಿಕೇತನ-೯೯

೮

ಸಾವೆಂದರೆ
ಸಾವೇ!
ಅದಕ್ಕೇಕೆ ದೊಡ್ಡ
ದೊಡ್ಡ ಮಾತು
ದೃಶ್ಯ
ಅದೃಶ್ಯ.

೯

ನಿನ್ನ ಭಾವವು
ಸಂಕ್ಷಿಪ್ತವಾಗಿ
ಸೂಕ್ಷ್ಮವಾಗಿ
ಪ್ರತಿಮೆಯಾಗಿ ಅರಳಿದರೆ
ನೀನೊಂದು
ಕವಿತೆ!

೧೦

ಮೀನಿಗಾಗಿ ಕೆರೆಯಲ್ಲಿ
ಬೇಟೆ
ಮುತ್ತಿಗಾಗಿ ಮುನ್ನೀರಿನಲ್ಲಿ
ಮುಳುಗು
ಏನಿದೆ
ಅಂತರ?

೧೧

ಹರಯವೆಂದರೆ
ಒಂದೇ ದಿಕ್ಕಿಗೆ
ಹರಿಯುವ
ಪ್ರವಾಹ
ಅಡ್ಡಗಟ್ಟಿದರೇ
ಜಲಾಶಯ.

೧೨

ಬದುಕು
ತುಂಬಾ ದೊಡ್ಡದು
ಅದು
ಏನನ್ನಾದರೂ ಸಾಧಿಸುತ್ತದೆ
ಕುರುಡನಿಗೆ
ಕಣ್ಣು ಕೊಡುತ್ತದೆ

೧೩

ಎಂದಿಗಂದಿಗೆ
ಕವಿ
ತನ್ನನ್ನು ತಾನು
ಸರಿಪಡಿಸಿಕೊಳ್ಳುತ್ತಾ
ಆದ್ದರಿಂದಲೇ ರಮ್ಯ
ಕವಿತ್ವ.

೧೪

ಬದುಕು
ಅದೆಷ್ಟು ವಿಚಿತ್ರ
ಮೈ
ನವಿರೇಳುತ್ತದೆ
ಒಂದು ಸಾಕ್ಷಿ
'ಸದ್ದಾಂ'

೧೫

ಪೆಟ್ಟಿಗೆಯೊಳಗಿದೆ
ಎಂದಿನದೋ
ಒಂದು
ನಕಲಿ ರೂಪಾಯಿ
ಅಯೋಗ್ಯ
ಪುತ್ರರತ್ನ

೧೬

ಅಂದುಕೊಳ್ಳದೇ
ಅಭ್ಯಾಸವಾಗಿದೆ
ನನ್ನನ್ನು ನಾನು
ಉತ್ಖನನ ಮಾಡಿಕೊಳ್ಳೋದು
ಹೊರಬರುತ್ತಿದ್ದೀಯಾ
ನೀನು!

೧೭

ಒಬ್ಬನದು
ಸಣ್ಣ ನಡಿಗೆ
ಮತ್ತೊಬ್ಬನದು
ದೊಡ್ಡ ಓಟ!
ಆಯಾಸ
ಆಯಾಸವೇ.

೧೮

ಅವನು
ಅವನಪ್ಪನನ್ನು ಬದುಕಿಸಲಿಲ್ಲ
ಅವನ ಮಗ
ಅವನನ್ನು ಬದುಕಿಸಲಿಲ್ಲ
ಆ ಮಗನೂ
ಬದುಕುಳಿಯಲಿಲ್ಲ

೧೯

ಕುರುಡನಿಗೆ
ಬಣ್ಣಗಳೆಂದರೇ
ಏನು
ತಿಳಿದೀತು?
ಗಾಣದೆತ್ತಿಗೆ
ತನ್ನ ಬದುಕೇನು ತಿಳಿದೀತು

೨೦

ತಪ್ಪುಗಳು
ತಿಳಿದರೂ
ತಿದ್ದಿಕೊಳ್ಳುವ
ಅವಕಾಶವೆಲ್ಲಿ?
ವನ್‌ಬಾಲ್
ಟೆನ್ ರನ್ಸ್!

೨೧

ಒಂದೊಂದು
ವಸ್ತುವನ್ನು
ಸೀಳಿಕೊಂಡು ಹೋಗುತ್ತದೆ
ಕಾಲ
ಕೊನೆಗೆ
ನಿನ್ನನ್ನೂ!.

೨೨

ಕವಿಗೆ
ತಾನು
ತನ್ನ ಮನೆ
ಮುಖ್ಯವಲ್ಲ
ಹೊಸ ಸೂರ್ಯೋದಯವೇ
ಮುಖ್ಯ.

೨೩

ಸವಾಲು
ಜಿದ್ದು ಬೇಡವೇ ಬೇಡ
ಪರಿಹಾಸಗಳಂತೂ
ಬೇಡ
ಬದುಕು
ಅತಿಥಿ

ಅನಿಕೇತನ–೧೦೩

೨೪

ಮೂಕ ಮಕ್ಕಳು
ಬಸ್ಸಿನಲ್ಲಿ
ಸನ್ನೆಯಿಂದ
ಪಯಣಿಸಿದಂತೆ
ಭಾಷೆ
ಬಹುಮುಖೀ.

೨೫

ಅಪ್ಪ ಅಮ್ಮಂದಿರಿಗೆ
ಪ್ರೀತಿಸುವುದೊಂದು ಬಿಟ್ಟರೆ
ಮಕ್ಕಳು ಮಾಡುವ
ಅವಮಾನಗಳ ಅರಿವಿಲ್ಲ
ಹಡೆದೊಡಲು
ಕಬ್ಬಿನ ತೋಟ.

೨೬

ದಾರಿದ್ರ್ಯವನ್ನು
ದೈನ್ಯವನ್ನು
ಬಣ್ಣಿಸುವುದು
ಕಡುಕಷ್ಟ
ಕನ್ನಡಿಹಾವಿನ ಕಡಿತ
ದುಸ್ಸಹನೀಯ

೨೭

ಕಂಕಣಕಟ್ಟಿ
ನಡೆವವನನ್ನು
ದೂರವು
ಬಾಧಿಸುವುದಿಲ್ಲ
ಕಾಲದ ಸರಿಹದ್ದಿನ
ಮಾನವ.

೨೮

ಬುದ್ಧಿವಂತನೆಂದು
ಮೈಮರೆಯಬೇಡ
ಬದುಕು ವರಿಸುವುದು
ಅಮಾಯಕನನ್ನೇ
ಪ್ರೀತಿಸಲು
ಬುದ್ಧಿ ಬೇಕೆ?.

೨೯

ಆ ಅಂಗವಿಕಲ
ಜೋಡಿಯನ್ನು ನೋಡಿದರೆ
ತಪ್ಪದೇ
ಅರ್ಥವಾಗುತ್ತದೆ
ಪ್ರೇಮ
ಎನಿತು ಸುಂದರವೆಂದು!

೩೦

ಕಸ್ತೂರಿ
ಹೇಳುವುದೇ
ನಾನೆಲ್ಲಿದ್ದೇನೆ
ಎಂದು.
ಮಾತಾಡುತ್ತದೆ
ಸುಮಧುರ ಸುವಾಸನೆ

೩೧

ಅಮವಾಸ್ಯೆಯ ಕಾವ್ಯದಲ್ಲಿ
ಕರಗಿ ಹೋದೀತು, ಆದರೆ
ಪಂಚರಂಗಿನ ಗಿಳಿಗಳ
ತಾರಾಜೋಡಿ.
ಅದ್ಭುತ ವಿನ್ಯಾಸ
ಸಾಹಸ.

೩೨

ನಾನು
ಕಾಲನ ಹಿಂದೆ
ಕಾಲವು
ಸತ್ಯದ ಹಿಂದೆ
ಕಾಲವೂ, ಸತ್ಯವೂ
ನನ್ನ ಹಿಂದೆ!

ಗುರುಮೂರ್ತಿ ಪೆಂಡಕೂರು, ರಾಮನಗರ, ಹಗರಿಬೊಮ್ಮನಹಳ್ಳಿ-೫೮೩ ೨೧೨ ಬಳ್ಳಾರಿ (ಜಿ)

ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರ ಕಾಡುಗೊಲ್ಲ ಬುಡಕಟ್ಟುವೀರರು - ಒಂದು ಸಮೀಕ್ಷೆ

ಪ್ರೊ. ಶಿವರಾಮಯ್ಯ

ಬುಡಕಟ್ಟು ವೀರನೊಬ್ಬನ ಕುರಿತ ಸಂಶೋಧನೆ ಎಂದರೆ ಆ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆಯನ್ನು ಪುನಾರಚಿಸಿ ಕಟ್ಟಿಕೊಡುವುದೆಂದೇ ಅರ್ಥ. ವರ್ತಮಾನದಲ್ಲಿ ಆ ಬುಡಕಟ್ಟು ಹೇಗೆ ಬದುಕಿ ಬಾಳುತ್ತಿದೆ? ಅದರ ಆಚಾರ-ವಿಚಾರಗಳೇನು? ಅದರ ಶ್ರದ್ಧಾನಂಬಿಕೆಗಳು ಯಾವುವು? ಅದರ ದೈವದ ಕುರುಹು ಲಾಂಚನಗಳು, ಗುಡಿ ಗುಂಡಾರ, ಊರುಕೇರಿ ಹಟ್ಟಿ-ಪಟ್ಟಿ ಹೇಗಿವೆ? ಅದರ ಸಾಹಿತ್ಯ ಕಲೆ ಮತ್ತು ಅಲ್ಲಿ ವ್ಯಕ್ತವಾಗುತ್ತಿರುವ ಅತೋತ್ತರಗಳೇನು? ಇತ್ಯಾದಿ ಪ್ರಶ್ನೆಗಳನ್ನು ತನ್ನ ಮುಂದಿಟ್ಟುಕೊಂಡು ಸಂಶೋಧಕನಾದವನು ಕ್ಷೇತ್ರ ಕಾರ್ಯಕ್ಕೆ ಇಳಿಯಬೇಕಾಗುತ್ತದೆ. ಹೀಗೆ ಹೊರಟವನ ಜೋಳಿಗೆಗೆ ಕಾಳು ಬೀಳಬಹುದು, ಬೀಳದಿರಬಹುದು. ಆ ಮಾತು ಬೇರೆ, ಇರಲಿ.

ಈ ಮಾಹಿತಿ ಸಂಗ್ರಹವು ಎರಡು ಬಗೆಯದಾಗಿರುತ್ತದೆ: ಒಂದು ಮೌಖಿಕವಾಗಿ ದೊರೆಯುವ ಮಾಹಿತಿಗಳು; ಇನ್ನೊಂದು ಭೌತಿಕವಸ್ತುಗಳ ರೂಪದಲ್ಲಿ ದೊರೆಯುವ ಮಾಹಿತಿಗಳು. ಮೊದಲನೆಯ ಮಾಹಿತಿಗಳನ್ನು ಬರೆದುಕೊಳ್ಳವುದು, ಇಲ್ಲವೆ ಟೇಪ್ ರೆಕಾರ್ಡ್ ಮಾಡಿಕೊಳ್ಳುವುದು; ಎರಡನೆಯ ಮಾಹಿತಿಗಳಲ್ಲಿ ಕೆಲವನ್ನು ಸಂಗ್ರಹಿಸಿಕೊಳ್ಳಬಹುದು ಇಲ್ಲವೆ ಛಾಯಚಿತ್ರರೂಪದಲ್ಲಿ ಸಂಗ್ರಹಿಸಿ ಕೊಳ್ಳುವುದು. ಈ ಸಂಶೋಧಕರಲ್ಲಿ ಎರಡು ಬಗೆ: ಕೆಲವರು ತಾವೇ ಕ್ಷೇತ್ರ ಕಾರ್ಯಮಾಡಿ ತಂದ ಮಾಹಿತಿಗಳನ್ನು ಜಾನಪದ ಅಧ್ಯಯನಶಾಸ್ತ್ರ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಆ ಬುಡಕಟ್ಟಿನ ವೈಲಕ್ಷಣ್ಯಗಳನ್ನು ಗುರ್ತಿಸುತ್ತಾರೆ. ಇದು ವಾಸ್ತವವಾಗಿ ಪ್ರಯಾಸದ ಕೆಲಸ. ಇನ್ನು ಕೆಲವರು ಈಗಾಗಲೇ ಯಾರಾದರೂ

ಮಾಹಿತಿ ಸಂಗ್ರಹ ಮಾಡಿರುವುದನ್ನೆಲ್ಲಾ ಒಂದೆಡೆ ರಾಶಿ ಹಾಕಿಕೊಂಡು ಕ್ಷೇತ್ರಕಾರ್ಯ ಮಾಡದೇ ಅದರ ವೈಲಕ್ಷಣ್ಯಗಳನ್ನು ಗುರ್ತಿಸಲು ತೊಡಗುತ್ತಾರೆ. ಆದರೆ ಇವರ ಬರವಣಿಗೆ ಸ್ವತಃ ಕ್ಷೇತ್ರಕಾರ್ಯ ಮಾಡಿದವರ ಬರವಣಿಗೆಯಂತೆ ಅಥೆಂಟಿಕ್ ಆಗಿರಲಾರದು. ಆದ್ದರಿಂದ ಸಂಶೋಧಕನಾದವನ ಜವಾಬ್ದಾರಿ ಅತ್ಯಂತ ಗುರುತರವಾದುದು.

ಆದರೆ ಇಷ್ಟೆಲ್ಲಾ ಪಾಡು ಬೀಳುವುದರಿಂದ ಆ ಸಂಶೋಧಕನಿಗೆ ಬರುವ ಲಾಭವೇನು? ಎಂದರೆ ಕಿರಿಯ ಉದ್ಯೋಗಾರ್ಥಿ ಸಂಶೋಧಕರಾಗಿದ್ದರೆ, ಅಂಥವರಿಗೆ ಜೀವನಾರ್ಥ ಏನಾದರೂ ಕೆಲಸ ಸಿಗಬಹುದು, ಬಿಡಬಹುದು. ಆದರೆ ನಿಜವಾದ ಸಂಶೋಧಕ ಇಷ್ಟಕ್ಕೇ ತೃಪ್ತಿಪಡಲಾರ. ಅವನಿಗೆ ಬರುವ ತೃಪ್ತಿ ಎಂದರೆ ಅವಕಾಶ ವಂಚಿತ, ಮುಗ್ಧ ಋಜು ಸ್ವಾಭಾವದ ಒಂದು ಬುಡಕಟ್ಟನ್ನು ನಾಗರಿಕ ಸಮಾಜಕ್ಕೆ ಪರಿಚಯಿಸಿದ ಧನ್ಯತಾಭಾವ. ಅಂಥವನಿಗೆ ಪದವಿ ಪುರಸ್ಕಾರಗಳು ಗೌಣ. ಕೀಳರಿಮೆಯಿಂದ ಬಾಗಿ ಕುಗ್ಗಿ ಹೋಗುತ್ತಿರುವ ಜನಾಂಗ ಒಂದಕ್ಕೆ ಆತ್ಮವಿಶ್ವಾಸವನ್ನು ತಂದು ಕೊಡುವುದಕ್ಕಿಂತ ಮಿಗಿಲಾದದ್ದು ಬೇರೇನಿದೆ ಎಂದು ಆತ ಭಾವಿಸುತ್ತಾನೆ. ಯಾಕೆಂದರೆ ಎಲ್ಲಿ ಇತಿಹಾಸಕಾರ ಮೌನ ತಾಳಿರುತ್ತಾನೊ ಅಲ್ಲಿ ಸಾಂಸ್ಕೃತಿಕ ಚರಿತ್ರೆಕಾರ ಪ್ರವೇಶಿಸಿ ಆ ಬುಡಕಟ್ಟಿನ ಹೊಸ ಇತಿಹಾಸ ರಚನೆಗೆ ಕೈ ಹಾಕಿರುತ್ತಾನೆ.

ಈ ಒಂದು ಹಿನ್ನೆಲೆಯಿಂದ ನೋಡಿದರೆ ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರ ಮಹಾ ಪ್ರಬಂಧ 'ಕಾಡು ಗೊಲ್ಲಬುಡಕಟ್ಟುವೀರರು' ಎಂಬ ೬೭೮ಪುಟಗಳ ಈ ಬೃಹತ್ ಗ್ರಂಥ ಗಾತ್ರದಲ್ಲಷ್ಟೇ ಅಲ್ಲ ಪಾತ್ರದಲ್ಲೂ ಮಹತ್ವವುಳ್ಳದ್ದಾಗಿದೆ. ಇದು ಶಿವಣ್ಣನವರ ಕಳೆದ ೨೫ ವರ್ಷಗಳ ಸತತ ಪರಿಶ್ರಮ ಹಾಗೂ ಸಂಶೋಧನಾ ಶ್ರದ್ಧಾಸಕ್ತಿಗಳ ಪರಿಣಾಮ ಫಲ. ಎತ್ತಪ್ಪ-ಜುಂಜಪ್ಪ ಎಂಬ ಕಾಡುಗೊಲ್ಲ ಬುಡಕಟ್ಟು ವೀರರು ಬದುಕಿ ಬಾಳಿದರೆನ್ನಲಾದ ನೀಲಿ ನಕ್ಷೆಯನ್ನು ಕೈಯಲ್ಲಿ ಹಿಡಿದು ಚಿಕ್ಕದುರ್ಗ, ಬಳ್ಳಾರಿ, ಹಾಗೂ ತುಮಕೂರು ಮತ್ತು ಆಂಧ್ರದ ಕೆಲವು ಗಡಿ ಭಾಗಗಳಲ್ಲಿ ಸುತ್ತಾಡಿ ಕ್ಷೇತ್ರಕಾರ್ಯಮಾಡಿದ್ದಾರೆ; ಅಕ್ಷರಶಃ ನೂರಾರು ಹಳ್ಳಿಗಳಿಗೆ ಎಡತಾಕಿ, ನೂರಾರು ವಕ್ತೃಗಳನ್ನು ಭೇಟಿ ಮಾಡಿ ಸುಮಾರು ೨೦೦ ಗಂಟೆಗಳಿಗೂ ಮಿಗುವಷ್ಟು ಧ್ವನಿ ಮುದ್ರಣ ಮಾಡಿಕೊಂಡಿದ್ದಾರೆ; ಕಾಡುಗೊಲ್ಲರ ನೆಲೆದೇವರು, ಮೆರೆದೇವರು, ಕುರುಹು, ಸಂಕೇತ, ಲಾಂಚನಗಳು, ಶಾಸನಗಳು, ಮಾಸ್ತಿಕಲ್ಲು, ವೀರಗಲ್ಲು, ಸಮಾಧಿಕಲ್ಲು ಇತ್ಯಾದಿ ನೂರಾರು ಛಾಯಾಚಿತ್ರಗಳನ್ನು ಸೆರೆಹಿಡಿದು ಈ ಪುಸ್ತಕಕ್ಕೆ ಒಂದು ಛಾಯಾ ಸಂಪುಟವನ್ನೇ ಒದಗಿಸಿದ್ದಾರೆ; ಗುಡಿ-ಗುಂಡಾಂತರ ಹಿರಿಪಟ್ಟಿ - ಕಿರಿಪಟ್ಟಿ ಎನ್ನದೆ ಗೊಲ್ಲರ ಹಟ್ಟಿಗಳಿಗೆ ಹೋಗಿ ಅವರಲ್ಲಿ ಅಳಿದುಳಿದ ಸಾಹಿತ್ಯ ಕತೆಗಳನ್ನು ಕೇಳಿದ್ದಾರೆ; ಅವರ ಸಂಸ್ಕೃತಿಗೆ ಸಂಬಂಧಿಸಿದ ಒಂದು ಸಣ್ಣ ಸಂಗತಿ ಸಿಕ್ಕರೂ ಕೂಡ ಉದಾಸೀನ ಮಾಡದೆ ಸಂಗ್ರಹಿಸಿಕೊಂಡಿದ್ದಾರೆ. ಹಾಗೆ ನೋಡಿದರೆ ಇಂಥ ಕ್ಷೇತ್ರಕಾರ್ಯ ಹೂವಿನ ಹಾದಿ ಏನೂ ಅಲ್ಲ, ಕಲ್ಲು ಮುಳ್ಳು ಅಪಾರ ಎಂಬ ಅನುಭವ ಪಡೆದುಕೊಂಡಿದ್ದಾರೆ. ಒಟ್ಟಾರೆ ಶಿವಣ್ಣನವರ ಈ ತಿರುಗಾಟವನ್ನು ಒಂದು ರೀತಿ 'ಗೊಲ್ಲಾಯಣ' ಎಂದು ಕರೆಯುವುದು ಸರಿ.

ಹೀಗೆ ಸಂಗ್ರಹಿಸಿದ ವಿಪುಲ ಮಾಹಿತಿಗಳನ್ನು ಒಂದೆಡೆ ಸಂಕಲಿಸಿಕೊಂಡು ಜಾನಪದ ಅಧ್ಯಯನ ಶಾಸ್ತ್ರ ಗ್ರಂಥಗಳೊಂದಿಗೆ ತುಲನೆಮಾಡಿ, ವಿವರಣೆ, ವಿಶ್ಲೇಷಣೆ ವಿಮರ್ಶೆನಡೆಸಿದ್ದಾರೆ. ಈ

ಸಂದರ್ಭದಲ್ಲಿ ಅವರು ೨೨ಕ್ಕೂ ಹೆಚ್ಚು ಆಧಾರ ಗ್ರಂಥಗಳನ್ನು, ಹಳಗನ್ನಡ ಸಾಹಿತ್ಯ ಕೃತಿಗಳನ್ನು, ನೂರಾರು ಲೇಖನಗಳನ್ನು, ಹಾಗೂ ಸಂಶೋಧನಾ ಪತ್ರಿಕೆಗಳು, ದಿನ ಪತ್ರಿಕೆಗಳು ಇತ್ಯಾದಿಗಳಲ್ಲಿ ಬಂದಿರುವ ತತ್ಸಂಬಂಧವಾದ ವಿಚಾರಗಳನ್ನು ತಮ್ಮ ಸಂಶೋಧನೆಗೆ ಪೂರಕವಾಗಿ ಬಳಸಿಕೊಂಡಿದ್ದಾರೆ. ಒಟ್ಟಾರೆ ವಸ್ತುರು ನೀರು ಜೀಳುವ ವರೆಗೆ ಬಾವಿ ತೆಗೆದಂತೆ, ಶಿವಣ್ಣನವರು ಕಾಡುಗೊಲ್ಲರ ಸಂಸ್ಕೃತಿಯ ತಲ ಸ್ಪರ್ಶಮಾಡಲು ಹೊರಟಿದ್ದಾರೆ. ಹೀಗೆ ತಮ್ಮ ಶಕ್ತಿಮೀರಿ ದುಡಿದು ಎತ್ತಪ್ಪ-ಜುಂಜಪ್ಪ ಎಂಬ ಕಾಡುಗೊಲ್ಲ ಬುಡಕಟ್ಟು ವೀರರ ಚರಿತ್ರೆಯನ್ನು ಪುನಾರಚಿಸಿ ನಮಗೆ ಕೊಟ್ಟಿರುತ್ತಾರೆ; ಇದು ಈ ಬುಡಕಟ್ಟಿನ ಸಾಂಸ್ಕೃತಿಕ ಚರಿತ್ರೆಯೂ ಆಗಿದೆ. ಶಿವಣ್ಣನವರು ಪಟ್ಟಶ್ರಮ ಸಾರ್ಥಕವಾಗಿದೆ; ಅದನ್ನು ಕೃತಿಯ ಪುಟ ಪುಟವೂ ಸಾದರಪಡಿಸುತ್ತವೆ. ಜಾನಪದ ಸಂಶೋಧನೆಗೆ ಹೊರಟ ಯುವಪೀಳಿಗೆಗೆ ಈ ಗ್ರಂಥರಚನೆ ಒಂದು ಮೇಲ್ಪಂಕ್ತಿ ಎಂಬಂತಿದೆ.

ಜಾಗತಿಕವಾಗಿ ಬುಡಕಟ್ಟು ಎಂದರೆ ನಾಗರಿಕ ಜನರೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ತಮ್ಮ ಪಾಡಿಗೆ ತಾವು ಕಾಡುಗಳಲ್ಲಿ ದ್ವೀಪಾಂತರವಾಸಿಗಳಂತೆ ಇದ್ದು ತಮ್ಮ ಪಾವಿತ್ರ್ಯವನ್ನು ಉಳಿಸಿಕೊಳ್ಳುವ ಜನಾಂಗ. ಬ್ರಿಟಿಷರು ಭಾರತಕ್ಕೆ ಬರುವ ಪೂರ್ವದಲ್ಲಿ ಇಂಥ ಅನೇಕ ಬುಡಕಟ್ಟುಗಳು ಅಡವಿ ವಾಸಿಗಳಾಗಿದ್ದು ಬೇಟೆ, ಕಾಡಿನ ಉತ್ಪನ್ನಗಳು, ಕುಮರಿ ಬೇಸಾಯ, ಹಾಗೂ ಪಶು ಸಂಗೋಪನೆ ಮುಂತಾದ ಕಸುಬುಗಳನ್ನು ಅವಲಂಬಿಸಿದ್ದರು. ಆದರೆ ಬ್ರಿಟಿಷರು ಅರಣ್ಯಗಳನ್ನೆಲ್ಲ ಸರ್ಕಾರದ ವಶಕ್ಕೆ ತೆಗೆದುಕೊಂಡು, ಅಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳನ್ನು ಎತ್ತಂಗಡಿ ಮಾಡಲು ಯತ್ನಿಸಿದರು. ಆಗ ಸ್ವಾತಂತ್ರ್ಯ ಪ್ರಿಯರಾದ ಬುಡಕಟ್ಟು ಜನ ಅವರಿಗೆ ತಿರುಗಿಬಿದ್ದರು. ಅಂಥವರನ್ನು ಬ್ರಿಟಿಷರು 'ಕ್ರಿಮಿನಲ್ ಟ್ರೈಬ್ಸ್' ಎಂದು ಗುರ್ತಿಸಿ ದಂಡಾರ್ಹರೆಂದು ಹಣೆಪಟ್ಟಿ ಹಾಕಿದರು. ಇವತ್ತಿನ ನಕ್ಸಲೈಟ್ಸ್ ಹಕ್ಕು ಮಂಡನೆ ಹಾಗೂ ಅವರನ್ನು ಪ್ರಭುತ್ವ ಹತ್ತಿಕ್ಕುವಿಕೆಗೆ ಇದೂ ಸಹ ಪಸಾಹತುಶಾಹಿಯ ಕೊಡುಗೆಯೇ ಸರಿ ಆ ಮಾತಿರಲಿ. ಪ್ರಸ್ತುತ ಕಾಡುಗೊಲ್ಲ ಸಂಸ್ಕೃತಿ ಒಂದು ಆದಿಮ ಬುಡಕಟ್ಟು ಸಂಸ್ಕೃತಿ ಅದರ ಸಾಂಸ್ಕೃತಿಕ ವೀರರು ಉತ್ತಪ್ಪ-ಜುಂಜಪ್ಪ ಈ ಇಬ್ಬರು ಜಾನಪದ ವೀರರು ಒಂದುಕಾಲಕ್ಕೆ ಈ ನೆಲದ ಮೇಲೆ ಎಲ್ಲ ಮಾನವರಂತೆ ರಕ್ತ-ಮಾಂಸಗಳನ್ನುಳ್ಳ ದೇಹ ಧರಿಸಿ ಅಡ್ಡಾಡಿದವರೇ. ಆದರೆ ಅವರು ತಮ್ಮ ಜನಾಂಗದ ಒಳಿತಿಗಾಗಿ, ಏಳ್ಗೆಗಾಗಿ ತಮ್ಮನ್ನು ತಾವೇ ಬಲಿದಾನ ಕೊಟ್ಟುಕೊಂಡವರು. ಆದ್ದರಿಂದ ಇವರಿಬ್ಬರ ತ್ಯಾಗ ಬಲಿದಾನಗಳನ್ನು ಮೆಚ್ಚಿ ಅವರ ಮೇಲಿನ ಕೃತಜ್ಞತೆಗೆ ದ್ಯೋತಕವಾಗಿ ಅವರಿಗೆ ಗುಡಿಗಳನ್ನು ಕಟ್ಟಿದರು, ಜಾತ್ರೆ ಮಾಡಿದರು, ಅಲ್ಲಿ ಹಾಡು ಲಾವಣಿ ಕತೆ ಪ್ರಗಾಥಗಳನ್ನು ಹಾಡಿದರು. ಕಾಲ ಕ್ರಮೇಣ ಗೋಪಾಲಕ ಜನರಿಗೆ ಎತ್ತಪ್ಪ-ಜುಂಜಪ್ಪ ಇವರು ತಮ್ಮ ಶ್ರದ್ಧಾಭಕ್ತಿ ಪರಂಪರೆಯ ಪ್ರತೀಕಗಳಾಗಿ, ಕುಲದೈವಗಳಾಗಿ ಮೇಲೇರಿದರು. ಅವರ ಸುತ್ತ ಪವಾಡ-ಮಹಿಮೆಗಳು ಹುಟ್ಟಿಕೊಂಡವು; ಸಾಹಿತ್ಯಕಲೆಗಳು ರಚಿಸಲ್ಪಟ್ಟವು. ಪುರಾಣಗಳು ಹೆಣೆಯಲ್ಪಟ್ಟವು. ಆದರೆ ಈ ರೂಪಕ-ಪ್ರತಿಮೆಗಳನ್ನು ಅನಾವರಣ ಮಾಡಿ ನೋಡಿದರೆ ಎತ್ತಪ್ಪ-ಜುಂಜಪ್ಪ ಇವರೂ ಎಲ್ಲರಂತೆ ಮನುಷ್ಯರಾಗಿದ್ದರು ಎಂಬುದು ನಮಗೆ ಗೋಚರವಾಗುತ್ತದೆ. ಹೀಗೆ ಎತ್ತಪ್ಪ-ಜುಂಜಪ್ಪನವರ ಕಥಾ ರೂಪಕಗಳಲ್ಲಿ ತಲೆ ಮರೆಸಿಕೊಂಡಿರುವ ಕಾಡುಗೊಲ್ಲರ ಸಾಂಸ್ಕೃತಿಕ ವೀರವ್ಯಕ್ತಿತ್ವವನ್ನು ಶಿವಣ್ಣನವರು ತಮ್ಮ ಈ ಗ್ರಂಥದಲ್ಲಿ ತೆರೆದು ತೋರಿಸುತ್ತಾರೆ.

ಕಾಡುಗೊಲ್ಲರಲ್ಲಿ ಎತ್ತಪ್ಪನಿಗೆ ಮೊದಲು ಈರಗಾರರ ಒಂದು ಪರಂಪರೆಯೇ ಇದೆ. ಈರಗಾರ-ಈರಗಾತಿಯರ ಕತೆಗಳು ನಿರ್ವಚಿಸುವಂತೆ ಎತ್ತಪ್ಪ ಕಾಡುಗೊಲ್ಲರ ಆದಿಮ ಪುರುಷನಾಗಿದ್ದಾನೆ. ಎತ್ತಪ್ಪನ ಬಗೆಗಿನ ಕಾವ್ಯ ಕತೆಗಳನ್ನೆಲ್ಲಾ ಸಮೀಕ್ಷಿಸಿದ ಲೇಖಕರು ಎತ್ತಪ್ಪನ ಆದಿಪುರುಷನೆಂದು ಸಾದರ ಪಡಿಸುತ್ತಾರೆ. ಎತ್ತಪ್ಪ ಶಿವನ ಅಂಶಾವತಾರ. ಗೌರಸಂದ್ರದ ಮಾರಕ್ಕ ಇವನ ಅಕ್ಕ. ಅವನ ಹೆಸರಿನ ನಿಷ್ಪತ್ತಿಯಲ್ಲಿಯೇ ಅವನ ಮಹತ್ವ ಏನೆಂಬುದು ತಿಳಿದುಬರುತ್ತದೆ. ಹೆತ್ತ+ಅಪ್ಪ >ಹೆತ್ತಪ್ಪ >ಎತ್ತಪ್ಪ; ಹೆತ್ತ+ತುಪ್ಪ+ಅಪ್ಪ+ >ಹೆತ್ತತುಪ್ಪದಲ್ಲಿ ಹುಟ್ಟಿದ ಅಪ್ಪ >ಹೆತ್ತಪ್ಪ >ಎತ್ತಪ್ಪ; ಎತ್ತು+ಅಪ್ಪ >ಎತ್ತಿನ ಅಪ್ಪ >ಎತ್ತಪ್ಪ= ಎತ್ತು ಕಾಯುವ ಅಪ್ಪ ಇತ್ಯಾದಿ.

ಎತ್ತಪ್ಪ ಕಾಡುಗೊಲ್ಲ ಜನಾಂಗಕ್ಕೆ ಒಂದು ಸಂವಿಧಾನಚೌಕಟ್ಟನ್ನು ಹಾಕಿ ಕೊಟ್ಟವನು. ಅವನು ಜಾರಿಗೆ ತಂದ 'ಹಾಲು-ಮೀಸಲು ಸಂಪ್ರದಾಯ, ಗೂಡಿನ ಹಬ್ಬ ಆಚರಣೆ ಇತ್ಯಾದಿಗಳನ್ನು ಈಗಲೂ ಆಚರಿಸಲಾಗುತ್ತಿದೆ. ಅಂಚಿರಾಯ ಕುಂಚಿರಾಯ ಎಂಬ ಶರಣರು ಎತ್ತಪ್ಪನಿಗೆ ಎತ್ತು ಧಾರೆ ಎರೆದು ಕೊಡುತ್ತಾರೆ. ಗೆಜ್ಜೆಕಾಲು ಮಲ್ಲಮ್ಮ ಎತ್ತಪ್ಪನ ಹೆಂಡತಿ; ಮಾರ ಮುತ್ತಣ್ಣ ಎತ್ತಪ್ಪನ ದತ್ತುಮಗ; ವಲಿಗಾನಿ ಎತ್ತಪ್ಪನ ಭಾವಮೈದ. ಸಾಣಿಕೆರೆ ಪುಟ್ಟಣ್ಣ ಮಾಟಗಾರ ತಮ್ಮಣ್ಣನ ಗುರು; ಈತ ಎತ್ತಪ್ಪನ ಆವು(ದನ)ಗಳಿಗೆ ಮಾಟ ಮಾಡಿದವ. ಗುಡ್ಡದ ಬೋರಿ ಎತ್ತಪ್ಪನನ್ನು ಹಿಂಬಾಲಿಸುತ್ತ ಬಂದು 'ಭೋಗ' ಕೊಡು ಎಂದು ಲಜ್ಜೆಗೆಟ್ಟು ಮೋಹಿಸಿದ ನಾಯಕಸಾನಿ. ಗಂಟಾಳು ಬೆನ್ನ ಗುಡ್ಡದ ಬೋರಿಯಗಂಡ, ಸಂಡೂರು ಬೊಮ್ಮ ಸಂಡೂರಿನ ಬೇಡರ ನಾಯಕ. ಈತ ಎತ್ತಪ್ಪನನ್ನು ಸೆರೆ ಹಿಡಿದವನು. ಎತ್ತಪ್ಪನ ಕಾಲಘಟ್ಟದಲ್ಲಿ ಕಾಡುಗೊಲ್ಲರು ಎಲ್ಲಿಯೂ ಒಂದು ಕಡೆ ಕಾಲೂರಿ ನಿಂತವರಲ್ಲ. ತಮ್ಮ ಎತ್ತಾವುಗಳಿಗೆ (ಎತ್ತು+ಆವು) ಹುಲ್ಲು ನೀರು ಸಿಕ್ಕುವ ಪ್ರದೇಶಗಳಿಗೆ 'ಪಡುವ ಹೋಗುವ' ಅಲೆ ಮಾರಿಗಳು. ಇವರು ಸಸ್ಯ ಪರಿಸರ ಹಾಗೂ ಪ್ರಾಣಿ ಪರಿಸರದಲ್ಲಿ ಜೀವನ ಸಾಗಿಸುತ್ತಿದ್ದ ಆರಾಮ ಜೀವಿಗಳಾಗಿದ್ದರು. ಎತ್ತಪ್ಪ ಲೆಕ್ಕ ಪಗಡೆಗಳ ಆಟಗಳಲ್ಲಿ ಪಾಳೆಗಾರ ಗೌಡರುಗಳನ್ನು ಗೆದ್ದರೂ ಸಹ ಪಣವಿಟ್ಟ ಪ್ರಕಾರ ನಾಲ್ಕಾರು ದಿನ ಗೌಡಿಕೆಮಾಡಿ, ಜನರಿಗೆ ಕಂದಾಯ ಕಡಿಮೆ ಮಾಡಿ ಹೋಗುತ್ತಿದ್ದನು, ಗುಡ್ಡದ ಬೋರಿ ಬೆನ್ನು ಹತ್ತಿ ಭೋಗ ಕೇಳಿದರೂ ಆತ ಪ್ರತಿಕ್ರಿಯಿಸದ ಸಚ್ಚಾರಿತ್ರ್ಯವುಳ್ಳ ವ್ಯಕ್ತಿ. ಎತ್ತಪ್ಪನ ಕಾವ್ಯಕಥೆ ಒಂದು ರೀತಿಯಲ್ಲಿ ಕಾಡುಗೊಲ್ಲ ರಾಮಾಯಣದಂತಿದೆ. ನಾಗರಿಕತೆಯ ಸಂಸರ್ಗಕ್ಕೆ ಬಂದಿಲ್ಲವಿನ್ನೂ. ಆದರೆ ಗುಡ್ಡದ ಬೋರಿಯ ಶೃಂಗಾರ ಚೇಷ್ಟೆಗಳು, ವಲಿಗಾನಿಯ ಸೂಳೆಗಾರಿಕೆ ಚಟಗಳು, ಎತ್ತಪ್ಪನ ಸಕಲ ಜೀವರಾಶಿಗೆ ಲೇಸು ಬಯಸುವ ದಯಾಪರ ವ್ಯಕ್ತಿತ್ವ. ಹುಲ್ಲೇಕರ (ಜಿಂಕೆ)ಯನ್ನು ಮುದ್ದಿಸಿ ತನ್ನ ದನಗಳಿಗೆ ಹುಲ್ಲು ನೀರು ಇರುವ ತಾಣವನ್ನು ತೋರು ಎಂದು ಕೇಳುವುದು; ಎತ್ತಪ್ಪನ ಚಿಕ್ಕರಂಬೆ ಜೂಜಿನ ಮರಹಾರಿ ಸತ್ತಪ್ರಸಂಗ, ಸಂಡೂರಬೊಮ್ಮ ಮರೆಮೋಸದಿಂದ ತಲೆಕತ್ತರಿಸುವುದು, ರುಂಡವಿಲ್ಲದ ಮುಂಡ ಕಳಕಿನ ಗುಡ್ಡದಕಡೆ ನಡೆದುಕೊಂಡು ಹೋಗುತ್ತಿದ್ದಾಗ ಎತ್ತಪ್ಪನ ಗೂಡಿನ ಪನಗಳು ಹಿಂಬಾಲಿಸಿ ಹೋಗುವುದು. ಇತ್ಯಾದಿ ಸಂಗತಿಗಳು ಎತ್ತಪ್ಪನ ಕಾವ್ಯಕತೆಯ ಶೃಂಗಾರ, ಹಾಸ್ಯ, ರೌದ್ರ, ವೀರ, ಕರುಣ ಮುಂತಾದ ರಸಗಳಿಗೆ ವ್ಯಂಜಕವಾಗಿ ಬರುತ್ತವೆ. ಎತ್ತಪ್ಪನ ಕಾವ್ಯ ಹೊಳೆ ಹೆಚ್ಚು ಭೋರ್ಗರೆಯದೆ ಅಲ್ಲಿಳಿದು, ಇಲ್ಲಿಸರಿದು, ಮಂದಗತಿಯಲ್ಲಿ ಮುಂದುವರಿಯುತ್ತದೆ. ಆದಿ-ಮಧ್ಯ ಅಂತ್ಯಗಳಲ್ಲಿ ಹೆಚ್ಚು ಕತೆ ಉಪಕತೆಗಳಲ್ಲಿ ಅತ್ತಿತ್ತ ಕಾಲಹರಣ ಮಾಡದೆ ನೇರ ಗುರಿಯತ್ತ ಸಾಗಿ ಐಕ್ಯ

ಸಾಧಿಸುತ್ತದೆ. ಒಟ್ಟಾರೆ ಎತ್ತಪ್ಪನ ಕತೆ 'ಅಳಿದೊಡಂ ಉಳಿದೊಡಂ' ಬಟ್ಟೆತೋರಿಸುವ ಒಂದು ಸುಂದರ ಋಜುಸ್ವಭಾವದ ಕಥಾವಾಹಿನಿಯಾಗಿ, ಕಾಡುಗೊಲ್ಲರ ಜೀವನ ಧರ್ಮವನ್ನು ನೇರ್ಪಡಿಸುವ ಉದ್ದೇಶವನ್ನು ಹೊಂದಿದೆ. ಶಿಷ್ಟ ಜಗತ್ತಿಗೂ ಈ ಮೌಲ್ಯ ಅನುಕರಣೀಯ.

ಜುಂಜಪ್ಪ ಹುಟ್ಟುವ ಕಾಲಕ್ಕಾಗಲೇ ಕಾಡು ಗೊಲ್ಲರ ಬದುಕಿನಲ್ಲಿ ಒಂದು ಸ್ಥಿತ್ಯಂತರ ಸಂಚಲನೆ ಕಂಡುಬರುತ್ತದೆ. ಇದಕ್ಕೆ ಮುಖ್ಯಕಾರಣ ರೈತಾಪಿಜನರು ಕೃಷಿ ಸಂಬಂಧವಾಗಿ ಅರಣ್ಯಗಳತ್ತ ಸಾಗಿ ಬಂದದ್ದು. ಕಾಡುಗಳ ನಾಶದಿಂದ ಕಾಡಂಚುಗಳಲ್ಲಿ ನೆಲಸಿದ್ದ ಈ ಕಾಡುಗೊಲ್ಲರು ಇನ್ನಷ್ಟು ಒಳಕ್ಕೆ ಸರಿಯ ಬೇಕಾಗುತ್ತದೆ. ಇಲ್ಲವೆ ದೊಡ್ಡ ಜೀವರಾಶಿಗಳಾದ ಗೋವುಗಳ ಸಾಕಾಣಿಕೆಯನ್ನು ಕೈ ಬಿಟ್ಟು ಬೋಳು ಗುಡ್ಡ, ಮೈದಾನಗಳಲ್ಲಿ ಮೇದು ಬದುಕುವಂತಹ ಆಡು ಕುರಿಗಳನ್ನು ಸಾಕುವುದು ಅನಿವಾರ್ಯವಾಗಿ ಕಂಡುಬರುತ್ತದೆ. ಎತ್ತಪ್ಪನ ಕಾಲಕ್ಕೆ 'ಎಲ್ಲಿಯೂ ನಿಲ್ಲದಿರು ಮನೆಯನಂತೂ' ಕಟ್ಟದಿರು ಎಂಬಂತಿದ್ದರು. ಆದರೆ ಈ ಕಾಡು ಗೊಲ್ಲ ಬುಡಕಟ್ಟುಗಳು ಜುಂಜಪ್ಪನ ಕಾಲಕ್ಕೆ ಹುಲ್ಲು ನೀರುತಾಣಗಳನ್ನು ಹುಡುಕಿ 'ಪಡುವ ಹೋಗುವ' ಪ್ರಕ್ರಿಯೆ ಇದ್ದರೂ ಸಹ ಅಲೆಮಾರಿ ಬದುಕನ್ನು ಕೈ ಬಿಟ್ಟು ತಮಗೆ ಸರಿಕಂಡ ಜಾಗದಲ್ಲಿ ಹಟ್ಟಿ ಕಟ್ಟಿ ಒಂದು ಕಡೆ ನೆಲಸಲು ಆರಂಭಿಸಿದರು. ಅವು 'ಹಿಹಟ್ಟಿ'ಗಳಾಗಿ ಕರೆಸಿಕೊಂಡವು. ಆದ್ದರಿಂದ ಎತ್ತಪ್ಪನ ನೆಲೆಗಳು ಕೇವಲ ಆರು ಕಂಡುಬಂದರೆ, ಜುಂಜಪ್ಪನ ನೆಲೆಗಳು ೧೨ಕ್ಕೂ ಹೆಚ್ಚಾಗಿವೆ. ಎಂದರೆ ಜುಂಜಪ್ಪರನ್ನ ಏಳು ಗೂಡಿನ ದನಗಳನ್ನು ಮೇಯಿಸಲು ಚಿತ್ರದುರ್ಗ, ಬಳ್ಳಾರಿ, ತುಮಕೂರು, ಮಡಕಶಿರಾ ಸೀಮೆಗಳನ್ನೆಲ್ಲಾ ಬಿಡದೆ ಸುತ್ತಿದ್ದಾನೆ ಎಂದರ್ಥ. ಅಥವಾ ಅವನ ಅನುಯಾಯಿಗಳು ಹೋಗಿ ನೆಲಸಿದ್ದಾರೆ. ಒಟ್ಟಾರೆ ಪಶು ಸಂಗೋಪನೆಯಿಂದ ಉಪ ಜೀವನ ನಡೆಸುತ್ತಿದ್ದ ಈ ಬುಡಕಟ್ಟು ತಮ್ಮ ಜೀವರಾಸುಗಳಿಗೆ ಹುಲ್ಲು ನೀರು ನೆರಳನ್ನು ಹುಡುಕುತ್ತ ಜಾಗಬದಲಿಸುವುದೆಲ್ಲ, ಸ್ವಾಭಾವಿಕವಾಗಿ ಬಂದಂಥ ಜೀವನಕ್ರಮ.

ದೇವರ ಹೈಮಾರನ ಕತೆ, ಕಂಪಿಲೆ ಮಲಿಗೊಂಡನ ಕತೆ, ಜುಂಜಪ್ಪನಕತೆ ಹಾಗೆ ಜುಂಜಪ್ಪನ ಕಾವ್ಯ ಮೂರು ತಲೆಮಾರುಗಳ ಬೀಸುಳ್ಳದ್ದಾಗಿದೆ. ಎತ್ತಪ್ಪನ ಕತೆ ಕಾಡು ಗೊಲ್ಲರ ರಾಮಾಯಣವಾದರೆ ಜುಂಜಪ್ಪನ ಕತೆ ಅವರ ಮಹಾಭಾರತ. ಏಳು ಜನ ಹಿರಿಯಟ್ಟಿ ಸೋದರರಲ್ಲಿ ಚಿಕ್ಕೋನು ದೈಮಾರ. ಸಣ್ಣ ಕಂಬಕ್ಕ ಅವನ ಹೆಂಡತಿ. ದೈಮಾರ - ಕಂಬಕ್ಕರ ಮಗನೇ ಕಿಂಗುರಿ ಮಲ್ಲೇಗೌಡ. ಕಂಬೇರ ಹಟ್ಟಿಯ ಏಳು ಜನ ಸೋದರರತಂಗಿ ಚೆನ್ನಮ್ಮ ಕೆಂಗುರಿ ಮಲ್ಲೇಗೌಡನ ಹೆಂಡತಿ; ಜುಂಜಪ್ಪನ ತಾಯಿ. ಮಾರಣ್ಣ-ಮೈಲಣ್ಣ ಜುಂಪ್ಪನ ತಮ್ಮಂದಿರು; ಮಾರಕ್ಕ ಜುಂಜಪ್ಪನ ತಂಗಿ. ಇದಿಷ್ಟು ಸಂಕ್ಷಿಪ್ತವಾಗಿ ಜುಂಜಪ್ಪನ ವಂಶಾವಳಿ.

ಜುಂಜಪ್ಪನ ಕಾವ್ಯ ಕಥನಗಳು ೧೫-೧೬ನೆಯ ಶತಮಾನಗಳಲ್ಲಿ ನಡೆದಿರಬಹುದೆಂದು ಅಂದಾಜುಮಾಡಲಾಗಿದೆ. ಮುಸಲ್ಮಾನರ ಉಪಟಳ ಹಾಗೂ ಪಾಳೇ ಪಟ್ಟುಗಳ ಆಳ್ವಿಕೆಯಿಂದ ಜನರಿಗೆ ನೆಮ್ಮದಿ ಎಂಬುದಿರಲಿಲ್ಲ' ಒಂದು ಕಾಲಕ್ಕೆ ಮಹೋನ್ನತ ಸಂಸ್ಕೃತಿಯ ಪ್ರತೀಕವಾಗಿದ್ದ ಪಶು ಪಾಲನೆಯ ಕೊನೆಯ ಚಿತ್ರಣ ಜುಂಜಪ್ಪನ ಕಾವ್ಯ' ಎಂಬ ಲೇಖಕರ ಮಾತು ಯಥೋಚಿತವಾಗಿದೆ.

ಎತ್ತಪ್ಪ ಜುಂಜಪ್ಪ ಇವರ್‍ಯಾರೂ ಲೌಕಿಕ ಬದುಕಿಗೆ ಕಟ್ಟುಬಿದ್ದವರಲ್ಲ. ತಮ್ಮ ದನಕರುಗಳನ್ನು ಕಟ್ಟಿಕೊಂಡು, ಹುಲ್ಲು ಗಾವಲುಗಳನ್ನು ಹುಡುಕಿಕೊಂಡು ವಲಸೆ ಸುತ್ತಾಡಿದವರು. ಗೋವಿನ ಹಾಡು ಹಾಗೂ ನೀನಾರಿಗಾದೆಯೋ ಎಲೆ ಮಾನವ' ಎಂಬ ನೀತಿ ಕಾವ್ಯವನ್ನು ಅನುಲಕ್ಷಿಸಿದರೆ, ಕನ್ನಡ ನಾಡು ಮೊದಲಿನಿಂದಲೂ ದನಗಳೊಂದಿಗೆ ಆತ್ಮೀಯ ಸಂಬಂಧವನ್ನು ಗಳಿಸಿಕೊಂಡು ಬಂದಿದೆ. ಪುಣ್ಯಕೋಟಿ ಗೋವು ಪ್ರತ್ಯಕ್ಷಮಾಡಿದ ಸತ್ಯಪರಿಪಾಲನೆಗೆ ಕಾಡಿನ ವ್ಯಾಘ್ರಕೂಡ ಬೆರಗುಗೊಂಡು ಬಯಲಾಗಿ ಹೋಯಿತು. ಎಂದರೆ ಕನ್ನಡ ಜನಪದ ಸಂಸ್ಕೃತಿ ಸಾರಭಟ್ಟಿ ಈ ಗೋವಿನ ಹಾಡು, ಅಂತಯೇ ಎತ್ತಪ್ಪ ಜುಂಜಪ್ಪನವರ ಕಾವ್ಯ ಕತೆಗಳೂ ಸಹ. ಕಾಡು ಗೊಲ್ಲರದು ಮಾಲಿನ್ಯಗೊಳ್ಳದ ಪಶು ಸಂಗೋಪನ ಪಾವಿತ್ರ್ಯವುಳ್ಳ ಆದಿಮಸಂಸ್ಕೃತಿ. ಎತ್ತಪ್ಪ ಯಾವತ್ತೂ ಅಡವಿ ಜೀವಿಯಾಗಿದ್ದವನೇ. ಜುಂಜಪ್ಪನ ಪೂರ್ವಿಕ ದೈಮಾರ ತನ್ನ ಮದುವೆಯ ಹಂಬಲವನ್ನೇ ತೊರೆದು ಏಳು ಗೂಡಿನ ದನಗಳೊಂದಿಗೆ 'ಕೀಕಾರಣ್ಯ'ದಲ್ಲಿ ಬೀಡು ಬಿಟ್ಟವನು. ಅವನ ದನಗಳು ಎಷ್ಟು ತರಬೇತುಗೊಂಡಿದ್ದವು ಎಂದರೆ, ಒಡೆಯನ ಹಿಂದೆ ನಾಯಿಗಳಂತೆ ಹೋಗುತ್ತಿದ್ದ ಅವು ಹುಲಿ ಕಂಡರೆ ಒಟ್ಟಾಗಿ ಸೇರಿ ಅದನ್ನೇ ಸಿಗಿಯಲೂ ಸಮರ್ಥವಾಗಿದ್ದವು.

ಜುಂಜಪ್ಪನ ತಂದೆ ಕಂಪಿಲೆ ಮಲಿಗೊಂಡನು ಮದುವೆಯಾಗಿ ಅರಿಷಣದ ಮೈ ಆರುವ ಮೊದಲೇ ತನ್ನ ಗೋಡಿನದನಗಳ ಕಾವಲಿಗಾಗಿ ಕಾಡಿಗೆ ಹೋದವನು ೧೨ ವರ್ಷ ತನ್ನ ಹೆಂಡತಿಯನ್ನೇ ಮರೆತಂತವನು. ಜುಂಜಪ್ಪನ ಹಿಂದಿನ ಎರಡು ತಲೆಮಾರುಗಳ ಕತೆಯಲ್ಲಿ ಯಾವ ಪೌರಾಣಿಕ ಅಂಶಗಳೂ ತಲೆ ಹಾಕುವುದಿಲ್ಲ. ಆದರೆ ಜುಂಜಪ್ಪ ಹುಟ್ಟಿನಿಂದಲೇ ವೀರಭದ್ರನ ಅವತಾರವಾಗಿದ್ದಾನೆ. ಆತ ಚಿನ್ನಮ್ಮನ ಬೆನ್ನಿನಿಂದ ಹುಟ್ಟಿ ಬಂದ ಅಯೋನಿಜ. ಅವನ ಬದುಕಿನ ಉದ್ದಕ್ಕೂ ಅಘಟಿತ ಘಟನೆಗಳ ಸರಮಾಲೆಗಳೇ ಜರುಗಿ ಹೋಗುತ್ತವೆ. ಕಾಡು ಗೊಲ್ಲ ಜನಾಂಗದ ಆದರ್ಶಗಳು, ಆಶೋತ್ತರಗಳು, ಆಲೋಚನೆಗಳು ಹೀಗೆ ಎಲ್ಲವೂ ಇಲ್ಲಿ ಮೊಗಪಡೆಯುತ್ತವೆ. ಜುಂಜಪ್ಪನ ಕಾವ್ಯ ಕತೆಗಳನ್ನು ಹಾಡಿ ಹೊಗಳುವ ವಕ್ತ್ಯಗಳ ಕಲ್ಪನಾವಿಲಾಸಕ್ಕೆ ಅವನ ಬದುಕು ಆಡುಂಬೊಲವಾಗಿದೆ. ಅವತಾರಪುರುಷನೆಂದ ಮೇಲೆ ಪವಾಡಗಳ, ಮಹಿಮೆಗಳ ಸಂಕೀರ್ತನೆ ಸಾಮಾನ್ಯ. ಜುಂಜಪ್ಪನ ಪ್ರಿಯಮಿತ್ರ ಬಸವ ಬಡಮ್ಮೆಲ ಕಾಲಜ್ಞಾನಿಯೋಗಿ ಶಿವನ ಮಹಾನಂದಿಯನ್ನೇ ನೆನಪಿಗೆತರುತ್ತದೆ. ಚೀಳೂರಿನಲ್ಲಿ ಬಂಧನಕ್ಕೊಳಗಾಗಿದ್ದ ಅದು ಸರಪಳಿಯನ್ನು ತುಂಡರಿಸಿ, ಕಲ್ಲು ಕಂಭವನ್ನು ಮುರಿದು ಸ್ವಾತಂತ್ರ್ಯ ಮೆರೆದ ಸಾಹಸ ಪ್ರಸಂಗವಂತೂ 'ಬಸವದ್ವಿಲಾಸ'ವಾಗಿ ಕಣ್ಣಿಗೆ ಕಟ್ಟುತ್ತದೆ.

ಉಳಿದಂತೆ ಜುಂಜಪ್ಪನ ಕಾವ್ಯದಲ್ಲಿ ವರ್ಣಿತವಾಗಿರುವ ಕುಡುಪಳ್ಳಿ ಕಾಮನ ಮಾಟ, ತಿರುಮಲ ತಾತಾ ಚಾರಿಯ ಕೈದಂಡ ತಕ್ಕೊಂಡದ್ದು, ಹುಲಿಕುಂಟೆ ತಮ್ಮಣ್ಣ ಕೆರೆಗೆ ಮದ್ದಿಟ್ಟದ್ದು, ಸಾಣಿಕೆರೆ ಪುಟ್ಟಣ್ಣ ಪಂಪು ಹೊಡೆದದ್ದು, ಮುತ್ತಿನ ಶೆಟ್ಟಿಯೊಬ್ಬ ಬಡಮ್ಮೆಲನನ್ನು ಖರೀದಿಗೆ ಕೇಳಿದ್ದು, ಮಾಡದಕೆರೆಪ್ರಸಂಗ, ತಾಳೀದ ದುರ್ಗಿ ಸಂಹಾರ, ಜುಂಜಪ್ಪನ ದನಗಳು ಜೂಜನಪುರ ಹಾದಿದ್ದು; ಹಾಗೂ ಜುಂಜಪ್ಪ ಮರಣೋತ್ತರ ಮೆರೆದ ಮಹಿಮೆಗಳು ಮತ್ತು ಜುಂಜಪ್ಪನ ಸಾವಿನ ಪ್ರಸಂಗಗಳು ಇತ್ಯಾದಿ ನಮ್ಮನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ಜೊತೆಗೆ ಕಾಡು ಗೊಲ್ಲ, ಕುಂಬಿಟಿಗ, ಮ್ಯಾಸಬೇಡ, ಕುರುಬ ಮುಂತಾದ ಬುಡಕಟ್ಟು

ಜನರ ಸಂಬಂಧಗಳ 'ಸ್ಥೂಲಚಿತ್ರ'ವೂ ಎತ್ತಪ್ಪ-ಜುಂಜಪ್ಪನವರ ಕಾವ್ಯಗಳಲ್ಲಿ ಕಂಡುಬರುತ್ತದೆ. ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಎತ್ತಪ್ಪ-ಜುಂಜಪ್ಪನ ಕತೆಗಳು ಒಟ್ಟಾರೆ ಇವು ಪುರುಷಪರವೆಂದೇ ಹೇಳಬಹುದು. ಗೆಜ್ಜೆಕಾಲು ಮಲ್ಲಮ್ಮ, ಕಂಬಕ್ಕ, ಚಿನ್ನಮ್ಮ ಇವರೆಲ್ಲರೂ ತಮಗೆ ಎಷ್ಟೇಕಷ್ಟ ಕಾರ್ಪಣ್ಯ ಒದಗಿಬಂದರೂ ಪತಿ ಅನುಕೂಲೆಯರಾದ ಸತಿಯರೇ ಆಗಿದ್ದಾರೆ. ಎರಡೂ ಕಾವ್ಯಗಳಲ್ಲಿ ಚಿರಂಜೀವಿಯಾಗಿರುವ ಗೌರಸಂದ್ರದ ಮಾರಕ್ಕ ಮಾತ್ರ ನೆಲ ಮುಗಿಲಿಗೆ ಸಂಬಂಧ ಕಲ್ಪಿಸುವ, ನೆನೆದವರ ಮನದಲ್ಲಿ ಬಂದು ಅವರ ಕಷ್ಟಗಳನ್ನು ನಿವಾರಿಸುವ ಜೀವಪರದೈವವಾಗಿದ್ದಾಳೆ. ಹೀಗೆ ಗೌರಸಂದ್ರದ ಮಾರಕ್ಕ ಒಳಿತನ್ನು ಮಾಡುವ ತಾಯಿಯಾದರೆ, ತಾಳ್ಕೇದ ದುರ್ಗಿ ಕೇಡಿನ ಜೀವಿ ವಿರೋಧಿ ರಕ್ಕಸಿಯಾಗಿ ವರ್ಣಿತಳಾಗಿದ್ದಾಳೆ. ಗುಡ್ಡದ ಬೋರಿಯಂತೂ ಹೆಣ್ಣಿನ ಶೃಂಗಾರ ಚೇಷ್ಟೆಗೆ, ಚಂಚಲತೆಗೆ ಹಿಡಿದ ಪ್ರತೀಕದಂತಿದ್ದಾಳೆ. ಇವಳಂತೆಯೇ ದೊಡ್ಡಕ್ಕನಂತಹ ''ನಡತೆ ತಪ್ಪಿದ'' ಹೆಣ್ಣೂ ಇಲ್ಲಿದ್ದಾಳೆ.

ಲೇಖಕರ ಅಭಿಮತದಂತೆ ಎತ್ತಪ್ಪ-ಜುಂಜಪ್ಪನ ಕಾವ್ಯಕತೆಗಳು ಕಾಡುಗೊಲ್ಲ ಜನಾಂಗದ ಏಳು ಬೀಳಿನ ಇತಿಹಾಸವಾಗಿದೆ. ಬುಡಕಟ್ಟು ವ್ಯಕ್ತಿಗಳ ತಲೆ ತಲೆ ಮಾರುಗಳ ಈ ಕತೆಗಳು ಆ ಬುಡಕಟ್ಟು ಜನರಿಗೆ ಕಥಾಮೃತಗಳೂ, ಸಹೃದಯ ವಾಚಕರಿಗೆ ವಿಸ್ಮಯಕಾರಕವೂ ಆಗಿವೆ. ಇಲ್ಲಿ ಪುರಾಣ, ಇತಿಹಾಸ, ಸಾಹಿತ್ಯ, ಪ್ರಾಕ್ತನ ವಿಜ್ಞಾನ ಹಾಗೂ ಮಾನವಶಾಸ್ತ್ರಗಳು ಸಮರಸವಾಗಿ ವರ್ಗೀಕವಾಗುವ 'ಹಾಲು-ಮೀಸಲು' ಗೂಡಿನಹಬ್ಬ ಮತ್ತು ಜುಂಜಪ್ಪನ ಕಾವ್ಯದಲ್ಲಿ ಪ್ರಮುಖವಾಗಿಬರುವ ಬಸವ-ಗಣೆ ಹಾಗೂ ಗಣೆಕಾವ್ಯ ವರ್ಣನೆಗಳು ಹಾಗೂ ಎತ್ತಪ್ಪ ಜುಂಜಪ್ಪ ಇವರ ಹೆಸರಿನಲ್ಲಿ ದೊರೆಯುವ ಕುಲ ಲಾಂಚನಗಳನ್ನು ಪರಿಶೀಲಿಸಿದರೆ ಈ ಎರಡೂ ಕಾವ್ಯಗಳ ಮೇಲೆ ಶೈವ ಹಾಗೂ ವೈಷ್ಣವ ಸಂಸ್ಕೃತಿ - ಸಂಪ್ರದಾಯಗಳ ಪ್ರಭಾವ ಎದ್ದು ಕಾಣುತ್ತದೆ. ಎತ್ತಪ್ಪ ಮತ್ತು ಜುಂಜಪ್ಪ ಇಬ್ಬರೂ ಶೈವಾಂಶ ಸಂಭೂತರೇ. ಆದರೆ ಜುಂಜಪ್ಪನ ಕಾವ್ಯದ ಮೇಲೆ ಭಾಗವತದ ಛಾಯೆ ನಿಚ್ಚಳವಾಗಿ ಬಿದ್ದಂತೆ ಕಂಡುಬರುತ್ತದೆ. ಆದರದು ತಿರುವು-ಮುರುವು ಆದಂತಿದೆ. ಅಲ್ಲಿ ಅಳಿಯ ಕೃಷ್ಣನಿಂದ ಮಾವ ಕಂಸನ ವಧೆಯಾದರೆ, ಇಲ್ಲಿ ಕಂಬೇರ ಸೋದರ ಮಾವಂದಿರಿಂದ ಸೋದರಳಿಯ ಜುಂಜಪ್ಪ ಮಡಿಯುತ್ತಾನೆ. ಆಮೇಲೆ ಕಾಡುಗೊಲ್ಲ ಜನಾಂಗದ ಆಶೋತ್ತರದಂತೆ ಮರಣೋತ್ತರ ಮಹಿಮೆ ಮೆರೆದು ಸೋದರ ಮಾವಂದಿರನ್ನು ನಿರ್ಮೂಲನಮಾಡುತ್ತಾನೆ. ಜುಂಜಪ್ಪ ಕಾಡುಗೊಲ್ಲರು ಕೃಷ್ಣನ ವಂಶಸ್ಥರೆಂದು ಸಂಸ್ಥಾಪಿಸಿಕೊಳ್ಳುವುದಕ್ಕಾಗಿಯೇ ಜುಂಜಪ್ಪನ ಈ ಕೆಲವು ಪ್ರಸಂಗಗಳನ್ನು ಕಥೆಗಾರರು ವಿಸ್ತರಿಸಿ ಕೊಂಡಂತೆ ಕಾಣುತ್ತದೆ. ಹಾಗೆಯೆ 'ನಾವು ಅಚ್ಚಮುತ್ತೈದೆಯರು, ಗೊಲ್ಲಭಾಮೆರು' ಎಂಬ ಕಾಡುಗೊಲ್ಲ ಮಹಿಳೆಯರ ಮಾತುಗಳನ್ನೂ ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸಬಹುದು. ಆಚರಣೆಗೆ ಸಂಬಂಧಿಸಿದಂತೆ ಈ ಸಂಗತಿಗಳು ಹೊಸದಾಗಿ ಸೇರ್ಪಡೆಯಾಗಿರಲೂಬಹುದು. ಯಾಕೆಂದರೆ ಭಾಗವತ ಕೃಷ್ಣನ ಶೃಂಗಾರ ಲೀಲೆಗಳಿಗೆ ಜುಂಜಪ್ಪನ ಕಾವ್ಯದಲ್ಲಿ ಕಿಂಚಿತ್ತೂ ಎಡೆಯಿಲ್ಲ. ದನ ಗಾಹಿನಲ್ಲಿಯೇ ಬದುಕಿನ ಸಾರ್ಥಕತೆ ಸುಖ ಪಟ್ಟು ಜುಂಜಪ್ಪನಿಗೆ ತಾಯಿಪಿನ: ಅನ್ಯ ಸ್ತ್ರೀಯರ ಸಂಸರ್ಗವೇ ಇಲ್ಲ ಅದಕ್ಕಾಗಿ ಆ ಹುಡುಗನಿಗೆ ಪುರುಸೊತ್ತೂ ಇಲ್ಲ. ಜೊತೆಗೆ ಮುಖ ಮೀಸೆ ಬರುವಷ್ಟರಲ್ಲಿ ಅವನು ತನ್ನ ಪವಾಡಗಳನ್ನೆಲ್ಲಾ ಮೆರೆದು ತನ್ನ ಅವತಾರ ಮುಗಿಸಿ ಹೋದ. ಇದೆಲ್ಲ ಏನೇ ಇರಲಿ, ಕಾಡುಗೊಲ್ಲರು ತಮ್ಮ ಕಾವ್ಯದಲ್ಲಿ ಹಾಗೂ

ಆಚರಣೆಯಲ್ಲಿ ಕೃಷ್ಣನ ಕತೆಯನ್ನು ಆಹ್ವಾನಿಸಿಕೊಂಡುದರಿಂದ ಅವರ ಕಾವ್ಯ ಮತ್ತು ಅವರ ಬದುಕು ಸಂಪದ್ಯುಕ್ತವಾಯಿತೆಂದೇ ಹೇಳಬೇಕು.

ಎತ್ತಪ್ಪ-ಜುಂಜಪ್ಪನವರ ಕೃತಿಗಳ ಮೇಲೆ ವೈಷ್ಣವ ಪ್ರಭಾವಕ್ಕಿಂತ ಶೈವ ಮಹಿಮೆಯೇ ಹೆಚ್ಚು ಕಂಡುಬರುತ್ತದೆ. ಜುಂಜಪ್ಪನಂತೂ ವೀರಭದ್ರನ ಅವತಾರವೆಂದೇ ನಂಬಲಾಗಿದೆ. ಜುಂಜಪ್ಪ ಶ್ರಮ ಸಂಸ್ಕೃತಿಯ ಒಬ್ಬ ಪ್ರಾತಿನಿಧಿಕ ಬಾಲಕ ನೆಂಬ ಶಿವಣ್ಣನವರ ಮಾತು ಸರಿಯಾಗಿದೆ. ಆದ್ದರಿಂದ ಈ ದನಗಾಹಿ ಬಡವನಿಗೆ ಶೃಂಗಾರ ಲೀಲೆಗಳು ಶಕ್ಯವಿಲ್ಲ, ಸಮಯವೂ ಇಲ್ಲ.

ಜಾಗತಿಕ ಬುಡಕಟ್ಟು ವೀರರಾದವರಿಗೆ ಹೇಗೋ ಹಾಗೆಯೇ ಜುಂಜಪ್ಪನ ಹುಟ್ಟು, ಬಾಲ್ಯ, ಪವಾಡ ಪ್ರಸಂಗಗಳು, ಹಾಗೂ ಮರಣೋತ್ತರ ಮಹಿಮೆಗಳು - ಈ ಮುಂತಾದ ಕಥಾ ಬೆಳವಣಿಗೆಯಲ್ಲಿ ಒಂದು ಐಕ್ಯ ಕ್ರಮವಿದೆ. ಅವನು ಸತ್ತ ಮೇಲೆಯೂ ಸಹ ಗುಡಿಕಟ್ಟಿ, ಪೂಜೆ-ಜಾತ್ರೆನಡೆಸಲಾಗುತ್ತದೆ. ಸಾಹಿತ್ಯ ಕಲೆಗಳಲ್ಲಿ ಅವನ ತ್ಯಾಗ, ಬಲಿದಾನಗಳನ್ನು ಕೊಂಡಾಡಿ ಹಾಡಲಾಗುತ್ತಿದೆ.

ಜುಂಜಪ್ಪನ ಕಾವ್ಯ ಭೋರ್ಗರೆದು ಧುಮ್ಮಿಕ್ಕಿ ಅಲ್ಲಿ ಹೊಕ್ಕು ಇಲ್ಲಿ ಇಳಿದು, ತರಂಗೋತ್ತರವಾಗಿ ಮೈದಾನದಲ್ಲಿ ನಿಧಾನಿಸಿ, ಸಾಗರಾಭಿಮುಖವಾಗಿ ಹರಿವ ನದೀಪಾತ್ರದಂತೆ ಕಂಡುಬರುತ್ತದೆ. ಪವಾಡಗಳಿಲ್ಲದ ಪುರಾತನ ಬುಡಕಟ್ಟು ಕಾವ್ಯಗಳುಂಟೆ? ಎತ್ತಪ್ಪ- ಜುಂಜಪ್ಪ ಇವರ ಬೆನ್ನಿಗಿರುವ ಪವಾಡಗಳು ಈ ಪಾತ್ರಗಳಿಗೆ ಪ್ರಭಾವಳಿಗಳಾಗಿ ಕೇಳುಗ ಶ್ರೋತೃಗಳಲ್ಲಿ ಭಯಭಕ್ತಿ ಗೌರವಗಳನ್ನು ಉದ್ದೀಪನ ಮಾಡುತ್ತವೆ. ಇದರಿಂದ ಬುಡಕಟ್ಟು ಜನರ ಮುಗ್ಧ-ಋಜು ಸ್ವಾಭಾವ ಮತ್ತಷ್ಟು ಪ್ರಕಾಶ ಮಾನವಾಗುತ್ತದೆ.

ಕಾಡುಗೊಲ್ಲ ಬುಡಕಟ್ಟು ಜನರ ಸಾಹಿತ್ಯ ಕಲೆ ಹಾಗೂ ಅವರ ಆಚರಣೆಗಳಲ್ಲಿ ಎದ್ದು ಕಾಣುವ, ಅವರು ಬುಡಕಟ್ಟು ಜನರು ಎಂದು ಸಾಬೀತು ಪಡಿಸುವ ಕೆಲವಾರು ವೈಲಕ್ಷಣ್ಯಗಳಿವೆ. ಅವುಗಳಲ್ಲಿ ಕೆಲವನ್ನು ಕುರಿತು ಸ್ವಲ್ಪ ಪರಿಶೀಲಿಸಬಹುದು. ಮೊದಲನೆಯದಾಗಿ ನಮ್ಮ ಲೇಖಕರ ಅನುಭವವೇ ಹೇಳುವಂತೆ, ಈ ಜನರು ಬಹಳ ಜಿಗುಟು ಹಾಗೂ ಒಂದು ರೀತಿ ಹಠಮಾರಿ ಸ್ವಭಾವದವರು. ಇದು ಸರಿ ಉದಾಹರಣೆಗೆ ಶಿವಣ್ಣನವರ ಈ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದ ಕ್ಯಾತಣ್ಣ-ಈರಣ್ಣ ಎಂಬ ಚಳ್ಳಕೆರೆಯ ಗಣೆ ಹಾಡು-ಗಣೆವಾದನ ಕಲಾವಿದರು ಈ ಒಂದೆರಡುದಿನ ಹಣ್ಣು-ಹಂಪಲು ತಿಂದುಕೊಂಡು ಇದ್ದರೇ ಹೊರತು ಮನೆ ಅಥವಾ ಹೋಟೆಲ್‌ಗಳಲ್ಲಿ ಉಂಡವರಲ್ಲ. ಅಂದಿನ ಕಾಡುಗೊಲ್ಲ ಪೂಜಾರಿಗಳು ಇವತ್ತಿಗೂ ಅವರ ಮನೆ-ಗುಡಿ ಹೊರತು ಎಲ್ಲಿಯೂ ಊಟೋಪಚಾರ ಮಾಡುವುದಿಲ್ಲ; ಅಷ್ಟು ಕಟ್‌ನಿಟ್ಟು. ಇರಲಿ.

ಮುಟ್ಟಾದ ಹೆಂಗಸರು ಮತ್ತು ಬಾಣಂತಿಯರನ್ನು ಕ್ಲುಪ್ತಸೂತಕದ ದಿನಗಳು ಕಳೆಯುವವರೆಗೆ ಹಟ್ಟಿಯಿಂದ ಹೊರಗಿರುವ ಸೂತಕದ ಗುಡಿಸಲು ಹಾಗೂ ಬಾಣಂತಿ ಗುಬ್ಬಗಳಲ್ಲಿ ಇರಿಸಲಾಗುತ್ತದೆ. ಇದು ಆಧುನಿಕ ದೃಷ್ಟಿಗೆ ತುಂಬಾ ಕೆಡುಕೆನಿಸುತ್ತದೆ. ಸಮಜಾಯಿಷಿ ನೀಡುವುದು ಕಷ್ಟ. ಆದರೂ

ಮುಟ್ಟಾದ ಹೆಣ್ಣು ಮಕ್ಕಳಿಗೆ ಮೂರು ದಿನ ವಿಶ್ರಾಂತಿ ಹಾಗೂ ಹುಟ್ಟಿದ ಮಗು ಮತ್ತು ಬಾಣಂತಿಯರು ಬಾಹ್ಯ ಪರಿಸರಕ್ಕೆ ಒಗ್ಗಿಕೊಳ್ಳ (ಇಮ್ಯೂನ್) ಬೇಕು ಎಂಬ ಅಲೆಮಾರಿಜನರ ದೂರದೃಷ್ಟಿಯೆ ಕಾರಣ ವಿರಬೇಕು.

ಎರಡನೆಯದಾಗಿ, ಇವರು ತಮ್ಮ ಹಟ್ಟಿ ಹಾಗೂ ದೇವರ 'ಭವಂತಿ ಮನೆ'ಗಳಿಗೆ ಹೊರಗಿನವರನ್ನು ಸಲೀಸಾಗಿ ಸೇರಿಸದಿರುವುದು. ಕಾರಣ ಸ್ಪಷ್ಟ. ಊರು-ಕೇರಿಗಳ ಜನರಿಂದ ತಮ್ಮ ಗೋವು ಕುರಿಗಳಿಗೆ ಎಲ್ಲಿ ಸಾಂಕ್ರಾಮಿಕ ರೋಗಾಣುಗಳು ಹಬ್ಬುತ್ತವೆಯೋ ಎಂಬ ಭಯ. ಜಾಗತಿಕವಾಗಿ ಈಗ ವಿಮಾನ ನಿಲ್ದಾಣಗಳ ಮೂಲಕ 'ಆಂಥ್ರಾಕ್ಸ್' ಎಂಬ ರೋಗಾಣುಗಳು ಹಬ್ಬದಂತೆ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಕಂಡರೆ, ಕಾಡುಗೊಲ್ಲರ ಈ ಸಾಂಪ್ರದಾಯಿಕ ಕಟ್ಟಲೆಗಳ ಹಿಂದಿರುವ ವೈಜ್ಞಾನಿಕ ದೃಷ್ಟಿಕೋನ ಏನೆಂಬುದು ಸ್ವಲ್ಪ ತಿಳಿದುಬಂದೀತು.

ಈ ಜನ ದೇವರ ಕಾರ್ಯಗಳ ಸಂದರ್ಭದಲ್ಲಿ ಅರೆಬಡಿಯುವ ಹೊಲೆಯರನ್ನು ಹಟ್ಟಿ ಒಳಗೆ ಸೇರಿಸಿದರೂ ಪಂಜುಹಿಡಿಯುವ ಮಾದಿಗರನ್ನು ಮಾತ್ರ ಸೇರಿಸುವುದಿಲ್ಲ; ಯಾಕೆಂದರೆ ಅವರ ಪಂಜಿನಕಿಡಿ ಹಾರಿ ದೇವರ 'ಕಳ್ಳೆ-ಬೇಲಿ' ಗುಡಿ ಹತ್ತಿಕೊಂಡೀತು ಎಂಬ ಭಯ ಕಾರಣವಿರಬೇಕು - ಎಂಬುದಾಗಿ ಶಿವಣ್ಣನವರು ಹೇಳುತ್ತಾರೆ. ಅದು ನಿಜವಿದ್ದರೂ ನಾವು ಇನ್ನೊಂದು ಊಹೆಮಾಡುವುದಾದರೆ, ಸಾಮಾನ್ಯವಾಗಿ ಮಾದಿಗರು ಸತ್ತದನಗಳನ್ನು ಸುಲಿದು ಚರ್ಮವನ್ನು ಒಪ್ಪಮಾಡುತ್ತಿದ್ದರಾದ ಕಾರಣ, ಅವರಿಂದ ಸಾಂಕ್ರಾಮಿಕ ರೋಗಾಣುಗಳು ಹೆಚ್ಚು ಹರಡುವ ಸಾಧ್ಯತೆ ಇತ್ತು. ಆದ ಕಾರಣ ಕಾಡುಗೊಲ್ಲರು ಮಾದಿಗರನ್ನು ಸಂಪೂರ್ಣವಾಗಿ ಹಟ್ಟಿಗಳಿಂದ ಹೊರಗಿಟ್ಟರು ಎನ್ನಬೇಕಾಗುತ್ತದೆ. ತಮ್ಮ ದನ-ಕುರಿಗಳನ್ನು ಕಾಯ್ದುಕೊಂಡು ಇತರ ನಾಗರಿಕ ಜನರ ಸಂಸರ್ಗಕ್ಕೆ ಬಾರದ, ಕಾಡಿನ ಅಂಚುಗಳಲ್ಲಿ ಜೀವಿಸುತ್ತಿದ್ದ ಈ ಬುಡಕಟ್ಟು ಜನರು ತಮ್ಮ ಜೀವರಾಶಿಗಳಿಗೆ ಎಲ್ಲಿ ರೋಗ ತಗುಲೀ ತೊ ಎಂಬ ಎಚ್ಚರಿಕೆಯ ಕ್ರಮಗಳಾಗಿ ಹೀಗೆ ಅಂಟು-ಮುಂಟು-ಸೂತಕಗಳ ಕಟ್ಟು-ಕಟ್ಟಲೆಗಳನ್ನು ರೂಢಿಸಿಕೊಂಡಿರಬೇಕು ಎಂದರೆ ಸಾಕು. ಮೂರನೆಯದಾಗಿ, ಕಾಡು ಗೊಲ್ಲರು ಬ್ರಾಹ್ಮಣ ಪೂಜಾರಿ ಪುರೋಹಿತರನ್ನು ತಮ್ಮ ಯಾವ ಸಾಂಸ್ಕೃತಿಕ ಕಾರ್ಯಗಳಿಗೂ ಆಹ್ವಾನಿಸದಿರುವುದು. ಅವರ'ಕಳ್ಳೆ ಬೇಲಿ' ರೊಪ್ಪ ದೈವಗಳ ಬಳಿಗೆ/ ಮದುವೆ ಮುಂತಾದ ಕಡೆ ಬ್ರಾಹ್ಮಣರು ಸುಳಿಯುವಂತೆಯೇ ಇಲ್ಲ. ಇದು ಆ ಬುಡಕಟ್ಟಿನ ಐಡೆಂಟಿಯನ್ನು ಕಾಪಾಡಿಕೊಳ್ಳುವ ಒಂದು ಅದ್ಭುತ ಲಕ್ಷಣ. ಹೀಗೆ ಕಾಡುಗೊಲ್ಲರು ನಾಗರಿಕ ಸಮಾಜದ ಅತ್ಯಂತ ಮೇಲಿನ ಬ್ರಾಹ್ಮಣರನ್ನೂ ಹಾಗೂ ಅತ್ಯಂತ ಕೆಳಗಿನ ಮನುಷ್ಯರಾಗಿರುವ ಮಾದಿಗರನ್ನು ತಮ್ಮ ಹಟ್ಟಿಗಳಿಂದ ಹೊರಗಟ್ಟಿ ಬದುಕುವವರಾಗಿದ್ದಾರೆ.

ಮತ್ತೆಕೆಲವು ಲಕ್ಷಣಗಳೆಂದರೆ, ಕೆಲವು ಮಹಿಳೆಯರು ಕುಪ್ಪಸತೊಡದ ಅನಾಗರಿಕರಂತೆ ಕಂಡುಬಂದರೆ, ಮತ್ತೆ ಕೆಲವು ಮಹಿಳೆಯರು ಗಂಡ ಸತ್ತರೂ ಬಳೆ ಒಡೆಯದೆ, ಗೊಲ್ಲ ಕಡಗಧರಿಸಿ ಅಚ್ಚ ಮುತ್ತೈದೆಯರಂತೆ ಭಾಸಿಸುವುದು ತೀರ ಅತ್ಯಾಧುನಿಕವೆಂಬಂತಿದೆ. ಹೀಗೆ ಕಾಡುಗೊಲ್ಲರ ಕೆಲವು ಸಂಪ್ರದಾಯಗಳು ವೈರುಧ್ಯದ ಆಗರವೆಂದು ಸಂಶೋಧಕ ಶಿವಣ್ಣನವರು ವಿಶ್ಲೇಷಿಸುತ್ತಾರೆ. ಇನ್ನಿವರ

'ಹಾಲು ಮೀಸಲು' ಜನಿಗೆ ಸಂಪ್ರದಾಯ, ಗೂಡಿನ ಹಬ್ಬ, ವಿದ್ಯುತ್ ದೀಪ ಒಲ್ಲದ ದೈವ, ಭವಂತಿಮನೆ, ಬಾಣಂತಿ ಗುಬ್ಬ, ಸೂತಕದ ಗುಡ್ಲು ಉಳ್ಳಿಬತ, ನವಣಿ ಬತ (=ವ್ರತ) ಈ ಮುಂತಾದ ಸಂಪ್ರದಾಯಗಳು ತುಂಬ ವಿಶಿಷ್ಟವಾಗಿವೆ; ಇವರು ಪೂಜಿಸುವ ಭೂತ 'ಭವನ'ಗಳೂ ವಿಶಿಷ್ಟವಾದವುಗಳಾಗಿವೆ. 'ಕಟ್ಟಿಮನೆ' ಮನೆಗಳೆಂಬ ನ್ಯಾಯಸ್ಥಾನಗಳಿದ್ದು, ದಿನ-ವಾರಗಟ್ಟಲೆ ಅಲ್ಲಿ ಗಂಟು ಬಿದ್ದ ನ್ಯಾಯಗಳನ್ನು ಬಿಡಿಸಲಾರದೆ ಸೋತು ಹೋಗುವುದುಂಟು. ಆದ್ದರಿಂದಲೇ ಗೊಲ್ಲರ ನ್ಯಾಯಕ್ಕೆ, ಕಮ್ಮಾರನ ಕುಲುಮೆಗೆ ನಾ ಹೋಗಲಾರೆ 'ಎಂಬ ನುಡಿ ಗಟ್ಟು ಹುಟ್ಟಿಕೊಂಡಿದೆ.

ಕುರುಬರು, ಕುಂಚಿಟಿಗರು, ಬೇಡರಂತೆ, ಕಾಡು ಗೊಲ್ಲರ ಸಹ ಉತ್ತರದ ತುರುಕರ ಹಾವಳಿಗೆ ಹೆದರಿ ತುಂಗಭದ್ರೆಯನ್ನು ದಾಟಿ ದಕ್ಷಿಣಕ್ಕೆ ಬಂದೆವೆಂದು ತಮ್ಮ ಸಾಂಸ್ಕೃತಿಕ ಹಿರಿಮೆಯನ್ನು ಸ್ಥಾಪಿಸಿಕೊಳ್ಳುವುದು ಸ್ವಾಭಾವಿಕವೇ. ಆದರೆ ಈ ಬುಡಕಟ್ಟುಗಳೆಲ್ಲ ಈಗ ಒಂದೇ ಭೂಭಾಗದಲ್ಲಿ ಜೀವಿಸುತ್ತಿದ್ದು ಆಚಾರ ವಿಚಾರ, ಸಂಪ್ರದಾಯಗಳಲ್ಲಿ ಪರಸ್ಪರ ಪ್ರಭಾವಿತರಾಗಿದ್ದಾರೆಂಬುದೂ ಸರಿಯಾದ ಊಹೆ. ಆದರೆ ಕಾಡುಗೊಲ್ಲರಿಗೂ - ಮ್ಯಾಸ ಬೇಡರಿಗೂ ಮೊದಲಿನಿಂದಲೂ ಬದ್ಧ /ವೈರತ್ವ ಇರುವುದನ್ನು ಎತ್ತಪ್ಪ - ಜುಂಜಪ್ಪನ ಕಾವ್ಯಕತೆಗಳು ಸಾದರ ಪಡಿಸುತ್ತವೆ. ಬಹಳ ಮಟ್ಟಿಗೆ ಮ್ಯಾಸಬೇಡರು ಗೊಲ್ಲರ ಪ್ರೀತಿ ಪಾತ್ರ ದನಗಳನ್ನು ಕೊಂಡು ತಿನ್ನುವರೆಂಬ ಕಾರಣಕ್ಕೆ ಅವರೊಡನೆ ವೈರವನ್ನು ಸಾಧಿಸುತ್ತಿದ್ದಿರಬೇಕು. ಈ ಸಂಗತಿಯನ್ನು ಶಿವಣ್ಣನವರು ಗಮನಿಸಿದಂತೆ ಕಾಣುವುದಿಲ್ಲ. ಇನ್ನೊಂದು ವಿಶೇಷವೆಂದರೆ ಬೇಡರ ಮಹಿಳೆಯರು ಗೊಲ್ಲರ ಹುಡುಗರನ್ನು 'ಭೋಗ'ಕೊಡು ಎಂದು ಪೀಡಿಸುತ್ತಿದ್ದುದು. ಗಂಡುಳ್ಳಗರತಿ ಗುಡ್ಡದ ಬೋರಿ ಎತ್ತಪ್ಪನನ್ನು ಅಡ್ಡಗಟ್ಟಿ ಇದಕ್ಕಾಗಿ ಕಾಡಿಸುತ್ತಾಳೆ. ಆದರೆತನ್ನ ಕಾಮನೆ ಈಡೇರದಕಾರಣ, ರಾಮಾಯಣದ ಶೂರ್ಪನಖಿಯಂತೆ ವರ್ತಿಸಿ, ಸಂಡೂರುಬೊಮ್ಮನಿಂದ ಎತ್ತಪ್ಪನ ತಲೆಕಡಿಸಲು ಕಾರಣವಾಗುತ್ತಾಳೆ. ಎತ್ತಪ್ಪ-ಜುಂಜಪ್ಪ ಈ ಪಾಳೆಗಾರ ಬೇಡರ ಲೆತ್ತ ಪಗಡೆ ಜೂಜಿಗೆ ಹೋದರೂ, ಜೂಜಿನ ಪಣದಂತೆ ಅವರು ಗೌಡಿಕೆಯನ್ನು ಗೆದ್ದುಕೊಂಡರೂ ನಾಲ್ಕಾರುದಿನ ಆಳಿ; ಕಂದಾಯವನ್ನು ಕಡಿಮೆಮಾಡಿ, ಜನರಿಗೆ ಒಳ್ಳೇದು ಮಾಡಿ ಪುನಃ ಅವರ ಗೌಡಿಕೆಯನ್ನು ಅವರಿಗೇ ಒಪ್ಪಿಸಿ ಕಾಡಿಗೆ ಹಿಂದಿರುಗುತ್ತಿದ್ದರು. ಆ ಕಾಲಕ್ಕೆ ಗೋವುಗಳು ಸಂಪತ್ತಿನ ಮಾನದಂಡಗಳಾಗಿದ್ದುದರಿಂದ ಕಾಡುಗೊಲ್ಲರ ಗೋಗ್ರಹಣಮಾಡಿಕೊಳ್ಳಲು ಮ್ಯಾಸಬೇಡರು ಈ ಲೆತ್ತಪಗಡೆ ಜೂಜಿಗೆ ಆಹ್ವಾನಿಸುತ್ತಿದ್ದಾರೆಂದು ಭಾವಿಸಬಹುದು. ಆದರೆ ದನಗಾಹಿಗೊಲ್ಲರು ಈ ಊರವರು ಒಡ್ಡಿದ ಜೂಜುಗಳನ್ನು ಗೆದ್ದು ಬಿಡುತ್ತಿದ್ದರು. ಒಮ್ಮೊಮ್ಮೆ ಜೂಜನ ಮರಗಳನ್ನು ಹಾರುವ ಮೂಲಕ ಎತ್ತಪ್ಪ-ಜುಂಜಪ್ಪ ಇವರ ದನಗಳೂ ಪಣ ಗೆದ್ದುಬಿಡುತ್ತಿದ್ದವು. ರಾಜರಾದವರಿಗೆ ಸೈನಿಕರಿದ್ದಂತೆ ಗೊಲ್ಲರಿಗೆ ಅವರ ದನಗಳು.

ಎತ್ತಪ್ಪ ಕಾಡುಗೊಲ್ಲರ ಸಂಪ್ರದಾಯ ಶಿಲ್ಪಿಯಾಗಿ 'ಹಾಲುಮೀಸಲು' ಜನಿಗೆ ಹಾಲು ಕುಡಿಸುವುದು, ಗೋಡಿನ ಹಬ್ಬ ಇತ್ಯಾದಿ ಆಚರಣೆಗಳಿಗೆ ನಾಂದಿಹಾಡಿದರೆ, ಜುಂಜಪ್ಪ ಎತ್ತಪ್ಪನ ಈ ಸಂವಿಧಾನವನ್ನು ಊರ್ಜಿತಗೊಳಿಸಿ ಕಾಡುಗೊಲ್ಲ ಜನಾಂಗದ ಸ್ವಾಭಿಮಾನ, ಸಂಸ್ಕೃತಿ, ಪ್ರತಿಷ್ಠೆಗಳನ್ನು

ಇನ್ನಷ್ಟು ಪ್ರಕಾಶ ಪಡಿಸುವ ಮೂಲಕ ವಿಜೃಂಭಿಸುತ್ತಾನೆ. ಡಾ. ಶಿವಣ್ಣನವರು ತಮ್ಮ ಈ ಗ್ರಂಥದಲ್ಲಿ ಎತ್ತಪ್ಪ-ಜುಂಜಪ್ಪ ಇವರು ಬಾಳಿ ಬದುಕಿದ ನೆಲೆ-ಸ್ಥಳಗಳನ್ನು ಶೋಧಿಸುತ್ತಾರೆ, ಅವರ ಸಂಪ್ರದಾಯಗಳನ್ನು ಹೆಕ್ಕಿತೆಗೆಯುತ್ತಾರೆ. ಅವರ ವಲಸೆ-ವಾಸ್ತುಶಿಲ್ಪ- ಗಣೆ- ಗಣೆ ಕಾವ್ಯ ಜಾಲಾಡಿಸಿ ಈ ಇಬ್ಬರು ಸಾಂಸ್ಕೃತಿಕ ವೀರರ ಕತೆಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುತ್ತಾರೆ. ಇದಕ್ಕಾಗಿ ಅವರ ಪಟ್ಟುಪಾಡು ಕ್ಷೇತ್ರ ಕಾರ್ಯದ ಅನುಭವದಲ್ಲಿ ಮಡುಗಟ್ಟಿದೆ.

ಡಾ. ಶಿವಣ್ಣನವರು ತಮ್ಮ 'ಕಾಡುಗೊಲ್ಲ ಬುಡಕಟ್ಟು ವೀರರು' ಎಂಬ ಗ್ರಂಥದಲ್ಲಿ ಪ್ರಸ್ತಾಪಿಸದೆ ಬಿಟ್ಟಿರುವ ಒಂದು ಸಂಗತಿ ಎಂದರೆ ಸದಾ ಜೀವರಾಶಿಗಳ ಒಡನಾಡಿಗಳಾದ ಈ ಜನ ಅವುಗಳಿಗೆ ಜಡ್ಡು ಜಾಪತ್ತು ಬಂದಾಗ ಮಾಡುತ್ತಿದ್ದ ನಾಟವೈದ್ಯ ವಿಜ್ಞಾನದ ಬಗೆಗೆ ಕಾಡು ಗೊಲ್ಲರು ತಮ್ಮ ದನಕರು, ಕುರಿ ಆಡು, ಎಮ್ಮೆ ಇತ್ಯಾದಿ ಜೀವರಾಸುಗಳನ್ನು ಊರುಕೇರಿಗಳಿಂದ ಎಷ್ಟೇ ದೂರ ಇಟ್ಟುಕೊಂಡಿದ್ದರೂ, ಅಂಟು ಮುಂಟು ಮುಂತಾದ ಕಟ್ಟಳೆಗಳನ್ನು ಎಷ್ಟೇ ಜತನದಿಂದ ಕಾಪಾಡಿಕೊಂಡಿದ್ದರೂ ಅವುಗಳಿಗೆ ಒಮ್ಮೊಮ್ಮೆ ಏನಾದರೂ ರೋಗತಗುಲಿ ಬಿಟ್ಟು ಸಾವಿಗೀಡಾಗುತ್ತಿದ್ದವು. ಅಂಥವೇಳೆಯಲ್ಲಿ ಅವುಗಳನ್ನು ಉಳಿಸಿಕೊಳ್ಳಲು ಬುಡಕಟ್ಟುಗಳು ತಮ್ಮದೇ ಆದ ವೈದ್ಯ ಪದ್ಧತಿಯನ್ನು ಅನುಭವದಿಂದ ಕಲಿತು ರೂಢಿಸಿಕೊಂಡು ಬರುತ್ತಿದ್ದರು. ಇಂಥ ಕೆಲವು ಪಶುಪಂಡಿತರನ್ನು ನಾನೇ ಕಂಡಿದ್ದೆನು. (ರಂಗಾಪುರದ ಹಟ್ಟಿ - ಮಧುಗಿರಿ ತಾಲ್ಲೂಕು) ಸಾಮಾನ್ಯವಾಗಿ ಪಶುಗಳಿಗೆ ಬರುವ ರೋಗಗಳೆಂದರೆ ಸ(ಚ)ಪ್ಪೆ ರೋಗ, ಸಿಳ್ಳುರೋಗ, ದೊಡ್ಡರೋಗ, ಸಪ್ಪೆಜಡ, ಮಾರಿಜಡ, ಕರೆಗಾಬು(ಕುರಿಗಳಿಗೆ) ಕಾಲು ಜ್ವರ-ಬಾಯಿಜ್ವರ (ಗೆರಸಲು) ಮುಂತಾಗಿ ಮೆಲುಕುಹಾಕುವ ಜೀವರಾಸುಗಳಿಗೆ ತಗುಲುವರೋಗಗಳು.

ಇವು ತಗುಲದಂತೆ ಮುಂಜಾಗ್ರತಾ ಕ್ರಮವಾಗಿ ಅನೇಕ ಬಗೆಯ ಮದ್ದುಗಳನ್ನು ಮಾಡುತ್ತಾರೆ. ಉದಾ: ಸಪ್ಪೆಜಡ, ದೊಡ್ಡರೋಗ ಇದ್ದ ಯಾವುದಾದರೂ ಊರುಗಳಲ್ಲಿ ತಲೆದೋರಿದ್ದರೆ ಅಥವಾ ನೆರೆ ಊರಿನಲ್ಲಿದ್ದರೆ 'ಮದ್ದು ಕಟ್ಟಿಸುವ' ಒಂದು ಮುಂಜಾಗ್ರತಾ ಕ್ರಮವನ್ನು ನಿರ್ವಹಿಸುತ್ತಿದ್ದರು. 'ಮದ್ದುಕಟ್ಟುವುದು' ಎಂದರೆ ನುರಿತ ನಾಟವೈದ್ಯ ಹಂದಿಕುಪ್ಪದಲ್ಲಿ ಕೆಲವು ಗಿಡಮೂಲಿಕೆಗಳನ್ನು ಹಾಕಿ ಮದ್ದುಮಾಡಿ ಆ ಗಡಿಗೆಗಳನ್ನು ಊರು ಬಾಗಿಲಿಗೆ, ಹಟ್ಟಿ ಬಾಗಿಲಿಗೆ ಕಟ್ಟುವುದು. ಮತ್ತು ಅದೇ ಮದ್ದನ್ನು ಪ್ರತಿಯೊಂದು ರಾಸಿನ ಎಡ ಅಳ್ಳೆಯ ಮೇಲೆ (ಕಿಬ್ಬೊಟ್ಟೆ) ಗುರುತುಹಾಕಿ, ಸ್ವಲ್ಪ ಮದ್ದನ್ನು ಆ ಪ್ರಾಣಿಗೆ ನೆಕ್ಕಿಸುವುದು ಇತ್ಯಾದಿ. ಹೀಗೆ ಮದ್ದುಕಟ್ಟಿದ ಅವಧಿಯಲ್ಲಿ ಆ ಊರಿನಲ್ಲಿ ದೋಸೆ ಹಂಚು ಇಡುವಂತಿಲ್ಲ, ಒಗ್ಗರಣೆಹಾಕುವಂತಿಲ್ಲ. ಈ ಕಟ್ಟಳೆ ಎರಡುವಾರ ಜಾರಿಯಲ್ಲಿರುತ್ತಿತ್ತು. ಹಾಗೆಯೆ ಬಾಡಿದ ಜೋಳದ ಚಿಗುರು, ಅರಳಿಲೆ (ಜಾಡಲ) ತಿಂದು ಸೊಕ್ಕಿದ ದನ ಕುರಿಗಳಿಗೆ ಸಾಬೂನಿನ ದ್ರಾವಣ ಕುಡಿಸುವುದು, ಲೋಳೆಸರ ಪಟ್ಟೆಯನ್ನು ದವಡೆಗೆ ಕೊಡುವುದು ಇತ್ಯಾದಿ ಪರಿಹಾರೋಪಾಯಗಳುಂಟು. ಕೆಲವೊಮ್ಮೆ ಹಸು-ಎಮ್ಮೆಗಳು ಈಯುವಾಗ ಕರು ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿರುವಾಗ ನಿಷ್ಣಾತ ಪಂಡಿತ ವೈದ್ಯರು ಬಂದು ಆ ಪ್ರಾಣಿಯ ಗರ್ಭಕೋಶಕ್ಕೆ ಕೈ ಹಾಕಿ ಕರುವನ್ನು ಈಚೆ ಎಳೆದು ಅವುಗಳ ಜೀವವನ್ನು ಉಳಿಸುವುದೂ ಉಂಟು.

ಗೋಧೂಳಿಯ ಸಂಜೆ ಹೊತ್ತಿನಲ್ಲಿ ಕಾಡಿನಿಂದ ಮೇದು ಬರುವ ದನಕುರಿ ಹಟ್ಟಿ ಬಾಗಿಲಿಗೆ 'ರತ ನೀರು ಚೆಲ್ಲು ದೃಷ್ಟಿ ತೆಗೆಯುವುದು ಇತ್ಯಾದಿ ಆಚರಣೆಗಳು ರೂಢಿಯಲ್ಲಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ರಾತ್ರಿ ಮಲಗುವಾಗ, ಬೆಳಿಗ್ಗೆ ಎದ್ದಾಗ ಗೋವುಗಳ ಮುಖನೋಡಬೇಕು ಎಂಬ ಆಶಯದಲ್ಲಿ ಅವುಗಳ ಆರೋಗ್ಯತಪಾಸಣೆಯ ದೃಷ್ಟಿಯೂ ಬೆರೆತಿರುತ್ತದೆ ಎನ್ನಬಹುದು. ಹೀಗೆ ಕುರುಬ, ಕುಂಚಿಟಿಗ, ಗೊಲ್ಲ ಈ ಜನಾಂಗಗಳಲ್ಲಿ ತಮ್ಮ ರಾಸುಗಳಿಗೆ ಬರುವ ರೋಗಗಳನ್ನು ಮುಂಜಾಗ್ರತಾ ಕ್ರಮದಿಂದ ತಡೆಗಟ್ಟಿಕೊಳ್ಳುವ ವಿಧಿ ವಿಧಾನಗಳನ್ನು ಕಂಡುಕೊಂಡ ಅನೇಕ ಉದ್ದಾಮ ಪಶುವೈದ್ಯರಿದ್ದರು. ಈ ಸಂಬಂಧವಾದ ವಕ್ಯಗಳು ಶಿವಣ್ಣನವರಿಗೆ ದೊರೆಯಲಿಲ್ಲವೊ ಅಥವಾ ತಮ್ಮ ಗ್ರಂಥಕ್ಕೆ ಈ ವಿಷಯ ಹೊರತು ಎಂದು ಕೈ ಬಿಟ್ಟು ಬಿಟ್ಟರೊ ತಿಳಿಯದು. ಆದರೆ ಅನುಬಂಧದಲ್ಲಿಯಾದರೂ ಈ ಬಗ್ಗೆ ಪ್ರಸ್ತಾಪಿಸಿದ್ದರೆ ಒಳ್ಳೆಯದಿತ್ತು ಎಂದು ನನ್ನ ಅನಿಸಿಕೆ. ಇರಲಿ.

'ಕಾಡು ಗೊಲ್ಲ ಬುಡಕಟ್ಟು ವೀರರು' ಎಂಬ ಈ ಮಹಾಪ್ರಬಂಧವನ್ನು ಅವಲೋಕಿಸುತ್ತಾ ಹೋದಂತೆ ನನಗೆ ವಿ. ಚಂದ್ರಶೇಖರ ನಂಗಲಿಯವರು ಇತ್ತೀಚೆಗೆ ಪ್ರಸಿದ್ಧಪಡಿಸಿರುವ ಹಸಿರುಗೋಪುರ -ಗ್ರೀನ್ ಪಿರಮಿಡ್ ಪ್ರಮೇಯವನ್ನು ಈ ಗ್ರಂಥಕ್ಕೆ ಹಚ್ಚಿ ನೋಡಲೇ ಎಂಬ ಕುತೂಹಲ ಕಾಡುತ್ತಿದೆ. ಹಾಗೆಂದರೆ ನಮ್ಮ ಭೂಮಿಯಲ್ಲಿರುವ ಜೈವಿಕ ಪರಿಸರವನ್ನು ಗಮನಿಸಿ, ನಾವು ಪರ್ಯಾವರಣ ಗೋಪುರ (ಗ್ರೀನ್‌ಪಿರಮಿಡ್) ಎಂದರೆ Ecological pyramid ಒಂದನ್ನು ಕಲ್ಪಿಸಿ ಕೊಳ್ಳಬಹುದು. ಈ ಗ್ರೀನ್ ಪಿರಮಿಡ್‌ನ ಸುವಿಶಾಲ ತಳದಲ್ಲಿ ಸಸ್ಯ ಪರಿಸರ ಇದ್ದರೆ, ತುತ್ತತುದಿಯಲ್ಲಿ ಸರ್ವ ಭಕ್ಷಕ ಮಾನವ ಪರಿಸರವಿದೆ; ಇವೆರಡರ ನಡುವೆ ಉಳಿದೆಲ್ಲ ಸಸ್ಯಾಹಾರಿ ಹಾಗೂ ಮಾಂಸಾಹಾರಿ ಜೈವಿಕ ಪರಿಸರಗಳಿವೆ. ಈ ಹಸಿರು ಗೋಪುರ ಪ್ರಮೇಯವನ್ನು ಪರಿಸರ ವಿಜ್ಞಾನಿಗಳು ಹೇಳುವಂತೆ ನಾವು ತಿಳಿದದ್ದಾದರೆ, ತುತ್ತ ತುದಿಯಲ್ಲಿರುವ ಮನುಷ್ಯ ಪರಿಸರಕ್ಕೆ ಉಳಿದೆಲ್ಲ ಜೈವಿಕ ಪರಿಸರಗಳು ಆಧಾರ ಭೂತವಾಗಿರುವುದು ಕಂಡುಬರುತ್ತದೆ. ಇದರಲ್ಲಿ ಉತ್ಪಾದಕರ ಉತ್ಪಾದಕ ಸ್ಥಾನದಲ್ಲಿರುವ ಒಂದು ನಿಸರ್ಗತಾಣವು ನಾಶವಾಯಿತೆಂದರೆ, ಅಲ್ಲಿರುವ ಮನುಷ್ಯಪರಿಸರ ಹಾಗೂ ಅವರ ಭಾಷಾಸಂಸ್ಕೃತಿ ಕಲೆ ಇತ್ಯಾದಿಗಳು ಕೂಡ ನಾಶವಾಗುವುವು ಎಂಬುದನ್ನು ನಾವು ಗ್ರಹಿಸಿಕೊಳ್ಳಬೇಕು. ನಂಗಲಿಯವರು ಈ ಪ್ರಮೇಯವನ್ನು ಅನ್ವೇಷಿಸಿ ತಮ್ಮ 'ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ' ಎಂಬ ಲೇಖನಕ್ಕೆ ಅನ್ವಯಿಸಿದ್ದಾರೆ. ಇದರಿಂದ ಆ ಕೃತಿಗಳ ಪ್ರವೇಶಕ್ಕೆ ಹೊಸದೊಂದು ಕೀಲಿಕೈ ದೊರೆತಂತಾಗಿದೆ. (ನೋಡಿ. ಆಲಿಸಯ್ಯ ಮಲೆಯ ಕವಿ, ನವಕರ್ನಾಟಕ ಪ್ರಕಾಶನ.)

ಪ್ರಸ್ತುತ ಈ ಪ್ರಮೇಯವನ್ನು ಎತ್ತಪ್ಪ-ಜುಂಜಪ್ಪ ಬುಡಕಟ್ಟು ವೀರರ ಕಥನಕಾವ್ಯಗಳಿಗೂ ಅನ್ವಯಿಸಿ ನೋಡಬಹುದು. ಎತ್ತಪ್ಪ ಮತ್ತು ಅವನ ಪೂರ್ವಿಕರು ಬದುಕಿ ಬಾಳಿದ ಸಂದರ್ಭದಲ್ಲಿ ಈಗಿನ ಚಿತ್ರದುರ್ಗ, ಬಳ್ಳಾರಿ, ತುಮಕೂರು ಸೀಮೆಗಳಲ್ಲಿಯೂ ಸಹ ದಟ್ಟವಾದ ಕಾಡು ಇದ್ದಿರಬಹುದು ಎಂಬುದನ್ನು ಅವರ ಸಾಹಿತ್ಯದ ಆಧಾರದಿಂದ ನಾವು ಊಹಿಸಬಹುದು. ಆದ್ದರಿಂದ ಆ ಜೈವಿಕಪರಿಸರದಲ್ಲಿ ತಮ್ಮ ದನಗಳನ್ನು ಮೇಯಿಸಿಕೊಂಡು ಅವರು ಆರಾಮವಾಗಿದ್ದರು. ಅಲ್ಲಿನ ನಿಸರ್ಗ

ಮತ್ತು ತಿರ್ಯಕ್ ಪರಿಸರದಲ್ಲಿ ಸಾಮರಸ್ಯವಿತ್ತು. ಎತ್ತಪ್ಪನ ಹೆಂಡತಿ ಗೆಜ್ಜೆಕಾಲು ಮಲ್ಲಮ್ಮ ಒಬ್ಬಳೇ ಕೀ ಕಾರಣ್ಯದ ಮಧ್ಯೆ ತನ್ನ ಏಳು ಗೂಡಿನ ದನಗೊಳೊಂದಿಗೆ ಜೀಡು ಬಿಟ್ಟಿದ್ದ ಗಂಡನನ್ನು ಹುಡುಕಿಕೊಂಡು ಹೋಗುತ್ತಾಳೆ; ಎತ್ತಪ್ಪ ಒಂದು ತುಲ್ಲೆಕರುವನ್ನು ಮುದ್ದಿಸಿ ತನ್ನ ದನಗಳಿಗೆ ಸಂಮೃದ್ಧ ಹುಲ್ಲುಗಾವಲು ಎತ್ತಕಡೆ ಉಂಟು ಎಂದು ಮಾತಾಡಿಸುತ್ತಾನೆ; ಅವನ ರುಂಡ ಕಡಿದಾಗ ಮುಂಡದ ಸುತ್ತ ನೆರೆದು ಅವನ ದನಗಳು ಮೂಕಶೋಕ ವ್ಯಕ್ತಪಡಿಸುತ್ತವೆ. ಎತ್ತಪ್ಪನ ಕಾವ್ಯದ ತುಂಬ ಹೀಗೆ ಮನುಷ್ಯರಿಗೂ ಮತ್ತು ಜೈವಿಕ ಪರಿಸರಕ್ಕೂ ಅವಿನಾಸಂಬಂಧ ಏರ್ಪಟ್ಟಿರುವುದನ್ನು ನೋಡಬಹುದು.

ಜುಂಜಪ್ಪನು ಸಹ ಅಡವಿ ವಾಸಿಯೆ ಅವನು ಕೊಳಲು ಊದಿದನೆಂದರೆ ಅವನ ಮುದ್ದು ಬಸವ ಬಡಮೈಲ ಹಟ್ಟಿಹಾಕಿದ್ದ ಚೇಳೂರು ಕಂಭವನ್ನು ಮುರಿದು ಸರಪಣಿಹರಿದು ಹಾರಿಬರುತ್ತದೆ; ಅವನ ದನಗಳು ಜೂಜಿನ ಮರಹಾರಿ ಇವನಿಗೆ 'ಪಣ'ಗೆದ್ದು ಕೊಡುತ್ತವೆ. ಇಂಥ ಎಷ್ಟೋ ಪ್ರಸಂಗಗಳು ಜುಂಜಪ್ಪನ ಕಾವ್ಯದಲ್ಲಿವೆ. ಕಾಡು ಗೊಲ್ಲರು ಪರಿಸರ ಜೀವಿಗಳು ಎಂಬುದನ್ನು ಎತ್ತಪ್ಪ-ಜುಂಜಪ್ಪ ವೀರರ ಕುರಿತ ಕಾವ್ಯ ಕಥೆಗಳು ಉದ್ದಕ್ಕೂ ಸಾದರಪಡಿಸುತ್ತವೆ ಎಂಬುದನ್ನು ಶಿವಣ್ಣನವರ ಈ ಗ್ರಂಥ ಸಮೀಕ್ಷೆಯಲ್ಲಿ ಕಾಣಬಹುದು.

ಆದರೂ ಜುಂಜಪ್ಪನ ಕಾವ್ಯ ಉಗಮಿಸುವ ಕಾಲಘಟ್ಟದಲ್ಲಿ (೧೫-೧೬ನೇ ಶತಮಾನ) ಆಗಲೇ ಅರಣ್ಯನಾಶ ಆರಂಭ ಗೊಂಡಿತ್ತು ಎಂಬುದನ್ನೂ ಜುಂಜಪ್ಪನ ನೆಲೆಗಳು ಸಾದರಪಡಿಸುತ್ತವೆ. ಆದ್ದರಿಂದಲೇ ಅವನು ತನ್ನ ದನಗಳೊಂದಿಗೆ ನೀರಿಗಾಗಿ ಸುತ್ತಾಡಿದ್ದಾನೆ. ಆಗಿನಿಂದಲೂ ಆ ಭಾಗದ ಕಾಡುಗಳು ಕಡಿಮೆ ಆಗುತ್ತಿದ್ದವು ಎಂಬುದಕ್ಕೆ ಕಾರಣಗಳಿವೆ. ಫ್ಯೂಡಲ್ ಪಾಳೇಗಾರರ ಕಂದಾಯ ವಸೂಲಿ ಕಿರುಕುಳವನ್ನು ತಾಳಲಾರದೆ ರೈತಾಪಿಜನ ಕಾಡಿಗೆ ನುಗ್ಗಿ ಅಲ್ಲಿ ಕೃಷಿ ಆರಂಭಿಸಿದರು. ಮುಸಲ್ಮಾನರ ಉಪಟಳ ದಕ್ಷಿಣದಲ್ಲಿ ಹೆಚ್ಚಾಯಿತು. ಜನಸಂಖ್ಯೆ ಹೆಚ್ಚಾದಂತೆ ಸಾಮಾನ್ಯವಾಗಿ ಅವರು ಕಾಡುಗಳ ನಾಶಕ್ಕೆ ತೊಡಗುತ್ತಾರೆ. ಅಲ್ಲಿನ ಸಂಪನ್ಮೂಲಗಳ ಕೊಳ್ಳೆಗೆ ಆರಂಭವಾಗುತ್ತದೆ. ಆಗ ತಮ್ಮ ಜೀವರಾಶಿಗಳಿಗೆ ಅಡವಿಯನ್ನೇ ನಂಬಿಕೊಂಡಿದ್ದ ಕಾಡು ಗೊಲ್ಲ ಬುಡಕಟ್ಟಿಗೆ ತಾಪತ್ರಯ ಉದ್ಭವವಾಗುತ್ತದೆ. ಅವರ ಬದುಕಿನಲ್ಲಿ ಸ್ಥಿತ್ಯಂತರ ಸಂಚಲನಕ್ಕೆ ಕಾರಣವಾಗುತ್ತದೆ.

ಇದಕ್ಕೆಲ್ಲ ಮುಖ್ಯಕಾರಣ ಮೇಲೆ ಹೇಳಿದ ಹಸಿರು ಪಿರಮಿಡ್‌ನಲ್ಲಿ ಉಂಟಾದ ಏರುಪೇರು ಕಾಡುನಾಶವೆಂದರೆ ಸಸ್ಯಪರಿಸರ ನಾಶ; ಸಸ್ಯಪರಿಸರ ನಾಶವೆಂದರೆ ಅಲ್ಲಿ ಜೀವಿಸುತ್ತಿದ್ದ ಸಸ್ಯಾಹಾರಿ ಹಾಗೂ ಅವುಗಳನ್ನು ಅವಲಂಬಿಸಿದ್ದ ಮಾಂಸಾಹಾರಿ ಪರಿಸರ ನಾಶ. ಆಗ ಇವುಗಳನ್ನೇ ಅವಲಂಬಿಸಿರುವ ಮನುಷ್ಯ ಪರಿಸರ ನಾಶ. ಜೊತೆಗೆ ಅವರ ಸಂಸ್ಕೃತಿ ಭಾಷೆ, ಕಲೆ ಎಲ್ಲವೂ ನಾಶ! ಹೀಗಾಗಿ ಸಸ್ಯ ಪರಿಸರಾವಲಂಬಿ ದನಗಳ ಸಾಕಾಣಿಕೆಗೆ ಯಾವಾಗ ಕಷ್ಟ ಒದಗಿಬಂತೋ ಆಗ ಆ ಪ್ರದೇಶದಲ್ಲಿದ್ದ ಕಾಡುಗೊಲ್ಲ ಬುಡಕಟ್ಟಿನ ಬದುಕಿಗೂ ಕುತ್ತು ಬಂದಿತು. ಆದ್ದರಿಂದ ದನಗಳಂತಹ ದೊಡ್ಡ ಜೀವರಾಶಿಗಳನ್ನು ಸಾಕುವುದು ಕೈಬಿಟ್ಟು ಕುರಿ-ಮೇಕೆಯಂತಹ ಚಿಕ್ಕ ಪ್ರಾಣಿಗಳನ್ನು ಸಾಕಲು ಆರಂಭಿಸಿರುವ ಸೂಚನೆಗಳು ಜುಂಜಪ್ಪನ ಕಾವ್ಯದಲ್ಲಿ ದೊರೆಯುತ್ತವೆ.

ಮತ್ತು ಇತ್ತೀಚೆಗೆ ಕಾಡು ಸರ್ವನಾಶವಾಗಿ ಚಿತ್ರದುರ್ಗ, ತುಮಕೂರು, ಬಳ್ಳಾರಿ ಸೀಮೆಗಳು ಬಂಜರು ಬಿದ್ದು ಹೋದುದರಿಂದ ಅವುಗಳನ್ನು ಸಾಕುವುದೂ ಅಸಾಧ್ಯವಾಗುತ್ತಿದೆ. ಆದ್ದರಿಂದ ಕಾಡುಗೊಲ್ಲ ಜನಾಂಗದಲ್ಲಿ ಕೆಲವರು ಬೇಸಾಯ ಮೊದಲು ಉಪಕ್ರಮಿಸಿದರು. ಆದರೆ ಕಳೆದ ೫-೬ ವರ್ಷಗಳಿಂದ ಮಳೆ-ಬೆಳೆ ಇಲ್ಲದೆ ಆರಂಭವೂ ಪ್ರಯೋಜನ ಇಲ್ಲವಾಗಿ ಅವರ ಬದುಕು ಸಂಕಷ್ಟಕ್ಕೆ ಈಡಾಗುತ್ತಿದೆ. ಇಂಥ ಹೊತ್ತಿನಲ್ಲಿ ಇವರು ತಮ್ಮ ಐಡೆಂಟಟಿಯನ್ನು ಕಾಪಾಡಿಕೊಳ್ಳುವುದಾದರೂ ಹೇಗೆ? ಆದ್ದರಿಂದ ಪ್ರಪಂಚದ ಇತರೆಡೆಗಳಂತೆಯೇ ಕರ್ನಾಟಕದ ಒಂದು ಅಪೂರ್ವ ಕಾಡುಗೊಲ್ಲ ಸಂಸ್ಕೃತಿ ಅಪಾಯದ ಅಂಚಿನಲ್ಲಿದೆ ಎಂದು ಹೇಳಬಹುದು ಹೀಗೆ ಎತ್ತಪ್ಪ - ಜುಂಜಪ್ಪ ಇವರ ಕಾವ್ಯ ಕಥನಗಳನ್ನು ಗ್ರೀನ್ ಪಿರಮಿಡ್' ಕಾವ್ಯ ಪ್ರಮೇಯವನ್ನು ಅನ್ವಯಿಸಿ ಸಮೀಕ್ಷಿಸಬಹುದು.

ಹೀಗೆ ಕ್ಷಯಿಸಿ ಹೋಗುತ್ತಿರುವ ಸಂಸ್ಕೃತಿಯೊಂದನ್ನು ಅಕ್ಷರದಲ್ಲಿ ದಾಖಲಿಸುವ ಮೂಲಕ ಶಿವಣ್ಣನವರು ಒಳ್ಳೆಯ ಕೆಲಸ ಮಾಡಿರುತ್ತಾರೆ. ಇದು ಅವರೇ ಹೇಳಿರುವ ಹಾಗೆ ಕಾಡುಗೊಲ್ಲ ಜನಾಂಗದ ನಿಘಂಟು ಹಾಗೂ ವಿಶ್ವಕೋಶ ಎಂದರೆ ತಪ್ಪಲ್ಲ. ಇಂಥ ಒಂದು ಕೆಲಸವನ್ನು ಅಕ್ಕರೆಯಿಂದ ಪ್ರಾಮಾಣಿಕವಾಗಿ ನಿರ್ವಹಿಸಿರುವ ಲೇಖಕರು ಅಭಿನಂದನಾರ್ಹರು.

ಡಾ|| ಶಿವಣ್ಣನವರ ಈ ಮಹಾಪ್ರಬಂಧದ ಮುದ್ರಣ, ಪುಸ್ತಕ ವಿನ್ಯಾಸ, ಮುಖಪುಟ, ಒಡಲಿನ ರೇಖಾಚಿತ್ರಗಳ ಸೊಗಸು-ಹೀಗೆ ಪ್ರತಿಯೊಂದಲ್ಲೂ ಒಂದು ಅಚ್ಚುಕಟ್ಟುತನ ಒಡೆದುಕಾಣುತ್ತದೆ. ಕೆ.ಕೆ. ಹೆಬ್ಬಾರರನ್ನು ನೆನಪಿಗೆ ತರುವ ಜಿ.ಕೆ. ಶಿವಣ್ಣನವರ ರೇಖಾಚಿತ್ರಗಳಂತೂ ಸಂವೇದನಾಶೀಲವಾಗಿದ್ದು ಈ ಗ್ರಂಥದ ಶೋಭೆಯನ್ನು ಮತ್ತಷ್ಟು ಹೆಚ್ಚಿಸಿವೆ. ಉದಾಹರಣೆಗೆ, ಎತ್ತಪ್ಪ-ಜುಂಜಪ್ಪನ ದನಗಳು ಜೂಜಿನಮರ ಹಾರುವ; ಬಡಮ್ಯೆಲ ಚೇಳೂರು ಕಂಬ ಮುರಿಸು ನಾಗಾಲೋಟ ಬರುತ್ತಿರುವ; ಎತ್ತಪ್ಪನ ಮುಂಡದ ಸುತ್ತನಿಂತು ಮೂಕಶೋಕ ವ್ಯಕ್ತಪಡಿಸುತ್ತಿರುವ ಅವನ ದನಗಳು - ಇತ್ಯಾದಿ ಪ್ರತಿಯೊಂದು ರೇಖಾ ವಿನ್ಯಾಸಗಳೂ ಕಲಾವಿದನ ಪ್ರತಿಭೆಯನ್ನು ಋಜುಮಾಡಿ ಹೇಳುತ್ತಿವೆ.

ಒಟ್ಟಾರೆ ಮೀರಾಸಾಬಿ ಹಳ್ಳಿ ಶಿವಣ್ಣ (ಈ ಹೆಸರೇ ಜಾನಪದ ಸೊಗಡು ಸೂಸುವಂತಿದೆ) ನವರ 'ಕಾಡುಗೊಲ್ಲ ಬುಡಕಟ್ಟು ವೀರರು' ಎಂಬ ಈ ಗ್ರಂಥವು ಮುಂಬರುವ ಜಾನಪದ ಅಧ್ಯಯನಾರ್ಥಿಗಳಿಗೆ ಒಂದು ಉತ್ತಮ ಆಕರಕೃತಿಯಾಗಿ ನಿಲ್ಲುತ್ತದೆ ಎಂಬುದರಲ್ಲಿ ಯಾವ ಸಂಶಯವಿಲ್ಲ.

ಪ್ರೊ. ಶಿವರಾಮಯ್ಯ, ನಂ. ೧೭೨, ಎಸ್‌ಕೆರೋಡ್, ಟೀಚರ್ಸ್ ಕಾಲೋನಿ, ನಾಗರಬಾವಿ, ಬೆಂಗಳೂರು-೭೨

ಬೆಳಕಿಗೆ ಶರಣು

ಡಾ. ಎಸ್. ಚಂದ್ರಕಿರಣ್

ವಚನಕಾರರ ಹಾಗೂ ವಚನಗಳ ಆಶಯಗಳನ್ನು ಅಧ್ಯಯನಕ್ಕೆ ತೊಡಗುವವರು, ಅದಕ್ಕಿಂತ ಮುಂಚೆ ಒಂದು ವಿಚಾರವನ್ನು ಸ್ಪಷ್ಟಮಾಡಿಕೊಳ್ಳಬೇಕಾಗಿದೆ. ಅದು ಬುದ್ಧ ಚಿತ್ತಿದ ಮಾನವ ಧರ್ಮದ ವಿಚಾರಗಳ ಬಗ್ಗೆ. ಕಾರಣವೇನೆಂದರೆ ವಚನಕಾರರಗಿಂತ ೧೫೦೦ ವರ್ಷಗಳ ಹಿಂದೆಯೇ ಬೌದ್ಧ ಧರ್ಮದ ಆಶಯ ಮತ್ತು ಸಿದ್ಧಾಂತಗಳು ಮತ್ತು ಬದುಕಿನ ಬಗೆಗಿನ ಪರಿಕಲ್ಪನೆಗಳು ಏನಿದ್ದವೋ ಅವೆಲ್ಲವೂ ಕೂಡ ವಚನಕಾರರಲ್ಲಿ ಕಂಡುಬರುತ್ತವೆ. ಅದರಲ್ಲೂ ಕೆಳವರ್ಗದ ವಚನಕಾರ/ವಚನಕಾರ್ತಿಯರಲ್ಲಿ ಬುದ್ಧನ ನೇರ ಪ್ರತಿಪಾದನೆಗಳು ಪ್ರತಿಧ್ವನಿಯಾಗಿ ಕಾಣಿಸುತ್ತವೆ. ಈ ಮಾತು ಉತ್ಪ್ರೇಕ್ಷೆಯಾಗಿ ಕಂಡರೂ, ಆಳದಲ್ಲಿ ಚಾರಿತ್ರಿಕ ಸತ್ಯತೆಯನ್ನು ಉಳಿಸಿಕೊಂಡಿದೆ ಎಂಬುದನ್ನು ಈ ನೆಲದ ಚರಿತ್ರೆ ಬಲ್ಲವರು ಮಾತ್ರವೇ ಅರಿಯಬಹುದಾಗಿದೆ.

ಧರ್ಮಯುದ್ಧದ ನಾಡಿನಲ್ಲಿ ಧರ್ಮನಿರಸದ ಬಗ್ಗೆ ಮಾತನಾಡಿ, ಆ ಧರ್ಮಗಳ ಸಾಂಸ್ಕೃತಿಕ ಕ್ರೌರ್ಯವನ್ನು ಕಣ್ಣಾರೆ ಕಂಡು, ಮನಸೊಂದು ಮನುಷ್ಯ ಧರ್ಮವೊಂದನ್ನು ಕಟ್ಟಿ ಬೆಳೆಸಿದ ಕ್ರಾಂತಿಕಾರ ಮತ್ತು ಬಹುದೊಡ್ಡ ಸಮಾಜ ಸುಧಾರಕ ಬುದ್ಧ. ಈ ದೇಶದ ವೇದೋತ್ತರ ಕಾಲದಲ್ಲಿ ಸೃಷ್ಟಿಯಾದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯ ತರತಮಗಳು, ದೇವರು ಮತ್ತು ಧರ್ಮದ ಹೆಸರಿನಲ್ಲಿ ಜನರ ಶೋಷಣೆ, ಯಜಮಾನಿಕೆಯ ಕ್ರೌರ್ಯ, ಹಿಂಸಾಮೂಲವಾದ ಅರ್ಥಹೀನ ಆಚರಣೆಗಳು, ಗುಲಾಮಗಿರಿಯ ವ್ಯವಸ್ಥೆಯಲ್ಲಿ ಹಸಿವು ಅಪಮಾನಗಳು ತಾರಕಕ್ಕೇರಿದ ಸಾಮಾಜಿಕ ಸ್ಥಿತಿ-ಗತಿ, ಹೀಗೆ ಧರ್ಮ ಮತ್ತು ಸಮಾಜ ತಮ್ಮ ನಿಜವಾದ ಸ್ವರೂಪವನ್ನರಿಯದೆ ಸ್ಥಾವರವಾಗಿದ್ದ ಸಂದರ್ಭದಲ್ಲಿ ಬುದ್ಧನ ಮಾನವೀಯ ಕಾರ್ಯಚರಣೆಗಳು ಕಾಣಿಸಿಕೊಂಡಿದೆ. ಹಾಗಾಗಿ ಈ ದೇಶದ ಸಮಾಜ ಸುಧಾರಣೆಯ ಚರಿತ್ರೆ

ಆರಂಭವಾಗುವುದೇ ಬುದ್ಧನಿಂದ. ನೊಂದು ಬೆಂದ ಬರಡು ಬದುಕಿನಲ್ಲಿ ಚೈತನ್ಯವನ್ನು ತುಂಬಿ ಮನುಷ್ಯ ಧರ್ಮದ ಮೌಲ್ಯ ಮತ್ತು ಆದರ ಪಾವಿತ್ರ್ಯವನ್ನು ಜಗತ್ತಿಗೆ ತೋರಿಸಿದ ಮಹಾನ್ ಸಂತ ಅವನು.

ಈ ಜಗತ್ತಿನಲ್ಲಿ ಧರ್ಮಗಳಿಗೆ ಮತ್ತು ಅವುಗಳನ್ನು ಕುರಿತು ಹೊಗಳಿದ ಧರ್ಮಶಾಸ್ತ್ರಗಳಿಗೆ ಬರಗಾಲವಿಲ್ಲ. ಭಾರತದಲ್ಲಂತೂ ಎಂತಹ ಭೀಕರವಾದ ಬರಗಾಲಕ್ಕೆ ಬದುಕು ಸಿಕ್ಕಿ ಜರ್ಜರಿತವಾಗಿದ್ದರೂ, ಧರ್ಮ ಮಾತ್ರ ಕತ್ತಿ, ತ್ರಿಶೂಲ, ಬಾಂಬು, ವಿಷ ಮುಂತಾದ ಆಯುಧಗಳನ್ನು ಹಿಡಿದುಕೊಂಡು ವಿಜೃಂಭಿಸುತ್ತಿರುತ್ತದೆ. ಇಲ್ಲಿ ಧರ್ಮಕ್ಕೆ ಭಾಷ್ಯ ಬರೆದ ಆಚಾರ್ಯರ ಸಂಖ್ಯೆ ಅಸಂಖ್ಯ. ಇದು ಪುಣ್ಯ ಭೂಮಿ ಎಂಬ ಕಾರಣಕ್ಕೆ ಇಷ್ಟೊಂದು ಜನ ಸಂತರು, ಪುಣ್ಯ ಪುರುಷರು ಇಲ್ಲಿ ಹುಟ್ಟಿಲ್ಲ. ಬದಲಾಗಿ ಇದೊಂದು ಪಾಪ ಭೂಮಿ. ಎಷ್ಟು ತೊಳೆದರೂ ಕೊಳೆ ಹೋಗದ ಕಾರಣ, ಜಗತ್ತಿನಲ್ಲಿಯೇ ಕಾಣಲಾಗದ ಆಚಾರ್ಯರ ಸಂಖ್ಯೆ ಇಲ್ಲಿ ಅಪಾರ. ಇಲ್ಲಿ ಕಾಲಕಾಲಕ್ಕೆ ಧಾರ್ಮಿಕ ಸಿದ್ಧಾಂತಗಳನ್ನು ಮಂಡಿಸಿದ ತತ್ವಜ್ಞಾನಿಗಳ ಮಹಾಪೂರವೇ ಇದೆ. ಈ ಎಲ್ಲಾ ಧರ್ಮ ಶಾಸ್ತ್ರ ಸಿದ್ಧಾಂತ, ಆಚಾರ್ಯರು ತತ್ತ್ವಜ್ಞಾನಿಗಳೆಲ್ಲರೂ ಜಾತಿ, ಮತ, ದೇವರು, ದೇವಸ್ಥಾನ ಮುಂತಾದ ಮೂಲಭೂತವಾದಿ ಜೀವ ವಿರೋಧಿ ನೆಲೆಯಲ್ಲಿ ಹಿಂಸೆ ಮತ್ತು ಕ್ರೌರ್ಯಗಳನ್ನು ವ್ಯವಸ್ಥಿತವಾಗಿ ಪ್ರತಿಪಾದಿಸಿದರೆ ವಿನಃ, ನಿಜಬದುಕಿನ ನಿಜ ಸಂಕಟಗಳಿಗೆ ಅವರು / ಅವು ಎಲ್ಲೂ ಆಸರೆಯಾಗಿ ನಿಲ್ಲಲಿಲ್ಲ. ಇಂತಹ ಸ್ಥಿತಿಯನ್ನು ಬುದ್ಧ ಅಸ್ವಸ್ಥ ಮನಸ್ಸಿನ ವಿಕಾರಗಳೆಂದು ಕರೆಯುತ್ತಾನೆ.

ಬುದ್ಧ ಆಧ್ಯಾತ್ಮ, ದೇವರು, ಗುರು ಪರಂಪರೆ, ಶಾಸ್ತ್ರಗ್ರಂಥಗಳ ಅವಲಂಬನೆಯನ್ನು ನಿರಾಕರಿಸಿದ. ಈ ಆಧ್ಯಾತ್ಮವೆಂಬುದು ಭಕ್ತಿ ಮತ್ತು ಭಗವಂತನಿಲ್ಲದ ಮನುಷ್ಯಪರವಾದ ಸಹಜ ಚಿಂತನೆಯೆಂದು ನಿರ್ವಚಿಸಿದ. ನಿಜವಾದ ಆಧ್ಯಾತ್ಮವೆಂದರೆ, ಸಮಾಜ ಸಮಾನತೆಯನ್ನು ಸಾಧಿಸುವುದು. ಒಟ್ಟಾರೆ ಪುರೋಹಿತ ಶಾಹಿಯ ವಿಕಾರ ಮನಸ್ಸುಗಳಿಂದ ಆಧ್ಯಾತ್ಮವನ್ನು ಮುಕ್ತಗೊಳಿಸಿದ, ಜೊತೆಗೆ ಧಾರ್ಮಿಕ ದೃಷ್ಟಿಗೆ ಒಂದು ರೀತಿಯ ಸ್ವಾವಲಂಬನೆಯನ್ನೂ ಸಹಜ ಸ್ವತಂತ್ರತೆಯನ್ನು ತಂದುಕೊಟ್ಟ.

ಸಾಮಾನ್ಯ ಮಾನವರನ್ನು ಪ್ರಬುದ್ಧಮಾನವರಾಗಿ ಪರಿವರ್ತಿಸುವ ವಿಧಾನವೇ ಬುದ್ಧನ ಧಮ್ಮದ ತಿರುಳು. ಇಲ್ಲಿ ತಾತ್ವಿಕ ಹಾಗೂ ಸೈದ್ಧಾಂತಿಕ ನಂಬಿಕೆಗಳಿಗಿಂತ ಹೆಚ್ಚಾಗಿ ಪ್ರಾಕೃತಿಕ ಸಹಜವಾದ ಪ್ರಾಯೋಗಾತ್ಮಕ ಫಲಿತಾಂಶವೇ ಮುಖ್ಯವಾದುದು. ಈ ಕಾರಣದಿಂದ ಜಾಗತೀಕವಾಗಿ ಮೊಟ್ಟಮೊದಲು ವರ್ಣವ್ಯವಸ್ಥೆಯನ್ನೂ, ಜಾತಿಭೇದವನ್ನೂ ಮತ್ತು ಲಿಂಗಭೇದವನ್ನು ವಿರೋಧಿಸಿದವನು ಭಗವಾನ್ ಬುದ್ಧ. ಹುಟ್ಟಿನಿಂದ ಯಾರೂ ಶ್ರೇಷ್ಠರಾಗುವುದಿಲ್ಲ. ಯಾರೂ ಅಧಮರೂ ಆಗುವುದಿಲ್ಲ. ಅವರವರ ಗುಣ-ಕರ್ಮ ಸ್ವಭಾವಗಳಿಗೆ ಅನುಗುಣವಾಗಿ ಕೆಲವು ಉತ್ತಮರಾಗಿರುತ್ತಾರೆ. ಮತ್ತೆ ಕೆಲವರು ಅಧಮರಾಗಿರುತ್ತಾರೆ. ಹಾಗಾಗಿ ಸೋಮಾರಿಗಳು, ಅಂಜುಬುರುಕರು ಮತ್ತು ದುರ್ಬಲರು ಮಾತ್ರವೇ ದೇವರ ರೂಪಗಳನ್ನು ಕಲ್ಪಿಸಿಕೊಂಡು ಅದಕ್ಕೆ ಮೊರೆ ಹೋಗುತ್ತಾರೆ. ಫಲ ದೊರಕದಿದ್ದಾಗ ತಾವು ಪಾಪಿಗಳೆಂದು ಪಶ್ಚಾತ್ತಾಪ ಪಡುತ್ತಾರೆ. ಜಗತ್ತಿನಲ್ಲಿ ಬೇಡುವವರಿಗೆ ವರವನ್ನು ನೀಡುವ ಯಾವ ಅಗೋಚರ ಶಕ್ತಿಯೂ ಇಲ್ಲ. ವ್ಯಕ್ತಿ ತಾನೇ ತನ್ನ ಪರಿಶ್ರಮದಿಂದ ದುಡಿದು ಬದುಕಬೇಕು ಎಂದು ಹೇಳಿದ.

ಧಮ್ಮ, ದೀಪ್ರೋ, ವಿಹರಥ, ಧಮ್ಮಸರಣ ಅನನ್ನಸರಣ: ಅಂದರೆ ನಿನಗೆ ನೀನೇ ದೀಪವಾಗು. ಬೆಳಕಾಗು. ಅನ್ಯರನ್ನು ಆಶ್ರಯಿಸಬೇಡ ಎಂಬ ತಿಳಿವನ್ನು ಹೇಳಿದ. ಆತನ ಮತ್ತೊಂದು ಮಾತು ಹೀಗಿದೆ. ''ತುಮ್ಹೇಹಿ ಕಿಚ್ಚ ಆತಪ್ಪ, ಅಕ್ಖತಾರೋ ತಥಾಗತ.'' ಅಂದರೆ ನಾನು ಮಾರ್ಗದಾತನೇ ಹೊರತು ಮುಕ್ತಿದಾತನಲ್ಲ. ನಿನ್ನ ಸುಖಕ್ಕೆ - ದುಃಖಕ್ಕೆ, ನಿನ್ನ ಮಂಗಳಕ್ಕೆ, ಅಮಂಗಳಕ್ಕೆ ನೀನೇ ಜವಾಬ್ದಾರನೆಂದ. ಅದಕ್ಕಾಗಿ ಸತ್ಯವನ್ನು ಕುರಿತು ಗಾಢವಾಗಿ ವಿಚಾರಮಾಡಬೇಕು. ಈ ವಿಚಾರಗಳಿಂದಲೇ ಮನುಷ್ಯ ಸಹಜ ಹಾಗೂ ಸ್ವತಂತ್ರನಾಗುತ್ತಾನೆ. ವಿಚಾರಗಳ ಮೂಲಕ (ಅನುಭವ ಮಂಟಪ) ಬದುಕನ್ನು ಸತ್ಯಗೊಳಿಸಿಕೊಳ್ಳುವುದೇ ಧರ್ಮ. ಎಲ್ಲಿ ದಾರಿಗಳಿಲ್ಲವೋ ಅಲ್ಲಿ ದಾರಿಮಾಡಿಕೊಂಡು ನಡೆಯಿರಿ. ನಿಮಗೆ ನೀವೇ ದಾರಿ ದೀಪವೆಂದ. ದೇವರು, ಧರ್ಮ, ಶಾಸ್ತ್ರ ಗುರು ಇತ್ಯಾದಿಗಳ ನೆರವಿಲ್ಲದೆ ಮನುಷ್ಯ ತನ್ನ ಬಿಡುಗಡೆಯನ್ನು ತಾನೇ ಕಂಡುಕೊಳ್ಳಬೇಕು. ಈ ಮಾತನ್ನು ಜಗತ್ತಿನ ಚರಿತ್ರೆಯಲ್ಲಿ ಮೊಟ್ಟಮೊದಲಿಗೆ ಹೇಳಿದವನು ಬುದ್ಧನೊಬ್ಬನೆ.

ಜಗತ್ತು ಮತ್ತು ಬದುಕು ಯಾವುದೂ ಮಿಥ್ಯೆಯಲ್ಲ. ದೇವರಿದ್ದಾನೋ ಇಲ್ಲವೋ, ಸ್ವರ್ಗ-ನರಕಗಳಿದ್ದಾವೋ ಅವು ಮಿಥ್ಯೆಯೋ, ಮಾಯೆಯೋ ಇಂತಹ ಹುಸಿ ಚರ್ಚೆಗಳಿಂದ ಏನೋ ಪ್ರಯೋಜನವಿಲ್ಲ. ನಮ್ಮ ಎದುರಿಗೆ ಹೆಚ್ಚುಪಾಲು ದುಃಖ ತುಂಬಿದ ಜಗತ್ತಿದೆ. ಈ ದುಃಖಕ್ಕೆ ಮನುಷ್ಯನೇ ಕಾರಣನಾಗಿದ್ದಾನೆ. ಹಾಗಾಗಿ ಈ ದುಃಖ ದುಮ್ಮಾನ ನೋವು ಸಂಕಟಗಳನ್ನು ನಿವಾರಿಸಿಕೊಂಡು ಬದುಕನ್ನು ಉತ್ತಮಗೊಳಿಸಿಕೊಳ್ಳಬೇಕಾಗಿರುವುದು ನಮ್ಮ ಮೊದಲ ಗುರಿಯಾಗಿರಬೇಕು. ಅವರಿವರು ಹೇಳಿದ್ದಾರೆಂಬ ಕಾರಣಕ್ಕೆ ಯಾವುದನ್ನೂ ನಂಬಬೇಡ. ಪರಂಪರಾಗತವಾಗಿ ಬಂದಿದೆ ಎಂಬ ಕಾರಣಕ್ಕೂ ಒಪ್ಪಬೇಡ; ಶಾಸ್ತ್ರ ವೇದ, ಪುರಾಣಗಳಲ್ಲಿ ಹೇಳಿದೆ ಎಂಬ ಕಾರಣಕ್ಕೂ ಒಪ್ಪಬೇಡ; ನಮ್ಮ ಗುರು-ಹಿರಿಯರು, ಆಚಾರ್ಯರು ಅನುಮೋದಿಸಿದ್ದಾರೆ ಎಂಬ ಕಾರಣಕ್ಕೂ ನಂಬಬೇಡ. ನಾನು ಹೇಳಿದ್ದನ್ನೂ ಕೂಡ ನೀನು ಒಪ್ಪಬೇಕಾಗಿಲ್ಲ. ಯಾವುದು ಮೌಲ್ಯಯುಕ್ತವೋ, ಕಳಂಕರಹಿತವೋ, ಸುಖ ದಾಯಕವೋ, ಯಾವುದು ತಾಯಿಯಂತೆ ಸಂತೈಸಬಲ್ಲದೋ, ನಿನ್ನ ಜೀವನಕ್ಕೆ ಅಲ್ಲದೆ ಸಮಾಜದ ದೃಷ್ಟಿಯಿಂದಲೂ ಯಾವುದು ಉಪಯುಕ್ತವೋ ಅಂಥದ್ದನ್ನು ಒಪ್ಪಿಕೋ. ಅನುಸರಿಸು. ಎಂದು ಹೇಳಿದ ಬುದ್ಧ ಯಾವತ್ತೂ ತಾನೊಬ್ಬ ಪ್ರವಾದಿ ಎಂದಾಗಲಿ, ಅವತಾರ ಪುರುಷನೆಂದಾಗಲಿ, ತಾನು ಘೋಷಿಸಿಕೊಳ್ಳಲಿಲ್ಲ. ತನ್ನನ್ನು ಒಪ್ಪಿಕೊಳ್ಳದವರಿಗೆ ಬಿಡುಗಡೆ ಇಲ್ಲ ಎಂದು ಹೇಳಲಿಲ್ಲ.

ನನ್ನ ಧರ್ಮವೊಂದೇ ಶ್ರೇಷ್ಠ ಎಂದು ನಾನು ಹೇಳುವುದಿಲ್ಲ
ನೀನು ಹೋಗಿ ಇತರ ಧರ್ಮಗಳನ್ನೂ ಕೇಳಿ ಬಾ
ಆಮೇಲೆ ನನ್ನನ್ನು ಕೇಳು.
ಯಾವ ಧರ್ಮ ಅತ್ಯುತ್ತಮ ಎಂದು ನಿನಗೆ ತೋರುತ್ತದೆಯೋ
ಅದನ್ನು ಅನುಸರಿಸು ಎಂದು ಹೇಳಿದ.

ಆದರೆ, ಕೃಷ್ಣ, ಏಸು, ಪೈಗಂಬರ್ ಹೇಳಿರುವುದನ್ನು ನಾವು ಸ್ವಲ್ಪ ನೋಡಬಹುದು.

ಸರ್ವಧರ್ಮಗಳನ್ನು ತ್ಯಜಿಸಿ ನನ್ನೊಬ್ಬನಲ್ಲಿಯೇ ಶರಣಾಗು
ಸರ್ವ ಪಾಪಗಳಿಂದ ನಿನ್ನನ್ನು ಉದ್ಧರಿಸುತ್ತೇನೆ-ಭಗವತ್‌ಗೀತೆ
ನಾನು ದೇವಪುತ್ರ. ಇದನ್ನು ಒಪ್ಪಿಕೊಳ್ಳದಹೊರತು
ಮನುಷ್ಯರಿಗೆ ಬಿಡುಗಡೆ ಇಲ್ಲ-ಬೈಬಲ್
ನಾನು ಭಗವಂತನ ಪ್ರವಾದಿ, ಇಸ್ಲಾಂ ಮೂಲಕ ಮೋಕ್ಷವನ್ನು,

ಬಯಸುವವರು ಮೇಲಿನಂತೆ ಪೈಗಂಬರ್ ಅವರನ್ನು ಕೊನೆಯ ಪ್ರವಾದಿ ಎಂದು ಒಪ್ಪಿಕೊಳ್ಳಬೇಕು-ಕುರಾನ್

ಬುದ್ಧ ಎಂದೂ ಹೀಗೆ ಹೇಳಿಕೊಂಡು ತಿರುಗಲಿಲ್ಲ. ಅಲ್ಲದೇ ತನ್ನ ನಂತರ ತನ್ನ ಧರ್ಮಕ್ಕೆ ಯಾವು ಉತ್ತರಾಧಿಕಾರಿಯನ್ನು ಹೆಸರಿಸಲಿಲ್ಲ. ಬದಲಿಗೆ ಧರ್ಮ ತನಗೆ ತಾನೇ ಉತ್ತಾರಾಧಿಕಾರಿಯಾಗಿರಬೇಕು ಎಂದ. ಯಾವ ವಚನಕಾರರು ಕೂಡ ವಚನ ಚಳುವಳಿಯ ನಾಯಕರೆಂದು ಸ್ವಯಂ ಘೋಷಿಸಿಕೊಳ್ಳಲಿಲ್ಲ. ಅದು ಎಲ್ಲರ ಸಹಭಾಗಿತ್ವದ ನಾಯಕರಿಲ್ಲದ ಆಂದೋಳನ. ಆದರೆ ಈಗ ಬಸವನನ್ನು ವಚನ ಸಾಹಿತ್ಯ ಮತ್ತು ಚಳುವಳಿಯ ಕೇಂದ್ರವಾಗಿಸಿರುವುದು ವಚನಕಾರರ ಆಶಯಕ್ಕೆ ತೀರಾ ವ್ಯತಿರಿಕ್ತವಾದುದು. ಬಸವನನ್ನು ಕುದುರೆಯ ಮೇಲೆ ಕೂರಿಸಿ, ಕೈಗೆ ಖಡ್ಗಕೊಟ್ಟು, ತಲೆಗೆ ಕಿರೀಟವನ್ನಿಟ್ಟು, ಮೆರೆಸುತ್ತಿರುವುದು ಮತ್ತು ಒಂದು ಕೋಮುವಿಗೆ ಸೀಮಿತಗೊಳಿಸುತ್ತಿರುವುದು ವಿಷಾದನೀಯವಾದುದು.

ಹಿಂದೂ ವೈದಿಕ ಧರ್ಮ ತನ್ನ ಚಾತುರ್ವರ್ಣ ವ್ಯವಸ್ಥೆಯೊಳಗೆ ಅಸಮಾನತೆಯನ್ನು ಅಮಾನವೀಯತೆಯನ್ನೂ, ತಾರತಮ್ಯಗಳನ್ನು ನಿರಂತರವಾಗಿ ಜತನವಹಿಸಿ ಕಾಪಾಡಿಕೊಂಡು ಬರುವ ಒಂದು ತಂತ್ರವಾಗಿದೆ ಎಂದು ಬುದ್ಧ ಹೇಳಿದ. ಹಿಂದೂ ಧರ್ಮದ ಮೂಲ ಸಿದ್ಧಾಂತವೇ ಜೀವವಿರೋಧಿ ನೆಲೆಯಿಂದ ಕೂಡಿರುವುದು. ಅದು ಕೇವಲ ಕೆಲವೇ ಜನರ ಹಿತಕ್ಕಾಗಿ ಬಹುಜನರು ಶ್ರಮಿಸಬೇಕೆಂಬುದು. ಆದರೆ, ಯಾವುದೇ ಧರ್ಮವು ಸದ್ಧರ್ಮವಾಗಿರಬೇಕಾದರೆ, ಅಲ್ಲಿ ಮನುಷ್ಯ ಮನುಷ್ಯರ ನಡುವೆ ಅಸಮಾನತೆ ಅಳಿದು ಸಮಾನತೆ ನೆಲೆಗೊಳ್ಳಬೇಕು. ಸ್ವತಂತ್ರ ಸಮಾನತೆ ಮತ್ತು ಭ್ರಾತೃತ್ವಗಳಿಂದ ಬದುಕನ್ನು ಕಟ್ಟಿಕೊಳ್ಳುವಂತೆ ಆ ಧರ್ಮ ಪ್ರೇರೇಪಿಸಬೇಕು. ಸಾಮಾಜಿಕ ವಿಕಾರಗಳಾದ ಗುಲಾಮಗಿರಿ, ಶೋಷಣೆ, ಕ್ರೌರ್ಯ, ಯಜಮಾನಿಕೆ ಮುಂತಾದ ಮಾಲಿನ್ಯಗಳಿಂದ ಮನಸನ್ನೂ ಮುಕ್ತಗೊಳಿಸಬೇಕು. ಪರಸ್ಪರ ಪ್ರೀತಿ, ಆತ್ಮೀಯತೆ, ಸಹಕಾರಗಳ ಮೂಲಕ ಸಹಜೀವಿಗಳ ನೋವನ್ನು ನಿವಾರಿಸುವಂತಿರಬೇಕು. ಬರಿ ಪ್ರೀತಿಯೊಂದೆ ಸಾಲದು. ನಮಗೆ ಬೇಕಾದದ್ದು ಮೈತ್ರಿ. ''ಈ ಮೈತ್ರಿ ಪ್ರೀತಿಗಿಂತ ಹೆಚ್ಚು ಆಪ್ತವಾದದ್ದು. ಅದು ಮನುಷ್ಯರೊಂದಿಗೆ ಮಾತ್ರವಲ್ಲ ಸಮಸ್ತ ಜೀವರಾಶಿಗಳ ಬದುಕಿನ ಪರವಾಗಿ ಸ್ಪಂದಿಸುವಂತದ್ದು.'' ಹೀಗೆ ನಿಸರ್ಗಸತ್ಯ ಮತ್ತು ಜೀವನ ಸತ್ಯ (Natural truth and the way of life)ಗಳನ್ನು ತಿಳಿಸಿದ ಬುದ್ಧ, ಮನುಷ್ಯ ಮತ್ತು ಮನಸ್ಸಿನ ಸಂಬಂಧವನ್ನು ಮತ್ತು ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಸಂಬಂಧವನ್ನು ಲೋಕಕ್ಕೆ ತೋರಿಸಿಕೊಟ್ಟ ಅಹಂಕಾರ ಮತ್ತು

ಅಜ್ಞಾನವನ್ನು ಮನುಷ್ಯ ಸಮಾಜದ ಪರಮವೈರಿ ಎಂದ. ಧರ್ಮವೆನ್ನುವುದು ಮೂಢ ನಂಬಿಕೆಗಳಿಂದ ಕೊಳೆತುನಾರುತ್ತಿರುವಾಗ ಧರ್ಮ ನಿರಪೇಕ್ಷತೆಯೇ ನಿಜವಾದ ಧರ್ಮವೆಂದು ಹೇಳಿದನು ಆತ.

ಬುದ್ಧನ ಕಾಲದಲ್ಲಿಯೇ ಆತ ಹಂಬಲಿಸಿದ ಆಶಯಗಳ ಅನುಷ್ಠಾನಕ್ಕಾಗಿ ಒಂದು ಸಂಘವನ್ನು ರೂಪಿಸಿದ. ಅದು ಸೇವಾ ಮನೋಭಾವನೆವುಳ್ಳ ನಿಸ್ವಾರ್ಥ ವ್ಯಕ್ತಿಗಳ ಒಂದು ಮಾನವಂತ ಸಮೂಹ. (ಅನುಭವಮಂಟಪ) ಅದಕ್ಕೆ ಯಾವ ಸ್ಥಾಪಿತ ಮೌಲ್ಯಗಳ ಕಟ್ಟಳೆ ನಿಯಮಗಳಿರಲಿಲ್ಲವಾದ್ದರಿಂದ ಅದಕ್ಕೆ ಸ್ಥಾವರ ರೂಪ ಬರಲಿಲ್ಲ. ಅದೊಂದು ಚಲನಶೀಲ ಸಹಜ ವ್ಯವಸ್ಥೆಯಾಗಿತ್ತು. ಈ ಸಂಘಟನೆಯೊಳಗೆ ಆ ಕಾಲದ ವಿವಿಧ ಸಾಮಾಜಿಕ ಸ್ತರಕ್ಕೆ ಸೇರಿದವರೆಲ್ಲರೂ ಬಂದು ಕೂಡಿಕೊಂಡಿದ್ದಾರೆ. ಬ್ರಾಹ್ಮಣನಿಂದ ಆರಂಭವಾಗಿ ಅಸ್ಪೃಶ್ಯರವರೆಗೆ ಯಾವ ಭೇದ ಭಾವವಿಲ್ಲದೆ ರೂಪಗೊಂಡ ಅದು ಒಂದು ಸಮಾನತೆಯ ವೇದಿಕೆಯಾಗಿತ್ತು. ಬ್ರಾಹ್ಮಣರು, ಕ್ಷತ್ರೀಯರಲ್ಲದೆ, ಬೀದಿ ಗುಡಿಸುವ ಸುನೀತ, ಉಪಾಲಿ ಎಂಬ ಕ್ಷೌರಿಕ, ಸೋಪಕನೆಂಬ ಹೊಲೆಯ, ಶ್ವೇತ ಸುಮಂಗಳ, ಕಂಬಾರನಾದ ಧನ್ನಿಯ, ಗಣಿಕೆ ವೃತ್ತಿಯ ಅಮ್ರಪಾಲಿ, ಮಹಾಪ್ರಜಾಪತಿ ಮತ್ತು ಯಶೋಧರೆ ಎಂಬ ಮಹಿಳೆಯರು. ಇವರಷ್ಟೇ ಅಲ್ಲದೆ ಇನ್ನೂ ಅನೇಕ ಜಾತಿಗೆ ಕುಲಕ್ಕೆ ಸೇರಿದ ಭಿಕ್ಕುಗಳನ್ನು ಅಪಾರ ಸಂಖ್ಯೆಯಲ್ಲಿ ಸಂಘಕ್ಕೆ ಸೇರಿಸಿಕೊಂಡ. ಆ ಮೂಲಕ ಮಾನವ ಜನಾಂಗವೆಲ್ಲವೂ ಒಂದೇ ಎಂಬ ಕಲ್ಪನೆಯನ್ನು ಜಗತ್ತಿನ ಸಂದರ್ಭದಲ್ಲಿ ಆಚರಿಸಿ ತೋರಿಸಿದ ಮಹಾನ್ ವ್ಯಕ್ತಿ ಬುದ್ಧನೊಬ್ಬನೆ.

ಜೀವಪ್ರೇಮದ ದಾರಿದೀಪವಾಗಿ ಮಾನವ ಲೋಕದ ಕಷ್ಟಕಾರ್ಪಣ್ಯ ಆತಂಕದ ದುಗುಡುಗಳನ್ನು ದಾಟಿ ಕ್ಷುದ್ರವಾದುದೆಲ್ಲವನ್ನು ತಿರಸ್ಕರಿಸಿ, ಗಟ್ಟಿಯಾದ ಮಾನವೀಯ ವೈಚಾರಿಕತೆಯ ನೆಲೆಗಟ್ಟಿನ ಮೇಲೆ ತನ್ನ ಸಮಾಜೋ ಧಾರ್ಮಿಕ ನಿಲುವುಗಳನ್ನು ರೂಪಿಸಿದ ಬುದ್ಧ ಹೇಳಿದ್ದು, ಉದಾತ್ತ ಸತ್ಯಗಳನ್ನು ಕುರಿತು. ತಾನು ಸಂಘದೊಡನೆ ಕೂಡಿ ನಿರಂತರವಾಗಿ ಕಾಲು ನಡಿಗೆಯಲ್ಲಿ ಸಂಚರಿಸುತ್ತಾ (ಜಂಗಮ) ನಿರ್ವಚನೆಯಿಂದ ಜನಸಾಮಾನ್ಯರ ಭಾಷೆಯಲ್ಲಿ ಬಹು ಸರಳವಾಗಿ ಸಂದೇಶ ನೀಡುತ್ತಾ ಗುರುವೇ ಶಿಷ್ಯರ ಬಳಿ ತೆರಳಿದ ನಿಜ ಜಂಗಮ ಸ್ವರೂಪಿ ಅವನು.

ತಾನು ಕೈಗೊಂಡ ಮಾನವ ಉದ್ಧಾರದ ಹಾಗೂ ಸಮಾಜ ಸುಧಾರಣೆಯ ನಿಲುವುಗಳನ್ನು ''ಸ್ಥಾಪಿತ ಪಂಥವಾಗಿ'' ಬುದ್ಧ ರೂಪಿಸಲಿಲ್ಲ. ಅದು ಧಮ್ಮ, ಧಮ್ಮವೆಂದರೆ ವಾಸ್ತವಿಕ ಸತ್ಯದಿಂದ ಬದುಕನ್ನು ಸತ್ಯವಾಗಿ ರೂಪಿಸಿಕೊಳ್ಳುವ ಜೀವನ ಕಲೆ. ಹೀಗಾಗಿ ಬುದ್ಧನ ಬೋಧನೆಗಳನ್ನು ಧರ್ಮ ತತ್ವ ಎಂದು ತಿಳಿಯುವುದಕ್ಕಿಂತ, ಮೈತ್ರಿ, ಕರುಣೆ, ಮುದಿತ, ಸಮತಾ ಎಂಬ ನಾಲ್ಕು ಅನಂತ ಗುಣಗಳನ್ನು ಮೈಗೂಡಿಸಿಕೊಂಡು ವಿಶ್ವ ಮಾನವರಾಗಿ ಬದುಕಬಹುದಾದ ಬೆಳಕಿನ ದಾರಿ. ಮಾನವನನ್ನು ಶಾರೀರಿಕವಾಗಿ ವಾಚಿಕವಾಗಿ ಮತ್ತು ಮಾನಸಿಕವಾಗಿ ಪರಿಶುದ್ಧಿಗೊಳಿಸಿ ಸಂಪೂರ್ಣವಾಗಿ ಪರಿವರ್ತಿಸುವುದೇ ಬುದ್ಧ ಧಮ್ಮದ ಪರಿಕಲ್ಪನೆ ಮತ್ತು ಅಂತಿಮ ಗುರಿ.

ಭೋಗಲೋಲುಪತೆ, ದೇಹದಂಡನೆಗಳ ನಡುವಣ ಸುವರ್ಣ ಮಧ್ಯಮ ಪಥಕ್ಕೆ ಪ್ರಾಶಸ್ತ್ಯನೀಡಿದ ಬುದ್ಧ ಬದುಕಿನ ನೈತಿಕತೆಗೆ ಪ್ರಾಧಾನ್ಯ ಕೊಡುತ್ತಾನೆ. ಪ್ರತಿ ಮಾನವತ್ವವೂ ವಿಶ್ವಾತ್ಮದ ಒಂದು ಭಾಗ

ಎಂದು ಹೇಳುತ್ತಾನೆ. ವ್ಯಕ್ತಿ ತನ್ನನ್ನೂ ತಾನು ಗೆಲ್ಲುವುದೇ ದೊಡ್ಡ ವಿಜಯ. ಸಂಯಮವೆ ದೊಡ್ಡ ಗುಣವೆಂದು ಸಾರಿದ. ದ್ವೇಷದಿಂದ ದ್ವೇಷ ಶಮನವಾಗದು. ಪ್ರೀತಿಯಿಂದ ಶಮನವಾಗುತ್ತದೆ. (ನವ್ವೈರಂ ವೈರೇಣ ಶಾಮ್ಯತಿ, ಅವ್ವೈರೇಣ ಶಾಮ್ಯತಿ) ಕೋಪವನ್ನು ದಯೆಯಿಂದ ಕೆಡುಕನ್ನು ಒಳಿತಿನಿಂದ ಗೆಲ್ಲಬೇಕು. ಹೀಗೆ ಬದುಕಿನ ಮಾರ್ಗದರ್ಶಕ ನಿಲುವುಗಳನ್ನು ಪ್ರತಿಪಾದಿಸುತ್ತ, ವರ್ಗ ಮತ್ತು ವರ್ಣಾಶ್ರಮಪದ್ಧತಿಯ ಮೌಢ್ಯಗಳನ್ನು ತೊಡೆದು ಹಾಕಿ ಸಮಾನತೆಗಾಗಿ ಶ್ರಮಿಸುತ್ತಾನೆ. ಅಷ್ಟು ಪ್ರಾಚೀನ ಕಾಲದ ಭಾರತದಲ್ಲಿ ಬುದ್ಧ, ಬದುಕು ಮತ್ತು ಧರ್ಮದ ಮಹತ್ವವನ್ನು ಕುರಿತು ಲೋಕದ ಸರ್ವೋದಯಕ್ಕೆ ಬದುಕು ಸವೆಸಿದವನು. ಈ ಎಲ್ಲಾ ಕಾರಣಗಳಿಂದ ಬೌದ್ಧ ಧರ್ಮದಷ್ಟು, ವೈಚಾರಿಕವಾದ, ಜೀವ ಪರವಾದ, ಮಾನವಕೇಂದ್ರಿತವಾದ ಮತ್ತು ಸರ್ವಸಮಾನತೆಯ ಧರ್ಮ ಮತ್ತೊಂದಿಲ್ಲವೆಂದೇ ಹೇಳಬೇಕಾಗಿದೆ. ಹಾಗಾಗಿ ಆತ ಏಷ್ಯಕ್ಕೆ ಮಾತ್ರವೇ ಬೆಳಕಲ್ಲದೆ ಇಡೀ ಜಗತ್ತಿಗೆ ಬೆಳಗಿನ ಮಾನವೀಯತೆಯ ಹಣತೆ.

ಬುದ್ಧ ಪ್ರತಿಪಾದಿಸಿದ ತಿಸರಣ, ಪಂಚಶೀಲತತ್ವಗಳು, ಗೃಹಸ್ಥರಿಗೆ ಬೋಧಿಸಿದ ತಿಳಿವಳಿಕೆಗಳು ಮತ್ತು ಅಷ್ಟಾಂಗ ಮಾರ್ಗಗಳು ವಚನಕಾರರು ಪ್ರತಿಪಾದಿಸಿದ ಆಶಯಗಳಿಗೆ ಬೇರು ಮತ್ತು ಕಾಂಡಗಳಾಗಿವೆ. ಅವು ಜನರನ್ನು ಕೇಂದ್ರವಸ್ತುವನ್ನಾಗಿಟ್ಟುಕೊಂಡು ಸಾರ್ವಕಾಲಿಕ ಸತ್ಯವನ್ನು ಬದುಕಿನ ಸಾಕ್ಷಾತ್ಕಾರದೊಂದಿಗೆ ನಿರೂಪಿಸುವ ಸರಳಕ್ರಮವಾಗಿದ್ದವು. ಬುದ್ಧ ತನ್ನನ್ನು ತಾನು ಪವಾಡ ಪುರುಷ, ಅವತಾರ ಪುರುಷ, ಧರ್ಮ ಸಂಸ್ಥಾಪಕನೆಂದು ಎಲ್ಲೂ ಹೇಳಿಕೊಳ್ಳಲಿಲ್ಲ. ತಾನು ಬೋಧಿಸಿದ್ದನ್ನೇ ಅನುಸರಿಸಿ ಎಂದು ಬಲವಂತ ಮಾಡಲಿಲ್ಲ. ಆದರೆ ಉಳಿದ ಧರ್ಮ ಪ್ರವರ್ತಕರು ಈ ಧರ್ಮ ಸ್ಥಾಪಿಸಿದ್ದು ನಾನೇ, ನನ್ನನ್ನೇ ನೀವು ಅನುಸರಿಸಬೇಕು ಎಂದು ನಿಯಮ ಶಾಸ್ತ್ರಗಳ ಮೂಲಕ ಜನರ ಮೇಲೆ ಬಲವಂತದಿಂದ ದಿಗ್ಬಂಧನ ಹೇರಿದ್ದಾರೆ.

'ನಾನು ಮತ್ತು ಎಲ್ಲವೂ ನನ್ನಿಂದಲೆ' ಎಂಬ ಪೊಳ್ಳುತನನನ್ನು ಬುದ್ಧ ನಿರಾಕರಿಸಿದ ಈ ಕಾರಣದಿಂದಲೇ ಇಂದು ಇಡೀ ಪ್ರಪಂಚವೇ ಅವನನ್ನು ವಿಶ್ವಗುರು ಎಂದು ಒಪ್ಪಿಕೊಂಡಿದೆ. ಹೀಗಾಗಿ ಭಾರತವು ಜಗತ್ತಿಗೆ ನೀಡಿದ ಮಹತ್ತರವಾದ ಮತ್ತು ಉದಾತ್ತವಾದ ಕಾಣಿಕೆ ಬುದ್ಧ ಮತ್ತು ಅವನ ಆಶಯಗಳು. ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನ್ ಪ್ರಕಾರ ''ಜಗತ್ತಿನಲ್ಲಿ ಆರು ದೊಡ್ಡ ಧರ್ಮಗಳಿವೆ. ಅವುಗಳಲ್ಲಿ ವಿಶ್ವಧರ್ಮವಾಗುವ ಯೋಗ್ಯತೆ ಇರುವುದು ಬೌದ್ಧ ಧರ್ಮಕ್ಕೆ ಮಾತ್ರವೇ'' ಎಂದಿರುವುದು ಅತ್ಯಂತ ಸೂಕ್ತವಾದ ವ್ಯಾಖ್ಯಾನವೆ ಆಗಿದೆ. ಮಹಾಕವಿ ಕುವೆಂಪು ಅವರು ಶತಮಾನದ ಕಾದಂಬರಿ ಕಾನೂರು ಸುಬ್ಬಮ್ಮ ಹೆಗ್ಗಡಿತಿಯಲ್ಲಿ ಹೂವಯ್ಯನನ್ನು ಬೌದ್ಧನಾಗಿ ಪರಿವರ್ತಿಸುತ್ತಾರೆ. ಸ್ವತಃ ಕವಿಯೇ ತಮ್ಮ ಕೊನೆಗಾಲದಲ್ಲಿ ಬುದ್ಧನ ಅನುಯಾಯಿಯಾಗಿದ್ದರು. ಎಂಬುದು ಅನೇಕರಿಗೆ ಗೊತ್ತಿಲ್ಲದ ಸತ್ಯ.

ಬುದ್ಧನೆಂದರೆ ಜಾಗೃತನಾದವನು. ಪರಿಸರದ ಬಗ್ಗೆ ಅರಿವು ವಿವೇಕ ತುಂಬಿದ ಪ್ರಜ್ಞೆವುಳ್ಳವನು. ನೈಸರ್ಗಿಕ ಸತ್ಯದ ಪ್ರತಿಪಾದಕನಾದ ಬುದ್ಧ ಸನ್ನಡತೆ, ಸಚ್ಚಾರಿತ್ರ್ಯ, ಸದ್ಗುಣ, ಪವಿತ್ರ ವ್ಯಕ್ತಿತ್ವ, ಶುದ್ಧವಾದ

ನಡೆ-ನುಡಿ (ಅಂತರಂಗ ಬಹಿರಂಗ)ಗಳನ್ನು ತನ್ನ ಧರ್ಮದ ತಳಪಾಯವೆಂದು ತಿಳಿದು ಆಚರಿಸಿದವನು. ಹಸಿವನ್ನು ಮಹಾರೋಗವೆಂದು, ದಾರಿದ್ರ್ಯವನ್ನು ಮಹಾ ದುಃಖವೆಂದು ಹೇಳಿದ, ಜೀವನಕ್ಕೆ ಅಗತ್ಯವಾದುದ್ದನ್ನು ಗಳಿಸಲೇಬೇಕು. ಆದರೆ, ಮಿತಿಮೀರಿ ಗಳಿಸಬಾರದೆಂದು ನಿಯಮ ಮಾಡಿದವನು. ಎಂದೂ ಪುನರ್‌ಸಮೀಕರಣಗೊಳ್ಳದ ನೈಸರ್ಗಿಕ ಸಂಪತ್ತು ವ್ಯಥಾ ಪೋಲಾಗದಂತೆ ಎಚ್ಚರ ವಹಿಸಿ ಮಾಡುವ ಸಾಮುದಾಯಿಕ ಉತ್ಪಾದನೆ ಮತ್ತು ಸಾಮುದಾಯಿಕ ಬಳಕೆಯನ್ನು ಬುದ್ಧ ಪ್ರತಿಪಾದಿಸಿದ. ಜನರ ಅಗತ್ಯಕ್ಕಾಗಿ ಎಲ್ಲಾ ಶಾಸ್ತ್ರಗಳು, ಎಲ್ಲಾ ತಿಳುವಳಿಕೆಗಳು ಇರಬೇಕು. ಇದು ಅಭಿವೃದ್ಧಿಯ ಮೊದಲ ಸತ್ಯ. ನಿಜ ಲೋಕದಲ್ಲಿ ಸಂಕಟ ಇರಬಾರದು. ಹಾಗೂ ಅನಗತ್ಯ ಭೋಗವೂ ಇರಬಾರದು. ಇವೆರಡರ ನಡುವಿನ ಸಂತೃಪ್ತ ಸ್ಥಿತಿಯನ್ನು ಬುದ್ಧ ಅಭಿವೃದ್ಧಿ ಎಂದು ಸಮರ್ಥಿಸಿದ. ಅಪರಿಮಿತ ಉತ್ಪಾದನೆ ಸಮಾಜವನ್ನು ಆಕ್ರಮಣಶೀಲವನ್ನಾಗಿಸುತ್ತದೆ. ಸಮುದಾಯ ಅಸಮಾನತೆಯಿಂದ ನರಳುತ್ತದೆ. ಹಾಗಾಗಿ ಸಮಾಜವನ್ನಾಧರಿಸಿದ ಅವಶ್ಯಕತೆ ಸೂಕ್ತವಾದುದು ಎನ್ನುತ್ತಾನೆ. (ಆಧುನಿಕ ಅರ್ಥವ್ಯವಸ್ಥೆ ಆಕ್ರಮಣಶೀಲವಾಗಿದೆ. ಅನಗತ್ಯ ಸರಕಿನ ಉತ್ಪಾದನೆಯೇ ಆ ನಂತರದಲ್ಲಿ ಅದರ ಅಗತ್ಯದ ವಾತಾವರಣವನ್ನು ನಿರ್ಮಿಸಿಕೊಂಡು ದಾಸ್ಯ ಸಮಾಜವನ್ನು ರೂಪಿಸುತ್ತದೆ. ಹಾಗಾಗಿ ಅಪರಿಮಿತ ಬಳಕೆ ಅದರ ಲಕ್ಷಣವಾಗಿರುವುದನ್ನು ನಾವು ನೋಡಬಹುದು.)

ಹರಕೆ ಹೊತ್ತರೆ, ಯಜ್ಞಮಾಡಿದರೆ, ಗಂಗೆಯಲ್ಲಿ ಮುಳುಗಿದರೆ, ಯಾತ್ರೆ-ಜಾತ್ರೆ ಮಾಡಿ ತಮ್ಮ ಮನಸ್ಸಿನ ಕ್ಲೇಷಗಳನ್ನು ಕಳೆದುಕೊಳ್ಳಲು ಸಾಧ್ಯವಿಲ್ಲವೆಂದು ಸಾಮಾಜಿಕ ಮೂಢನಂಬಿಕೆಗಳನ್ನು ವಿರೋಧಿಸಿದ. ಹೀಗೆ ಋತು ನಿಯಮಕ್ಕೆ ಒಳಪಟ್ಟು ಹಗಲು- ರಾತ್ರಿ ಗಳಾಗುತ್ತವೆ. ಮಳೆ-ಬೆಳೆಗಳಾಗುತ್ತವೆ. (According to Law of nature) ಈ ನೈಸರ್ಗಿಕ ಸತ್ಯವನ್ನು ಅವಲಂಬಿಸಿಕೊಂಡು ಜೀವಿಗಳ ಬದುಕು ಕ್ರಿಯಾಶೀಲವಾಗುತ್ತವೆ. ಹಾಗಾಗಿ ಭಗವಂತ ಜಗತ್ತನ್ನು ಸೃಷ್ಟಿಸಿರುವುದು ಶುದ್ಧ ಸುಳ್ಳು. ದೇವರೆನ್ನುವುದು ಸ್ವಾರ್ಥಿ ಪುರೋಹಿತರ ಅಥವಾ ಅಜ್ಞಾನಿಗಳ ಕಾಲ್ಪನಿಕ ಸೃಷ್ಟಿಯಾಗಿದೆ. ದೇವರು, ಧರ್ಮ, ಆತ್ಮ, ಮಠ, ಪರಲೋಕ ಮುಂತಾದವು ಮೇಲ್ವರ್ಗಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಸೃಷ್ಟಿಸಿದ ತಂತ್ರವೆಂದು ಹೇಳಿದ. ಆತ್ಮವೂ ಇಲ್ಲ ಪರಮಾತ್ಮವೂ ಇಲ್ಲವೆಂಬ ಸಾರ್ವಕಾಲಿಕ ಸತ್ಯಗಳನ್ನು ಬೋಧಿಸಿದ ನಿಲುವನ್ನು ಧರ್ಮವೆಂದು ಕರೆಯುವುದು ಸೂಕ್ತವಾಗಿ ಕಾಣಿಸಲಾಗದು. ಏಕೆಂದರೆ, ಈ ಎಲ್ಲಾ ಬೋಧನೆಗಳು ಕೂಡ ಜೀವನದ ವಾಸ್ತವಿಕ ಸತ್ಯವನ್ನೂ, ಜೀವನವನ್ನು ಸುಧಾರಿಸುವ ಮಾರ್ಗಗಳನ್ನು ಮತ್ತು ಸಮುದಾಯದ ಒಳಿತಿಗೆ ಬೇಕಾಗುವ ವಿಧಾನವನ್ನು ತಿಳಿಸುತ್ತವೆ ವಿನಃ ಕಟ್ಟು ಕಥೆಗಳಾಗಿಲ್ಲ.

ಹೀಗೆ ವಚನಕಾರರಿಗಿಂತ ಸರಿ ಸುಮಾರು ೧೫೦೦ ಸಾವಿರ ವರ್ಷಗಳ ಹಿಂದೆ ಬುದ್ಧ ಈ ಜಗತ್ತನ್ನು ಕುರಿತು, ಬದುಕನ್ನು ಕುರಿತು, ಆತ್ಮ ಪರಮಾತ್ಮನನ್ನು ಕುರಿತು ಈ ಸಾಮಾಜಿಕ ವ್ಯವಸ್ಥೆಯ ಕ್ರೌರ್ಯ ಮತ್ತು ಅಸಮಾನತೆಯನ್ನು ಕುರಿತು, ತಾಳಿದ ನಿಲುವು ಹಾಗೂ ಸಕಲ ಜೀವ ಜಗತ್ತಿನ ಸುಖಮಯ ಬದುಕಿಗಾಗಿ ಕಂಡ ಕನಸು ಮತ್ತು ಅದರ ಸಾಕ್ಷಾತ್ಕಾರಕ್ಕೆ ರಚನಾತ್ಮಕವಾಗಿ ತೊಡಗಿಸಿದ ಸಾಮಾಜಿಕ ಪ್ರಕ್ರಿಯೆಗಳು

ಮತ್ತು ಗುರುತರವಾದ ಸಾಮಾಜಿಕ ಹಂಬಲಗಳು ಹತ್ತು ಹಲವು. ಸಾಮಾನ್ಯ ಜನರಾಡುವ ಭಾಷೆಯಲ್ಲಿಯೆ ಈ ನೆಲದ ಸತ್ಯಗಳನ್ನು ಜೀವ ವಿರೋಧಿ ವೈದಿಕ ಸಂಸ್ಕೃತಿಗೆ ಪರ್ಯಾಯವಾಗಿ ರೂಪಿಸಿದ. ವೇದ, ಉಪನಿಷತ್ತು, ಪುರಾಣ ಮತ್ತು ಕರ್ಮ ಸಿದ್ಧಾಂತ ಧರ್ಮಶಾಸ್ತ್ರಗಳು ಪ್ರತಿಪಾದಿಸುವ ಶುದ್ಧ ಮಿಥ್ಯೆಯನ್ನು ತಿರಸ್ಕರಿಸಿ ಅವುಗಳ ಜಾಗದಲ್ಲಿ ಆದರ್ಶ ಮಾನವೀಯ ಮೌಲ್ಯಗಳಿಂದ ಸಮಾಜವನ್ನು ಬೆಳಗುವ ದೀವಿಗೆಗಳಾಗಿ ಬೆಳಕಿನ ಪರಂಪರೆಯನ್ನು ಹುಟ್ಟುಹಾಕಿದ. ಸಾಮಾಜಿಕ ಆಶಯಗಳನ್ನು ಬೆನ್ನಲುಬಾಗಿಟ್ಟುಕೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ವಿಘಟನೆ ಹೊಂದಿದ್ದ ಸಮಾಜವನ್ನು ಉದಾತ್ತ ಸ್ಥಿತಿಗೆ ಎತ್ತಿ ನಿಲ್ಲಿಸಿದ. ಪುರೋಹಿತಶಾಹಿ ಮತ್ತು ಗುಲಾಮಗಿರಿ ವ್ಯವಸ್ಥೆಯಿಂದ ವಿನಾಶದ ಅಂಚಿಗೆ ತಲುಪಿದ್ದ ಕ್ರೌರ್ಯದ ಈ ನೆಲವನ್ನು ಕರುಣೆ, ಪ್ರೀತಿ, ಸಹನೆ, ಮತ್ತು ಸಮಾನತೆಗಳಿಂದ ಮುಪ್ಪರಿಗೊಂಡ ಮಾನವೀಯ ಮೌಲ್ಯಗಳಿಂದ ಬೆಳಗಿಸಿದ, ವೈದಿಕ ಧರ್ಮದ ವರ್ಣಪದ್ಧತಿಯು ಜಾರಿಗೆ ತಂದ ಜಾತಿ ವ್ಯವಸ್ಥೆಯ ಪೋಷಣೆಯೊಂದಿಗೆ ಮತ್ತು ಅದರ ದಮನಕಾರಿ ತಾಂತ್ರಿಕ ಆಚರಣೆಗಳಿಂದ ಈ ನೆಲದ ಮೂಲ ಜನಾಂಗದ ಬದುಕನ್ನು ಅತಂತ್ರಗೊಳಿಸಿ ಅಧಃಪತನಕ್ಕೆ ತಲುಪಿದ್ದ ಸಮಾಜವನ್ನು ಮತ್ತೆ ಸರಿದಾರಿಗೆ ತರುವ ಉಪಾಯದ ಮಾರ್ಗವನ್ನು ಬುದ್ಧ ಶೋಧಿಸಿಕೊಟ್ಟ.

ಧ್ಯಾನ ಮತ್ತು ಪ್ರಜ್ಞೆಯಿಂದ ಮಾತ್ರವೇ ಈ ಮಾನವ ತನ್ನನ್ನು ತಾನು ನಿಯಂತ್ರಿಸಬಲ್ಲವನಾಗಿದ್ದಾನೆ. ಪ್ರಜ್ಞೆ ಇಲ್ಲದವನಿಗೆ ಜ್ಞಾನ ಸಮಾಧಿಯ ತಲ್ಲೀನತೆ ಇಲ್ಲ. ಧ್ಯಾನ ಸಮಾಧಿಯ ತಲ್ಲೀನತೆ ಇಲ್ಲದವನು ಪ್ರಜ್ಞೆಯನ್ನು ಬೆಳೆಸಿಕೊಳ್ಳಲಾರ. ಶೀಲ, ಜ್ಞಾನ ಮತ್ತು ಪ್ರಜ್ಞೆಯ ಮೂಲಕ ಮಾತ್ರವೇ ಮನುಷ್ಯ ಎಲ್ಲಾ ಬಂಧನಗಳಿಂದ ಮುಕ್ತನಾಗಬಲ್ಲ. ಆದ್ದರಿಂದ ಪ್ರಜ್ಞೆಯನ್ನು (ಎಚ್ಚರಿಕೆ) ಸಂಪಾದಿಸಿ (ಅಪ್ಪ ಮಾದೇನ ಸಂಪಾದೇಥ) ಎಂಬುದು ಬುದ್ಧನ ಕೊನೆಯ ಸಂದೇಶ. ಇದನ್ನೇ ಅಲ್ಲಮನು ಅರಿವೆ ಗುರು ಎಂದು ಹೇಳಿರುವುದು.

ಭಾರತದಂತಹ ಬಹುರೂಪಿ ಬಹು ಸಂಸ್ಕೃತಿಯ ಆಚರಣೆಗಳಿಂದ ನೆಲದಲ್ಲಿ ಮತಧರ್ಮಗಳ ಅಪವ್ಯಾಖ್ಯಾನಗಳಿಂದ ಏಕ ಸಂಸ್ಕೃತಿಯನ್ನು ಮಾತ್ರವೇ ಶ್ರೇಷ್ಠವೆಂದು ಪರಿಗಣಿಸಿ ಆರಾಧಿಸುತ್ತಿದ್ದ ಕಾಲಘಟ್ಟದಲ್ಲಿ ಬುದ್ಧ ಈ ನೆಲದ ಎಲ್ಲಾ ಸಂಸ್ಕೃತಿಗಳನ್ನು ಮತ್ತು ಜನ ಸಮುದಾಯಗಳನ್ನು ತಾಯಿಯಂತೆ ಸಂತೈಸಿ ಎದೆಗವಚಿಗೊಂಡು ಪ್ರೀತಿಸಿದ. ಅವುಗಳಿಗೆ ಸಮಾನ ಸ್ಥಾನಮಾನ ದೊರಕುವಂತೆ ಮಾಡಿದ. ಮಾನವತೆಯ ಏಕತೆಗಾಗಿ ಕತ್ತಲಿನಿಂದ ಬೆಳಕಿನೆಡೆಗೆ ನಡೆದ ಬುದ್ಧನ ನಡೆಯನ್ನು ಆತ ಹಚ್ಚಿದ ಹಣತೆಯನ್ನಿಟ್ಟುಕೊಂಡು ಕನ್ನಡ ನಾಡಿನಲ್ಲಿ ನಡೆದವರು ಹನ್ನೆರಡನೇ ಶತಮಾನದ ವಚನಕಾರರು. ಬುದ್ಧನ ಈ ಸಮಾನತೆಯ ಹಣತೆಯನ್ನು ತಮ್ಮ ಎದೆಯಲ್ಲಿ ಕಾಪಿಟ್ಟುಕೊಂಡು ಮತ್ತೆ ಬೆಳಗಿಸಿದವರು ಆರಂಭದಲ್ಲಿ ದಲಿತ ಶರಣ ಸಂತರು. ಆನಂತರ ಅಲ್ಲಮ ಮತ್ತು ಬಸವಣ್ಣನ ಸಮಕಾಲೀನರಲ್ಲಿ ಬುದ್ಧನ ಈ ಬೆಳಕಿನ ಪರಂಪರೆ ಬಹು ದೂರದವರೆಗೆ ಮುಂದುವರೆಯಿತು.

ಆ ನಂತರದಲ್ಲಿ ಕಾಲಮಾನದ ವೈರುಧ್ಯಕ್ಕೆ ಸಿಕ್ಕಿ, ಧಾರ್ಮಿಕ ಸಂಘರ್ಷಗಳ ಪಿತೂರಿಗೆ ಒಳಗಾಗಿ ಧಮ್ಮವು ಭಾರತದ ಈ ನೆಲದಾಚೆ ನೆಲಸಬೇಕಾಯಿತು. ವಚನಕಾರರ ಸಾಮಾಜಿಕ ಕ್ರಾಂತಿರಥ

ಭಗ್ನವಾಯಿತು. ಬುದ್ಧ ಬೆಳಗಿಸಿದ, ವಚನಕಾರರು ಎಣ್ಣೆ ಹಾಕಿ ಮತ್ತಷ್ಟು ಬೆಳಗಿಸಿದ ಈ ಸಮಾನತೆಯ ಹಣತೆ ಮತ್ತೊಮ್ಮೆ ೨೦ನೇ ಶತಮಾನದಲ್ಲಿ ಬೆಳಗಿದ್ದು, ಬಾಬಾಸಾಹೇಬರ ಮೂಲಕ. ಅಸಮಾನ ವೈದಿಕ ಭೂಮಿಯನ್ನು ಸಮಾನತೆಯ ಬುದ್ಧ ಭೂಮಿಯನ್ನಾಗಿ ಸಂವಿಧಾನದ ರೂಪದಲ್ಲಿ ಬೆಳಗಿದ್ದು ಈ ನೆಲದ ಸೌಭಾಗ್ಯವೇ ಸರಿ. ಇದನ್ನು ನಿರಂತರವಾಗಿ ಬೆಳಗಿಸುವ ಗುರುತರವಾದ ಜವಬ್ದಾರಿಗಳನ್ನು ಮನುಷ್ಯರಾದವರು ಹೊರಬೇಕಾಗಿದೆ. ಅಂತಹವರಿಗೆ ಶರಣು.

ಡಾ. ಎಸ್. ಚಂದ್ರಕಿರಣ್, ಎಲ್.೪೮, ೮ನೇ ಕ್ರಾಸ್, ಮಾನಸಗಂಗೋತ್ರಿ- ಮೈಸೂರು.

ಅಲ್ಲಮ ಮತ್ತು ಬಸವಣ್ಣ : ಅನುಭಾವ - ಕಾಯಕಗಳ ಮುಖಾಮುಖಿ*

ಬಿದರಹಳ್ಳಿ ನರಸಿಂಹಮೂರ್ತಿ

೧

Like poles repel; unlike poles attract each other. ಇದೊಂದು ಭೌತಶಾಸ್ತ್ರದ ಪ್ರಯೋಗ ಸಿದ್ಧ ಸತ್ಯ. ಒಂದು ಅಯಸ್ಕಾಂತದ ಎರಡು ತುದಿಗಳನ್ನು ಉತ್ತರ ಧ್ರುವ, ದಕ್ಷಿಣ ಧ್ರುವ ಎಂದು ಕರೆಯುತ್ತೇವೆ. ಉತ್ತರ ಧ್ರುವ ಉತ್ತರ ಧ್ರುವವನ್ನಾಗಲಿ, ದಕ್ಷಿಣ ಧ್ರುವ ದಕ್ಷಿಣ ಧ್ರುವವನ್ನಾಗಲಿ ಆಕರ್ಷಿಸುವುದಿಲ್ಲ. ಉತ್ತರ ಧ್ರುವ ಯಾವಾಗಲೂ ದಕ್ಷಿಣ ಧ್ರುವವನ್ನು, ದಕ್ಷಿಣ ಧ್ರುವ ಅಷ್ಟೇ ತೀವ್ರವಾಗಿ ಉತ್ತರ ಧ್ರುವವನ್ನು ಆಕರ್ಷಿಸುತ್ತಲೆ ಇರುತ್ತವೆ.

ಅಲ್ಲಮನ ಅನುಭಾವದ ಬಗ್ಗೆ ಬಸವನಿಗಿರುವ ಆಕರ್ಷಣೆ, ಬಸವನ ಕಾಯಕ ತತ್ವದ ಬಗ್ಗೆ ಅಲ್ಲಮನಿಗಿರುವ ಆಕರ್ಷಣೆಯನ್ನು ಅರ್ಥಮಾಡಿಸಲು ಈ ವೈಜ್ಞಾನಿಕ ಸತ್ಯ ಒಂದು ಸಮರ್ಥ ರೂಪಕವಾಗಬಲ್ಲದು. ಅವರಿಬ್ಬರೂ ಒಬ್ಬರಿಗೊಬ್ಬರು ಅತ್ಯಂತ ವಿಭಿನ್ನವಾದ ವ್ಯಕ್ತಿತ್ವವುಳ್ಳವರಾದುದರಿಂದಲೆ, ಅವರ ನಡುವೆ ಅಂಥ ಪ್ರಚಂಡ ಅಯಸ್ಕಾಂತೀಯ ಸೆಳೆತ ಉಂಟಾಯಿತು ಎನ್ನಬಹುದು.

ಒಂದು ಅಯಸ್ಕಾಂತದ ಪಟ್ಟಿಯನ್ನು ನಡುವೆ ತುಂಡರಿಸಿ ಎರಡು ತುಂಡು ಮಾಡಿದರೆ, ಉತ್ತರದ ಕಡೆಯ ತುಂಡು ಬರಿ ಉತ್ತರ ಧ್ರುವದ ತುಂಡಾಗಲಿ ದಕ್ಷಿಣದ ಕಡೆಯ ತುಂಡು ಬರಿ ದಕ್ಷಿಣಧ್ರುವದ

ತುಂಡಾಗಲಿ ಆಗುವುದಿಲ್ಲ. ಬದಲಿಗೆ ಎರಡು ತುಂಡುಗಳಲ್ಲು ಮತ್ತೆ ಪ್ರತ್ಯೇಕವಾದ ಉತ್ತರ ಧ್ರುವ ದಕ್ಷಿಣ ಧ್ರುವಗಳು ಕಂಡುಬರುತ್ತವೆ. ಅರ್ಥಾತ್ ಅಯಸ್ಕಾಂತದ ಅಸ್ತಿತ್ವವೆ ಮೂಲಭೂತವಾಗಿ ಉತ್ತರಧ್ರುವ ಮತ್ತು ದಕ್ಷಿಣಧ್ರುವ ಎಂಬ ಪ್ರಬಲ ವೈರುಧ್ಯದ ಶಕ್ತಿಗಳನ್ನು ಒಟ್ಟಿಗೆ ಹಿಡಿಯುವಂಥದು. ಅಲ್ಲಮ -ಬಸವ ಕೂಡ ಒಂದು ಪರಿಪೂರ್ಣ ವ್ಯಕ್ತಿತ್ವದ ಎರಡು ಅತ್ಯಂತಿಕ ತುದಿಗಳು; ಅಥವಾ ಒಂದೆ ಆತ್ಮದ ಎರಡು ಮುಖಗಳು ಅವರಿಬ್ಬರೂ ಒಬ್ಬರೊಳಗೊಬ್ಬರು ಇದ್ದೇ ಇರುವಂಥವರು. ಅಲ್ಲಮನಲ್ಲಿ ಬಸವತನವಿದೆ; ಬಸವನಲ್ಲಿ ಅಲ್ಲಮತನವಿದೆ.

ನಮಗೆ, ಅಂದರೆ ಆಧುನಿಕರಿಗೆ, ವೈಜ್ಞಾನಿಕ ಮತ್ತು ಸಾಮಾಜಿಕ ಪ್ರಯೋಗಗಳ ಹುಚ್ಚು ಹಿಡಿದಿದೆಯಷ್ಟೆ? ಒಂದೊಮ್ಮೆ ನಾವು ಒಂದು ಬಾರ್ ಮ್ಯಾಗ್ನೆಟ್ಟನ್ನೋ ಅಥವಾ ನೀಡ್‌ಲ್ ಮ್ಯಾಗ್ನೆಟ್ಟನ್ನೋ ಅಥವಾ ಲಾಳಾಕಾರದ ಸೂಜಿಗಲ್ಲನ್ನೋ ತೆಗೆದುಕೊಂಡು ಅದರ ಎರಡು ತುದಿಗಳೂ ಒಂದಕ್ಕೊಂದು ಸೇರುವಂತೆ ಬಗ್ಗಿಸಿದರೆ ಏನಾದೀತು? ಒಂದೆ ಆಯಸ್ಕಾಂತದ ಎರಡು ತುದಿಗಳೂ ವಿಭಿನ್ನ ಧ್ರುವಶಕ್ತಿ ಹೊಂದಿರುವುದರಿಂದ, ಅಂಥ ಧ್ರುವೀಕರಣದಿಂದಾಗಿ ಅವುಗಳ ನಡುವೆ ತಡೆದುಕೊಳ್ಳಲಾರದಂಥ ಆಕರ್ಷಣೆ ಇರುವುದರಿಂದ ಅವು ಖಂಡಿತ ಒಂದಕ್ಕೊಂದು ಅಂಟಿಕೊಳ್ಳುತ್ತವೆ; ಆಗ ಆ ಸೂಜಿಗಲ್ಲು ವೃತ್ತಾಕಾರವನ್ನು ತಳೆದು ಪೂರ್ಣತ್ವದ ಸಂಕೇತವಾಗಿಬಿಡುತ್ತದೆ. ಇದೇ ರೀತಿ ಅಲ್ಲಮನ ಅರಿವಿನೊಳಗೆ ಬಸವನ ಭಾವ ಶುದ್ಧಿ ಐಕ್ಯವಾಗುತ್ತದೆ; ಬಸವನ ಕಾಯಕದ ಭಾವ ಶುದ್ಧಿಯೊಳಗೆ ಅಲ್ಲಮನ ಅನುಭಾವದ ಅರಿವು ಐಕ್ಯವಾಗುತ್ತದೆ. ಆದಾಗ ಸೃಷ್ಟಿಯ ಒಂದು ಅತ್ಯಂತಿಕ ಪವಾಡ ನಡೆದು ಒಂದು ಸ್ವಯಂಪರಿಪೂರ್ಣ ವ್ಯಕ್ತಿತ್ವದ ಮಾದರಿ ಗೋಚರಿಸುತ್ತದೆ. ಅದಕ್ಕೊಂದು ಇಡಿತನ ಒಂದು ಅಲೌಕಿಕ ಅಖಂಡತೆ ಬಂದುಬಿಡುತ್ತದೆ.

ಅಲ್ಲಮನಿಗೆ ಅನುಭಾವವನ್ನೆ ಎಲ್ಲರ ಆತ್ಮಕಾಯಕವನ್ನಾಗಿಸುವ ಅಲೌಕಿಕ ತುರ್ತಿದೆ; ಬಸವನಿಗೆ ಎಲ್ಲರ ಕಾಯಕಗಳನ್ನೂ ಅನುಭಾವಿಕ ಪ್ರಕ್ರಿಯೆಯನ್ನಾಗಿಸುವ ಲೌಕಿಕ ಹಂಬಲವಿದೆ. ಈ ದೃಷ್ಟಿಯಲ್ಲಿ ಅವರಿಬ್ಬರ ನಡುವಣ ಧ್ರುವೀಕರಣ ಪರಸ್ಪರ ಮಾರಕವಲ್ಲ; ಅದು ಪರಸ್ಪರ ಪೂರಕವಾದಂಥದು. ಒಬ್ಬರನ್ನೊಬ್ಬರು ಬೆಳೆಸುವಂಥದು; ಒಬ್ಬರಿಂದಿನ್ನೊಬ್ಬರು ಬೆಳೆಯುವಂಥದು. ಒಂದು ಪರಿಪೂರ್ಣವಾದ ದೈವಿಕ ವ್ಯಕ್ತಿತ್ವದ ನಿರ್ಮಾಣಕ್ಕಾಗಿ ಧ್ಯಾನಿಸುವಂಥದು. ಅವರಿಬ್ಬರೂ ಒಬ್ಬರಿಗೊಬ್ಬರು ಸಿಕ್ಕಿದ್ದು, ದಕ್ಕಿದ್ದು ಆ ಯುಗದ ಹಾಗೂ ಈ ನೆಲದ ಪುಣ್ಯ, ಪ್ಲೇಟೊಗೆ ಸಾಕ್ರಟಿಸ್ ಸಿಕ್ಕಿದ ಹಾಗೆ, ವಿವೇಕಾನಂದರಿಗೆ ರಾಮಕೃಷ್ಣ ಪರಮಹಂಸರು ಸಿಕ್ಕಿದಹಾಗೆ ಬಸವಣ್ಣನಿಗೆ ಅಲ್ಲಮ ಸಿಕ್ಕಿದ. ಅವರ ಅದ್ಭುತ ಜೋಡಿ ನಮ್ಮ ಮಣ್ಣಿನ ಕಣ್ಣು ತೆರೆಸುವಂಥ ಅನುಭಾವಿಕ ಕಾಯಕಕ್ಕೆ ಮೀಸಲಾಯಿತು; ನಮ್ಮನ್ನೆಲ್ಲ ಲೌಕಿಕಾಲೌಕಿಕ ಕಲ್ಯಾಣದ ಕಡೆ ಸೆಳೆಯುವ ಅರಿವಿನ ಅಯಸ್ಕಾಂತವಾಯಿತು.

೨

ಲಭ್ಯವಿರುವ ವಚನ ಸಾಹಿತ್ಯ ಸ್ವರೂಪದ ಹಿನ್ನೆಲೆಯಲ್ಲಿ, ಅಲ್ಲಮ ಮತ್ತು ಬಸವರ ಮುಖಾಮುಖಿಯನ್ನು ಎರಡು ಪ್ರಧಾನ ನೆಲೆಗಳಲ್ಲಿ ಅನುಸಂಧಾನ ಮಾಡಬಹುದಾಗಿದೆ. ಒಂದು; ಅಲ್ಲಮ

ಮತ್ತು ಬಸವರ ಪ್ರತ್ಯೇಕ ವಚನಗಳ ಕಟ್ಟುಗಳನ್ನಿಟ್ಟುಕೊಂಡು ತುಲನಾತ್ಮಕ ಅಧ್ಯಯನ ಮಾಡುವುದು; ಅಂದರೆ ಅನುಭಾವ, ಕಾಯಕ, ದಾಸೋಹ ಮುಂತಾದ ಶರಣ ಚಳವಳಿಯ ಕ್ರಿಯಾಪ್ರೇರಕ ಪಾರಿಭಾಷಿಕಗಳನ್ನು ಅವರಿಬ್ಬರೂ ಎಷ್ಟು ಸಮಾನಾಂತರವಾಗಿ ಹಾಗು ವಿಭಿನ್ನವಾಗಿ ಅರ್ಥೈಸುತ್ತಾರೆ ಎಂದು ನೋಡುವುದು; ಹಾಗು ತಮ್ಮ ಅನುಭವದ ಹಿನ್ನೆಲೆಯಲ್ಲಿ ಕಟ್ಟಿರುವ ಬಿಡಿ ವಚನಗಳಲ್ಲಿ ಕಾಣುವ ದೃಷ್ಟಿಕೋನದ ಸೂಕ್ಷ್ಮ ವ್ಯತ್ಯಾಸವನ್ನು ಗುರ್ತಿಸುವುದು. ಎರಡು: ಅವರಿಬ್ಬರ ಬಹುಮುಖ್ಯ ವಚನಗಳನ್ನೆಲ್ಲ ಹೌದು ಹೌದೆನ್ನಿಸುವ ಹಾಗೆ, ಅದ್ಭುತ ಪ್ರಸಂಗ ಮಾಲೆಯ ಸುಖ ಸಂವಾದದ ಮಣಿಗಳನ್ನಾಗಿಸಿ ಸೋದು, ಒಂದು ಪ್ರಚಂಡ ಸಂಕಥನವನ್ನೆ ನಿರ್ಮಿಸಿರುವ ಶಿವಗಣಪ್ರಸಾದಿ ಮಹಾದೇವಯ್ಯನ 'ಶೂನ್ಯಸಂಪಾದನೆ'ಯ ಹಿನ್ನಲೆಯಲ್ಲಿ ಅಲ್ಲಮ ಹಾಗೂ ಬಸವರ ಮುಖಾಮುಖಿಯನ್ನು ವಿಶ್ಲೇಷಿಸುವುದು. ಮೊದಲನೆಯದು ಪರೋಕ್ಷವಾದ ತಾತ್ವಿಕ ಮುಖಾಮುಖಿಯೆನ್ನಿಸಿದರೆ, ಎರಡನೆಯದು ಪ್ರತ್ಯಕ್ಷವಾಗಿ ಇಡಿ ವ್ಯಕ್ತಿತ್ವಗಳನ್ನೆ ತೊಡಗಿಸಿಕೊಂಡ ಮುಖಾಮುಖಿಯಾಗುತ್ತದೆ.

ಅಲ್ಲಮ ಮತ್ತು ಬಸವರ ಸಂವೇದನೆಯ ಸೂಕ್ಷ್ಮ ವ್ಯತ್ಯಾಸವನ್ನು ಅವರು ಪ್ರತಿನಿಧಿಸುವ 'ಸೋಹಂ ಭಾವ' ಮತ್ತು 'ದಾಸೋಹಂ ಭಾವ'ಗಳ ಮೂಲಕ ವಿವರಿಸಬಹುದು. ಒಂದೇ ಪರವಸ್ತುವನ್ನು ಅವರಿಬ್ಬರೂ ತಮ್ಮ ಇಷ್ಟದೈವನ್ನಾಗಿಸಿ ಕೊಂಡಿದ್ದಾರೆ ನಿಜ. ಆದರೆ ಅಲ್ಲಮ ಗುಹೇಶ್ವರನಲ್ಲಿ ಸೋಹಂ ಭಾವದಿಂದ ಒಂದಾದರೆ, ಬಸವ ಕೂಡಲ ಸಂಗನನ್ನು ಸದಾ ಇದಿರಿಟ್ಟುಕೊಂಡು ದಾಸೋಹಂ ಭಾವದಿಂದ ಆರಾಧಿಸುತ್ತಾನೆ, ಪ್ರಾರ್ಥಿಸುತ್ತಾನೆ. ಒಂದು ವಿಶಿಷ್ಟ ಅರ್ಥದಲ್ಲಿ, ಅಲ್ಲಮ ತಾನೆ ದೇವರಾಗಿಬಿಡುವ 'ಅದ್ವೈತಿ', ಬಸವ ಕಿಂಕಿಲ ಭಕ್ತಿಯಿಂದ ದೇವರಿಗೆ ಎರಗುವ 'ದ್ವೈತಿ'. ದೇವರೂ ತನಗಿಂತ ದೊಡ್ಡವನಲ್ಲ ಎಂಬ ಅರಿವಿನಲ್ಲಿ ಉರಿಯುತ್ತಿರುವುದರಿಂದ ಅಲ್ಲಮನ ದೇವರು ಅವನೊಳಗೇ ಇದ್ದಾನೆ; ಎನಗಿಂತ ಕಿರಿಯರಿಲ್ಲ ಎಂಬ ಆತ್ಯಂತಿಕ ಭಕ್ತಿಯಿಂದಾಗಿ ಬಸವಣ್ಣನ ದೇವರು ಸದಾ ಅವನ ಹೊರಗೆ ಅಂದರೆ ಅವನ ಕಣ್ಣೆದುರಿಗೆ ಇರುತ್ತಾನೆ.

ಸ್ವಾನುಭಾವದಲ್ಲಿನ ಈ ವಿಭಿನ್ನ ಸಂವೇದನಾ ಸೂಕ್ಷ್ಮತೆಗೆ ದೃಷ್ಟಾಂತವಾಗಿ ಅಲ್ಲಮನ 'ತನುವ ತೋಂಟವ ಮಾಡಿ' ಎಂಬ ವಚನವನ್ನೂ, ಬಸವನ 'ಎನ್ನ ಕಾಯವ ದಂಡಿಗೆಯ ಮಾಡಯ್ಯಾ' ವಚನವನ್ನು ನೋಡಬಹುದು. ಇವೆರಡೂ ಕಾಯಪ್ರಜ್ಞೆಯಿಂದ ಪ್ರಾರಂಭವಾಗಿ ಆತ್ಮತತ್ವಕ್ಕೆ ಹೋಗಿ ಮುಟ್ಟುವ ವಚನಗಳು. ಕಾಯಕ್ಕೆ ಸುತ್ತಿಕೊಂಡ ಕತ್ತಲೆಯನ್ನು ಕಳೆದಾಗ ಮಾತ್ರ ಆತ್ಮಪ್ರಭೆ ದೃಗ್ಗೋಚರವಾಗುತ್ತದೆ. ಬಗೆಬಗೆಯ ಹಲ್ಲಣ ಹೊತ್ತು ವಿಲಿವಿಲಿಗುಟ್ಟುವ ಕಾಯವನ್ನು ಕಾಯಕದಲ್ಲಿ ತೊಡಗಿಸಿ, ದಾಸೋಹಕ್ಕಾಗಿ ದುಡಿಸಿದರೂ ಆತ್ಮದಲ್ಲಿ ಅನುಭಾವ ಜಿನುಗದೆ ಹೋದಾಗ ಬಸವಣ್ಣ ಸಂಪೂರ್ಣ ಶರಣಾಗತನಾಗಿ 'ಎನ್ನ ಕಾಯವ ದಂಡಿಗೆಯ ಮಾಡಯ್ಯಾ' ಎಂದು ಆರ್ತವಾಗಿ ಕೂಡಲಸಂಗನಿಗೆ ಮೊರೆಯಿಡುತ್ತಾನೆ. ತನ್ನ ಕೈಯಲ್ಲಿ ಏನೂ ಇಲ್ಲ ಎಲ್ಲವೂ ಅವನ ಕೃಪೆಯಿಂದ ದಕ್ಕಬೇಕು ಎಂಬ ದೀನ ಭಕ್ತಿಯನ್ನು ಪ್ರಕಟಿಸುತ್ತಾನೆ. ಅವನಿಗೆ ತನ್ನ ಕಾಯವೆಂಬುದು ಬರಿ ಕಚ್ಚಾವಸ್ತುಗಳ ಒಂದು ಗುಡ್ಡೆ ಅಷ್ಟೆ. ಕೂಡಲಸಂಗ ಅವನ ಕಾಯವನ್ನೆ ದಂಡಿಗೆಯನ್ನಾಗಿ ತೀಡಿ, ಶಿರವನ್ನೆ ಸೋರೆಬುರುಡೆಯನ್ನಾಗಿ

ಜೋಡಿಸಿ, ಅವನ ನರವನ್ನೆ ತಂತಿಯನ್ನಾಗಿಸಿ ಎಳೆದುಕಟ್ಟಿ, ಅವನ ಬೆರಳನ್ನೆ ಮೀಟುವ ಕಡ್ಡಿಯನ್ನಾಗಿ ಬಳಸಿ, ಅವನ ಉರದಲ್ಲಿ ವಿರಕ್ತಿ ಹುಟ್ಟುವಂತೆ ಒತ್ತಿಬಾರಿಸುತ್ತ ಬತ್ತೀಸ ರಾಗಗಳನ್ನು ಹಾಡಬೇಕಾಗಿದೆ. ಕೂಡಲಸಂಗನ ದಿವ್ಯ ಸಂಗೀತಕ್ಕೆ ಸಾಥಿಯಾಗುವ ವಿಕತಾರಿಯಾಗಿ ಹೋಗುವುದು ಬಸವಣ್ಣನ ಹಂಬಲ. ಆಗ ಮಾತ್ರ ತನ್ನ ಭವಕಾನನದ ಅನುಭವಗಳ ಅಪಸ್ವರ ಉಡುಗಿ, ಅನುಭಾವದ ದಿವ್ಯನಾದ ತನ್ನಿಂದ ಹೊರಟೀತು ಎಂಬುದು ಅವನ ಅಲೌಕಿಕ ಅಂದಾಜು. ''ದಾಸನ ಮಾಡಿಕೊ ಎನ್ನ'' ಎಂಬ ದಾಸ್ಯಭಾವಕ್ಕೆ, ದ್ವೈತ ಭಕ್ತಿಗೆ ಸಾಕಷ್ಟು ಹತ್ತಿರವಿರುವ ದೇವ-ದಾಸ ಸಂಬಂಧವಿದು. ಆದ್ದರಿಂದಲೆ ಬಸವಣ್ಣನ ನಿಲುವು ದಾಸೋಹಂ ಎಂಬ ಸರ್ವಸಮರ್ಪಣಾ ಭಾವದ ನಿಲುವು ಎನ್ನಬಹುದು.

ತನ್ನ ಕಾಯದ ಮೇಲೆ ತನಗೆ ಯಾವುದೇ ಹತೋಟಿಯಿಲ್ಲ ಎಂಬ ತಿಳುವಳಿಕೆಯಿಂದ ಬಸವಣ್ಣ ಅದನ್ನು ''ದಂಡಿಗೆಯ ಮಾಡಯ್ಯಾ'' ಎಂದು ಇಷ್ಟದೈವಕ್ಕೆ ಬೇಡಿಕೊಳ್ಳುತ್ತಾನೆ. ತದ್ವಿರುದ್ಧವಾಗಿ ಅಲ್ಲಮ ತನ್ನ ತನುವನ್ನು ತಾನೆ ''ತೋಂಟವ ಮಾಡಿ'' ಅನುಭಾವಿಕ ಕಾಯಕದ ಮೂಲಕ ''ಸಸಿಯ ಸಲಹಿದೆನು ಕಾಣಾ'' ಎಂದು ತನ್ನೊಳಗೇ ಇರುವ ಗುಹೇಶ್ವರನಿಗೆ ತೋರಿಸುತ್ತಾನೆ. ಮಾನುಷಿ - ಮನುಷ್ಯರ ಸಂಸ್ಕೃತಿ ಯುದ್ದಕ್ಕೂ ಕೃಷಿ ಎಂಬುದು ಜನ ಮತ್ತು ಜಾನುವಾರುಗಳ ಕಾಯದ ಉತ್ಪನ್ನವಾದ ಕಾಯಕದ ಮೇಲೆ ಅವಲಂಬಿತವಾಗಿಯೆ ವಿಕಾಸವಾಗಿರುವ ಭೌತಿಕ, ತಾಂತ್ರಿಕ ಪ್ರಕ್ರಿಯೆಯಾಗಿದೆ. ಅಂಥ ಅತ್ಯಂತ ಐಹಿಕ, ಭೌತಿಕ, ಶಾರೀರಿಕ ಚಟುವಟಿಕೆಯ ವಿವರಗಳನ್ನೆ ಬಳಸುತ್ತ ಅಲ್ಲಮ ತನ್ನ ಅನುಭಾವ ಕಾಯಕದ ಚಿತ್ರವನ್ನು ಕಟ್ಟುತ್ತಾನೆ. ಹೊರಗೆ ನಡೆಯುತ್ತಿರುವ ಕ್ರಿಯಾಮಥನದ ಪ್ರತಿಬಿಂಬದ ಹಾಗೆ ಇಲ್ಲಿ ಆತ್ಮದೊಳಗಿನ ಅರಿವಿನಕಾಯಕ ನಡೆಯುತ್ತದೆ. ತನು, ಮನ, ಸಂಸಾರ ಭ್ರಾಂತಿ ಎಲ್ಲ ಆತ್ಮಕೃಷಿಯ ಪವಾಡಕ್ಕೊಳಗಾಗಿ ಅನುಭಾವಕ್ಕೆ ಪಕ್ವಾಗುತ್ತವೆ; ಅದಾಗ ಅರಿವಿನ ಸಸಿ ತನ್ನಂತಾನೆ ಅಂಕುರಿಸುತ್ತದೆ. ಅದು ಬ್ರಹ್ಮಬೀಜದ ಫಲ. ಆ ಸಸಿಯನ್ನು ಸಲಹಲು ಅನುಭಾವಿ ಅಲ್ಲಮ ಕಷ್ಟಪಟ್ಟಿರುವುದು ಅಷ್ಟಿಷ್ಟಲ್ಲ. ಇಡಾ ಮತ್ತು ಪಿಂಗಳ ಎಂಬ ದ್ವಂದ್ವನಾಡಿಗಳ ಉಭಯಭಾವವನ್ನಳಿದು ನಡುವಣ ಸುಷುಮ್ನನಾಡಿಯ ಏಕೋಭಾವದ ಉದಕವನ್ನು ಆ ತೋಟಕ್ಕೆ ಹಾಯಿಸಿದ್ದಾನೆ. ಸ್ವಾಭಾವಿಕ ಕೃಷಿಯಲ್ಲಿ ಎತ್ತಿನ ಜೋಡಿ ಅಥವ ಎರಡು ಜೋಡಿ, ಮೂರು ಜೋಡಿ ಇತ್ಯಾದಿ ಬಳಸುವ ವಾಡಿಕೆ. ಇಲ್ಲಿ ''ಬಸವಗಳೈವರು ಹಸಗೆಡಿಸಿಹವೆಂದು'' ಹೆದರಿ ಅವನ್ನು ಸದಾ ಸಮತೆ, ಸೈರಣೆಗಳೆಂಬ ಬೇಲಿಯೊಳಗೆ ಹದ್ದುಬಸ್ತು ಮಾಡಿದ್ದಾನೆ. ಪಂಚೇಂದ್ರಿಯಗಳ ಚಂಚಲ ವ್ಯಾಪಾರಗಳಿಗೆ ಪ್ರತೀಕವಾಗಿರುವ ಈ ಐವರು ''ಬಸವಗಳು'' ಇನ್ನೊ ಒಂದು ಆಳವಾದ ಸೂಚನೆಯನ್ನು ನೀಡುತ್ತವೆಯೆ ಎಂಬುದು ನನ್ನ ಸಂದೇಹ. ಕಾಯಕ್ಕೆ ಹೇಳಿಸಿದ ನೂರೆಂಟು ಕರ್ಮಾನುಷ್ಠಾನದ ಕಟ್ಟುನಿಟ್ಟಿನಲ್ಲಿ ಕಾಯಕ ದಾಸೋಹಗಳ ಮೂಲಕ ಲೋಕಕಲ್ಯಾಣ ಸಾಧಿಸಿಬಿಡುವ ಭೋಳೆ ಕನಸಿನಲ್ಲಿ ಬಸವ, ಚನ್ನಬಸವ ಮುಂತಾದ 'ಬಸವಗಳೈವರು' ಆತ್ಮಕ್ಷೇತ್ರದಲ್ಲಿ ಮಾತ್ರ ಪಲ್ಲವಿಸಬಹುದಾದ ಅನುಭಾವವೆಂಬ ಅರಿವಿನ ಸಸಿಯನ್ನೆ ಮೇಯ್ದುಬಿಟ್ಟಾವು ಎಂಬ ಆಧ್ಯಾತ್ಮಿಕ ಆತಂಕವನ್ನು ಅಲ್ಲಮ ಅತ್ಯಂತ ಸೂಚ್ಯವಾಗಿ ವ್ಯಕ್ತಪಡಿಸುತ್ತಿದ್ದಾನೆಯೆ ಎಂಬುದು ನನ್ನ ಪ್ರಶ್ನೆ. ಯಾಕೆಂದರೆ ಕಾಯದಿಂದಲೆ ಆತ್ಮಸಾಕ್ಷಾತ್ಕಾರವಾಗುತ್ತದೆಂಬುದು ಬಸವಣ್ಣ ಮತ್ತು ಅನೇಕ ಶರಣರ ನಂಬಿಕೆಯಾದರೆ,

ಆತ್ಮದಿಂದಲೆ ಕಾಯದ ಕಲ್ಯಾಣ ಸಾಧ್ಯ ಎಂಬುದು ಅಲ್ಲಮನ ದರ್ಶನ. ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಚೈತನ್ಯದಿಂದಲೆ ವಸ್ತು ಪ್ರಪಂಚವೆಲ್ಲ ಹುಟ್ಟಿದೆ ಮತ್ತು ಆ ಮಹಾಚೈತನ್ಯದ ನಿಯಂತ್ರಣದಲ್ಲೆ ಇಡೀ ವಸ್ತು ಪ್ರಪಂಚ ಯಾವಾಗಲೂ ಇರುತ್ತದೆ ಎಂಬ ತತ್ವ ಇದು. ಹಾಗೆಂದೇ ಅಲ್ಲಮ ಅಪ್ಪಟ ಭೌತಿಕ ಕ್ರಿಯಾಚರಣೆಯಾದ ಕೃಷಿಯ ಪಾರಿಭಾಷಿಕಗಳನ್ನೆ ಬಳಸಿ ಆತ್ಮಕೃಷಿಯ ಗುಟ್ಟನ್ನು ತಿಳಿಸುತ್ತಾನೆ; ಅಲ್ಲದೆ ಅದರಲ್ಲಿ ವಹಿಸಬೇಕಾದ ಸೂಕ್ಷ್ಮ ಆಧ್ಯಾತ್ಮಿಕ ಎಚ್ಚರದ ಬಗ್ಗೆ ಸುಳಿವು ನೀಡುತ್ತಾನೆ. ಅವನಮಟ್ಟಿಗೆ ಮೇಟವಿದ್ಯೆಯಂಥ ಕೋಟಿ ಕೋಟಿ ಕಾಯಕಗಳೆಲ್ಲವೂ ಅನುಭಾವವೆಂಬ ಅಖಂಡ ಅರಿವಿನ ಅಧೀನ.

ಅರಿವಿನ ಅಯಸ್ಕಾಂತದ ಎರಡು ಧ್ರುವಗಳಂತಿರುವ ಅನುಭಾವ ಮತ್ತು ಕಾಯಕವನ್ನು ಪ್ರತಿನಿಧಿಸುವ ಅಲ್ಲಮ ಮತ್ತು ಬಸವ ಮೇಲುನೋಟಕ್ಕೆ ಪರಸ್ಪರ ವಿರೋಧವಾಗಿರುವಂತೆ ಕಂಡರೂ, ವ್ಯಕ್ತಿತ್ವದ ಆಳದಿಂದ ಪರಸ್ಪರರನ್ನು ಸೆಳೆಯುವುದೆ ವಿಶ್ವಸೃಷ್ಟಿಯ ಅದ್ಭುತ ನಿಯತಿ. ಇಷ್ಟದೈವದ ಅನುಸಂಧಾನಕ್ಕಾಗಿ ಅವರಿಬ್ಬರು ಅನುಸರಿಸುವ 'ಸೋಹಂ' ಮತ್ತು 'ದಾಸೋಹಂ' ಎಂಬ ಸ್ವಾನುಭಾವದ ಮಾರ್ಗಗಳಲ್ಲಿ ಯಾವುದು ಶ್ರೇಷ್ಠ ಎಂದು ನಿರ್ಣಯಿಸುವುದು ಕಷ್ಟ. ಯಾಕೆಂದರೆ ಅವರಿಬ್ಬರೂ ಎರಡು ವಿಶಿಷ್ಟ ಮನುಷ್ಯ ಮಾದರಿಗಳ ಪ್ರತೀಕಗಳಾಗಿದ್ದಾರೆ. ಅಲ್ಲಮನ ಹಾಗೆ ಅದ್ವೈತಾನುಭಾವದ ಮನಸ್ಥಿತಿ ಉಳ್ಳವರಿಗೆ ಅದೇ ಉತ್ತಮ ಎನ್ನಿಸುವ, ಬಸವನ ಹಾಗೆ ದ್ವೈತಾನು ಸಂಧಾನದ ಮೂಲಕ ಕಾಯಕವೆ ಪೂಜೆ ಎನ್ನುವ ನಂಬಿಕೆಯುಳ್ಳವರಿಗೆ ಅವನ ಮಾರ್ಗವೆ ಸೂಕ್ತ ಎನ್ನಿಸುವ ಸಾಧ್ಯತೆ ಇರುತ್ತದೆ. ಯಾವುದು ಶ್ರೇಷ್ಠ ಎನ್ನುವುದಕ್ಕಿಂತ ಮುಖ್ಯವಾದದ್ದು ಎರಡೂ ಒಂದೆ ಗುರಿಯನ್ನು ಮುಟ್ಟುವ ವಿಭಿನ್ನ ಮಾರ್ಗಗಳಾಗಿವೆ ಎಂಬುದು. ಒಂದು ಲೌಕಿಕದ ಹಾವಿನ ಹಾದಿ; ಇನ್ನೊಂದು ಅಲೌಕಿಕವಾದ ಗರುಡನ ದಾರಿ. ಒಂದು ಕಷ್ಟದ ಬೆಟ್ಟ, ಕಾಡುಗಳನ್ನು ಹತ್ತಿಳಿದು ಅಮೃತದ ಕಡಲಿಗೆ ಹೋಗುವ ಹಾದಿ; ಇನ್ನೊಂದು ನೇರವಾಗಿ ಅಲ್ಲಿಗೆ ಹಾರುವ ಬಯಲ ಧೀರನ ದಾರಿ.

ಅಲ್ಲಮ ಮತ್ತು ಬಸವರ ಈ ರೀತಿಯ ತಾತ್ವಿಕ, ವೈಚಾರಿಕ ಮುಖಾ-ಮುಖಿ ಪ್ರತ್ಯಕ್ಷವಾಗಿ, ನಾಟಕೀಯವಾಗಿ, ಒಂದು ದತ್ತ ಮುಹೂರ್ತದಲ್ಲಿ ನಡೆದಿರದೆ, ಅವರ ಬದುಕು ಮತ್ತು ಚಿಂತನೆಯ ಯಾತ್ರೆಯುದ್ದಕ್ಕೂ ಹಾಸುಹೊಕ್ಕಾಗಿದೆ ಎಂಬುದನ್ನ ಮರೆಯಬಾರದು. ಶರಣರ ಕ್ರಾಂತಿಗೆ ಕಳಶಪ್ರಾಯವಾದ ಅವರ ಈ ಮುಖಾಮುಖಿ ಮಹಾಮನೆಯ ದಿಕ್ಸೂಚಿಯಂತಿದ್ದಿರಬಹುದು. ಶರಣೆಯರು ಶರಣರು ತಮ್ಮನ್ನು ತಾವು ಯಾವ ಮಾರ್ಗಕ್ಕೆ ಅರ್ಪಿಸಿಕೊಳ್ಳಬೇಕೆಂಬುದನ್ನು, ಸ್ವತಃ ತಮ್ಮ ಅಂತಃಸ್ಸತ್ವವನ್ನು ಅಲ್ಲಮ ಹಾಗೂ ಬಸವರ ಅಂತರ್‌ತತ್ವದೊಡನೆ ತಾಳೆಮಾಡಿನೋಡಿ ನಿರ್ಧರಿಸಿಕೊಳ್ಳುತ್ತಿದ್ದರೇನೊ. ಮಹಾ ಶರಣೆ ಅಕ್ಕ ಮಹಾದೇವಿ ಪ್ರಾರಂಭಿಕ ಹಂತದಲ್ಲಿ ಚೆನ್ನಮಲ್ಲಿಕಾರ್ಜುನನ್ನು ಗುರು, ತಂದೆ, ಗಂಡ, ಗೆಳೆಯ ಎಂದು ಉಭಯಭಾವದಲ್ಲಿ ಅರ್ಚಿಸಿ, ಅಂದರೆ ಬಸವನ ದಾರಿಯಲ್ಲಿದ್ದು, ಅಂತಿಮವಾಗಿ ಉಭಯವಳಿದು ಶ್ರೀಶೈಲದಲ್ಲಿ ಚೆನ್ನಮಲ್ಲಿಕಾರ್ಜುನನಲ್ಲಿ ಬೆರೆತು, ಅಲ್ಲಮನ ಹಾದಿಯನ್ನೆ ಆಯ್ದುಕೊಂಡಳು ಎನ್ನಿಸುತ್ತದೆ.

'ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯ ಸಂಪಾದನೆ' (ಸಂ. ಡಾ. ಎಲ್. ಬಸವರಾಜು - ೧೯೬೯) ಯಲ್ಲಿ ಅಲ್ಲಮ ಮತ್ತು ಬಸವರ ಪ್ರತ್ಯಕ್ಷ ಮುಖಾಮುಖಿಯ ಹಲವಾರು ಶಿಖರ ಪ್ರಸಂಗಗಳನ್ನು ಕಾಣಬಹುದಾಗಿದೆ. ಅವರ ಮೊಟ್ಟಮೊದಲ ಮುಖಾಮುಖಿಯೆ ಸಾಕಷ್ಟು ನಿರ್ಣಾಯಕವೂ, ಮಹತ್ವದ್ದೂ ಆದ ಪ್ರಸಂಗವಾಗಿದ್ದು, ಅದಕ್ಕೆ ಮಹಾಮನೆಯ ಹೊಸ್ತಿಲೆ ಸಾಕ್ಷಿಯಾಗುತ್ತದೆ. ಬಸವಣ್ಣನ ಜಂಗಮ ದಾಸೋಹವನ್ನು ಬಣ್ಣಿಸುತ್ತ ಸಿದ್ಧರಾಮನೊಡನೆ ಕಲ್ಯಾಣಕ್ಕೆ ಬರುವ ಅಲ್ಲಮನಿಗೆ ಬಾಗಿಲಲ್ಲೆ ಭಕ್ತಿಯ ರಸಭಂಗವಾದಂತಾಗಿ ಕೆರಳಿ ನಿಲ್ಲುತ್ತಾನೆ. ಒಳಗೆ ಪೂಜಾನಿರತನಾದ ಬಸವ "ಲಿಂಗದಲ್ಲಿ ತೊಳೆದು ಹೋಹ ಜಂಗಮನ" ಕಂಡರೂ ತಾನೆ ಬಂದು ಕರೆದೊಯ್ಯದೆ ಪರಿಚಾರಕರನ್ನು ಕಳಿಸಿದಾಗ "ಅಂಗವಿಕಾರಿ ನೋಡಾ" ಎಂದು ಅಲ್ಲಮ ಜರೆಯುತ್ತಾನೆ. ಬಸವನ ಲಿಂಗಭಕ್ತಿಯೆ ಜಂಗಮ ಭಕ್ತಿಗೆ ಅಡ್ಡಬರುವಂತೆ ತೋರುವುದು ಆಧ್ಯಾತ್ಮಿಕ ಸತ್ವಪರೀಕ್ಷೆಯ ದ್ಯೋತಕ. "ಹಿಡಿತಹುದು; ಬಾರದಡೆ ಶಿರವನರಿದು ತಹುದು" ಎಂದು ಮಂತ್ರಿಯ ಶೈಲಿಯಲ್ಲಿ ಆಜ್ಞೆಮಾಡಿಬಿಡುತ್ತಾನೆ. ಅಹಂಕಾರದ ಪರದೆಯ ಪೂರ ಹರಿಯದಿದ್ದರೆ ಆತ್ಯಂತಿಕ ಕ್ಷಣದಲ್ಲಿ ಸಾಧನೆ ಕೈಕೊಟ್ಟುಬಿಡುವುದಕ್ಕೆ ಇದೊಂದು ನಿದರ್ಶನ ಅಷ್ಟೆ. ಅಲ್ಲಮ ರುದ್ರಕೋಪ ತಾಳಿ "ಭಕ್ತಿ ಹಿಂದು ಮುಂದಾಯಿತ್ತು" (ಶೂ.ಸಂ. ೨೮೭-೩೬೨. ಪುಟ ೭೫) "ಬಂದವರಾರೆಂದರಿಯದೆ, ನಿಂದ ನಿಲವನರಿಯದೆ, ಕೆಮ್ಮನೆ ಅಹಂಕಾರವ ಹೊತ್ತುಕೊಂಡಿಪ್ಪವರ ನಮ್ಮ ಗೊಗೇಶ್ವರನೊಲ್ಲನೋಡಯ್ಯ" (ಅದೆ. ೨೯೭-೩೭೩ ಪು. ೭೯) ಎಂದು ಸಾರುತ್ತಾನೆ. ಉದ್ದಕ್ಕೂ ತಾನೆ ಗುಹೇಶ್ವರ, ಅಥವ ಗುಹೇಶ್ವರ ತನ್ನೊಳಗೆ ಇದ್ದಾನೆ ಎಂಬಂತೆ ನುಡಿಯುವುದನ್ನು ನಾವು ಗಮನಿಸಬೇಕು. ಜಂಗಮನೆ ನಡೆವಲಿಂಗ, ನುಡಿವ ಲಿಂಗ ಎಂದು ನಂಬಿದ್ದ ಬಸವ, ಲಿಂಗವೆ ಜಂಗಮ ರೂಪಧರಿಸಿ ಬಂದಾಗ ಎಚ್ಚರದಪ್ಪಿದುದು ಅಲ್ಲಮನ ಕ್ರೋಧಕ್ಕೆ ಕಾರಣವಾಗುತ್ತದೆ. ಕಡೆಗೆ ಚೆನ್ನಬಸವಣ್ಣನ ಎಚ್ಚರದ ಮಾತಿನಿಂದ ಬಸವಣ್ಣ ತನ್ನ ತಪ್ಪನರಿತು ಧೃತಿಗೆಡುತ್ತಾನೆ. ಅಹಂಕಾರದ ಇನ್ನೊಂದು ಮುಖವೆ ದೈನ್ಯ ತಾನೆ? "ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯ" ಎಂದು ಅಲ್ಲಮನ ಪಾದಗಳಲ್ಲಿ ದಿಂಡುಗೆಡೆಯುತ್ತಾನೆ "ತನುವ ಬೇಡಿದಡೀವೆ. ಮನವ ಬೇಡಿದಡೀವೆ, ಧನವ ಬೇಡಿದಡೀವೆ" ಎಂಬ ಬಸವನ ಮಾತು ಅಲ್ಲಮನಿಗೆ ಬಡಿವಾರವಾಗಿ ಕಾಣುತ್ತದೆ. (ಶೂ. ಸಂ. ೩೪೧-೪೬೫. ಪು ೮೭) "ತನು ವರ್ಜಿತವೆಂದರೆ ಗುರುದ್ರೋಹ, ಮನವರ್ಜಿತವೆಂದರೆ ಲಿಂಗದ್ರೋಹ, ಧನವರ್ಜಿತವೆಂದರೆ ಜಂಗಮದ್ರೋಹ" ಎಂದು ಝುಂಕಿಸಿ "ನಮ್ಮ ಗೊಗೇಶ್ವರಲಿಂಗಕ್ಕೆ ನೀನಾವುದರಲ್ಲಿ ಏನನರ್ಪಿಸಿ ಭಕ್ತನಾದೆ ಹೇಳಾ" ಎಂದು ಕೇಳಿದಾಗ ಭಕ್ತಿ ಭಂಡಾರಿಯ ಸ್ಥಾನಮಾನ, ಕೀರ್ತಿ ವಾರ್ತೆ, ಭಕ್ತಿ ಭ್ರಮೆಗಳೆಲ್ಲ ಕರಗಿ ನೀರಾಗಿ ಹೋಗುತ್ತವೆ (ಅದೇ ೩೪೩-೪೭೮ ಪು ೮೭)

ಈ ಪ್ರಸಂಗದುದ್ದಕ್ಕೂ ಅಲ್ಲಮ ಬಸವನನ್ನು ಹಂಗಿಸಿ ಹಂಗಿಸಿ ಕರುಳಿಗೆ ನೀರುಬಿಡುವಂತೆ ಕಾಣುವುದು ಒಂದು ಮೇಲ್ನೋಟದ ಸತ್ಯ ಮಾತ್ರ; ಯಾರನ್ನೇ ಆಗಲಿ ಕೋಪ ಶಾಪಗಳಿಂದ ನಾಶಮಾಡುವುದು ಅಲ್ಲಮನ ಅನುಭಾವಕ್ಕೆ ವ್ಯತಿರಿಕ್ತವಾದದ್ದು. ಬಸವನಲ್ಲಿ ಕಿಂಚಿತ್ತು ಕೂಡಾ ಕಸುರು ಉಳಿಯದ ಹಾಗೆ ಅವನ ಆತ್ಮವನ್ನು ಪ್ರಕ್ಷಾಳಿಸಿ ಅರಿವು ಘಮಘಮಿಸುವಂತೆ ಮಾಡುವುದೆ ಅಲ್ಲಮನ

ಅನುಭಾವಿಕ ಕಾಯಕದ ಮೂಲ ಉದ್ದೇಶ. ತನ್ನ ಶಾಪಾನುಗ್ರಹ ಶಕ್ತಿಯ ಇಕ್ಕಳ ಹಾಕಿ ಶರಣ ಶರಣೆಯರ ಆತ್ಮಗಳನ್ನು ಅರಿವಿನ ಜಲದಲ್ಲಿ ತೊಳೆಯುವಾಗ ಅಲ್ಲಮ ಶಿವೋಹಂಕಾರದಿಂದ ವಿಜೃಂಭಿಸುತ್ತಾನೆ. ಇದೊಂದು ಬಗೆಯಲ್ಲಿ ವೈದ್ಯಕೀಯ ಶಸ್ತ್ರಚಿಕಿತ್ಸೆಯಂತೆಯೆ ಇರುತ್ತದೆ. ಅಲ್ಲಮನೂ ಬುದ್ಧನ ಹಾಗೆ ಅನುಭಾವಿಕ ಮನೋವೈದ್ಯನೆ ಸರಿ. ಈ ಆಧ್ಯಾತ್ಮಿಕ ಚಿಕಿತ್ಸೆಗೆ ಕೊಟ್ಟುಕೊಂಡು ಗೆದ್ದು ಬರುವ ಶರಣರನ್ನು ಅಲ್ಲಮ, ತಾಯೀಭಾವದಿಂದ ಮಗುವನ್ನು ಮುದ್ದಿಸುವಂತೆ, ಮೆಚ್ಚಿ ಹೊಗಳಿ ಮತ್ತೆ ಅವರ ಆತ್ಮ ವಿಶ್ವಾಸವನ್ನು ಜಾಗೃತಗೊಳಿಸುತ್ತಾನೆ. ಅವರು ತನಗಿಂತ ದೊಡ್ಡವರು ಎಂದು ಅವರಿಗೆ ನಮಿಸಿಬಿಡುತ್ತಾನೆ ಕೂಡ. ಇದೆ ಅಪರೂಪದ ಅಲ್ಲಮತನ; ಇದೆ ನಿರಂಕುಶ ಅನುಭಾವಿಕ ಪ್ರಜ್ಞೆ. ಅನುಭಾವಿಗೆ ತನ್ನ ಅಹಂಕಾರದ ಸೋಂಕು, ಹಂಗು ಇರುವುದಿಲ್ಲ. ಮುಳ್ಳನ್ನು ಮುಳ್ಳಿಂದಲೆ ಕೆದಕಿ ತೆಗೆಯುವಂತೆ ಅಹಂಕಾರಿಗಳನ್ನು ನಿರಹಂಕಾರಿಗಳನ್ನಾಗಿಸುವ ಸಲುವಾಗಿ ಅಹಂಕಾರದ ಪ್ರದರ್ಶನ ಮಾಡುತ್ತಾನೆ ಅಷ್ಟೆ. ನಿರಹಂಕಾರಿ ಅನುಭಾವಿಗಳೆಲ್ಲ ಸಮಾನರು. ಅಲ್ಲಿ ದೊಡ್ಡವರು ಸಣ್ಣವರು ಎಂಬ ಶ್ರೇಣಿ ಇರುವುದಿಲ್ಲ. ಈ ಆತ್ಮ ಸಮಾನತೆಯೆ ಅನುಭಾವದ ಜೀವಾಳ. ಅಂಥ ಆ ಅನುಭಾವ ಶಿಖರಕ್ಕೇರಿ ಬರುವವರ ಹುಸಿ ಭಕ್ತಿ, ಹುಸಿ ವಿರಕ್ತಿ, ಹುಸಿ ಅನುಭಾವದ ಕವಚಗಳನ್ನು ಕಿತ್ತುಹಾಕಿ, ಮಗುಮುಗ್ಧ-ಅನುಭಾವಿಗಳನ್ನಾಗಿಸುವ ಅರಿವಿನ ಕಾಯಕಕ್ಕೆ ಶಿವನೆ ಅಲ್ಲಮನನ್ನು ನಿಯಮಿಸಿರುವಂತೆ ಕಾಣುತ್ತದೆ.

ಸೂಳೆ ಅಥವ ಕೀರ್ತಿವಾರ್ತೆಯ ಭಕ್ತ ತಪ್ಪಿದರೆ ಲೋಕ ತಲೆಕೆಡಿಸಿಕೊಳ್ಳುವುದಿಲ್ಲ; ಆದರೆ ಪತಿವ್ರತೆ ಅಥವ ಸದ್ಭಕ್ತ ಎಡವಿದರೆ ಇಡೀಲೋಕ ಮರುಗುತ್ತದೆ ಎನ್ನುವ ವಚನದಲ್ಲಿ ಅಲ್ಲಮ "ನಮ್ಮ ಗೊಗೇಶ್ವರಲಿಂಗಕ್ಕೆ ಆದಿಯಿಂದತ್ತತ್ತ ನೀನೆ ಭಕ್ತನಾದ ಕಾರಣ ಮನ ನೊಂದಿತ್ತು ಕಾಣಾ ಸಂಗನ ಬಸವಣ್ಣ" ಎಂದು ವಾತ್ಸಲ್ಯಪೂರ್ವಕವಾಗಿ ಹೇಳಿದಾಗಲಂತು ಬಸವಣ್ಣ ಪೂರ್ಣವಾಗಿ ನಿರ್ವಿಣ್ಣನಾಗುತ್ತಾನೆ. (ಶೂ.ಸಂ.೩೨೫-೪೯೪. ಪು ೯೦) "ಎನ್ನ ಅಲಗೇ ಎನ್ನ ಕೊಂದಿತ್ತು" ಎಂದು ಹಲುಬುತ್ತಾನೆ. (ಅದೆ. ೩೬೦-೪೯೫- ಪು.೯೦) ಹೀಗೆ ಬಸವನ ಪಾಲಿಗೆ ಮೊಟ್ಟ ಮೊದಲ ಪಾಠವೆ ಎಂದಿಗೂ ಮರೆಯಲಾರದ ಪಾಠವಾಗುತ್ತದೆ.

ಮಹಾಮನೆಯ ಹೊಸ್ತಿಲು ದಾಟಿ ಒಳ ಬರುತ್ತಿದ್ದಂತೆಯೆ ಅಲ್ಲಮ ಬಸವನಿಗೆ ತನ್ನ ಎರಡನೆ ಪಾಠವನ್ನು ಕಲಿಸಿಬಿಡುತ್ತಾನೆ. ಅದೆ ಗುಪ್ತಶರಣ ಮರುಳಶಂಕರದೇವನ ಪರಿಚಯ ಪ್ರಸಂಗ. ಬಸವನ ದೃಷ್ಟಿಯ ವೈಶಿಷ್ಟ್ಯ ವೈಶಾಲ್ಯವಾದರೆ ಅಲ್ಲಮನ ದೃಷ್ಟಿಯ ವೈಶಿಷ್ಟ್ಯ ಆಳ. ಬಸವ ಬಹಿರಂಗವನ್ನು ಇಡಿಯಾಗಿ ಹಿಡಿಯಹೊರಟರೆ, ಅಲ್ಲಮ ಅಂತರಂಗವನ್ನು ಅನಾಮತ್ತಾಗಿ ಕಾಣುತ್ತಾನೆ. ಹೀಗಾಗಿ ಜಂಗಮರ ನೆರವಿಯ ತರಾವರಿ ಜಂಗುಳಿಯಲ್ಲಿ ಬಸವನ ದೃಷ್ಟಿಗೆ ಹನ್ನೆರಡು ವರ್ಷದವರೆಗೂ ಬೀಳದೆ ಬಚಾವಾಗಿದ್ದ ಮೂಕಶರಣ ಮರುಳಶಂಕರ ಅಲ್ಲಮ ಬಂದಾಗ ಮಾತ್ರ ಬಾಯ್ತೆರೆಯುತ್ತಾನೆ. ಪ್ರಸಾದದ ಕುಳಿಯಲ್ಲಿ ಪ್ರಾಣಿಗಳ ಜೊತೆ ಭುಂಜಿಸಿ ಅಲ್ಲಮನ ಬರವಿಗಾಗಿ ಕಾದಿದ್ದ ಆತ ಬಸವನಿಗಿಂತ ಬಹುದೊಡ್ಡ ಶರಣ ಎಂಬುದನ್ನು ಅಲ್ಲಮ ತಿಳಿಸಿಕೊಟ್ಟಾಗ ಬಸವ ದಂಗುಹೊಡೆದು ನಿಲ್ಲುತ್ತಾನೆ. ತನ್ನ ಲೌಕಿಕ ದೃಷ್ಟಿಗೂ ಅಲ್ಲಮನ ಅಲೌಕಿಕ ದೃಷ್ಟಿಗೂ ಇರುವ ಥಾಳ ವ್ಯತ್ಯಾಸ ಅವನಿಗೆ ಥಕ್ಕನೆ

ಅರ್ಥವಾಗುತ್ತದೆ. ಆಗಲೆ ಅಲ್ಲಿ ಥಟ್ಟನೆ ತನ್ನ ಅವತಾರ ಸಮಾಪ್ತಿಯನ್ನರಿತ ಮರುಳಶಂಕರದೇವ "ನಿತ್ಯನಿರವಯದೊಳಗೆ ನಿರವಯವಾಗಲು", ಅಲ್ಲಮ "ನಿಸ್ಸೀಮ ಶಿವಶರಣರ ನಿಲವನರಿಯಬಹುದೆ? ಅರಿಪಿಂಗಸಾಧ್ಯವು, ಉಪಮೆಗೆ ಕಡೆಮುಟ್ಟುದು" ಎನ್ನುತ್ತಾನೆ. (೩೯೧-೯೩೯ ಪುಟ ೯೯) ಬಸವಣ್ಣ ಬೆಕ್ಕಸ ಬೆರಗಾಗಿ, ನಾಚಿ ನೀರಾಗಿ "ನಿಮ್ಮ ಶರಣರ ನಿಲವನರುವಡೆ ನಾನೇತರವನಯ್ಯ" ಎಂದು ಸಂಪೂರ್ಣ ಶರಣಾಗುತ್ತಾನೆ. (೩೯೯-೯೫೧ ಪು.೧೦೦)

'ಶೂನ್ಯ ಸಂಪಾದನೆ'ಯುದ್ದಕ್ಕೂ ಬಸವ, ಅಲ್ಲಮನಿಂದ ಅರಿವಿನ ಉಳಿ ಪೆಟ್ಟು ತಿನ್ನುತ್ತ ವಿಶುದ್ಧ ಭಕ್ತಿಮೂರ್ತಿಯಾಗಿ ಕಂಗೊಳಿಸುತ್ತಾನೆ, ನಿಜ. ಆದರೆ ನಡುನಡುವೆ ಈ ಮುಖಾಮುಖಿಯಲ್ಲಿ ಹೊಗಳಿಕೆಯ ಹಾರಗಳೂ ಅವನ ಕೊರಳಿಗೆ ಬೀಳುತ್ತವೆ. ೧೦ನೆ ಸಂಪಾದನೆಯಲ್ಲಿ 'ಅಲ್ಲಮ ಪ್ರಭು-ಬಸವರಾಜರ ಪರಸ್ಪರ ಕೊಂಡಾಟ' ಎಂಬ ಭಾಗವೆ ಇದೆ. "ನಿನ್ನಿಂದ ಗುರುಸ್ವಾಯತವೆನಗೆ....... ಲಿಂಗಸ್ವಾಯತವೆನಗೆ...... ಜಂಗಮ ಸ್ವಾಯತವೆನಗೆ..... ಪ್ರಸಾದ ಸ್ವಾಯತವೆನಗೆ" ಎನ್ನುತ್ತ ಅಲ್ಲಮ, "ಇಂತೀ ಚತುರ್ವಿಧ ಸ್ವಾಯತವನೂ ನೀನೆ ಮಾಡಿದೆಯಾಗಿ, ನಮ್ಮ ಗೊಗೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲೈ ಸಂಗನ ಬಸವಣ್ಣ" ಎಂದು ಮುಕ್ತವಾಗಿ ಕೊಂಡಾಡುತ್ತಾನೆ. ಇದು ಅವರ ಮುಖಾಮುಖಿಯ ನಿಜವಾದ ಸಾರ್ಥಕ್ಯದ ಕ್ಷಣವೆನ್ನಬಹುದು. ಬಸವಣ್ಣನಂಥ ಮಹಾಸಂಘಟಕನನ್ನು ಕೈಬಿಟ್ಟರೆ ಮಹಾಮನೆಯ ದಾಸೋಹದ ತಕ್ಕಡಿ ಏಳುವುದಿಲ್ಲ ಎಂಬುದು ಅಲ್ಲಮನಿಗೂ ಚೆನ್ನಾಗಿ ಗೊತ್ತು. ಆದ್ದರಿಂದ ಅವನನ್ನು ಕಟೆಯುವಲ್ಲಿ ಕಟೆದು, ತೀಡುವಲ್ಲಿ ತೀಡಿದ ಬಳಿಕ ಹೊತ್ತುಕೊಂಡು ಮೆರೆಯುವುದೂ ಉಂಟು ಅಲ್ಲಮ. ಅಲ್ಲಮನ ಅನುಭಾವಿಕ ಸಮತೋಲನಕ್ಕೆ ಸಮತೆಯ ಸೌಂದರ್ಯ ಹಾಗೂ ಅರಿವಿನ ಗಾಂಭೀರ್ಯ ಎರಡೂ ಇವೆ.

ಅಲ್ಲಮ, ಬಸವರ ಪ್ರತ್ಯಕ್ಷ ಹಾಗೂ ಪರೋಕ್ಷ ಮುಖಾಮುಖಿಯನ್ನಲ್ಲದೆ, ಇನ್ನೊಂದು ಬಗೆಯ ಪೂರಕ ಮುಖಾಮುಖಿಯನ್ನು 'ಶೂನ್ಯಸಂಪಾದನೆ'ಯಲ್ಲಿ ಕಾಣಬಹುದಾಗಿದೆ. ಅಕ್ಕ ಮಹಾದೇವಿ ಮಹಾಮನೆಯನ್ನು ಪ್ರವೇಶಿಸಿ ಅನುಭಾವಗೋಷ್ಠಿಯಲ್ಲಿ ಭಾಗವಹಿಸುವ ೧೫ನೆ ಸಂಪಾದನೆಯಲ್ಲಿ, ಬಸವಣ್ಣ ಅಕ್ಕನ ಪರವಹಿಸಿ ಮಾತಾಡುವುದನ್ನು ಕಾಣುತ್ತೇವೆ. "ಭಾವದ ಕೂಟ ಬತ್ತಲೆಯೆಂದರಿದು" ಬಂದ "ಮಹಾದೇವಿಯಕ್ಕನ ನಿಲವ ನೋಡಾ ಪ್ರಭುವೆ" (೭೨೦-೧೧೪೯. ಪು.೧೬೬) ಎಂದು. ಆ ಮಹಾನುಭಾವಿಯ ಗಮನ ಸೆಳೆಯುತ್ತಾನೆ. ಸುಲಭದಲ್ಲಿ ಒಪ್ಪಲು ತಯಾರಿಲ್ಲದ ಅಲ್ಲಮ "ನಮ್ಮ ಗೊಗೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ ನಿನ್ನ ಸತಿ ಯಾರೆಂಬುದ ಹೇಳಾ" ಎನ್ನುತ್ತಾನೆ. ಮದುವಣಗಿತ್ತಿ ನಾಚಿಕೆಯನ್ನು ಗೆದ್ದು ಗಂಡನ ಹೆಸರು ಹೇಳುವಂತೆ "ಚೆನ್ನಮಲ್ಲಿಕಾರ್ಜುನ ಗಂಡನೆನಗೆ" ಎನ್ನುತ್ತಾಳೆ ಅಕ್ಕ). (೭೨೧-೧೧೩೧ ಪು. ೧೬೬ ಮತ್ತು ೭೨೩ ೧೧೩೩ ಪು ೧೬೭). ಅಲ್ಲಮ ಬಸವರಿಬ್ಬರೂ ಅವಳ ಅಂತರಂಗದ ಅರಿವನ್ನು ಒರೆದು ನೋಡುತ್ತಾರೆ. ಕಡೆಗೆ "ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೇಸರವೋಗದಿಪ್ಪ ಇರವು" ಅಕ್ಕನದು ಎನ್ನುತ್ತಾನೆ ಬಸವಣ್ಣ. "ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿ"ಯನ್ನು ಅಲ್ಲಮ ಗುರ್ತಿಸುತ್ತಾನೆ. ಇಬ್ಬರೂ ಅವಳಿಗೆ ನಮಿಸುತ್ತಾರೆ. ಇದು

ಕೂಡ ಅವರ ಪೂರಕ ಮುಖಾಮುಖಿಯ ಒಂದು ಸಂತೃಪ್ತ ಗಳಿಗೆಯೆ ಆಗಿದೆ. (೬೩೭-೧೧೫೪ ಪು. ೧೭೪ ಮತ್ತು ೬೩೯-೧೧೫೬ ಪು ೧೭೫).

ಮುಂದೆ ಕಲ್ಯಾಣವನ್ನು ಬಿಟ್ಟು ಹೊರಟ ಮಹಾಜಂಗಮ ಅಲ್ಲಮ ಹಿಮವತ್ಕೇದಾರ, ಅಮರನಾಥಲಿಂಗದ ಗುಹೆಯವರೆಗೆ ನಡೆದು, ಸಪಾದ ಲಕ್ಷ ಪರ್ವತಂಗಳ ತಿರುಗಿ ಪುನಃ ವಾಪಸ್ ಬರುವಷ್ಟರಲ್ಲಿ, ಬಸವ ಅವನಿಗಾಗಿ ಒಂದು ನಿಗೂಢವಾದ ಶೂನ್ಯ ಸಿಂಹಾಸನವನ್ನು ನಿರ್ಮಿಸಿರುತ್ತಾನೆ. ಆದರೆ ತಿರುಗಾಟದಿಂದ ಜರ್ಜರಿತನಾದ ಅಲ್ಲಮನನ್ನು ಗುರುತು ಹಿಡಿಯಲಾರದೆ ತೊಳಲುತ್ತಾನೆ. ತಲೆ ಕೆದರಿದೆ. ಕಿವಿ ಹರಿದು ಜೋಲುತ್ತಿದೆ. ಬೆನ್ನಲ್ಲಿ ಬಾಸುಳವೆದ್ದಿದೆ. ಮೊಣಕಾಲೊಡೆದಿದೆ. ಬೊಟ್ಟೊಡೆದು ಗಾಯವಾಗಿದೆ. ಹುಣ್ಣಿನಿಂದ ರಕ್ತ ಸೋರುತ್ತಿದೆ. ಕುಂಟನಂತೆ ನಡೆದು ಬರುತ್ತಿರುವ ಅಲ್ಲಮ ''ಅತ್ಯಂತ ಮಲಿನ''ವಾಗಿದ್ದಾನೆ. ''ಸುಳುಹು ವಿಪರೀತ! ನೋಡುವರೆ ಭಯಂಕರವಾಗಿದೆ'' ಎಂದು ಉದ್ಗರಿಸುತ್ತಾನೆ ಬಸವ. (೯೧-೧೨೬೫ ಪು ೧೮೮) ಆದರೂ ಮನದಲ್ಲೊಂದು ಗುಪ್ತ ಸಂಕಲ್ಪ ಮಾಡಿಕೊಳ್ಳುತ್ತಾನೆ. ಶೂನ್ಯ ಸಿಂಹಾಸನದ ತಾಂತ್ರಿಕ ರಚನೆಯನ್ನರಿತು ಅದರ ಪ್ರಕಾರ ಅದನ್ನೇರಿದರೆ ಅವನೆ ಅಲ್ಲಮನೆಂಬುದಾಗಿ ನಂಬುವೆ ಎಂದುಕೊಳ್ಳುತ್ತಾನೆ. ಅದರಂತೆಯೆ ಅಲ್ಲಮ ಶೂನ್ಯಸಿಂಹಾಸನಾರೋಹಣಮಾಡಿದಾಗ ಅವನ ಸಂಶಯ ನಿವಾರಣೆಯಾಗುತ್ತದೆ. ಅಲ್ಲಮನನ್ನು ಶೂನ್ಯ ಸಿಂಹಾಸನದಲ್ಲಿ ಕೂರಿಸಿದ್ದೇ ತಡ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರೆಲ್ಲ ಸಿಟ್ಟಿಗೆದ್ದು ಮಹಾಮನೆ ಬಿಟ್ಟು ಹೋಗುತ್ತಾರೆ. ಬಸವನಿಗೆ ಗಾಬರಿಯಾಗುತ್ತದೆ. ''ಅಂಜಬೇಡ, ಅಳುಕಬೇಡ, ಹೋದವರಾರು? ಇದ್ದವರಾರು? ಎಲೆ ಮರುಳೆ!'' ಎಂದು ಅಲ್ಲಮ ಛೇಡಿಸಿದರೂ (೭೪-೧೯೮ ಪು ೧೯೫) ಅವನ ಹೆದರಿಕೆ ಹೋಗುವುದಿಲ್ಲ. ''ಹಾವೂ ಸಾಯದೆ, ಕೋಲೂ ನೋಯದಂತೆ ಮಾಡಯ್ಯಾ'' ಎಂದು ಗೋಗರೆವಲ್ಲಿ (೭೬-೧೩೦೦. ಪು ೧೯೬) ಅವನಿಗೆ ಅಕ್ಕಿಯಮೇಲೂ ಆಸೆ, ನೆಂಟರಮೇಲೂ ಜೀವ ಎಂಬಂತೆ ಉಭಯ ಹಂಬಲವಿರುವುದು ಕಾಣಿಸುತ್ತದೆ. ಒಂದನ್ನು ಹಿಡಿದು ಇನ್ನೊಂದನ್ನು ಬಿಡುವ ಪೈಕಿ ಅಲ್ಲ ಬಸವಣ್ಣ. ಎರಡನ್ನೂ ಗೆಲ್ಲುವ ಹಲುಬು ಅವನದು. ಲೌಕಿಕ -ಅಲೌಕಿಕ, ಕಾಯಕ - ಅನುಭಾವ, ವ್ಯಕ್ತಿಮುಕ್ತಿ - ಶರಣರ ಕಲ್ಯಾಣ, ರಾಜಕಾರಣ - ಅಧ್ಯಾತ್ಮ, ಸಂಸಾರಸುಖ-ವೀರವಿರಕ್ತಿ-ಎರಡೆರಡೂ ದೊರಕಲೆಂದು ಹಂಬಲಿಸುವಂಥವ. ಈ ಪ್ರಸಂಗದಲ್ಲಿ ಅವನಿಗೆ ಲಿಂಗಸ್ವರೂಪಿಯಾದ ಅಲ್ಲಮನೂ ಬೇಕು; ಬೇಕಾಬಿಟ್ಟಿ ವರ್ತಿಸುವ ಜಂಗಮರೂ ಬೇಕು ಎಂಬ ಹಾತೊರಿಕೆ. ಅವನ ಈ ಉಭಯ ಹಂಬಲವೆ ಅವನ ಪರಿತಾಪಗಳಿಗೆ ಕಾರಣವೆ ಎಂಬ ಪ್ರಶ್ನೆಯೇಳುತ್ತದೆ.

ಶೂನ್ಯ ಸಿಂಹಾಸನ ನಿರ್ಮಾಣ ಸಿಂಹಾಸನಾರೋಹಣದಲ್ಲಿ ಅಲ್ಲಮ ಮತ್ತು ಬಸವ ಒಂದು ಬಗೆಯ ಮೌನಮುಖಾ ಮುಖಿಯಲ್ಲಿ ಮೆರೆಯುತ್ತಾರೆ. ಎಲ್ಲವೂ ಮಾತಿನಿಂದಲೆ ನಿರ್ಧಾರವಾಗುವುದಿಲ್ಲ. ಕೆಲವು ಸೂಕ್ಷ್ಮ ಸಂಕಲ್ಪಗಳು ಮತ್ತು ಮಹಾ ಪರಿಣಾಮಗಳು ಮಾತಿಗೆ ಅತೀತವಾದ ಮೌನ ಅನುಸಂಧಾನದಲ್ಲಿ, ಅನುಭಾವಿಕ ನೆಲೆಯಲ್ಲಿಯೆ ನಡೆದು ಫಲನೀಡುತ್ತವೆ. ಆತ್ಮ, ಆತ್ಮವನ್ನು ಅರಿಯುವ ಪರಿ ಇದು. ಇದರಿಂದ ಅವರಿಬ್ಬರ ನಡುವಣ ಆಧ್ಯಾತ್ಮಿಕ ವೇವ್‌ಲೆಂತ್ ಎಂಥದ್ದು ಎಂಬುದು ನಮ್ಮ

ತಿಳುವಳಿಕೆಗೆ ಬರುತ್ತದೆ. ಭಕ್ತನ ಮನ 'ಕೊ' ಎಂದು ಬೇಡಿದರೆ, ದೈವಿ 'ಇಗೊ ಕೊಂಡೆ' ಎಂದು ನಿಶ್ಶಬ್ದವಾಗಿಯೆ ಹೇಳಿ ಭಕ್ತಿಸ್ವೀಕಾರವಮಾಡುತ್ತದೆ. ಇಂಥಲ್ಲಿ 'ಪದಾರ್ಥ' ಅರ್ಪಿತವಾಗಿ ಸಾರ್ಥಕವಾಗುತ್ತದೆ. ಆ ತರಹದ ಅತೀಂದ್ರಿಯ ಕಾರಣಿಕ ಇದು.

ಅಲ್ಲಮ, ಬಸವನ ದಾಸೋಹನಿಷ್ಠೆಯನ್ನು ಸ್ಫೋಟಿಸಿ ಪಲ್ಲಟಿಸುವುದು, ಶೂನ್ಯಸಂಪಾದನೆಯ ಚೌಕಟ್ಟಿನಲ್ಲಿ ಅವರಿಬ್ಬರ ಅಂತಿಮ ಮುಖಾಮುಖಿ ಎನ್ನಬಹುದಾಗಿದೆ. ತಾನು ಮಹಾದಾಸೋಹಿ, ತಾ ಕಟ್ಟಿದ ಮಹಾಮನೆ ಹಸಿದು ಬರುವ ಜಂಗಮರೆಲ್ಲರ ಕಲ್ಯಾಣಕೇಂದ್ರ ಎಂಬ ಗಾಢವಾದ ನಂಬಿಕೆ ಇರುತ್ತದೆ ಬಸವಣ್ಣನಿಗೆ. ಆದ್ದರಿಂದಲೆ ಜಂಗಮರು ಮುನಿದೆದ್ದು ಹೋದಾಗ ಅವನು ಭಯಭೀತನಾಗುತ್ತಾನೆ. ಅಲ್ಲಮ ಸ್ಪಷ್ಟವಾಗಿ "ಈ ಒಂದು ನಿಲವಿಗೆ ಪರಿಣಾಮವ ಮಾಡಬಲ್ಲರೆ, ನಿನ್ನ ಲಕ್ಷದಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ ಪರಿಣಾಮವಹುದು ನೋಡಾ" ಎಂದು ನುಡಿಯುತ್ತಾನೆ (ಶೂ.ಸಂ. ೭೨೭-೧೩೦೧ ಪು ೧೯೬). ಮಹಾಭಾರತದಲ್ಲಿ ದ್ರೌಪದಿ ತೊಳೆದಿಟ್ಟ ಅಕ್ಷಯಪಾತ್ರೆಗಂಟಿದ ಒಂದೆ ಒಂದು ತಂಗಳು ಅಗುಳನ್ನು ತಿಂದು ಕೃಷ್ಣ ತೇಗಿದಾಗ, ಹೊತ್ತಲ್ಲದ ಹೊತ್ತಲ್ಲಿ ಋಷಿಗಳ ದಂಡಿನೊಂದಿಗೆ ಬಂದು ಊಟ ಹಾಕಿಸು ಎಂದು ಗಂಟುಬಿದ್ದ ದೂರ್ವಾಸ ಮುನಿಯ ಬಳಗವೆಲ್ಲಾ ಹೊಟ್ಟೆಭಾರವಾಗಿ ಒದ್ದಾಡಿದ ಪ್ರಸಂಗವನ್ನು ನೆನಪಿಸುತ್ತದೆ ಇದು. ಕೃಷ್ಣ ಮಹಾಭಾರತದ ಸೂತ್ರಧಾರಿಯಾದರೆ ಅಲ್ಲಮ ಶೂನ್ಯ ಸಂಪಾದನೆಯ ಸೂತ್ರಧಾರಿ. ಕೃಷ್ಣ ಅಲ್ಲಮ ಇಬ್ಬರೂ ತಾವೆ ದೇವರೆಂಬುದನ್ನು ಪದೆ ಪದೆ ಸಾಬೀತು ಮಾಡುವುದನ್ನು, ಪಾರ್ಥ, ಬಸವ ಇಬ್ಬರೂ ಅಹಂಕಾರ ನಿರಸನಗೊಂಡು ಪದೇ ಪದೇ ಪಾಠ ಕಲಿಯುವುದನ್ನೂ ಇಲ್ಲಿ ಪ್ರಾಸಂಗಿಕವಾಗಿ ಸ್ಮರಿಸಬಹುದಾಗಿದೆ.

ಅಲ್ಲಮನು ತೃಪ್ತನಾದರೆ ಲೋಕವೆಲ್ಲ ತೃಪ್ತವಾಗುತ್ತದೆ ಎಂಬುದನ್ನ ಕೇಳಿ "ನಿಮಗೆಂದಳವಡಿಸಿದ ಪದಾರ್ಥವನು ಸುಚಿತ್ತದಿಂದಲವತರಿಸಿ ಸಲಹುಯ್ಯ" ಎಂದು ಬೇಡಿಕೊಳ್ಳುವ ಮೂಲಕ ಬಸವಣ್ಣ ಮತ್ತೊಂದು ಅಗ್ನಿ ಪರೀಕ್ಷೆಗೆ ತನ್ನನ್ನು ತಾನೆ ಕೊಟ್ಟುಕೊಳ್ಳುತ್ತಾನೆ (೭೩೯-೧೩೧೩- ಪು. ೧೯೯) ಅಲ್ಲಮ ಬೆಡಗಿನ ಶೈಲಿಯಲ್ಲಿ "ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿಭಿಕ್ಷವ ಬೇಡಬಂದೆ, ಗೊಗೇಶ್ವರ ಹಸಿದನುಣಲಿಕ್ಕೇಳಾ ಸಂಗನ ಬಸವಣ್ಣ" ಎನ್ನುತ್ತಾನೆ. 'ಗುಹೇಶ್ವರ ಹಸಿದಿದ್ದಾನೆ ಉಣ್ಣಲು ಹೇಳು' ಎಂಬರ್ಥದೊಡನೆ 'ಅವನೊಡನೆ ಊಟಮಾಡೋಣ ಏಳು' ಎಂಬ ಅರ್ಥವೂ ಅದರಲ್ಲಡಗಿದೆ. (೭೪೧-೧೩೧೫ ಪು ೧೯೯) ಆಕಾಶವೆ ಬಾಯ್ತೆರೆದಂತೆ ಉಣ್ಣತೊಡಗುತ್ತಾನೆ ಅಲ್ಲಮರೂಪಿನ ಜಂಗಮಲಿಂಗ "ಹೆಡಗೆಹಾರ, ಮೊರಹಾರ, ಗೆರಸಿಹಾರ, ಮಡಕೆಹಾರ ದೆಸೆದೆಸೆಯಲ್ಲಿ ತಂದು ನೀಡುತ್ತಿರಲು" (೭೬೨-೧೩೩೬ ಪು ೨೦೪) ಎಲ್ಲವನ್ನೂ ಭುಂಜಿಸಿ "ನೀಡಿ ನೀಡಿ ಕೆಟ್ಟರೊ ನಿಜ ವಿಲ್ಲದೆ" ಎಂಬಂತೆ ನೋಡುತ್ತಾನೆ. ಮತ್ತೊಮ್ಮೆ ದಿಕ್ಕುಗೆಡುತ್ತಾನೆ ಬಸವ. ಭಂಡಾರವೆಲ್ಲ ಬರಿದಾದರೂ ಅಲ್ಲಮನ ಹಸಿವು ಅಡಗುವುದಿಲ್ಲ. ಆಗ ಚೆನ್ನಬಸವಣ್ಣ ಈ ಲಿಂಗಲೀಲೆಯ "ತೃಪ್ತಿಯ ತೆರನನೊಲಿವರೆ ನೀನು ಬೋನ, ನಾನು ಪದಾರ್ಥ, ಇದರಿಂದ ಮೇಲೇನೂ ಘನವಿಲ್ಲ" ಎಂದು ಒಗಟೊಡೆಯುತ್ತಾನೆ (೭೭೫-೧೩೪೯ ಪು ೨೦೮). ಇಬ್ಬರೂ ಬಂದು ತಮ್ಮನ್ನೆ ಎಡೆಯಾಗಿ ಅರ್ಪಿಸಿಕೊಳ್ಳುತ್ತಾರೆ. ಅದಾಗ

ಅಲ್ಲಮ "ಚತುರ್ವಿಧ ಅರ್ಪಿತದೊಳಗೆ ಆವುದು ಭರಿತವೆಂಬುದನರಿಯದಾಗಿ, ಗೊಗೇಶ್ವರಲಿಂಗದಲ್ಲಿ ಭರಿತಬೋನದ ಅಸು ಚೆನ್ನಬಸವಣ್ಣಂಗಾಯಿತ್ತು" ಎಂದು ಸಂತೃಪ್ತವಾಗಿ ಉದ್ಗರಿಸುತ್ತಾನೆ (೭೮೮-೧೩೬೩ ಪು ೨೧೧). ಹೀಗೆ ಶರಣರನ್ನೂ, ಮಹಾಶರಣರನ್ನೂ ಆದಿನಾದದ ಆಧಾರಸ್ವರದಂಥ ನಿರಹಂಕಾರ ನೆಲೆಗೆ ತಂದುಮುಟ್ಟಿಸುವುದೆ ಶಿವೋಹಂಕಾರದ ಸ್ವಾನುಭಾವಿಯಾದ ಅಲ್ಲಮನ ನಿರಂತರ ಅನುಭಾವಿಕ ಕಾಯಕವಾಗಿದೆ ಎನ್ನಬಹುದು.

ಬಸವಣ್ಣನ ದಾಸೋಹದ ಪ್ರಯೋಗ ಮತ್ತು ಅಲ್ಲಮನಿಂದಾಗುವ ದಾಸೋಹದ ತಾತ್ವಿಕ ಸ್ಫೋಟ - ಇದು ಅವರಿಬ್ಬರ ಮುಖಾಮುಖಿಯ ಅತ್ಯಂತ ನಿರ್ಣಾಯಕವಾದ ಶಿಖರ ಪ್ರಸಂಗ. ಇದು ಒಟ್ಟೊಟ್ಟಿಗೆ ಜಂಗಮ ಶಬ್ದದ ಸತ್ವ ಮತ್ತು ಸ್ವರೂಪವನ್ನು, ಬೋನ ಮತ್ತು ದಾಸೋಹದ ವ್ಯತ್ಯಾಸವನ್ನು, ಭಕ್ತಿ ಸಮರ್ಪಣೆಯ ಆಚರಣೆ ಮತ್ತು ಅನುಸಂಧಾನವನ್ನು ನಿರ್ಣಯಿಸಿ ತೋರಿಸಿಬಿಡುತ್ತದೆ. ಅರ್ಥಮಂತ್ರಿಯ ಕಾಯಕದಲ್ಲಿ, ಮಹಾಮನೆಯ ಭಕ್ತಿಸಮರ್ಪಣ ಕಾಯಕದಲ್ಲಿ, ಶರಣರ ಕಲ್ಯಾಣದ ಕಾಯಕದಲ್ಲಿ ಜೀವವನ್ನೆ ತೇದ ಬಸವಣ್ಣನಿಗೆ, ಅಲ್ಲಮ ಸ್ಫಟಿಕದ ಶಲಾಕೆಯಷ್ಟು ಸೂಕ್ಷ್ಮವಾದ ಭಾವಶುದ್ಧಿಯನ್ನೂ, ಅದನ್ನು ಸಾಧಿಸಲು ಹಿಡಿಯಬೇಕಾದ ಅನುಭಾವದ ಮಾರ್ಗವನ್ನೂ ಅದ್ಭುತವಾಗಿ ಪರಿಚಯಮಾಡಿಕೊಡುತ್ತಾನೆ.

ಹೀಗೆ ಪರೋಕ್ಷ, ಪ್ರತ್ಯಕ್ಷ, ಪೂರಕ, ಮೂಕ ಆಧ್ಯಾತ್ಮಿಕ ಹಾಗೂ ಪ್ರಾಯೋಗಿಕ ಮುಖಾಮುಖಿಗಳಲ್ಲಿ ಹಲವಾರು ನೆಲೆಗಳಲ್ಲಿ ಒಬ್ಬರನ್ನೊಬ್ಬರು ಎದುರಿಸುವ ಅಲ್ಲಮ ಮತ್ತು ಬಸವ, ತಾವು ನಂಬಿದ ತತ್ವವನ್ನು ಅಗ್ನಿದಿವ್ಯಕ್ಕೊಡ್ಡಿ ಅದಕ್ಕೆ ತಮ್ಮ ಇಷ್ಟದೈವವನ್ನೆ ಸಾಕ್ಷಿಯಾಗಿ ನಿಲ್ಲಿಸುತ್ತಾರೆ, ಬಸವನ ಕಾಯಕ ದಾಸೋಹ ತತ್ವವಾಗಲಿ ಅಲ್ಲಮನ ಅನುಭಾವದ ಪರಿಕಲ್ಪನೆಯಾಗಲಿ Mutually exclulive ಆದಂಥವಲ್ಲ; ಅವು Mutually inclusive ಆದಂಥವು. ಒಂದು ಇನ್ನೊಂದಕ್ಕೆ ಪೂರಕವಾಗಿ, ಮತ್ತೊಂದು ಪರಿಪೂರ್ಣತತ್ವವನ್ನು, ಒಂದು ಇಡಿಯಾದ ಸ್ವಯಂಪರಿಪೂರ್ಣ ವ್ಯಕ್ತಿತ್ವದ ತಳಹದಿಯನ್ನು ಕಟ್ಟಿಕೊಡುವಂಥವು. ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯ ಚೌಕಟ್ಟಿನಲ್ಲಿ ಮಾತ್ರ ಅಲ್ಲಮನ ಅನುಭಾವಿಕ ಚೈತನ್ಯವೆ ಮೇಲುಗೈ ಪಡೆದಿದ್ದು, ಬಸವನ ಕಾಯಕ-ದಾಸೋಹ ತತ್ವದ ವಸ್ತು ಪ್ರಪಂಚ ಅದಕ್ಕೆ ಅಧೀನವಾಗಿರುವುದು ಸುಸ್ಪಷ್ಟವಾಗಿದೆ. ಲೌಕಿಕ ಪ್ರಜ್ಞೆಗೆ ಪ್ರಾಧಾನ್ಯನೀಡುತ್ತ, ಲೋಕಕಲ್ಯಾಣಕ್ಕಾಗಿ ತನ್ನ ಜೀವ-ಜೀವನ ಎರಡನ್ನೂ ಸವೆಯಿಸಿದ ಬಸವಣ್ಣನ ಬದುಕಿನ 'ಕೊನೆ' ಒಂದು ಬಗೆಯ ತೀವ್ರ ದುಃಖದಲ್ಲಿ, ಆಳವಾದ ಪರಿತಾಪದಲ್ಲಿ ಅದ್ದುಕೊಂಡಿರುವುದನ್ನು ಚರಿತ್ರೆಯ ಪುಟಗಳು ನೆನಪು ಮಾಡುತ್ತವೆ; ಅಲೌಕಿಕ ಪ್ರಜ್ಞೆಗೆ ಒತ್ತುಕೊಟ್ಟು ಆತ್ಮವನ್ನು ಬಯಲಿಗರ್ಪಿಸ ಹೊರಟ ಅಲ್ಲಮ, ಅಕ್ಕರ 'ಕೊನೆ' ಒಂದು ಬಗೆಯ ಸಂತೃಪ್ತಿಯನ್ನು ಬಿಟ್ಟುಹೋಗಿರುವುದು ಅವರ ವಚನಗಳ ಅನುಸಂಧಾನದಿಂದ ಅನುಭವಕ್ಕೆ ಬರುತ್ತದೆ. ಶೂನ್ಯ ಸಂಪಾದನೆಕಾರ ಅಲ್ಲಮನ ಅನುಭಾವಿಕ ಚೈತನ್ಯವನ್ನು ತುಸು ದೊಡ್ಡದಾಗಿ ಎತ್ತಿ ಹಿಡಿದಿರುವುದಕ್ಕೆ ಈ ಸಂಗತಿಯೂ ಕಾರಣವಾಗಿರಬಹುದು. ಶರಣರ ಕ್ರಾಂತಿಯ ನೆನಪುಗಳು ಮಸುಕಾಗತೊಡಗಿದ ಸಂದರ್ಭದಲ್ಲಿ, ಸುಮಾರು ಇನ್ನೂರು ವರ್ಷಗಳ ನಂತರ,

ಒಂದು ಬಗೆಯಲ್ಲಿ ಆ ಪ್ರಸಂಗಾವಳಿಯ ಮರುಸೃಷ್ಟಿಯಂತೆ 'ಶೂನ್ಯಸಂಪಾದನೆ' ಹುಟ್ಟಿಕೊಂಡಿತು ಎಂಬುದನ್ನು ನಾವು ಮರೆಯುವಂತಿಲ್ಲ.

ಈ ಪ್ರಬಂಧದ ಪ್ರಾರಂಭದಲ್ಲಿಯೆ ಅಲ್ಲಮ-ಬಸವರನ್ನು ಅರಿವಿನ ಅಯಸ್ಕಾಂತದ ಎರಡು ಧ್ರುವಗಳು ಎಂದು ಗುರ್ತಿಸಿರುವುದರಿಂದ ಅವರಿಬ್ಬರು ಸಮಾನ ಶಕ್ತಿಗಳು ಎಂದು ಒಪ್ಪಿಕೊಂಡದ್ದಾಗಿದೆ. ಅಲ್ಲದೆ ಅವರಿಬ್ಬರೂ ಒಬ್ಬರಿಲ್ಲದೆ ಇನ್ನೊಬ್ಬರಿಲ್ಲ ಅನ್ನುವಷ್ಟು ಅವಿನಾಭಾವದಲ್ಲಿ ಪರಸ್ಪರರಲ್ಲಿ ಬೆರೆತು ಹೋಗಿರುವ ಎರಡು ತತ್ವಗಳ ವ್ಯಕ್ತಿರೂಪಗಳು. ಅವರಿಬ್ಬರೂ ಒಬ್ಬನೆ ವ್ಯಕ್ತಿಯಲ್ಲಿ ಏಕೀಕೃತವಾದಾಗ ಖಂಡಿತ ಒಂದು ಅಖಂಡದೃಷ್ಟಿಯ ಪರಿಪೂರ್ಣ ವ್ಯಕ್ತಿತ್ವದ ಮಾದರಿ ನಮಗೆ ದೊರೆಯುತ್ತದೆ. ವಿಶ್ವ ಸಂಸ್ಕೃತಿಯ ಉಳಿವಿಗೆ ಕಾಯಕ ಎಷ್ಟು ಅಗತ್ಯವೊ ಅನುಭಾವವೂ ಅಷ್ಟೆ ಅಗತ್ಯ. ಮಾನವ ಮನಸ್ಸೆಂಬ ಅರಿವಿನ ಅಯಸ್ಕಾಂತದ ಎರಡು ಆತ್ಯಂತಿಕ ತುದಿಗಳಂತಿರುವ ಅಲ್ಲಮ-ಬಸವರ ಪರಸ್ಪರ ಅನುಭಾವಿಕ ಸೆಳೆತದಲ್ಲಿಯೆ ಲೋಕ ಕಲ್ಯಾಣದ ಒಟ್ಟಂದದ ಗುಟ್ಟು ಅಡಗಿದೆ.

★ (ಕೇಂದ್ರ ಸಾಹಿತ್ಯ ಅಕಾಡೆಮಿ ವತಿಯಿಂದ ೨೦೦೬ರ ಫೆಬ್ರುವರಿ ೧೮-೧೯ರಂದು ಬೆಂಗಳೂರಿನ ಸುರಾನಾ ಕಾಲೇಜಿನಲ್ಲಿ ನಡೆದ 'ಅಲ್ಲಮ-ಅನುಭಾವ' ವಿಚಾರ ಕಮ್ಮಟದಲ್ಲಿ ಮಂಡಿಸಿದ ಪ್ರಬಂಧ)

ಬಿದರಹಳ್ಳಿ ನರಸಿಂಹ ಮೂರ್ತಿ; ಅನಿಮಿಷ, ೭ನೇ ತಿರುವು, ದುರ್ಗಿಗುಡಿ, ಹೊನ್ನಾಳಿ

ನಾಯಿ ಕಂಡರೆ

ಡಾ. ಶ್ರೀಧರ ಹಿಸ್ಸೆ

ನಾಯಿ ಕಂಡರೆ ಪ್ರಾಣ
ನನಗಲ್ಲ, ನನ್ನ ಮಗನಿಗೆ.

ನನ್ನ ನಖರಾ ಮೆಟ್ಟಿ
ನೆರೆಯಲ್ಲೆಲ್ಲೊ ಹುಟ್ಟಿ ಬೆಳೆದ
ಕುನ್ನಿ ತಂದಿತ್ತ
ಮನೆಯಂಗಳಕ್ಕೆ.

ಮುದ್ದು ಮಗನ ಹಟಕ್ಕೆ
ಮುದ್ದು ಮರಿಯ ಮುಖಕ್ಕೆ
ಸೋತು ಸುಮ್ಮನಾದೆ
ದೊಡ್ಡತನದ ಕೋಟೆ ಕಟ್ಟಿ.

ಮೂರು ಹೊತ್ತು ಹಾಲು ಅನ್ನ
ಉಣ್ಣುತ್ತಿತ್ತು ನಲಿಯುತ್ತಿತ್ತು
ದಿನಾದಿನಾ ಬೆಳೆಯುತ್ತಿತ್ತು
ನಾಯಿ-ದುಂಡು ದುಂಡಗೆ.

ನಾಯಿ ಆಟ ನಾಯಿ ಪಾಟ
ಜೊತೆಗೆ ಕೂಡಿ ನಿದ್ದೆ ಸ್ನಾನ,

ಅಂಗಡಿ ವಾಕಿಂಗ್ ಪಾರ್ಕಿಗೆ
ಎಲ್ಲೆಲ್ಲಿಗು ಸಂಗಾತಿ ಮಗನಿಗೆ.

ನೋಡನೋಡುತ್ತ ಕುನ್ನಿಮರಿ
ದೊಡ್ಡ ನಾಯಿಯಾಯಿತು
ಅದರ ಹಿಂದೆ ಗಂಡು ನಾಯಿ
ಹಿಂಡು ಹಿಂಡು ಬೆಳೆಯಿತು.

ಮನೆಯ ನಾಯಿ ಮನೆಯಲಿರಲಿ
ಬೀದಿ ಬೀದಿ ಸುತ್ತದಿರಲಿ
ನೆರೆಯ ಮನೆಗೆ ನುಗ್ಗದಿರಲಿ
ಎಂದುಬಿಗಿದೆ ಸರಪಳಿ.

ಊರು ಸುತ್ತಿ ಅಲೆದ ನಾಯಿ
ಕೊರಳು ಕೊಟ್ಟು ಸುಮ್ಮನಿತ್ತೆ?
ಹೇಗೋ ಜಗ್ಗಿ ಕಿತ್ತುಕೊಂಡು
ಅಡ್ಡಾಡಿತ್ತು ಹೊರಗು ಒಳಗು.

ಒಂದು ಸಲವೆ? ಎರಡು ಸಲವೆ?
ಚೈನಿಗೆ, ಬೆಲ್ಟಿಗೆ ಜೇಬು ಖಾಲಿಯಾದುದು.
ಮನೆಗೆ ಗೇಟು ಕಾಂಪೌಂಡಿಲ್ಲ
ಹಿಡಿತವಿಲ್ಲದ ನಾಯಿ, ನಿಷ್ಠೆ ಮಾತ್ರ ಬಿಡಲಿಲ್ಲ.

ಈಗೀಗ ಮನೆಗೆ ನಾಯಿದಂಡು
ರಾತ್ರಿಯಿಡೀ ಕುಂಯ್ಯೊ ಮರ್‍ರೊ, ಬವ್‌ವವ್‌ಬೌ
ನಿದ್ದಿಲ್ಲ ನಮಗೆ, ಅಕ್ಕಪಕ್ಕದವರಿಗೆ
ಕಲ್ಲು ಅರ್ಜಿ ಹೊಡೆದರೆ ಜನ, ಏನು ಪ್ರಯೋಜನ?

ಹಿಂದೆ ಹಿಂದೆ ಬರುತ್ತಿತ್ತು
ನಮ್ಮ ಕಾಲು ನೆಕ್ಕುತ್ತಿತ್ತು
ನಮ್ಮ ಪಾಡಿಗಿದ್ದು ನಾವು
ಕರೆಯಲಿಲ್ಲ ಬಳಿಗೆ-ಹೀಗೆ ಕೆಲವುದಿನ.

ಏಳೆಂಟು ಮರಿ ಈಯ್ದಿದ್ದ ನಾಯಿ
ಮಲಗಿತ್ತು ಮೂಲೆಯಲ್ಲಿ.
ಮುದ್ದುಮರಿಗಳ ಕಂಡ ಮಗನು
ಬೆಚ್ಚಗಿರಿಸಿದ್ದ ಗೋಣಿತಾಟಿನಲ್ಲಿ.

ಬೀದಿನಾಯಿ
ಹಂದಿಬಾಯಿ
ಗಳಿಗೆ ಕಾವಲು
ಕಟ್ಟಿದ್ದ ಕಲ್ಲು ಕೋಟೆ.

ನಾಯಿಗೊ ದಾರಿ ಇರದೆ
ದಾಟುವಾಗ ಒಮ್ಮೆ
ಕಲ್ಲುಬಿದ್ದ ಮರಿ ಸತ್ತು ಹೋಯಿತು
ಅಯ್ಯೊ ಎನ್ನುವರು ಇಲ್ಲದಾಯಿತು

ಒಳಗೊಳಗೆ ಮಗನ ಜೀವ ಕರಗಿತೆಷ್ಟೊ
ನನಗೆ ಕಾಣದಂತೆ
ಮುದ್ದು ಅಗಲಿದ ಮರಿಗೆ ಮಣ್ಣು ಕಾಣಿಸಿ
ಮರೆತು ಸುಮ್ಮನಾಯಿತೆ?

ಮಗನ ಕಾವಲು ಕೋಟೆ ಕಿತ್ತು ಹೇಳಿದೆ:
ನಮಗೆ ಬೇಕೆ ನಾಯಿ ಉಸಾಬರಿ?
ಸುಖಾ ಸುಮ್ಮನೆ ಮರುಗಬೇಡ
ನಿನಗೂ ಬೇರಾರಿಗೂ ಹಿತವಿಲ್ಲ.

ಆದರೂ ಬಿಟ್ಟ ಹೆಚ್ಚು ಅನ್ನ ನಾನು
ಉಳಿಕೆ ಹಳಸಲೆಂದು ಹೆಂಡತಿ
ನಮಗೆ ತಿಳಿಯದಂತೆ ಮಗನು
ದಿನವು ಅನ್ನ ಹಾಕುತ್ತಿದ್ದೆವು.

ಡಾ. ಶ್ರೀಧರ ಪಿಸ್ಸೆ; ೩ನೇ ವಾರ್ಡ್, ದೇಸಾಯಿ ಓಣಿ, ಕಮಲಾಪುರ-೫೮೩ ೨೨೧

ಅಬ್ಬಾ! ಇದೆಂತ ಮಳೆ

ಎನ್. ಶೈಲಜಾ ಹಾಸನ

ಟಪ ಟಪ ಸದ್ದಿನೊಂದಿಗೆ
ಹೊತ್ತಲ್ಲದ ಹೊತ್ತಲಿ ಮಳೆ
ನೀ ಬಂದುದಾದರೂ ಏಕೆ
ಮಳೆ ಬರಬಾರದಿತ್ತು ಹೀಗೆ

ನಿನ್ನೆ ಮೊನ್ನೆ ಬಿದ್ದ ಸೋನೆಗೆ
ಬಾಯಾರಿ ಬಳಲಿದ್ದ ಇಳೆ
ಬೊಗಸೆಯೊಡ್ಡಿ ತಣಿಸಿಕೊಂಡದ್ದು ದಿಟ

ಬಂದ ಬಂದ ಮಳೆಗೆಲ್ಲ
ಒಡಲೊಡ್ಡುತ್ತಲೇ ಇದ್ದರೆ
ಇಳೆಯೇನು ಹೆಬ್ಬಂಡೆಯೇ
ಮಳೆ ನೀರ ಮೈಯೊಳಗಿರಿಸಿ
ಕೊಳ್ಳದೆ ತಳ್ಳಲು

ರಪರಪನೇ ಸುರಿದು
ಬರ ಬರನೇ ನಡೆದೇಬಿಟ್ಟಿತ್ತಲ್ಲ
ಈ ವರುಣನಾರ್ಭಟಕೆ ಕಂಗಾಲು ಇಳೆ

അനികേതന-ഹളഷ

ಹದವಾಗಿ ಮೆದುವಾಗಿ
ಒಡ್ಡಿಕೊಳ್ಳುವ ಮನಸ್ಸಿದ್ದರೂ
ಕಾಡುವ ನಿತ್ರಾಣಕೆ
ಬಿದ್ದ ಹನಿಯ ರಭಸಕೆ
ಕುಗ್ಗಿ ಬಳಲಿದಳು ಇಳೆ
ಅಬ್ಬಾ ಇದೆಂತ ಮಳೆ

ಮೊಳಕೆಯೊಡದಿದ್ದೆಲ್ಲ ಬುಡಮೇಲು
ಒಡಲೊಳಗೆಲ್ಲ ಕೊಳೆತ ಬೇರು
ಅಂದೆಲ್ಲ ಹನಿಹನಿಯ ಮಳೆನೀರು
ಇಂದೆಲ್ಲ ಕಹಿಕಹಿಯ ಬೇವು
ಎದೆಯೊಳಗೆ ಮುರಿದುಬಿದ್ದ ತೇರು.

ಎನ್. ಶೈಲಜಾ ಹಾಸನ, 'ಭೂಮಿಕಾ' ಶಿವಜ್ಯೋತಿ ನಗರ, ಹಾಸನ-೫೭೩ ೨೦೧

ತುಳು ಕಾದಂಬರಿ 'ಮಿತ್ತಬೈಲ್ ಯಮುನಕ್ಕೆ'

ಮುರಳೀಧರ ಉಪಾಧ್ಯ ಹಿರಿಯಡಕ

'ಪಿಲಿಪತ್ತಿಗಡಸ್', 'ಧರ್ಮತ್ತಿಮಾಯೆ' (ನಾಟಕಗಳು) 'ಕರಿಯುವಜ್ಜೆರೆನ ಕತೆಕುಲು' ಕೃತಿಗಳ ಲೇಖಕ ಆನಂದಕೃಷ್ಣರು ತುಳುವಿನಲ್ಲಿ ಈಗ ಬರೆಯುತ್ತಿರುವ ಪ್ರಮುಖ ಲೇಖಕರಲ್ಲೊಬ್ಬರು. 'ಮಿತ್ತಬೈಲ್ ಯಮುನಕ್ಕೆ' ಆನಂದಕೃಷ್ಣರ ಮೊದಲ ಕಾದಂಬರಿ. ಹತ್ತೊಂಬತ್ತನೆಯ ಶತಮಾನ ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ನಡೆಯುವ ಘಟನೆಗಳು ಈ ಕಾದಂಬರಿಯಲ್ಲಿವೆ. ಕಾಸರಗೋಡು ಸಹಿತವಾದ ತುಳುನಾಡು ಈ ಕಾದಂಬರಿಯ ಕ್ರಿಯಾಕೇಂದ್ರವಾಗಿದೆ. ಆದರೆ ಈ ಕಾದಂಬರಿಯ ಒಂದು ಪಾತ್ರ ಸುಬ್ಬಯಣ್ಣ ಗಾಂಧೀಜಿಯ ಆಶ್ರಮಗಳಿಗೆ, ದಿಲ್ಲಿ ಕೋಲ್ಕತಗಳಿಗೆ ಹೋಗಿ ಬರುತ್ತಾನೆ.

ಈ ಕಾದಂಬರಿಯ ಮೂರು ಮುಖ್ಯ ಪಾತ್ರಗಳಾದ ಮಂಜಣ್ಣೆ, ಸುಬ್ಬಯಣ್ಣೆ, ಯಮುನಕ್ಕೆ ಮಿತ್ತಬೈಲ್ ಗುತ್ತಿನ ಮುಖ್ಯ ವ್ಯಕ್ತಿಗಳು. ಸಂಕಮಕ್ಕನ ಮಕ್ಕಳಾದ ಮಂಜಣ್ಣ-ಕಿನ್ಯೆನೆ ಮಿತ್ತಬೈಲಿನಲ್ಲಿ ದುಡಿದು ಕೃಷಿಮಾಡಿ ಯಶಸ್ಸು ಗಳಿಸುತ್ತಾರೆ. ಮಂಜಣ್ಣ ಮಾಯಿಪ್ಪಾಡಿ (ಕುಂಬಳೆ) ಅರಮನೆಯ ಸೇನೆ ಸೇರಿ ದಣ್ಣಾಯಕನಾಗುತ್ತಾನೆ. ಕಲ್ಯಾಣಪ್ಪನ ಕಾಟಕಾಯಿ(೧೮೩೭)ಯ ಸಂದರ್ಭದಲ್ಲಿ ಮಾಯಿಪ್ಪಾಡಿಯ ಅರಸ ಬ್ರಿಟಿಷರ ಪರವಾಗಿರುತ್ತಾನೆ. ಮಂಜಣ್ಣ-ದುರ್ಗಾರ ದಾಂಪತ್ಯೇತರ ಸಂಬಂಧವನ್ನು ಲೇಖಕರು ಚಿತ್ರಿಸಿದ್ದಾರೆ. ಆದರೆ ಮಂಜಣ್ಣನ ಪತ್ನಿಯ ಪಾತ್ರ ಅಲಕ್ಷಕ್ಕೀಡಾಗಿದೆ.

ಮಾಂಕರಾಲನ ಕಾಲದಲ್ಲಿ ಮಿತ್ತಬೈಲ್ ಗುತ್ತು ಅಧಃಪತನದ ಹಾದಿ ಹಿಡಿಯುತ್ತದೆ. ನಿಗೂಢ ಎಳೆಯಂತಿರುವ ಮಾಂಕರಾಲ್-ಅಚಕ್ಕರ ದಾಂಪತ್ಯೇತರ ಸಂಬಂಧ ಕಾದಂಬರಿಯ ಕೊನೆಯಲ್ಲಿ ಅನಾವರಣಗೊಳ್ಳುತ್ತದೆ. ಮಿತ್ತಬೈಲಿನ ಸುಬ್ಬಯಣ್ಣ ಗಾಂಧೀಜಿಯ ನಿಕಟವರ್ತಿಯಾಗುತ್ತಾನೆ.

ರಂಗೂನಿನಲ್ಲಿದ್ದಾಗ 'ಅಜಾದ್ ಹಿಂದ್' ಸೇನೆಯವರಿಗೆ ಸಹಾಯ ಮಾಡುತ್ತಾನೆ. ದೇಶವಿಭಜನೆಯ ಕಾಲದಲ್ಲಿ ಗಾಂಧೀಜಿಯ ಜತೆಯಲ್ಲಿದ್ದು ಗಾಂಧೀಜಿಯ ಕೊಲೆಯಾದ ಮೇಲೆ ಮಿತ್ತಬೈಲಿಗೆ ಬರುತ್ತಾನೆ. ನಿಗೂಢವಾಗಿ ಮಾಂಕರಾಲ್‌ನ ಕೊಲೆಯಾಗಿ. ಯಮುನಕ್ಕೆ ಗುತ್ತಿನ ಅಧಿಕಾರಸೂತ್ರ ಹಿಡಿಯುತ್ತಾಳೆ. ಗುರಿಯಷ್ಟೇ ದಾರಿ ಶುದ್ಧವಾಗಿರುವುದು ಮುಖ್ಯ ಎಂಬ ಗಾಂಧೀವಾದಿ ಸುಬ್ಬಯಣ್ಣನ ಸಲಹೆ ಯಮುನಕ್ಕೆಗೆ ಹಿಡಿಸುವುದಿಲ್ಲ. ಬಾರೆಬೈಲು ಆಸ್ತಿಯನ್ನು ಯಮುನಕ್ಕೆ ಖರೀದಿಸಿದ್ದರಿಂದ ಆಚಕ್ಕನ ಮಗ ತ್ಯಾಂಪಣ್ಣ ಮಿತ್ತಬೈಲಿನ ಗೇಣಿದಾರನಾಗಬೇಕಾಗುತ್ತದೆ. ತ್ಯಾಂಪಣ್ಣ ವಕೀಲರಿಂದ ನೋಟೀಸು ನೀಡಿಸಿದಾಗ ಯಮುನಕ್ಕೆ ತನ್ನವರೊಂದಿಗೆ ಬಾರೆಬೈಲಿಗೆ ದಾಳಿಮಾಡಿ ಮನೆ ಸುಡಿಸುತ್ತಾಳೆ. ತ್ಯಾಂಪಣ್ಣನ ಕೊಲೆಯಾಗುತ್ತದೆ. ಬಂಧನಕ್ಕೊಳಗಾಗಿ, ಶಿಕ್ಷೆ ಇಲ್ಲದೆ ಬಿಡುಗಡೆಗೊಂಡು ಬಂದ ಯಮುನಕ್ಕೆ ಪಶ್ಚಾತ್ತಾಪದಿಂದ ಕೊರಗಿ ಸಾಯುತ್ತಾಳೆ.

ಹಿಂಸೆಯಿಂದ ಅಹಿಂಸೆಯತ್ತ ಚಲಿಸುವ, ತಮ್ಮ ತಪ್ಪಿಗೆ ಪಶ್ಚಾತ್ತಾಪಪಡುವ ಪಾತ್ರಗಳು ಈ ಕಾದಂಬರಿಯಲ್ಲಿವೆ. ಇಚ್ಲಂಪಾಡಿ ಮನೆಯಲ್ಲಿ ರುಕ್ಮಿಣಿಯಮ್ಮನ ಕಿವಿ ಮಾತು ಕೇಳಿದ ಕಲ್ಯಾಣಸ್ವಾಮಿ ತನ್ನ ತಪ್ಪು ತಿದ್ದಿಕೊಳ್ಳುತ್ತಾನೆ. ಕೊಲೆ, ಗೂಂಡಾಗಿರಿಗಳನ್ನು ಸಮರ್ಥಿಸುತ್ತಿದ್ದ ಯಮುನಕ್ಕೆ ಕೊನೆಯಲ್ಲಿ ಪಶ್ಚಾತ್ತಾಪ ಪಡುತ್ತಾಳೆ. ಹಿಂಸೆಯ ಸಂಕೇತವಾಗಿದ್ದ ಬೀರಣ್ಣನ ಬೆತ್ತ ಸುಬ್ಬಯಣ್ಣನ ಮೂಲಕ ಗಾಂಧೀಜಿಯ ಕೈಸೇರುವುದು ಸಾಂಕೇತಿಕವಾಗಿದೆ. ಅಸ್ಪೃಶ್ಯತೆಯ ವಿರುದ್ಧದ ತನ್ನ ಹೋರಾಟದಲ್ಲಿ ಗಾಂಧೀವಾದಿ ಸುಬ್ಬಯಣ್ಣ ಸ್ವಲ್ಪ ಯಶಸ್ಸುಗಳಿಸುತ್ತಾನೆ.

'ಉರಿ ಉಷ್ಣದ ಮಾಯೆ' ಅಧ್ಯಾಯದಲ್ಲಿ ಯಮುನಕ್ಕೆ ತನ್ನನ್ನು ಅಲಕ್ಷಿಸಿದ ಬಸ್ ಡ್ರೈವರ್‌ಗೆ ಹೊಡೆಸುವ ಘಟನೆ ಇದೆ. (ಈ ಅಧ್ಯಾಯದ ಕನ್ನಡ ಅನುವಾದ 'ದೇಶ ಕಾಲ' ತ್ರೈಮಾಸಿಕ ಅಕ್ಟೋಬರ್ ೨೦೦೫ರ ಸಂಚಿಕೆಯಲ್ಲಿದೆ) ಈ ಘಟನೆಯಲ್ಲಿ ಹಾಗೂ ತ್ಯಾಂಪಣ್ಣನ ಮನೆ ಸುಡುವ ಪ್ರಸಂಗದಲ್ಲಿನ ಗುತ್ತಿನ ವ್ಯವಸ್ಥೆಯ ಕ್ರೌರ್ಯದ ಸಾರ್ಥಕ ಚಿತ್ರಣವಿದೆ. ಗುತ್ತಿನ ಯಮುನಕ್ಕೆಯ ವಿರುದ್ಧ ಸಾಕ್ಷಿಗಳೇ ಇಲ್ಲದ್ದರಿಂದ ಅವಳ ಬಿಡುಗಡೆಯಾಗುತ್ತದೆ.

ಮಿತ್ತಬೈಲ್‌ಗುತ್ತಿನ ಮಾಂಕರಾಲ್‌ನ ದಾಂಪತ್ಯೇತರ ಸಂಬಂಧಗಳಿಂದಾಗಿ ಗುತ್ತಿನವರ ಮನುಷ್ಯ ಸಂಬಂಧಗಳು ಸಂಕೀರ್ಣವಾಗಿವೆ. ತ್ಯಾಂಪಣ್ಣನನ್ನು ಕುರಿತ ಯಮುನಕ್ಕೆಯ ದ್ವೇಷಕ್ಕೆ ಅವನು ಮಾಂಕರಾಲ್‌ನ ದಾಂಪತ್ಯೇತರ ಸಂಬಂಧದ ಮಗ ಎಂಬುದೂ ಕಾರಣವಾಗಿದೆ.

''ಈ ಕಾದಂಬರಿ ಐತಿಹಾಸಿಕ ಅಲ್ಲ, ಐತಿಹಾಸಿಕ ಸತ್ಯವನ್ನು ಹುಡುಕಹೊರಟರೆ ಅಥವಾ ಐತಿಹಾಸಿಕ ವ್ಯಕ್ತಿಗಳನ್ನು ಗುರುತಿಸಹೊರಟರೆ ಅವು ನಿರಾಸೆಯ ನೀರಸ ಕತೆಗಳಾದಾವು. ಅದರ ಬದಲು ಇತಿಹಾಸವನ್ನು ಒಂದು ಬರೀ ಮರದ ತುಂಡು ಎಂದು ಗುರುತಿಸಿ ಅದರಲ್ಲಿ ಕೆತ್ತಿರುವ ಚಿತ್ರಗಳನ್ನು ನೋಡಿ ಸಂತೋಷಪಡಬೇಕೆಂದು ನನ್ನ ಅರಿಕೆ'' ಎನ್ನುತ್ತಾರೆ ಆನಂದಕೃಷ್ಣ. 'ಕಾಟಕಾಯಿ' ಖ್ಯಾತಿಯ ಸ್ವಾತಂತ್ರ್ಯಯೋಧ ಕಲ್ಯಾಣಸ್ವಾಮಿ, ಗುಲ್ಲು ಸುಬ್ರಾಯ, ಪಾರ್ತಿಸುಬ್ಬನ ಶಿಷ್ಯ ಕೆಂಗಣ್ಣ ನಾಯ್ಕ,

ಗೋವಿಂದ ಪೈ ಇಂಥ ಕೆಲವು ಐತಿಹಾಸಿಕ ವ್ಯಕ್ತಿಗಳು ಈ ಕಾದಂಬರಿಯಲ್ಲಿದ್ದಾರೆ. ಗೋವಿಂದ ಪೈಗಳನ್ನು ಗಾಂಧೀಜಿ 'ಕನ್ನಡದ ಸೂರದಾಸ' ಎಂದು ಗೌರವಿಸುತ್ತಾರೆ. ಮಂಜಣ್ಣ, ಉರ್ಗಮ್ಮ, ಯಮುನಕ್ಕೆ, ಸುಬ್ಬಯಣ್ಣೆ ಮಾಂಕರಾಲ್, ಪಾತ್ರಗಳಂತೆ ಕಂಗೊಳಿಸುವುದು ಕಾದಂಬರಿಯ ಯಶಸ್ಸಿಗೆ ಸಾಕ್ಷಿಯಾಗಿದೆ. ಕಂಪೆನಿಯವರು ಕಲ್ಯಾಣಸ್ವಾಮಿಯನ್ನು ಗಲ್ಲಿಗೆ ಹಾಕಿದ ಘಟನೆ ಎರಡು ವಾಕ್ಯಗಳ ವರದಿಯಲ್ಲಿ ಮುಗಿದುಹೋಗಿದೆ.

ಮಿತ್ತಬೈಲಿನ ಮಂಜಣ್ಣ ಬ್ರಿಟಿಷರಿಂದ ಪ್ರಶಸ್ತಿ ಪಡೆದವನು. ಆದರೆ ಕಾದಂಬರಿಕಾರರು ವಸಾಹತುಶಾಹಿ ಆಳ್ವಿಕೆಯನ್ನು ಆರಾಧಿಸಿಲ್ಲ.

'ಮಿತ್ತಬೈಲ್ ಯಮುನಕ್ಕೆ' ಒಂದು ಗುತ್ತಿನ ಕತೆ. ಗುತ್ತಿನ ಪಾತ್ರಗಳೇ ಇಲ್ಲಿ ಮುಖ್ಯವಾಗುತ್ತವೆ. ಆಂತರಿಕ ವಿಮರ್ಶಕರಾಗಿ ಗುತ್ತಿನ ಸಂಸ್ಕೃತಿ-ಅಪಸಂಸ್ಕೃತಿ, ಆಚಾರ-ಅನಾಚಾರ, ಮೌಲ್ಯ-ಅಪಮೌಲ್ಯ, ಆರೋಹಣ-ಅವರೋಹಣಗಳನ್ನು ಚಿತ್ರಿಸುವುದು ಆನಂದಕೃಷ್ಣರಿಗೆ ಸಾಧ್ಯವಾಗಿದೆ.

ಚೋಮಕ್ಕನ ದುಡ್ಡಿಗೆ ಪ್ರಾಮಾಣಿಕವಾಗಿ ಬಡ್ಡಿಕೊಡುವ ಉಳ್ಳಾಲದ ಸ್ಯಾಬು, ಇಚ್ಲಂಪಾಡಿ ಮನೆಯಲ್ಲಿ ಕಲ್ಯಾಣಸ್ವಾಮಿಗೆ ಬುದ್ಧಿ ಹೇಳುವ ರುಕ್ಮಿಣಿಯಮ್ಮ, ವಿಷಮ ದಾಂಪತ್ಯದ ಜೋಡಿ ಆಚಕ್ಕ-ಉದಾರ್‌ಗತ್ತುವ ಗಡಿಪತ್ತಿನಾರ್, ಮಂಜಣ್ಣನನ್ನು ಪ್ರೀತಿಸುವ ದುರ್ಗಾ-ಇಂತ ಚಿಕ್ಕ ಪಾತ್ರಗಳು ಕೂಡ ನೆನಪಿನಲ್ಲಿ ಉಳಿಯುತ್ತವೆ.

ಆನಂದಕೃಷ್ಣರ 'ಮಿತ್ತಬೈಲ್ ಯಮುನಕ್ಕೆ' ತುಳು ಸಾಹಿತ್ಯದ ಬೆರಳೆಣಿಕೆಯ ಪ್ರಥಮ ದರ್ಜೆಯ ಕಾದಂಬರಿಗಳ ಸಾಲಿಗೆ ಸೇರುತ್ತದೆ. ಆನಂದಕೃಷ್ಣರು ತನ್ನ ಚೊಚ್ಚಲ ಕಾದಂಬರಿಯಲ್ಲಿ 'ಮೂಜಿ ಅಚ್ಚರದ ಮಾಣಿ ಮಾಯಾದ್, ಆಜಿ ಅಚ್ಚರದ ಮಾಣಿ ಆಯೆರ್''

ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ, 'ಸುಶೀಗೀತ', ಎಂ.ಐ.ಜಿ.-ಎಚ್. ದೊಡ್ಡನಗುಡ್ಡೆ, ಉಡುಪಿ-೫೭೬ ೧೦೨.

ಸೂರ್ಯನುರಿದ ಭೂಮಿಗೆ ತಂಪನೆರೆದ ಚಂದಿರ

ಅಬ್ಬಾಸ್ ಮೇಲಿನಮನಿ

ಮೂರು ದಿನಗಳಿಂದ ಅಮೀನೂರು ಜೀವಶವದಂತೆ ಉಸಿರಾಡಿಸತೊಡಗಿತ್ತು. ಗಾಳಿಗೆ ಬೀಸಲೋ ಬೇಡವೋ ಎನ್ನುವ ಸಂಧಿಗ್ಧತೆ. ಧಗಧಗ ಎನ್ನುವ ಸೂರ್ಯ ಭೂಮಿಯನ್ನು ಕಾದಹಂಚಿನಂತೆ ಮಾಡಿದ್ದ. ರಸ್ತೆಗಳಲ್ಲಿ ಮನುಷ್ಯರನ್ನು ಕಾಣದೆ ಬಿಡಾಡಿ ನಾಯಿ, ದನ ಮತ್ತು ಹಂದಿಗಳು ದಿಗಿಲುಗೊಂಡಿದ್ದವು. ಹಗಲೆಂಬೋ ಹಗಲು ಪೋಲೀಸರ ಲಾಟಿ ಮತ್ತು ಬೂಟುಗಳ ಸದ್ದಿಗೆ ಹೆದರಿಕೊಂಡಿತ್ತು. ಗೂಡು ಬಿಟ್ಟು ಹೊರಗೆ ಬರದ ಹಕ್ಕಿಗಳ ಎದೆತುಂಬ ತಲ್ಲಣ. ಕಿಟಕಿ, ಬಾಗಿಲು ಮುಚ್ಚಿದ ಮನೆಯೊಳಗೆ ಹೆಪ್ಪುಗಟ್ಟಿದ ಆತಂಕ.

ರಹೀಮ್ ಗಲ್ಲಿಯ ತನ್ನ ಪುಟ್ಟ ಗುಡಿಸಲಿನಲ್ಲಿ ಕೈಕಾಲು ಕಟ್ಟಿ ಹಾಕಿದಂತೆ ಕುಳಿತಿದ್ದ ಚಾಂದಬಿ ನಿರಂತರ ಹೊಯ್ದಾಡತೊಡಗಿದ್ದಳು. ಊರು ಅನುಭವಿಸುತ್ತಿರುವ ಅನಾಥಪ್ರಜ್ಞೆಯ ತಹತಹಿಕೆ ಅವಳೊಡಲಲ್ಲಿ ಸಂಕಟವನ್ನು ಸೃಜಿಸಿತ್ತು. '' ಆ ಸೈತಾನ್ ಬೇಟಾಗಳಿಗೆ ಹೇಳೋರು, ಕೇಳೋರು ಯಾರೂ ಇಲ್ಲೇನಂತೀನಿ. ಇಡೀ ಊರ್‍ಽಽ ಕಬರಸ್ತಾನ ಮಾಡಿ ಕುಂತಾವು. ಬಾಡ್ಯಾಗೋಳು, ಧರ್ಮ, ದೇವರಂತ ಬದುಕೋರ ಜೀವಾ ಹಿಂಡಾಕ ಹತ್ಯಾವು. ಬಾಯಾಗ ಮಣ್ಣು ಹಾಕ್ಲಿ, ಹಿಂದಿನ ಕಾಲ್ದಾಗ ಇಂಥ ಹುಳಾ ನಾಶಾ ಮಾಡಾಕ ದೇವರು ಅವತಾರ ಎತ್ತಿ ಬರ್‍ತಿದ್ದನಂತ, ಈಗೆಲ್ಲಿ ಕಣ್ಮುಚ್ಚಿ ಕುಂತಾನೋ ಅಂವಾ...'' ಆಕೆ ಮಾತಾಡುತ್ತಲೇ ಇದ್ದಳು.

ಒಂದು ಸಂಜೆ, ಹುಡುಗನೊಬ್ಬ, ಗಿರಣಿಯಲ್ಲಿ ಜೋಳ ಬೀಸಿಕೊಂಡು ಮನೆಗೆ ಹೊರಟ ಹುಡುಗಿಯೊಬ್ಬಳ ಜಡೆ ಎಳೆದು ಓಡಿ ಹೋದ ಪ್ರಸಂಗ, ಮಾತುಮಾತಲ್ಲಿ ಹಲವಾರು ತಿರುವುಗಳನ್ನು

ಪಡೆದುಕೊಂಡು, ಊರನ್ನು ಪ್ರಕ್ಷುಬ್ಧಗೊಳಿಸಿ, ಕೋಮುಗಲಭೆಯಾಗಿ ಮಾರ್ಪಟ್ಟು ಬೆಳಗು ಹರಿಯುವುದರೊಳಗೆ, ಹಾಲು ಮಾರುವ ಹಿಂದೂ ಹುಡುಗ, ಪೇಪರ್ ಹಂಚುವ ಮುಸ್ಲಿಮ ಹುಡುಗರನ್ನು ಬಲಿತೆಗೆದುಕೊಂಡಿತ್ತು. ನಿಷೇದಾಜ್ಞೆ ಜಾರಿಯಾಗಿ, ವಾಹನಗಳಲ್ಲಿ ಬಂದ ಹಿಂಡುಹಿಂಡು ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸುತ್ತ ಬೀದಿಬೀದಿಗಳಲ್ಲಿ ತಿರುಗಾಡಿಕೊಂಡ ಮೇಲೆ ದೊಂಬಿಯ ಸದ್ದು ಅಡಗಿತ್ತು.

ಆದರೆ ಬೂದಿ ಮುಚ್ಚಿದ ಕೆಂಡಕ್ಕೆ ಗಾಳಿ ಸೋಕಿದ್ದೆ ನಿಗಿನಿಗಿಸುತ್ತಿತ್ತು. ಕರ್ಫ್ಯೂವನ್ನು ಧಿಕ್ಕರಿಸಿಯೂ ಅಲ್ಲಲ್ಲಿ ಬೆಂಕಿ ಹಚ್ಚಿದ, ಅಂಗಡಿಗಳನ್ನು ಲೂಟಿ ಮಾಡಿದ ಪ್ರಕರಣಗಳು ಸಂಭವಿಸಿ ಜನರ ತಲ್ಲಣ ಹೆಚ್ಚಿಸದೇ ಇರಲಿಲ್ಲ. ಕಂಡಲ್ಲಿ ಗುಂಡು ಹಾಕುವ ಆಜ್ಞೆಯಿಂದ ಪೋಲೀಸರ ಕೈಯಲ್ಲಿನ ಬಂದೂಕುಗಳು ಮನುಷ್ಯರ ಬೇಟೆಗೆ ಕಾತರಿಸುತ್ತಲಿ ಇದ್ದವು.

ಊರಿನ ಬಸ್ ನಿಲ್ದಾಣದ ಹಿಂದುಗಡೆಗೆ ವ್ಯಾಪಿಸಿಕೊಂಡಿದ್ದ ರಹೀಮಗಲ್ಲಿ ಗುಬ್ಬಿ ಮರಿಯಂತೆ ಥರಗುಟ್ಟತೊಡಗಿತ್ತು. ಚಾಂದಬಿಯ ಮಾತುಗಳನ್ನು ಗಂಡ ಮುಷ್ತಾಕ್ ಕೇಳಿಯೂ ಕೇಳದಂತೆ ಕುಳಿತುಕೊಂಡಿದ್ದ. ಊರು ಭೀತಿಗೊಳಗಾದ ಹಿನ್ನಲೆಯಲ್ಲಿ ಎರಡು ವರ್ಷದ ಹಿಂದಿನ ಘಟನೆ ಅವನನ್ನು ಆವರಿಸಿಕೊಂಡಿತ್ತು. ಕಂಪನಿಯೊಂದರ ಟ್ರಕ್ಕು ನಡೆಸುತ್ತಿದ್ದ ಅವನು ಅಹಮ್ಮದಾಬಾದಿಗೆ ಮಾಲು ತುಂಬಿಕೊಂಡು ಹೋದಾಗ ಕೋಮು ಗಲಭೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ. ದುರುಳರು ಅವನ ತಲೆಯ ಮೇಲಿನ ಟೋಪಿಸೋಡಿ, ಸ್ಟೇರಿಂಗ್ ಮೇಲಿರಿಸಿದ್ದ ಅವನ ಎರಡೂ ಕೈಗಳನ್ನು ತಲವಾರಿನಿಂದ ತುಂಡರಿಸಿ, ಟ್ರಕ್ಕಿಗೆ ಬೆಂಕಿ ಹಚ್ಚಿ ಹೋಗಿದ್ದರು. ಮುಷ್ತಾಕ್ ಅಲ್ಲಿಂದ ಜೀವ ಉಳಿಸಿಕೊಂಡು ಬಂದದ್ದು ಪವಾಡವೆನಿಸಿತ್ತು. ಒಂದು ಹೆಣ್ಣು, ಎರಡು ಗಂಡು ಮಕ್ಕಳು. ಗಂಡ - ಹೆಂಡತಿ ಎಂಥ ಸೊಗಸಾಗಿತ್ತು ಬದುಕು! ಅಲ್ಲಾಹನಿಗದು ಮನಸ್ಸಿಗೆ ಬರಲಿಲ್ಲ. ದುಡಿಯುವ ಹುಮ್ಮಸ್ಸಿನ ಮುಷ್ತಾಕ್ ಕೈ ಕಳೆದುಕೊಂಡು ಮನೆ ಹಿಡಿದು ಕುಳಿತಿದ್ದ. ಚಾಂದಬಿ ದಿಟ್ಟ ಹೆಂಗಸು. ಹತ್ತಾರು ಮನೆಗಳ ಕಸ-ಮುಸುರೆಗೆ ಹೋಗಿ ಬರುತ್ತ ಸಂಸಾರವನ್ನು ನಿಭಾಯಿಸತೊಡಗಿದ್ದಳು. ಅವಳ ಹಿರಿಯ ಮಗ ನೌಷಾದ್ ಬುದ್ಧಿವಂತ ಹುಡುಗ. ಏಳನೆಯ ತರಗತಿವರೆಗೆ ಉರ್ದು ಕಲಿತು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆದು ಹೈಸ್ಕೂಲಿಗೆ ಪ್ರಥಮ ಸ್ಥಾನಗಳಿಸಿದ್ದ. ಹಿಂದೂ ಹುಡುಗರ ಜೊತೆಗೆ ಅವನದು ಹೆಚ್ಚಿನ ದೋಸ್ತಿ. ಗಲ್ಲಿಯಲ್ಲಿ ಎಲ್ಲರಿಗೂ ಬೇಕಾದ ಹುಡುಗ. ಮಗನನ್ನು ಹೊಗಳುವುದೆಂದರೆ ಚಾಂದಬಿಗೆ ಸಂಭ್ರಮ. ಮುಷ್ತಾಕನಿಗೆ ಮಗನ ಬಗ್ಗೆ ಕನಸುಗಳಿದ್ದವು. ಅವನು ತಮ್ಮ ಭವಿಷ್ಯದ ಬೆಳಕು ಎಂದು ಭಾವಿಸಿದ್ದ. ಆದರೆ ಆ ದಿನದ ಕತ್ತಲು ಈ ಬೆಳಕನ್ನು ನುಂಗಿತು.

ದೇಶದ ಎಲ್ಲೋ ಒಂದು ಕಡೆಗೆ ಪ್ರತಿಮೆಗಾದ ಅಪಮಾನವನ್ನು ಪ್ರತಿಭಟಿಸಲು ಒಂದು ಕೋಮಿನವರು ಬಂದ್ ಆಚರಿಸಿದ್ದರು. ದುಷ್ಕರ್ಮಿಗಳು ಆ ಸಂದರ್ಭವನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಂಡು ಊರಲ್ಲಿ ದಂಗೆ ಸೃಷ್ಟಿಸಿದ್ದರು. ಮಸೀದೆಯಿಂದ ಇಷಾ ನಮಾಜು ಮುಗಿಸಿಕೊಂಡು ಮನೆಯತ್ತ ಧಾವಿಸಿದ್ದ ನೌಷಾದ್ ಮತಾಂಧನೊಬ್ಬನ ಚೂರಿ ಇರಿತಕ್ಕೆ ಸಿಕ್ಕು ನೆಲಕ್ಕುರುಳಿದ್ದ. ಅವನ

ಹೊಟ್ಟೆಯೊಳಗಿಂದ ಹೊರಬಿದ್ದ ಕರುಳು ಕಂಡ ಚಾಂದಬಿ ಮುಗಿಲು ಹರಿದು ಬೀಳುವಂತೆ ಆಕ್ರಂದಿಸಿದ್ದಳು.

ಚಾಂದಬಿಗೆ ಈಗ ಮಗನ ನೆನಪು ಕಾಡದೆ ಇರಲಿಲ್ಲ. ಆ ನೆನಪಿನ ತುಂಬ ತಳಮಳ. ಅದರ ತೆಕ್ಕೆಯಲ್ಲಿ ಸಿಲುಕಿಕೊಂಡರೆ ಆಕೆ ಎರಡು - ಮೂರು ದಿನ ಹಾಸಿಗೆ ಬಿಟ್ಟು ಏಳುವುದಿಲ್ಲವೆಂದು ಮುಷ್ತಾಕ್‌ನಿಗೆ ಗೊತ್ತು. ಅದಕ್ಕಾಗಿ ಅವನು ಅವಳ ಮಾತುಗಳಿಗೆ ಪ್ರತಿಕ್ರಿಯಸದೆ ಕುಳಿತಿದ್ದ.

×××××××

ಮೊನ್ನೆಯೇ ತಿಂಗಳ ಕೊನೆ. ಅವಳಿಗೆ ನಾಲ್ಕು ಮನೆಯವರು ಪಗಾರಕೊಡಬೇಕು. ಗಾಂಧಿನಗರ ಬಡಾವಣೆಯಲ್ಲಿರುವ ಆ ಮನೆಯವರಿಗೆ ಚಾಂದಬಿಯ ಮೇಲೆ ವಿಶೇಷ ಅನ್ನುವಂಥ ಪ್ರೀತಿ. ಅವರು ಆಕೆಯನ್ನು ಕೆಲಸದಾಳು ಎಂದು ಗಮನಿಸಿದ್ದಿಲ್ಲ. ಎದೆಯಲ್ಲಿ ಬ್ರಹ್ಮಾಂಡದಷ್ಟು ದುಮ್ಮಾನವನ್ನು ಹತ್ತಿಕ್ಕಿಕೊಂಡು ಆಕೆ ಚೊಕ್ಕಟವಾಗಿ ಕೆಲಸ ನಿರ್ವಹಿಸುವ, ಮನುಷ್ಯ ಸಂಬಂಧದ ಗಂಧ ತೀಡುವ ಪರಿಯಿಂದ ಸಂಪ್ರೀತರಾದವರು. ಅವಳ ಮನಸ್ಸು ಸ್ವಚ್ಛ- ಮಾತು ನೇರ. ಮೈಗಳ್ಳತನದಿಂದ ಹಣ ಪಡೆದುಕೊಳ್ಳುವ ತಕರಾರಿನವಳಲ್ಲ. ''ಬೆವರು ಸುರಿಸಲಾರ್ದ ತಿಂದ ಅನ್ನ ಮೈಯ್ಯಾಗ ರಕ್ತಾ ಆಗುದಿಲ್ರಿ'' ಎನ್ನುವ ಸ್ವಭಾವ. ಲಂಚ ತಿನ್ನುವ ಸಾಹೇಬರುಗಳ ಅಂತರಂಗವನ್ನು ಕಲಕದೇ ಬಿಡುತ್ತಿರಲಿಲ್ಲ ಅವಳ ಮಾತು. ತನ್ನ ತಾಪತ್ರಯಗಳ ಬಗ್ಗೆ ಚೂರೂ ಹೇಳಿಕೊಳ್ಳುವವಳಲ್ಲ. ಆದರೆ ನೌಷಾದನ ವಯಸ್ಸಿನ ಹುಡುಗರನ್ನು ನೋಡಿದರೆ ಅವಳ ಕಣ್ಣಂಚಿನಲ್ಲಿ ನೀರು ತುಳುಕುತ್ತಿತ್ತು. ಕೈಗೆ ಬಂದ ಮಗ ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಸತ್ತು ಬಿದ್ದ ದೃಶ್ಯ ಅವಳ ಕಣ್ಣೆದುರು ಕಟ್ಟಿ ಹೃದಯವನ್ನು ಘಾಸಿಗೊಳಿಸುತ್ತಿತ್ತು. ಚೂರಿ ರೂಪದಲ್ಲಿ ಬಂದು ಮಗನನ್ನು ನುಂಗಿ ಹಾಕಿದ ವಿಧಿಯನ್ನು ಆಕೆ ಒಳಗೇ ಶಪಿಸುತ್ತಿದ್ದಳು. ಎಳೆಯ ಮಗುವಿನ ರಕ್ತಕುಡಿದ ಧರ್ಮಾಂಧ ಹುಳುವನ್ನು ಜನ ಬೈದಾಡಿಕೊಂಡಿದ್ದರು. ಆದರೆ ಆ ಹುಳಗಳ ಪತ್ತೆ ಮಾತ್ರ ಆಗಿರಲಿಲ್ಲ.

ಈಗ ಅಂಥವೇ ಹುಳಗಳು ಊರಲ್ಲಿ ಗುಲ್ಲೆಬ್ಬಿಸಿ ಇಬ್ಬರು ಹಿಂದೂ-ಮುಸ್ಲಿಮ ಹುಡುಗರ ಮೇಲೆ ರಣಹದ್ದುಗಳಂತೆ ಎಗರಿ ಕುಕ್ಕಿದ್ದು ಕೇಳಿ ಚಾಂದಬಿಯ ಲಾವಾ ಕುದ್ದಿತ್ತು. ''ಯಾವ ರಾಕ್ಷಸಗೊಳು ಆ ಹುಡುಗರ ಜೀವಾ ನುಂಗಿದವೋ. ಅವರ ಕಟಬಾಯಿ ಹರೀಲಿ. ಅವರ ವಂಶ ನಿರ್ವಂಶ ಆಗ್ಲಿ. ಅವರ ಉರುವಣಿಗ್ಯಾಗ ಉಪ್ಪು ತುಂಬಲಿ'' ಎಂಬಿತ್ಯಾದಿಯಾಗಿ ಶಾಪದಕಿಡಿಗಳನ್ನು ಸಿಡಿಸಿದ್ದಳಾಕೆ. ಕೋಮು ಎನ್ನುವ ಕಾಳಿಂಗ ಸರ್ಪ ಅಮಾಯಕ ಜೀವಗಳನ್ನು ನಿರ್ದಯವಾಗಿ ಕಚ್ಚಿಕೊಲ್ಲುವುದು ನಿಜವಾದರೂ ಈ ಸರ್ಪವನ್ನು ಕೆರಳಿಸುವ ನೀಚರ ಸೂಕ್ಷ್ಮಗಳು ಚಾಂದಬಿಯ ಗ್ರಹಿಕೆಗೆ ನಿಲುಕುವಂತಿರಲಿಲ್ಲ.

ಚಾಂದಬಿ ಒಬ್ಬಳೇ ಎಷ್ಟು ಮಾತಾಡಿಯಾಳು. ಮುಷ್ತಾಕ್ ಕಿಮಿಕ್ ಎನ್ನದೇ ಕುಳಿತಿದ್ದ. ಮಕ್ಕಳಿಬ್ಬರು ಪುಸ್ತಕದಲ್ಲಿ ಮಗ್ನರಾಗಿದ್ದರು. ಚಾಂದಬಿ ಬೇಸರದಿಂದ ಮೈಮುರಿದಳು. ತಟ್ಟನೆ ಅವಳಿಗೆ ಪದ್ಮಾ ಹೇಳಿದ ಮಾತು ನೆನಪಾದವು. ಪದ್ಮಾ ಆಫೀಸರೊಬ್ಬನ ಹೆಂಡತಿ. ಗಲಭೆಯ ಹಿಂದಿನ ದಿನ ಆಕೆ

ಸ್ಪಷ್ಟಾಗಿ ''ನಮ್ಮ ರೂಪಾಗ ದಿನ ತುಂಬ್ಯಾವು. ಇವತ್ತ, ನಾಳೆ ಅವಳ ಹೆರಿಗೆ ಆಗತ್ತ. ಆಕಿ ಬಾಣಂತನಕ ನೀನು ಆಸರ ಆಗಬೇಕು. ಬೇಕಾದ್ರ ನೀನು ಕೆಲಸ ಮಾಡೋ ಮನಿ ಕಮ್ಮಿ ಮಾಡ್ಕೊ. ನಮ್ಮ ಮನಿಯಾಗ, ಊಟಾನೂ ಇರು. ನಿನ್ಗ ಬೇಡಿದಷ್ಟು ಪಗಾರ ಕೊಡ್ತೀನಿ'' ಎಂದಿದ್ದಳು. ಅವಳ ಗಂಡ ಚಂದ್ರಪ್ಪ ಊರಲ್ಲಿ ಇರುವುದೇ ಅಪರೂಪ. ಯಾವಾಗಲೂ ಟೂರ್ ಮೇಲೆ ಹೋಗುವವರು. ಹಿರಿಯ ಮಗ ಮೈಸೂರಲ್ಲಿ ಓದುತ್ತಿದ್ದ. ಇನ್ನೊಬ್ಬ ಮಗ ಚಿಕ್ಕವನು. ರೂಪಾಳ ಬಾಣಂತನಕ್ಕೆ ಕಷ್ಟವಾಗಬಾರದು ಎಂಬ ಕಾರಣದಿಂದ ಚಂದ್ರಪ್ಪ ''ನೀನು ಪಗಾರದ ಬಗ್ಗೆ ಚಿಂತೆ ಮಾಡಬೇಡ'' ಎಂದು ಚಾಂದಬಿಯನ್ನು ಕೇಳಿಕೊಂಡಿದ್ದರು. ''ರೊಕ್ಕದ ಮಾತು ಹೇಳಬ್ಯಾಡ್ರಿ ಸಾಹೇಬರ. ನಾಯೇನು ಅನೇದಾಕಿ ಅಲ್ಲ. ರೂಪಾ ನನ್ಗ ಬೇಟಿ ಸಮಾನ. ಅವಳ ಬಾಣಂತನ ನಾನ ಮಾಡ್ತೀನಿ'' ಎಂದಿದ್ದಳಾಕೆ.

''ಪಾಪ, ಆ ಹುಡುಗಿ ಹೆಂಗಿ ಆತೊ ಏನೋ?'' ಚಾಂದಬಿ ಈಗ ತೀವ್ರ ಚಡಪಡಿಸತೊಡಗಿದಳು. ಪದ್ಮಾನ ಮಾತು ಎದೆಯಲ್ಲಿ ಪ್ರತಿಧ್ವನಿಸಿದಂತಾಗಿ ಆಕೆ ಎದ್ದುನಿಂತು ''ನಾನು ಪದ್ಮಕ್ಕರ ಮನಿಗೆ ಹೋಗಿ ಬರ್ತೀನ್ರಿ'' ಎಂದಳು.

''ನಿನ್ನ ತಲಿ ಖರಾಬ್ ಆಗೇತೇನು? ಊರಾಗ ಒಂದು ನರಪಿಳ್ಳೇನೂ ತಿರುಗಾಡಾಕ ಹತ್ತಿಲ್ಲ. ಹೋಗಿ ಬಂದೂಕಿನ ಬಾಯಿಗೆ ಬೀಳಬೇಕಂತಿಯೇನು? ಸುಮ್ನ ಮನಿಯಾಗ ಕೂಡ್ರು'' ಮುಷ್ತಾಕ್ ಹಗುರಾಗಿ ಗದರಿಸಿದ.

''ಪದ್ಮಕ್ಕ ಬಹಳ ಹೇಳ್ಯಾರ. ಊರಾಗ ಇಂಥ ಪರಿಸ್ಥಿತಿ. ಪಾಪ, ಅವರು ಏನು ಮಾಡ್ತಾರೋ ಏನೋ?'' ಚಾಂದಬಿಯ ಮನಸ್ಸು ಅತ್ತಕಡೆ ಧ್ಯಾನಿಸಿತ್ತು.

''ಗದ್ದಲ ಎಬ್ಬಿಸುವ ಹರಾಮ್‌ಖೋರರಿಗೆ ಮನುಷ್ಯಾರ ಸಂಕಟ ಅರ್ಥಾಗುದಿಲ್ಲ'' ಮುಷ್ತಾಕ್‌ನ ಧ್ವನಿಯಲ್ಲಿ ವ್ಯಥೆ, ಸಿಟ್ಟು ಎರಡೂ ಕಾಣಿಸಿದ್ದುವು.

''ಆ ಸೂವರ್‌ಗಳ ತಗೊಂಡು ಏನು ಮಾಡೂದೈತಿ. ರೂಪಾ ಬೇಟಿಗೆ ಇದು ಪೈಲಾ ಹೆರಿಗೆ. ನಾನು ಹೋಗಿ ಬರ್ತೀನಿ'' ಎಂದು ಚಪ್ಪಲಿ ಮೆಟ್ಟಿಕೊಂಡಳು ಚಾಂದಬಿ.

''ನಿಂದೂ ಹಠಾ ಬಹಳಾತು. ಪೋಲೀಸರ ಬಂದೂಕಿಗೆ ಮರುಕ ಇರುದಿಲ್ಲ!'' ಹೆಂಡತಿಯನ್ನು ತಡೆಯಲು ನೋಡಿದ ಮುಷ್ತಾಕ್,

''ಬಸವಣ್ಣ ದೇವರ ಗುಡಿ ಸಂದಿ ಹಿಡಿದು ಹೋಗಿ ಬರ್ತೀನಿ ನೀವೇನು ಚಿಂತಿ ಮಾಡಾಬ್ಯಾಡ್ರಿ,'' ಎನ್ನುತ್ತ ಆಕೆ ಹೊಸಿಲು ದಾಟಿದಳು. ಅಂತಃಕರಣ ಹೃದಯ ಅವಳದು. ಆದರೆ ಪೋಲೀಸರ ಗುಂಡಿಗೋ, ಧರ್ಮಾಂಧರ ಕೈಗೋ ಸಿಕ್ಕು ಬಿಟ್ಟರೆ ಆಕೆಯ ಗತಿಯೇನು? ಮುಷ್ತಾಕ್ ಚಿಂತಿಸಿದ.

ಚಾಂದಬಿ ತನಗೆ ಪರಿಚಿತವಾಗಿದ್ದ ಸಂದಿಗಳನ್ನು ಆತಂಕದ ಹೆಜ್ಜೆಗಳಿಂದಲೇ ಕ್ರಮಿಸಿದ್ದಳು. ಅವಳನ್ನು ನೋಡುತ್ತಲೇ ಪದ್ಮಾ ಸಮಾಧಾನ ಅನುಭವಿಸುತ್ತ ಹೇಳಿದಳು ''ಬಾ, ಒಳಗ. ದೇವರು

ಬಂದಂಗ ಬಂದಿ, ನಮ್ಮವ್ವ. ರೂಪಾಗ ಹೆರಿಗಿ ಬ್ಯಾನಿ ಶುರು ಆದಂಗ ಕಾಣಸ್ತಾವು. ಇವರು ಬ್ಯಾರೆ ಮುಂಜೆಗೆ ಹೋಗ್ಯಾರ, ಸುಧಾ ಡಾಕ್ಟರು, ದವಾಖಾನಿಯಲ್ಲಿರ್ತೀನಿ ಕರ್ಕೊಂಡು ಬರ್ರಿ ಅಂದ್ರು. ನನ್ಗ ದಿಕ್ಕು ತಿಳಿದಂಗಾಗಿತ್ತು''.

''ರಸ್ತಾದಾಗ ರಿಕ್ಷಾ, ಟಾಂಗಾ ಒಂದೂ ತಿರುಗ್ಯಾಡವಲ್ಲುವ, ರೂಪಾನ್ನ ದವಾಖಾನಿಗೆ ಕರ್ಕೊಂಡು ಹೋಗುದು ಹ್ಯಾಂಗರಿ ಅಕ್ಕಾ? ಹೆರಿಗೆ ಇಲ್ಲೆ ಆಗ್ಲಿ ಬಿಡ್ರಿ, ನಾನು ರೂಪಾನ ಮುಂದ್ಽ, ಇರ್ತೀನಿ. ನೀವೇನು ಗಾಬರಿ ಆಗಬ್ಯಾಡ್ರಿ''. ಹೆರಿಗೆ ಮಾಡಿಸಿದ ಅನುಭವದ ಧೈರ್ಯದಿಂದಲೇ ಹೇಳಿದ್ದಳು ಚಾಂದಬಿ.

''ರೂಪಾಗ ಇದ ಚೊಚ್ಚಲ ಹೆರಿಗೆ, ಇವರು ದವಾಖಾನಿಯಾಗ ಆಗ್ಲಿ ಅಂದಾರ, ಅವಳತ್ತಿ ರೂಪಾ, ಗಂಡನ ಅಭಿಪ್ರಾಯನೂ ಅದ್ಽ ಐತಿ'' ಎನ್ನುತ್ತ ಪದ್ಮಾ ಒಳಗೆ ಹೋದಳು. ಚಾಂದಬಿ ಅವಳನ್ನು ಹಿಂಬಾಲಿಸಿದಳು.

ಕುಳಿತಿದ್ದ ರೂಪಾ ತುಟಿ ಕಚ್ಚುತ್ತ, ಎರಡೂ ಕೈಗಳನ್ನು ಚೆಲ್ಲಾಡತೊಡಗಿದ್ದಳು. ಪದ್ಮಾಳ ಮುಖದಲ್ಲಿ ಗಾಬರಿ ಒಡೆದು ಕಾಣಿಸಿತು. ಚಾಂದಬಿ, ರೂಪಾನ ಹತ್ತಿರ ಕುಳಿತು'' ಬೇಟಿ, ನೀನು ಚಂದದ ಮಗನ ತಾಯಿ ಆಗ್ತಿ, ತ್ರಾಸು ತಡಕೋರವ್ವ' ಎಂದು ಅವಳ ತಲೆ ನೇವರಿಸಿದಳು, ಒಡಲಾಳದ ಅಸಾಧ್ಯನೋವಿಗೆ ತಾನು ಆಳಲ್ಲ ಎನ್ನುವಂತೆ ರೂಪಾ ತೀವ್ರವಾಗಿ ಒದ್ದಾಡತೊಡಗಿದಳು.

ಆರು ವರ್ಷಗಳ ಹಿಂದೆಯೇ ಅವಳ ಮದುವೆಯಾದದ್ದು. ಗಂಡ ಶ್ರೀಕಾಂತ ಕೆಇಬಿಯಲ್ಲಿ ಜೆ.ಇ. ಆಗಿದ್ದ. ದಾಂಪತ್ಯದಲ್ಲಿ ಅನೂನ ಪ್ರೀತಿಯಿತ್ತು. ತಂದೆಯೆನ್ನಿಸಿಕೊಳ್ಳುವ ಉಮೇದು ಇತ್ತಾದರೂ ಅದನ್ನು ಗಂಭೀರವಾಗಿ ಪರಿಗಣಿಸುವ ಪ್ರವೃತ್ತಿ ಅವನದಾಗಿರಲಿಲ್ಲ. ಈ ಬಗೆಗೆ ಧಾವಂತ ಇದ್ದುದು ರೂಪಾಳ ಅತ್ತೆ-ಮಾವಂದರಿಗೆ. ಮೊಮ್ಮಗ ಅಥವಾ ಮೊಮ್ಮಗಳ ಕಾಣುವ ಆಸೆ ಅವರಿಗೆ. ಶ್ರೀಕಾಂತ-ರೂಪಾ ವೈದ್ಯರಲ್ಲಿ ಪರೀಕ್ಷಿಸಿಕೊಂಡದ್ದು ಅವರ ಒತ್ತಾಸೆಗೆನೇ. ಇಬ್ಬರಲ್ಲೂ ದೋಷವಿರಲಿಲ್ಲ. ರೂಪಾಳಿಗೆ ಮಕ್ಕಳಾಗುತ್ತವೆಯೆಂದು ಡಾಕ್ಟರ್ ಭರವಸೆ ನೀಡಿದ್ದರು. ಅವಳತ್ತೆಗೆ ಸಮಾಧಾನವಾಗಿತ್ತು. ಅದೇ ಉತ್ಸಾಹದಲ್ಲಿ ದೇವರು - ದಿಂಡರು, ಹರಕೆಯೆಂದು ಆಕೆ ಸೊಸೆಯೊಂದಿಗೆ ಓಡಾಡಿದ್ದಳು. ಫಲವಂತಿಕೆ ಶೂನ್ಯವೆನಿಸಿತ್ತು. ಸಹನೆ ಕಳೆದುಕೊಂಡ ಅವಳು ''ಸೊಸೆ ಗೊಡ್ಡು'' ಎಂದು ತೀರ್ಮಾನಿಸಿದ್ದಳು. ರೂಪಾಳಿಗೆ ಕಿರಿಕಿರಿ ಶುರುವಿಟ್ಟುಕೊಂಡದ್ದು ಆಗಲೇ. ಅದು ವಿಪರೀತ ಅನಿಸಿದಾಗ ಶ್ರೀಕಾಂತ ''ನಮಗ ಮಕ್ಕಳಾಗದಿದ್ರೂ ಚಿಂತೆ ಇಲ್ಲ. ಅನಾಥಾಶ್ರಮದ ಒಂದು ಮಗೂನ್ನ ತಂದು ನಾವೇ ಅದಕ್ಕೆ ತಾಯಿ-ತಂದೆ ಆಗ್ತೀವಿ. ನೀನು ರಾಮಾಯಣ-ಮಹಾಭಾರತ ಮಾಡಬ್ಯಾಡ'' ಎಂದು ತಾಯಿಗೆ ಸ್ಪಷ್ಟವಾಗಿಯೇ ಹೇಳಿದ್ದ.

''ಅನಾಥ ಆಶ್ರಮದ ಕೂಸು ನಮ್ಮ ರಕ್ತದ್ದು ಹ್ಯಾಂಗಾಗತ್ತೊ? ಬೇಕಾದ್ರ ಈ ಗೊಡ್ಡು ಮನಿಯಾಗ ಇರಲಿ, ನಿನ್ಗ ಇನ್ನೊಂದು ಕನ್ಯಾ ಹುಡುಕಿ ಮದುವಿ ಮಾಡ್ತೀನಿ'' ತಾಯಿ ತನ್ನ ನಿರ್ಧಾರ ತಿಳಿಸಿದ್ದಳು.

"ಮದುವಿ ಅನ್ನೋದು ಸಣ್ಣ ಹುಡುಗರ ಆಟಲ್ಲ, ರೂಪಾ ನನ್ನ ಹೆಂಡತಿ. ಕೊನೆತನಕ ಆಕೀನ ನನ್ನ ಹೆಂಡತಿ ಆಗಿದ್ದಾಳೆ" ಶ್ರೀಕಾಂತ ತನ್ನ ಆಖೈರು ಅಭಿಪ್ರಾಯ ತಿಳಿಸಿದ್ದ.

ಮಗನ ಮಾತಿನಿಂದ ಸಿಟ್ಟುಗೊಂಡ ಆಕೆ "ಈ ಗೊಡ್ಡಿ ನಿನ್ಗ ಮಾಟಾ ಮಾಡಿಸ್ಯಾಳ" ಎಂದು ಹಾರಾಡಿದ್ದಳು. ಅತ್ತೆಯ ಕೂರಲಗಿನ ಮಾತಿನಿಂದ ರೂಪಾ ಚಿತ್ರಹಿಂಸೆಯನ್ನು ನಿತ್ಯವೂ ಅನುಭವಿಸುವಂತಾಗಿತ್ತು. ಮನಸ್ಸು, ದೇಹಗಳನ್ನು ನಿಸ್ತೇಜಿಸಿಕೊಂಡ ಮಗಳ ಬಗ್ಗೆ ತಾಯಿ ತಂದೆಗೂ ಚಿಂತೆ ಕಾಡತೊಡಗಿತ್ತು.

ವೈದ್ಯರ ನಂಬುಗೆ ನಿಜವೆನ್ನುವಂತೆ ರೂಪಾ ಗರ್ಭ ಧರಿಸಿದ್ದಳು. ಅವಳತ್ತೆ ಅವರಿಹೂವಾಗಿದ್ದಳು. ಸೊಸೆಯನ್ನು ನಾಜೂಕಾಗಿ ನೋಡಿಕೊಂಡಿದ್ದಳು. ಸೀಮಂತನ ಕೂಡಾ ಸಂಭ್ರಮದಿಂದಲೇ ಜರುಗಿತ್ತು. ಎಲ್ಲರೂ ಅವಳ ಹೆರಿಗೆ ಸುದ್ದಿಗಾಗಿ ಕಾತರಿಸುತ್ತಿದ್ದರು.

xxxxxxx

ಚಾಂದಬಿಗೆ ಈ ಹಕೀಕತ್ತು ಎಲ್ಲಾ ಗೊತ್ತು.

"ಯಾ ಪಾಕ್ ಪರವರ್ದಿಗಾರ್, ರೂಪಾ ಬೇಟಿಗೆ ಕರುಣಾ ತೋರ್ಸು ಅವಳ ಹೆರಿಗೆ ಸುಸೂತ್ರ ಆಗ್ಲಿ" ಎಂದು ಮನಸ್ಸಿನಲ್ಲಿಯೇ ದುಆ ಬೇಡಿದಳು ಆಕೆ. ಮಗಳು ತಳಮಳಿಸುವುದನ್ನು ನೋಡಲಾಗದೆ ಪದ್ಮಾ "ಚಾಂದಬಿ, ಹ್ಯಾಂಗರ ಮಾಡಿ ರೂಪಾನ್ನ ದವಾಖಾನಿಗೆ ಕರ್ಕೊಂಡು ಹೋಗಬೇಕು" ಎಂದು ಗಡಬಡಿಸಿದಳು. ಅವಳ ತುಮುಲವನ್ನು ಅರ್ಥಮಾಡಿಕೊಂಡ ಚಾಂದಬಿ "ರಸ್ತಾದಾಗ ಯಾವುದರ ಗಾಡಿ ಬರ್ತಾವೇನೋ ನೋಡಿ ಬರ್ತೀನಿ" ಎಂದು ಹೊರ ಬಂದಳು. ವಾಹನ ಸಿಗದಿದ್ದರೆ ಹೇಗೆ? ಪದ್ಮಾ ತಹತಹಿಸತೊಡಗಿದಳು.

ಚಾಂದಬಿ ರಸ್ತೆಗಿಳಿದಾಗ ಆಕಾಶದಲ್ಲಿ ದಟ್ಟದಟ್ಟ ನೋಡ, ರಣಗುಡುವ ಸೂರ್ಯ ಅದರೊಳಗಿಂದ ಇಣುಕತೊಡಗಿದ್ದ. ಅವನಿಗೂ ಕರ್ಫ್ಯೂವಿನ ಅಂಜಿಕೆಯೇನೋ ಎಂದುಕೊಂಡಳಾಕೆ. ತುಸು ದೂರ ರಸ್ತೆ ಕ್ರಮಿಸಿ ವಾಹನಗಳನ್ನು ನಿರೀಕ್ಷಿಸಿದಳು, ದೂರದಲ್ಲಿ ಎಲ್ಲೋ ಪೋಲೀಸ್ ಜೀಪಿನ ಸದ್ದು ಕೇಳಿತ್ತು, ಮರುಕ್ಷಣ ಅದೂ ಸ್ತಬ್ಧ, ನಿರಾಶೆಯಿಂದ ಮನೆಯ ಕಡೆಗೆ ಹೆಜ್ಜೆ ಕಿತ್ತಿಡುತ್ತಿರುವಂತೆ ಗಟಾರ್ ಪಕ್ಕದ ಬೇವಿನ ಮರಕ್ಕೆ ತಾಗಿಕೊಂಡು ತಳ್ಳೆಗಾಡಿ ಅಡಿ ಮೇಲಾಗಿ ನಿಂತಿತ್ತು. ಒಂದು ಗಾಲಿಯ ಟೈಯಿರು, ಟ್ಯೂಬು ಮನುಷ್ಯನ ದೇಹದಿಂದ ಹೊರಬಿದ್ದ ಕರುಳಿನಂತೆ ಜೋತಾಡತೊಡಗಿದ್ದವು. ಗಾಡಿಯ ಅಕ್ಕಪಕ್ಕ ಬದನೆ, ಮೆಣಸಿನಕಾಯಿ, ಟೊಮೆಟು, ಕೋತಂಬರಿ ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ಗಲಭೆ ಕೋರರ ದಾಳಿಗೆ ಸಿಕ್ಕ ತರಕಾರಿ ಗಾಡಿಯದು. ಅದರ ಮಾಲೀಕನ ಸ್ಥಿತಿ ಏನಾಯಿತೋ? ಚಾಂದಬಿ ಮನಸ್ಸು ಮರುಗಿತು. ಮತ್ತೊಮ್ಮೆ ಗಾಡಿ ನೋಡುತ್ತಿದ್ದಂತೆ ಅವಳ ಮಿದುಳಿನಲ್ಲಿ ಉಪಾಯವೊಂದು ಹೊಳೆಯಿತು. ಧಾವಿಸಿ ಮನೆಯತ್ತ ಬಂದು "ಪದ್ಮಕ್ಕ, ರಸ್ತಾದಾಗ ಒಂದೂ ಗಾಡಿ ಇಬ್ರಿ, ಅಲ್ಲೆ ಒಂದು ತಳ್ಳುಗಾಡಿ ಐತಿ, ನೀವು ತಪ್ಪು ತಿಳಿಬ್ಯಾಡ್ರಿ, ನೀವು

ಹೂಂ ಅಂದ್ರ, ಹೋಗಿ ಗಾಡಿ ತರ್ತೀನಿ. ರೂಪಾ ಬೇಟಿನ್ನ ಅದರ ಮ್ಯಾಲೆ ಮಲಗಸ್ಕೊಂಡು ದವಾಖಾನಿಗೆ ಹೋಗೂಣು'' ಎಂದಳು.

ತಳ್ಳುಗಾಡಿಯಲ್ಲಿ ಮಗಳನ್ನು ಕರೆದುಕೊಂಡು ಹೋಗುವುದೆ? ಎಲ್ಲ ಅನುಕೂಲವಿದ್ದೂ ಇಂಥ ಪರಿಸ್ಥಿತಿ ಬಂದುದಕ್ಕೆ ಪದ್ಮ ಕಸಿವಿಸಿದಳು. ಮಗಳ ನರಳಾಟ ಆ ಕಸಿವಿಸಿಯನ್ನು ನಿಮಿಷಾರ್ಧದಲ್ಲಿ ದೂರ ಮಾಡಿತು. ''ಚಾಂದಬಿ, ನಮ್ಮ ಪುಣ್ಯಕ್ಕ ತಳ್ಳುಗಾಡಿಯರ ಸಿಕ್ತಲ್ಲ. ಲಗೂನ ತಗೊಂಡು ಬಾ'' ಎಂದಳು ಪದ್ಮಾ.

ಚಾಂದಬಿ ಅವಸರದಿಂದ ಹೋದಳು. ಗಾಡಿಯನ್ನು ಚಿತ್ತಮಾಡಿ, ರಸ್ತೆಗೆ ತಂದು, ಉರುಳಲು ಮೊಂಡುತನ ಮಾಡಿದ ಗಾಡಿಯನ್ನು ಜೋರಾಗಿ ತಳ್ಳುತ್ತ ಮನೆಯ ಮುಂದೆ ನಿಲ್ಲಿಸಿದಳು, ಗಾಡಿಯ ಅವಸ್ಥೆಯ ನೋಡಿ ಪದ್ಮಾ ಚಿಂತೆಗೊಳಗಾದಳು. ''ನಾನು ಗಾಲಿ ರಿಪೇರಿ ಮಾಡ್ತಿನಿ, ನೀವು ದಪ್ಪನ ಜಮಖಾನಾ ತಗೊಂಡು ಬರ್ರಿ'' ಎಂದ ಚಾಂದಬಿ ಹರಿದ ಟ್ಯೂಬು-ಟೈಯರ್‌ನ್ನು ಗಾಲಿಗೆ ಹೊಂದಿಸಿ ಅದರ ಮೇಲೆ ಬಟ್ಟೆಸುತ್ತಿ ವಾಯರ್ ಬಿಗಿದಳು. ಗಾಡಿ ಉರುಳಲು ಸಜ್ಜುಗೊಂಡುದು ಪದ್ಮಾಳಿಗೆ ಸಂತೋಷ ತಂದಿತು.

ರೂಪಾಳನ್ನು ಗಾಡಿಯ ಮೇಲೆ ಮಲಗಿಸಿ ಇನ್ನೇನು ಗಾಡಿ ತಳ್ಳಬೇಕೆನ್ನುವಷ್ಟರಲ್ಲಿ ''ಚಾಂದಬಿ, ನನಗ ಅಂಜಿಕಿ ಸುರುವಾತು ನೋಡು, ಗಲಭೆ ಮಾಡೋರು ನಮ್ಮ ಮ್ಯಾಲೆ ಬಿದ್ರ ಏನ್ ಗತಿ ಅಂತ?'' ಎಂದು ಅನುಮಾನಿಸಿದಳು ಪದ್ಮಾ.

''ಅಕ್ಕಾ, ನಾನೀದ್ದೀನಲ್ಲ ಬರ್ರಿ, ಬೇಟಿ ತ್ರಾಸು ಮಾಡ್ಕೋಳ್ಯಾಕ ಹತ್ಯಾಳ, ವಿಚಾರ ಮಾಡ್ಕೊಂತ ನಿಂದ್ರು ಟೈಂ ಅಲ್ಲ ಇದು. ಯಾವ ಪುಂಡ್ರು ಬರ್ತಾರ, ನಮ್ಮನ್ನ ತಡೀತಾರ ನಾನೂ ನೋಡ್ತ್ರೇನಿ'' ಜಬರ್‌ದಸ್ತಾಗಿ ಹೇಳಿ ಗಾಡಿಯನ್ನು ತಳ್ಳಿಯೇ ಬಿಟ್ಟಳು ಚಾಂದಬಿ.

×××××××

ತಳ್ಳುಗಾಡಿಯ ಸದ್ದು ರಸ್ತೆಯ ನೀರವತೆಯನ್ನು ಹೆದರಿಸುವಂತೆ ಇತ್ತು.

ಚಾಂದಬಿ ಸೀರೆಯ ಸೆರಗನ್ನು ಸೊಂಟಕ್ಕೆ ಭದ್ರವಾಗಿ ಸಿಕ್ಕಿಸಿಕೊಂಡು ಗಂಡಸಿಗಿಂತಲೂ ದಿಟ್ಟೆಯಾಗಿ ಗಾಡಿ ನೂಕುವುದನ್ನು ಪದ್ಮಾ ಬೆರಗುಗಣ್ಣುಗಳಿಂದ ನೋಡತೊಡಗಿದ್ದಳು.

ಗಾಂಧಿನಗರದಿಂದ ದವಾಖಾನೆಗೆ ಹೋಗಲು ಒಂದು ತಾಸಾದರೂ ಬೇಕು. ಸಂದಿಗಳನ್ನು ಬಳಸುತ್ತ ಹೋದರೆ ಸಮಯ ತುಸು ಕಡಿಮೆ ಹಿಡಿಯುವುದು. ಆದರೆ ಇಕ್ಕಟ್ಟಾದ ಮಾರ್ಗದಲ್ಲಿ ಗಾಡಿ ತಳ್ಳುವುದು ಪ್ರಯಾಸದ ಕೆಲಸ. ಹೀಗಾಗಿ ಚಾಂದಬಿ ನೇರ ರಸ್ತೆಯನ್ನೇ ಹಿಡಿದಿದ್ದಳು.

ಮಧ್ಯೆ ಜುಮ್ಮಾ ಮಸೀದೆ. ತುಸು ದೂರಕ್ಕೆ ಹೋದರೆ ಗಣೇಶ ಮತ್ತು ಹನುಮದೇವರ ಮಂದಿರಗಳು. ಊರಲ್ಲಿ ಕೋಮು ಗಲಭೆ ಶುರುವಾದರೆ ಎಲ್ಲರ ಗಮನ ಈ ಪ್ರದೇಶದ ಮೇಲೆಯೇ ಕೇಂದ್ರಿಕೃತ. ಮತಾಂಧರಿಂದ ದೇವರ ನೆಲೆಗಳಿಗೂ ಆತಂಕ ಎಂದುಕೊಂಡಳು ಚಾಂದಬಿ.

ಮಸೀದೆಯ ಮಿನಾರುಗಳನ್ನು ಕಂಡಾಗ ಆಕೆಗೆ ಗಾಬರಿಯುಂಟೋಗಾಬರಿ. ಸಾಮಾನ್ಯವಾಗಿ ತ್ವೇಷಮಯ ವಾತಾವರಣ ಇರುವಾಗ ಪುಂಡ-ಪೋಕರಿಗಳು ಮಂದಿರ-ಮಸೀದೆಗಳಲ್ಲಿ ಅವಿತಿಟ್ಟುಕೊಂಡು ಗನ್ನುಲಕ್ಕೆ ಪಟೋಂದನೆ ಸಿಡಿಸುವರೆಂಬ ಪ್ರತೀತಿ ಇತ್ತು. ಕಲ್ಲು ಬೀಸುವ, ದೇವರು-ಧರ್ಮಗಳ ಹೆಸರಿನಲ್ಲಿ ಘೋಷಣೆ ಕೂಗುವ ಬಗ್ಗೆ ಕೇಳಿದ್ದ ಚಾಂದಬಿಯ ಮೈಯನ್ನೊಮ್ಮೆ ಜುಮ್ಮೆಂದಿತು.

ಹತ್ತಿರ ಬರುತ್ತಲೆ ಮಸೀದೆಯ ಮಿನಾರಗಳ ಮೇಲೆ ಹಾರುತ್ತಲೋ, ಕುಳಿತು ರೆಕ್ಕೆಗಳನ್ನು ಪಟಪಟ ಬಡಿಯುತ್ತಲೋ, ಗುಟುರ್....ಗುಟುರ್..... ಎನ್ನುತ್ತಲೋ ಇರುವ ನಾಲ್ಕಾರು ಚಂದದ ಪಾರಿವಾಳಗಳನ್ನು ನೋಡುತ್ತಲೇ ಆಕೆಯ ಮನಸ್ಸಿಗೆ ಸಮಾಧಾನವೆನಿಸಿತು.

ಆಕಾಶದಲ್ಲಿ ಈಗ ಅಂಥ ದಟ್ಟ ಮೋಡಗಳಿರಲಿಲ್ಲ. ಉರಿ ತಣ್ಣಗಾಗಿಸಿಕೊಂಡಿದ್ದ ಸೂರ್ಯ ಹೊಂಬಣ್ಣಕ್ಕೆ ತಿರುಗತೊಡಗಿದ್ದ, ಅವನ ಕಿರಣಗಳು ಮಂದಿರಗಳ ಗೋಪುರಗಳ ಮೇಲೆ ಬಿದ್ದು ಕಳಶಗಳು, ಫಳಫಳ ಹೊಳೆಯತೊಡಗಿದ್ದವು. ''ಇಲ್ಲೇನೂ ಗದ್ದಲ ಇಲ್ಲ'' ಎಂದಳು ಪದ್ಮಾ.

''ದೇವರು ಇರುವ ಜಾಗಾದಾಗ ರಾಕ್ಷಸರು ಇರುದಿಲ್ರಿ ಅಕ್ಕಾ!'' ಕೂಡಲೇ ಉದ್ಗರಿಸಿದಳು ಚಾಂದಬಿ.

''ರಾಕ್ಷಸರಿಗೆ ದೇವರ ಅಂಜಿಕೆ ಇದ್ದಿದ್ರ, ಇಂತ ಗೋಳಾಟ ಎಲ್ಲಿರ್ತಿತ್ತು? ನೀಚರು ನೆಮ್ಮದಿಯಿಂದ ಬದುಕಾಕ ಬಿಡಂಗಿಲ್ಲ. ಮ್ಯಾಲಿಂದ ಮ್ಯಾಲೆ ನಕ್ಷತ್ರಿ ಕನ್ಹಂಗ ಕಾಡತಾವು'' ಪದ್ಮಾಳ ಮಾತಿನಲ್ಲಿ ಬೇಸಿತ್ತು.

ತಳ್ಳುಗಾಡಿಯ ಚಕ್ರಗಳು ಉರುಳುತ್ತಿದ್ದವು.

''ಅವ್ವಾ, ನಾ ಸಾಯ್ತೀನಿ'' ರೂಪಾ ಒಡಲ ನೋವಿನಿಂದ ತನ್ನ ತಲೆಯನ್ನು ಅತ್ತಿತ್ತ ಹೊರಳಾಡಿಸುತ್ತಿದ್ದಳು. ಪಕ್ಕದಲ್ಲಿ ಹೆಜ್ಜೆ ಹಾಕುತ್ತಿದ್ದ ಪದ್ಮಾಳ ಕೈಗಳು ಮಮತೆಯಿಂದ ಮಗಳ ಮೈಯನ್ನು ನೇವರಿಸುತ್ತಿದ್ದವು. ''ದವಾಖಾನಿ ಬಹಳ ದೂರಿಲ್ಲ. ಜರಾ ನೋವು ತಡ್ಕೋ ಬೇಟಿ'' ಗಾಡಿ ದೂಡುತ್ತಲೇ ಸಮಾಧಾನ ಹೇಳುತ್ತಿದ್ದಳು.

ಹಣೆಯ ಮೇಲಿನ ಬೆವರನ್ನು ಲೆಕ್ಕಿಸದೆ ಗಾಡಿ ತಳ್ಳುತ್ತಿದ್ದ ಚಾಂದಬಿಯನ್ನು ಪದ್ಮಾ ಕಣ್ಣು ತುಂಬಿಕೊಂಡಳು. ಎಂಥ ಅಗಾಧ ಒಡಲು ಆಕೆಯದು; ಕರುಣೆಯ ಕಡಲು! ಎಂಥ ಕಷ್ಟದಲ್ಲಿ ನೆರವಾದಳು. ಅವಳನ್ನು ಕೆಲಸದವಳೆಂದು ಕರೆಯಲಾದೀತೆ? ಆಕೆ ತನಗೆ ಒಡಹುಟ್ಟಿದವಳೇ ಇರಬೇಕು. ಭಯಾನಕವಾದ ಗಳಿಗೆಯಲ್ಲಿ ಆಕೆ ತೋರಿಸಿದ ಎದೆಗಾರಿಕೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪದ್ಮಾಳ ಮನಸ್ಸಿನ ತುಂಬಾ ಚಾಂದಬಿ ವಿಜೃಂಭಿಸಿದಳು.

''ನಿನ್ನ ರಟ್ಟಿ ಸೋತಿರಬೇಕು ಚಾಂದಬಿ ಈ ಕಡೆಗೆಬಾ. ನಾನೂ ಒಂದೀಟು ಗಾಡಿ ನೂಕ್ತೀನಿ'' ಅವಳ ಹತ್ತಿರ ಬಂದಳು ಪದ್ಮಾ.

''ಬ್ಯಾಡ್ರಿ, ಅಕ್ಕಾ. ನೀವು ಬೇಟಿ ಕಡೆಗೆ ಲಕ್ಷ್ಯಾ ಕೊಡ್ರಿ ಸಾಕು. ಇನ್ನೆಷ್ಟು ಹೊತ್ತು ದವಾಖಾನಿ ಮುಟ್ಟೋದು?'' ಎಂದು ಇನ್ನಷ್ಟು ಬಲವಾಗಿ ಗಾಡಿ ತಳ್ಳತೊಡಗಿದಳು ಚಾಂದಬಿ.

ಊರಿನ ಹೃದಯಭಾಗವಾದ ಭಾರತ ಸರ್ಕಲ್ ಕಂಡಿತು. ಅದರ ಬಲಕ್ಕೆ ತಿರುಗಿಕೊಂಡರೆ ಇಪ್ಪತ್ತು ನಿಮಿಷಗಳ ದಾರಿ ದವಾಖಾನೆಗೆ. ದೂರದಿಂದಲೇ ನಾಲ್ಕಾರು ಮಂದಿ ಪೋಲೀಸರು ಕಂಡರು, ಎಲ್ಲರ ಕೈಯಲ್ಲೂ ಬಂದೂಕು. ಪದ್ಮಾಳ ಕಾಲು ಥರಗುಟ್ಟಿದವು. ಚಾಂದಬಿ ಗಾಡಿ ನೂಕುವುದನ್ನು ನಿಧಾನವಾಗಿಸಿದಳು.

ಅವರನ್ನು ನೋಡಿದ ಪೋಲೀಸರು ಬಂದೂಕುಗಳನ್ನು ಮೇಲೆತ್ತಿ ದೂರದಿಂದಲೇ ಕೈ ಸಂಜ್ಞೆಯಿಂದ ಹೊರಟುಹೋಗಲು ಸೂಚಿಸಿದರು.

ಚಾಂದಬಿ ಗಾಡಿ ನಿಲ್ಲಿಸಿದಳು, ಪೋಲೀಸರು ದಾಪುಗಾಲು ಇಡುತ್ತ ಹತ್ತಿರ ಬರತೊಡಗಿದರು.

''ಅಕ್ಕಾರ, ನೀವು ರೂಪಾ ಜೋಟಿ ಕಡೆಗೇ ನಿಂತ್ಗೋರಿ..'' ಎನ್ನುತ್ತ ಪೋಲೀಸರ ಎದುರಾಗಿ ನಡೆದಳು ಚಾಂದಬಿ.

''ನೀನು ಅಲ್ಲೇ ನಿಂತ್ಗೊ'' ಪೋಲೀಸನೊಬ್ಬ ವಕ್ರವಾಗಿ ಕೂಗಿ ಹೇಳಿದ.

ಚಾಂದಬಿ ಮತ್ತೆ ನಾಲ್ಕು ಹೆಜ್ಜೆ ಎತ್ತಿಡುವಷ್ಟರಲ್ಲಿ ಪೋಲೀಸರು ಹತ್ತಿರ ಬಂದಿದ್ದರು.

''ಜೀವದ ಮ್ಯಾಲಿನ ಆಸೆ ಬಿಟ್ಟು ಬಂದಿಯೇನು?'' ಮತ್ತೊಬ್ಬ ಪೋಲೀಸ್ ಕಣ್ಣು ಹಿಗ್ಗಿಸಿ ಕೇಳಿದ. ಅವನ ಬಂದೂಕಿನ ತುದಿ ತನ್ನೆದೆಯತ್ತ ಗುರಿ ಮಾಡಿಕೊಂಡು ನಿಂತಿದ್ದರೂ ಚಾಂದಬಿ ''ಸಾಹೇಬರ, ನಮ್ಮ ಜೋಟಿಗೆ ಹೆರಗಿ ಬ್ಯಾನಿ ಚಾಲೂ ಆಗ್ಯಾವರಿ. ಒಂದ ಸವನ ಒದ್ಯಾಡಾಕ ಹತ್ಯಾಳ. ದವಾಖಾನಿಗೆ ಕರ್‍ಕೊಂಡು ಹೊಂಟೆವರಿ'' ಎಂದಳು ಧೈರ್ಯದಿಂದ.

''ಊರಾಗ ಕರ್ಫ್ಯೂ. ಈಗೆಲ್ಲಿ ಸುಡಗಾಡ ದವಾಖಾನಿ ಸಿಗತಾವು ನಿಮಗ? ಮನಿಗೆ ತಿರುಗಿ ಹೋಗ್ರಿ'' ಪಿಎಸ್ಆಯ್ ಲಘುವಾಗಿ ಗದರಿಸಿದರು.

ಪದ್ಮಾ ಅಲ್ಲಿತನಕ ಗಾಡಿ ತಳ್ಳಿಕೊಂಡು ಬಂದಳು.

ರೂಪಾಳ ನರಳಾಟ ಇನ್ನಷ್ಟು ತೀವ್ರಗೊಂಡಿತ್ತು.

''ಸಾಹೇಬರ, ಈ ಹುಡುಗಿ ಜೀವಾ ಉಳಿಬೇಕು, ಅವಳ ಹೊಟ್ಯಾನ ಕೂಸು ಬದುಕಬೇಕು. ಇಲ್ಲಂದ್ರ ಈ ಜೋಟಿ ಜಿಂದಗೀನ ಬರ್ಬಾದ್ ಆಗತ್ರಿ'' ಎಂದು ಚಾಂದಬಿ ರೂಪಾಳ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವಿವರಿಸಿದಳು.

''ಜನಾ ಕಂಡಲ್ಲಿ ಗುಂಡು ಹಾಕಬೇಕಂತ ಆಜ್ಞಾ ಆಗೇತಿ. ನಿಮ್ಮ ಕಥಿ ಕೇಳ್ಕೊಂತ ಕುಂದ್ರಾಕ ಟೈಂ ಇಲ್ಲ ನಡ್ರಿ ಇಲ್ಲಿಂದ'' ಪೋಲಿಸನೊಬ್ಬ ಅವಳೆದುರು ಬಂದೂಕು ಹಿಡಿದ.

''ಸಾಹೇಬರ ನಿಮ್ಮ ಬಂದೂಕಿಗೆ ದುಷ್ಟರನ ಕೊಲ್ಲುವ ಶಕ್ತಿ ಐತಿ ಆದ್ರ ಕಷ್ಟದಾಗ ಇದ್ದೋರನ್ನ ರಕ್ಷಣಾ ಮಾಡುವ ಪ್ರೀತಿ ನಿಮ್ಮ ಎದಿಯಾಗೈತ್ರಿ'' ಚಾಂಬಬಿ ಹೇಳಿದಳು.

ಅವಳ ಮಾತು ಪೋಲೀಸರ ಅಂತರಾಳ ತಟ್ಟತೇನೊ, ಅವರು ಬಂದೂಕುಗಳನ್ನು ಕೆಳಗಿಳಿಸಿ ರೂಪಾಳತ್ತ ನೋಡಿದರು.

"ಸುಧಾ ಡಾಕ್ಟರು ದವಾಖಾನ್ಯಾಗ ಅದಾರಿ, ಮಗಳನ್ನ ಅವರ ಕರ್‍ಕೊಂಡು ಬಾ ಅಂದ್ರು, ನಮಗ ಒಂದೂ ಗಾಡಿ ಸಿಗಲಿಲ್ಲ. ನಮ್ಮ ಯಜಮಾನರೂ ಊರಾಗ ಇಲ್ಲ, ನಮ್ಮ ಚಾಂದಬಿ ಈ ಗಾಡಿ ಹುಡುಕಿ ತಂದ್ಲು" ಇಷ್ಟು ಹೇಳುವುದರೊಳಗೆ ಪದ್ಮಾಳ ಕಣ್ಣಲ್ಲಿ ನೀರೊಡೆದಿತ್ತು.

ಹಿಂದೂ-ಮುಸ್ಲಿಮರಲ್ಲಿ ಮನಸ್ತಾಪ ಹುಟ್ಟಿಸುವ ಹಲಾಲಕೋರ ಮನಸ್ಸುಗಳಿಗೆ ಪದ್ಮಾ-ಚಾಂದಬಿಯರ ಮನುಷ್ಯ ಸಂಬಂಧ, ಒಡಲಾಳದ ತುಡಿತ ಅರ್ಥವಾಗಲು ಸಾಧ್ಯವೆ? ಧರ್ಮಾಂದರಿಗೆ ನಾಗರ ಹಾವಿನಂತೆ ಹೆಡೆ ಬಿಚ್ಚುವುದು, ನಿಷ್ಪಾಪಿಗಳನ್ನು ಕೊಲ್ಲುವುದಷ್ಟೆ ಗೊತ್ತು. ಮತ್ತದಕ್ಕೆ ಧರ್ಮದ ಅಪಪ್ಪುಕೆ ಬೇರೆ. ಕರುಣೆಯ ಗರ್ಭದಿಂದ ಧರ್ಮ ಹುಟ್ಟಿದೆ. ಎಲ್ಲರನ್ನೂ ಬದುಕಿಸಿ ಬಾಳಿಸುವ ಮಾನವೀಯ ಗುಣ ಅದರದು. ಈ ಸತ್ಯವನ್ನು ಆವರಣದೊಳಗೆ ಹುದುಗಿಸಿಟ್ಟು, ತಮ್ಮ ಸ್ವಾರ್ಥಕ್ಕೆ ಅದನ್ನು ವ್ಯಾಖ್ಯಾನಿಸುವ ರಾಕ್ಷಸರಿಗೆ ಮನುಷ್ಯ ಪ್ರೀತಿ ಬೇಕಾಗಿಲ್ಲ. ಎಂದೆಲ್ಲಾ ಆಲೋಚನೆಗೆತೊಡಗಿದ್ದ ಪಿ.ಎಸ್.ಆಯ್. ವಾಸ್ತವಕ್ಕೆ ಬಂದು,

"ಎರಡೂ ಕಡೆಯ ಸೈತಾನರು ಮಾರಕಾಸ್ತ್ರಗಳನ್ನು ಹಿಡ್ಕೊಂಡು, ತಲೆಕೆಟ್ರವರಂಗ ತಿರುಗಾಡಲಿಕ್ಕೆ ಹತ್ಯಾರ. ರಕ್ತದ ರುಚಿ ಹತ್ತಿದ ಮತಾಂಧರಿಗೆ ಮನುಷ್ಯರು ಕಾಣ್ಸುದಿಲ್ಲ. ಊರಾಗ ಹೆಜ್ಜೆ ಹೆಜ್ಜೆಗೂ ಅಪಾಯ ಐತಿ. ನೀವು ಜಲ್ದಿ ಹೋಗಿ ದವಾಖಾನಿ ಸೇರ್‍ಕೋರಿ. ಅಲ್ಲಿತನಕ ನಮ್ಮ ಪೋಲೀಸರು ನಿಮ್ಮ ಕೂಡ ಬರ್‍ತಾರ, ನಿಜಗುಣ, ಸಮದ್ ನೀವಿಬ್ಬರೂ ಈ ಹೆಣ್ಮಕ್ಕಳನ್ನು ದವಾಖಾನಿವರೆಗೂ ಹೋಗಿ ಬಿಟ್ಟು ಬರಿ" ಎಂದು ಆಜ್ಞಾಪಿಸಿದರು.

ಚಾಂದಬಿ, ಪದ್ಮಾಳ ಕಣ್ಣು ಅರಳಿಕೊಂಡವು. ಪಿ.ಎಸ್.ಆಯ್. ಅವರ ಕಣ್ಣಲ್ಲಿ ದೇವರಾಗಿ ವಿಜೃಂಭಿಸಿದ. ಅವರು ಅವನಿಗೆ ಕೈಮುಗಿದು ಕೃತಜ್ಞತೆ ಸೂಚಿಸಿದರು.

ಚಾಂದಬಿ ಗಾಡಿ ತಳ್ಳಲು ಕೈಹಚ್ಚಿದಳು.

ಸಮದ್ ಮತ್ತು ನಿಜಗುಣ ಬಂದೂಕುಗಳನ್ನು ಹೆಗಲಿಗೆ ಹಾಕಿಕೊಂಡು 'ನೀವು ಸರಿರಿ" ಎಂದು ಗಾಡಿಯನ್ನು ತಳ್ಳತೊಡಗಿದರು.

ಅವರು ದವಾಖಾನೆ ಸೇರುವುದರೊಳಗೆ ಸೂರ್ಯ ಅಸ್ತಮಿಸಿದ್ದ.

ವೈದ್ಯರು ತುರ್ತಾಗಿ ರೂಪಾಳನ್ನು ಹೆರಿಗೆ ಕೋಣೆಗೆ ಸಾಗಿಸಿದರು.

ಸಿಜರಿನ್‌ಗಾಗಿ ಅವರು ಸಿದ್ಧತೆ ಮಾಡಿಕೊಂಡಾಗಿತ್ತು. ಆದರೆ ರೂಪಾಳ ಹೆರಿಗೆ ತಡವಾಗಲಿಲ್ಲ. ನಾರ್ಮಲ್ಲಾಗಿ ಆಕೆ ಗಂಡುಕೂಸಿಗೆ ಜನ್ಮ ನೀಡಿದಳು. ಆಸ್ಪತ್ರೆಯ ಆವರಣದಲ್ಲಿದ್ದ ಮರಗಳಲ್ಲಿ ಹಕ್ಕಿಗಳ ಕಲರವ ಕೇಳಿಸಿತು. ಕೂಸಿನ ಅಳುವಿನ ಧ್ವನಿ ಅದರೊಂದಿಗೆ ಮೇಳೈಯಿಸಿತು.

ಪದ್ಮಾ-ಚಾಂದಬಿ ನಿರಾತಂಕವಾಗಿ ಉಸಿರಾಡಿಸಿದರು. ರೂಪಾಳ ಮುಖದಲ್ಲಿ ಹೂ ನಗು, ಸಂಜೆಯ ಆಕಾಶ ಶುಭ್ರವಾಗಿತ್ತು. ಅಲ್ಲಿ ನಕ್ಷತ್ರಗಳು ಫಳಫಳಿಸತೊಡಗಿದ್ದವು. ಮಧ್ಯೆ ಚಂದ್ರ ಚಂದವೆನಿಸಿದ್ದ. ಅವನ ತಂಪು ಬೆಳಕು ಸೂರ್ಯನುರಿದ ಭೂಮಿಯನ್ನು ಮೆಲ್ಲಗೆ ಆವರಿಸತೊಡಗಿತು.

✧✧

ಅಬ್ಬಾಸ್ ಮೇಲಿನಮನಿ, ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜ್, ಇಲಕಲ್ಲ
ಬಾಗಲಕೋಟ(ಜಿಲ್ಲೆ)

ನಾನೂ ನನ್ನ ಬರಹವೂ

ಕೆ. ಷರೀಫಾ

ನನ್ನ ಬರಹ ಯಾವತ್ತೂ ನೈತಿಕ ಜವಾಬ್ದಾರಿಯನ್ನು ನನ್ನಲ್ಲಿ ತುಂಬುತ್ತಾ ಬಂದಿದೆ. ಸಾಹಿತ್ಯ ಅದು ಕಾವ್ಯವೇ ಇರಲಿ ಕಥೆಯೇ ಇರಲಿ ಅದು ರಚನೆಯಾಗಬೇಕಾದರೆ ಅದು ಧ್ಯಾನಸ್ಥ ಸ್ಥಿತಿ ತಲುಪಬೇಕಾದದ್ದು ಅವಶ್ಯಕ. ನನ್ನ ಮೆಚ್ಚಿನ ಆಯ್ಕೆ ಕಾವ್ಯ ಪ್ರಕಾರವೇ ಆಗಿದೆ. ಏಕೆಂದರೆ ಗದ್ಯದಲಿ ಹೇಳಬಹುದಾದ ಸತ್ಯಗಳನ್ನು ಪದ್ಯದಲ್ಲಿ ಸೂಕ್ಷ್ಮವಾಗಿ ಹೇಳಲು ಸಾಧ್ಯವಿದೆ. ಹಾಗಾಗಿ ನನಗೆ ಕವಿತೆಯೆ ಹೆಚ್ಚು ಇಷ್ಟವಾಯಿತು.

ನನ್ನ ಬಾಲ್ಯದ ದಿನಗಳಲ್ಲಿ ಬರಹಗಾರರು ದೂರದ ಮಾತು. ಸಾಹಿತ್ಯದ ಪರಿಚಯವಾಗಲಿ, ಅಭಿರುಚಿಯಾಗಲಿ ಸಾಹಿತ್ಯ ಓದುವ ಹವ್ಯಾಸವಾಗಲಿ ಯಾರಿಗೂ ಇರಲಿಲ್ಲ. ಕಾವ್ಯದಲ್ಲಿ ನನ್ನ ಧೋರಣೆ ಬದ್ಧತೆಗಳಿಗೆ ನನ್ನ ಬಾಲ್ಯದ ಪರಿಸರ, ಆಸಕ್ತಿ, ನಂಬಿದ ತತ್ವಗಳು ಬದುಕಿನಲ್ಲಿ ಎದುರಿಸಿದ ವಾಸ್ತವಗಳು ನನ್ನ ಬರವಣಗೆಗೆ ಪ್ರೇರಣೆಯಾಗಿವೆ. ನಾನು ಎಷ್ಟೇ ದೊಡ್ಡವಳಾಗಿ ಬೆಳೆದಿದ್ದರೂ ಸಹ ನನ್ನ ಬಾಲ್ಯದ ನೆನಪುಗಳು ಮಾತ್ರ ಮರೆಯಲು ಸಾಧ್ಯವೇ ಇಲ್ಲ. ನಮ್ಮ ತಂದೆಯವರಿಗೆ ಸಿಗುವ ಸರ್ಕಾರಿ ನೌಕರಿಯ ಸಂಬಳ ೬೦೦- ರೂಪಾಯಿಗಳಲ್ಲಿ ಏಳು ಮಕ್ಕಳ ಸಂಸಾರ ಸಾಗಿಸಬೇಕಿತ್ತು. ಐದು ಜನ ಹೆಣ್ಣುಮಕ್ಕಳೂ ಎರಡು ಜನ ಗಂಡು ಮಕ್ಕಳು ಇರುವ ತುಂಬಿದ ಕುಟುಂಬ. ಕಷ್ಟದ ಅಸಹಾಯಕ ದಿನಗಳಲ್ಲಿ ನಾನು ಕಷ್ಟಪಟ್ಟು ಓದುತ್ತಿದ್ದೆ. ಮೂರನೇ ತರಗತಿಯಲ್ಲಿರುವಾಗಲೇ ಹತ್ತನೆಯ ತರಗತಿ ಕನ್ನಡ ಪುಸ್ತಕವನ್ನು ಏರು ಕಂಠದಿಂದ ಗುಲಬರ್ಗಾದ ಶಹಬಜಾರಿನ ನಮ್ಮ ಮನೆಯ ಪಡಸಾಲೆಯಿಂದ ಅಟ್ಟಕ್ಕೆ ಏರುವ ಮೆಟ್ಟಿಲುಗಳ ಬಳಿ ಚೌಕಾಕಾರದ ಕಟ್ಟೆಯಿದ್ದು ಅದರ ಮುಂದೆ ದೊಡ್ಡ ಅಂಗಳವಿತ್ತು. ಆ ಕಟ್ಟೆಯ ಮೇಲಿ

ಕುಳಿತು ಓದುವಾಗ ಅಮ್ಮ ಆಶ್ಚರ್ಯದಿಂದ ಎಷ್ಟು ನಿರರ್ಗಳವಾಗಿ ಕನ್ನಡ ಓದುತ್ತಾಳಲ್ಲ ಎಂದು ಮೆಚ್ಚುಗೆಯಿಂದ ನೋಡುತ್ತಿದ್ದಳು. ನಾಲ್ಕನೆಯ ಕ್ಲಾಸಿನಲ್ಲಿ ಓದುವಾಗಲೂ ಕ್ಲಾಸ್ ಟೀಚರ್ - ನಿಲ್ಲಿಸಿ ಕನ್ನಡ ಓದಲು ಹೇಳುತ್ತಿದ್ದರು - ಬೇರೆ ಬೇರೆ ತರಗತಿಯ ಅಧ್ಯಾಪಕರೆದುರು ಓದಿಸಿ ''ಮುಸ್ಲಿಂ ಹುಡುಗಿಯಾದರೂ ಕನ್ನಡ ಎಷ್ಟು ಚೆನ್ನಾಗಿ ಓದುತ್ತಾಳೆಂದು'' ಬೆನ್ನು ಚಪ್ಪರಿಸುತ್ತಿದ್ದರು. ನನ್ನ ತಂಗಿಯರೆಲ್ಲ ಉರ್ದು ಮೀಡಿಯಂನಿಂದ ಓದಿದರೂ - ನಾನು ಮಾತ್ರ ಕನ್ನಡ ಮಾಧ್ಯಮ ಆಯ್ಕೆ ಮಾಡಿಕೊಂಡಿದ್ದಕ್ಕೆ ನಮ್ಮ ಮನೆ ಪಕ್ಕದ ನನ್ನ ಮತ್ತು ಮಹಾದೇವಿಯ ಗೆಳತನವೇ ಕಾರಣವಾಗಿತ್ತು.

ನಮ್ಮ ತಾಯಿ ಅಶಿಕ್ಷಿತೆಯಾದರೂ ದೈವಭಕ್ತೆ. ಓಣಿಯ ಎಲ್ಲರಿಗೂ ''ಅಮ್ಮ''ನೇ ಆಗಿದ್ದಳು - ಎಲ್ಲರ ಸುಖ ದುಃಖಗಳಲ್ಲಿ ಸ್ಪಂದಿಸುವ ಅವಳಿಗೆ ರಂಜಾನ್, ಬಕ್ರೀದ್ ಹಬ್ಬ ಬಂದರೆ ಸಾಕು - ಓಣಿಯ ಎಲ್ಲ ಮಕ್ಕಳಿಗೂ ಸೇವಿಗೆ ಪಾಯಸ ಕುಡಿಸಿ - ಮೇಲೆ ತಾಂಬೂಲ ಅವರ ಬಾಯಿಗಿಟ್ಟು ಸಂಭ್ರಮಿಸುತ್ತಿದ್ದಳು - ಗಂಡ ಹೆಂಡಿರ ಜಗಳವೆ ಆಗಲಿ, ಮನೆತನಗಳ ಜಗಳವೇ ಆಗಲಿ ''ಅಮ್ಮ'' ಪಂಚಾಯ್ತಿ ಮಾಡಿ ಸಮಾಧಾನ ಹೇಳಿ ಬರುತ್ತಿದ್ದಳು. ನಮಗೆಲ್ಲ ದಿನಾಲೂ ತೊಡುವ ಎರಡು ಜೊತೆ ಬಟ್ಟೆ ಬಿಟ್ಟರೆ - ಹಬ್ಬ - ಮದುವೆಗೆಂದು ಮತ್ತೊಂದು ಇರುತ್ತಿತ್ತು. ಐದು ಜನ ಹೆಣ್ಣುಮಕ್ಕಳಿಗೂ ಒಂದೆ ತರದ ಥಾನಿನಲ್ಲಿ ಬಟ್ಟೆ ಹರಿಸುತ್ತಿದ್ದರು. ಮನೆಯಲ್ಲಿ ಓದುವ - ಬರೆಯುವ ವಾತಾವರಣವೆ ಇರಲಿಲ್ಲ. ಇಂಥದರಲ್ಲಿ ನಾನು ಪುಸ್ತಕದ ಹುಳುವಾಗಿದ್ದೆ. ಅಪ್ಪ ಮೆಚ್ಚುಗೆಯಿಂದ ''ಯಾವುದೇ ನಿರ್ಧಾರ ತೆಗೆದುಕೊಳ್ಳಬೇಕಾದರೂ ನನಗೆ ಕೇಳಬೇಡ. ನೀನೇ ಯೋಚಿಸಿ ನಿರ್ಧಾರ ತೆಗೆದುಕೊ'' ಎಂದು ಹೇಳುತ್ತಿದ್ದರು. ಅವರು ೭ನೇ ತರಗತಿಯವರೆಗೆ ಓದಿದ್ದರು. ನಾನು ಕುಂಟಾ ಬಿಲ್ಲೆ ಆಟದ ಜೊತೆಗೆ ಚಿಣಿದಾಂಡು, ಗೋಲಿಯಾಟ, ಲಗೋರಿ, ಕಬ್ಬಡ್ಡಿಯನ್ನು ಆಡುತ್ತಿದ್ದೆ. ಚಿಣಿದಾಂಡು, ಗೋಲಿ ಆಟಗಳು ಗಂಡಸರ ಆಟಗಳು ಅದನ್ನು ಆಡಬೇಡವೆಂದು ಅಣ್ಣ ತುಂಬಾ ಕೆಟ್ಟದಾಗಿ ಹೊಡೆಯುತ್ತಿದ್ದ. ಮಹಾದೇವಿಯ ಗೆಳೆತನ - ಹಿಂದು ಮುಸ್ಲಿಂ ಎಲ್ಲರೂ ಇದ್ದ ಓಣಿ, ಇಂತಹ ತುಂಬಿದ ಮನೆಯಲ್ಲಿ ಆಡುತ್ತ ಸೌಹಾರ್ದದ ನೆಲೆಯಲ್ಲಿ ಬೆಳೆದಿದ್ದರಿಂದಲೇ ಏನೋ ಮತೀಯ ಭಾವನೆಗಳು ನನ್ನಲ್ಲಿ ಸುಳಿಯಲೇ ಇಲ್ಲ. ಮುಂದೆ ಪ್ರಗತಿಪರರ ಒಡನಾಟಗಳು, ಆಗಲೇ ಬೆಳೆಯುತ್ತಿದ್ದ ಬಂಡಾಯ, ಸಮುದಾಯ, ಮಹಿಳಾ ಸಂಘಟನೆಗಳು ನನ್ನಲ್ಲಿ ವೈಚಾರಿಕತೆಯನ್ನು ಸ್ತ್ರೀವಾದ ದೃಷ್ಟಿಕೋನಗಳನ್ನು ಒಟ್ಟಾಗಿ ನೀಡಿದವು. ಸ್ತ್ರೀಯರ ಮೇಲೆ ನಿರಂತರ ನಡೆಯುತ್ತಿರುವ ಶೋಷಣೆ, ದಬ್ಬಾಳಿಕೆಗಳು ನನಗೆ ವ್ಯವಸ್ಥೆಯ ಬಗ್ಗೆ ರೊಚ್ಚು ಮೂಡಿಸಿದ್ದವು.

ಬಡವರ, ಶೋಷಿತರ ಬಗ್ಗೆ ಸ್ತ್ರೀಯರ ಕುರಿತು ನನ್ನ ಕಾವ್ಯ ಯಾವತ್ತೂ ಪಕ್ಷಪಾತಿಯಾಗಿದೆ. ನಾನು ಹೈಸ್ಕೂಲು ಓದುತ್ತಿರುವಾಗಲೇ ನನ್ನ ಮೇಲೆ ಅಕ್ಕಮಹಾದೇವಿಯ ಪಾತ್ರ, ಅವಳ ವಚನಗಳು ಗಾಢವಾಗಿ ಪರಿಣಾಮ ಬೀರಿದ್ದವು. ನಾನು ೮ನೇ ತರಗತಿ ಓದುತ್ತಿರುವಾಗಲೇ ಸಾಕಷ್ಟು ವಚನಗಳನ್ನು ಬರೆದಿದ್ದೆ. ಆದರೆ ಅವನು ಪ್ರಕಟಿಸಬೇಕೆಂಬ ವಿಚಾರ ನನಗಾಗಿನ್ನೂ ಹೊಳೆದಿರಲಿಲ್ಲ - ಹಳೆ ಪುಸ್ತಕಗಳ ಜೊತೆಗೆ ಒಂದು ದಿನ ಅಮ್ಮ ರದ್ದಿಗೆ ಹಾಕಿ ಬಿಟ್ಟಿದ್ದಳು.

ನಾನು ೧೯೭೫ರಿಂದಲೂ ಕವಿತೆ ಬರೆಯುತ್ತಿದ್ದೆ. ಆಗ ಗುಲಬರ್ಗಾದ ಕೆ.ಎಸ್.ರಾಜ್ ಅವರ ಕವನ ಸಂಕಲನ "ನಂದು ಅನ್ನುದೇನು"? ಕೃತಿಗೆ (೧೯೭೮) "ಐದು ಬಿಂದುಗಳು" ಎಂಬ ಕವನ ಬರೆದುಕೊಟ್ಟೆ.

"ಆರ್ಥಿಕ ಸ್ವಾತಂತ್ರ್ಯವಿಲ್ಲದ ಸ್ವಾತಂತ್ರ್ಯ
ಫಲ ಕೊಡದ ಹಸಿರು ಮರದಂತೆ.
...... ನಿರ್ಮಿಸಲೇಬೇಕೊಂದು ಶೋಷಿತರಿಲ್ಲದ
ಸಮಾಜದ ಹೊಸ ಸೌಧ"

ಹೀಗೆ ಆರಂಭವಾಗುವ ನನ್ನ ಮೊದಲ ಕವಿತೆ ದೇಶಭಕ್ತಿ, ಆರ್ಥಿಕ ಸ್ವಾತಂತ್ರ್ಯ - ಹೊಸ ಸಮಾಜದ ಕನಸುಗಳನ್ನು ಕಟ್ಟುತ್ತಿತ್ತು. ನನ್ನೊಳಗೆ ಕಾಡಿದ, ಪೀಡಿಸಿದ ಎಷ್ಟೊ ವಿಷಯಗಳು ನನ್ನ ಕಾವ್ಯಕ್ಕೆ ವಸ್ತುವಾಗುತ್ತಿದ್ದವು. ಆಗ ನನಗೆ ತಿಳಿದಿರಲಿಲ್ಲ - ನಾನು ಕನ್ನಡ ಸಾಹಿತ್ಯಕಂಡ ಮೊದಲ ಮುಸ್ಲಿಂ ಕವಯಿತ್ರಿ ಎಂದು. ಅನ್ಯ ಜಗತ್ತಿನ ವಿಷಯಗಳು, ನೋವು, ತಲ್ಲಣಗಳು ಕಾಡಿದಂತೆ ನನಗೆ ಇಸ್ಲಾಂ ಜಗತ್ತಿನ ಅಭದ್ರತೆ, ಅನಾಥಪ್ರಜ್ಞೆಗಳೂ ಪೀಡಿಸಿವೆ - ಆದರೂ ನನ್ನ ಕಾವ್ಯದಲ್ಲಿ ಯಾವತ್ತೂ ಸ್ತ್ರೀಯರ ನೋವು, ಸಂಕಟಗಳೇ ಆವರಿಸಿವೆ - ಬಾಲ್ಯದಲ್ಲಿ ಅವ್ವನನ್ನು ಹೊಡೆಯುವ ಅಪ್ಪ ನನಗೆ ಅತ್ಯಂತ ಕ್ರೂರಿಯಾಗಿ ಕಾಣುತ್ತಿದ್ದ. ನನಗೆ ಹುಡುಗರ ಆಟ ಆಡಬೇಡವೆಂದು ಹೊಡೆಯುತ್ತಿದ್ದ ಅಣ್ಣ ಕ್ರೂರಿಯಾಗಿ ಕಾಣುತ್ತಿದ್ದ. ಬಹುಶಃ ಈ ಎಲ್ಲವೂ ನನಗೆ ಸ್ತ್ರೀವಾದದ ಕಡೆಗೆ ಸೆಳೆದಿರಬಹುದೇನೋ.

ನನ್ನ ಮೊದಲ ಕವನ ಸಂಕಲನ ಪ್ರಕಟವಾಗುವದಕ್ಕೆ ಬದಲು ಒಂದು ಪುಟ್ಟ ಲೇಖನ ಸಂಕಲನ ಪ್ರಕಟವಾಯಿತು. "ಮಹಿಳೆ ಮತ್ತು ಸಮಾಜ" ೧೯೮೦ರಲ್ಲಿ ಪ್ರಕಟವಾದರೆ "ಬಿಡುಗಡೆಯ ಕವಿತೆಗಳು" ಪ್ರಕಟಿಸಲು ೧೯೯೦ರಲ್ಲಿ ಪಡೆದು ೫ ವರ್ಷಗಳ ನಂತರ ಆಗುವದಿಲ್ಲವೆಂದು ಹಿಂತಿರುಗಿಸಿದಾಗ (ಕಿರಣಪಾಟೀಲ್) ೧೯೯೫ರಲ್ಲಿ ಪ್ರಕಟಿಸಿದೆ. ಮಹಿಳೆಯರು ಬರೆಯುತ್ತಿರುವುದೇ ತಪ್ಪು ಅಂತಹದರಲ್ಲಿ ಪ್ರಕಟಿಸುವ ಕೆಲಸ ಇನ್ನೂ ಕಷ್ಟದ್ದು. ನನ್ನ ಬಿಡುಗಡೆಯ ಕವಿತೆ

"ಹೆಣ್ಣಾಗಿ ಹುಟ್ಟಿದೆನೆಂದು
ಹಣೆ ಬರಹಕೆ ಹಳಿಯದಿರು
ನಿನ್ನ ತುಳಿದವರು
ನಾಚಿ ನೀರಾಗುವ ಕಾಲ
ದೂರವಿಲ್ಲ ಕೇಳು"

ಮಗಳಾಗಿ, ತಂಗಿಯಾಗಿ, ಹೆಂಡತಿಯಾಗಿ, ತಾಯಿಯಾಗಿ ನಾನು ಭಿನ್ನ ಭಿನ್ನ ಪಾತ್ರಗಳನ್ನು ನಿಭಾಯಿಸಿದ್ದರೂ ನನಗೆ ತೃಪ್ತಿ ನೀಡಿದ್ದು ತಾಯಿಯಾಗಿ ನಾನು ನಿಭಾಯಿಸಿದ ಪಾತ್ರ ಮತ್ತು ತೆಗೆದುಕೊಂಡ ನಿರ್ಧಾರಗಳು.

ನಾವು ಬೆಳೆಯುತ್ತಿದ್ದ ಕಾಲ ಬಂಡಾಯ, ಸಮುದಾಯ ದಲಿತ ಹಾಗೂ ಮಹಿಳಾ ಚಳುವಳಿಗಳು ಉಛ್ರಾಯ ಸ್ಥಿತಿಯಲ್ಲಿದ್ದ ಕಾಲವಾಗಿತ್ತು. ಆಗಲೇ - ಬರಗೂರು ರಾಮಚಂದ್ರಪ್ಪ, ಪ್ರಸನ್ನ, ಸಿ.ಜಿ.ಕೆ, ರಂಜಾನ್ ದರ್ಗಾ, ಸಿದ್ದಲಿಂಗಯ್ಯ, ಎಲ್.ಹನುಮಂತಯ್ಯ, ಚೆನ್ನಣ್ಣ ವಾಲೀಕಾರ್, ಚಂದ್ರಶೇಖರ ಪಾಟೀಲ, ದೇವನೂರ ಮಹಾದೇವ, ಸಿ ಬಸಲಿಂಗಪ್ಪ, ಎಸ್. ಮಾಲತಿ, ಅನುಪಮಾ ನಿರಂಜನ್, ಸುಭಾಷಿಣಿ ಅಲಿ, ಕೆ.ಎಸ್. ವಿಮಲಾ, ಎನ್. ಗಾಯತ್ರಿ, ಬಿ.ಟಿ. ಲಲಿತಾ ನಾಯಕ್, ಸಾರಾ ಅಬೂಬಕರ್ ಮುಂತಾದವರ ಒಡನಾಟದಿಂದ ಹೋರಾಟಗಳಿಂದ ನನ್ನ ಕಾವ್ಯ ಬಹಳಷ್ಟನ್ನು ದಕ್ಕಿಸಿಕೊಂಡಿದೆ.

ರೈತರ, ವಿದ್ಯಾರ್ಥಿಗಳ, ಮಹಿಳೆಯರ ಹೋರಾಟಗಳಲ್ಲಿ ಭಾಗವಹಿಸುತ್ತಲೇ ನನ್ನ ಕಾವ್ಯಕ್ಕೆ ಗಟ್ಟಿಯಾದ ನೆಲೆಗಟ್ಟು ದೊರಕಿತ್ತು. ನಾನು ಮಹಲಿನಲಿ ಕುಳಿತು ಓದಿ ಏನೂ ಬರೆಯಲಿಲ್ಲ. ಆದರೆ ಹೋರಾಟಗಳೊಂದಿಗೆ ಸಾಗಿದ ನನ್ನ ಕಾವ್ಯಕ್ಕೆ ಬದ್ಧತೆ ತಾನೇ ತಾನಾಗಿ ಬಂದಿತ್ತು. ಸ್ತ್ರೀಪರ, ಶೋಷಿತರ ಪರ ಯಾವತ್ತೂ ನಿಲ್ಲುತ್ತಿತ್ತು. ಸಿದ್ಧಲಿಂಗಯ್ಯನವರ ಕವಿತೆಗಳು ಬಹಳಷ್ಟು ಮೆಚ್ಚುಗೆಯಾಗುತ್ತಿದ್ದವು. ಅನ್ಯಾಯದ ವಿರುದ್ಧ ಆಕ್ರೋಶ ಅದೇ ಸಂದರ್ಭದಲ್ಲಿ ಅಂತಃಕರಣದ ಕರಳು ಮಿಡಿಯುತ್ತಿತ್ತು. ಅದೇ ಸಮಯದಲ್ಲಿ ಹಿಂದೂ ಮತೀಯವಾದಿಗಳು ''ರೂಪ್ ಕನ್ವರಳಿಗೆ'' ಸತಿಯಾಗಿಸಿ ಸುಟ್ಟು ಹಾಕಿದಾಗ

''ನಿನ್ನ ಕೊಂದವರ ಕತ್ತುಗಳಿಗೆ
ಕರಗಸವಾಗಿ ಕೊರೆಯುತ್ತ
ನಿನ್ನ ಕನಸುಗಳನು
ವಾಸ್ತವಕ್ಕಿಳಿಸಲು
ಮತ್ತೇ ಹುಟ್ಟಿ ಬಾ ಕನ್ವರ''

ರಾಜರ ಆಡಂಬರದ ಪ್ರೀತಿಯನು ಕಂಡಾಗ ಜಗತ್ತಿನ ಪ್ರಸಿದ್ಧ ಪ್ರೇಮಸ್ಮಾರಕವೆಂದೇ ಹೆಸರಾದ ತಾಜಮಹಲಿನ ಕುರಿತು ಕವನ ಬರೆದೆ.

''ನಿನ್ನ ಬಾದಶಹನ ಹೃದಯದಲ್ಲಿ
ನೀನೊಬ್ಬಳೇನೂ ಅಲ್ಲ
ತುಂಬಿದ ಜನಾನಾಗಳುಂಟು
. . . . . . ನಿನ್ನ ಬಾದಶಹನ
ತಾಜಮಹಲು ಪ್ರೀತಿಯ ಪ್ರತೀಕ
ಹೇಗಾದೀತು ಹೇಳು ಮುಮ್ತಾಜ್?''

ಎಂದು ಜಗತ್ಪ್ರಸಿದ್ಧ ತಾಜಮಹಲನು ಕಟ್ಟಿಸಿದ ಷಹಜಹಾನನ ಪ್ರೀತಿಯನ್ನು ಪ್ರಶ್ನಿಸಿದ್ದೆ. ಆಯಾ ಕಾಲಘಟ್ಟದ ಬರವಣಿಗೆಯ ಮೇಲೆ ಆಯಾ ಕಾಲದ ತಾತ್ವಿಕ ನಿಲುವುಗಳು ಪ್ರಭಾವ ಬೀರುತ್ತವೆ. ಒಂದು ಕಾಲದ ಸತ್ವ ಸಾಹಿತ್ಯದ ಸಂವೇದನೆ ಮಾತ್ರವಾಗಿರದೆ ಅದು ಆಯಾ ಕಾಲದ ಬಿಕ್ಕಟ್ಟುಗಳು,

ತಲ್ಲಣಗಳು, ಚಳುವಳಿ, ಹೋರಾಟಗಳನ್ನೂ ಬಿಡದೆ ಒಳಗೊಳ್ಳುತ್ತವೆ. ಹಳೆ ಮೌಲ್ಯ ಹೊಸ ಮೌಲ್ಯಗಳ ತಾಕಲಾಟ ಉಂಟಾಗುತ್ತವೆ - ಅವೆರಡರ ಮುಖಾಮುಖಿಯಿಂದ ಹೊಸದೊಂದು ನೆಲೆ ನಿರ್ಮಾಣಗೊಳ್ಳುತ್ತದೆ. ಅಂತಹ ಹೊಸ ಮೌಲ್ಯಗಳನ್ನು ಹೊತ್ತು ನಿಂತ ಬಂಡಾಯ ಚಳುವಳಿ ನನ್ನ ಬರಹದ ಮೇಲೆ ಪ್ರಭಾವ ಬೀರಿದೆ - ಆ ಚಳುವಳಿಗಳು, ಹೋರಾಟಗಳು, ತೀಕ್ಷ್ಣ ಬರಹಗಳು ಬಹಳಷ್ಟು ಪ್ರಭಾವಿಸಿವೆ.

ಕೆ. ಷರೀಫಾ, ಎ.ಪಿ.ಎಂ.ಸಿ. ಹರಿಹರ, ದಾವಣಗೆರೆ (ಜಿ)

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಇದುವರೆಗಿನ ಸಂಚಿಕೆಗಳ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ / ಕಥೆ / ಕಿರುನಾಟಕ / ವಿಮರ್ಶಾತ್ಮಕ / ವೈಚಾರಿಕ ಲೇಖನ / ಪ್ರಬಂಧ / ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿ ಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳ ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ :

ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

–ಸಂಪಾದಕರು



ನನ್ನಲ್ಲಿ ಏನು ಅಡಗಿದೆ ಎಂದು
ಗಂಡಸರು ತಮಗೆ ತಾವೇ ಪ್ರಶ್ನೆ ಮಾಡಿಕೊಳ್ಳುತ್ತಾರೆ.
ಅವರು ಬಹಳ ಪ್ರಯತ್ನ ಪಡುತ್ತಾರೆ.
ಆದರೆ ಅವರು ನನ್ನೊಳಗಿನ
ನಿಗೂಢತೆಯನ್ನು ಮುಟ್ಟಲಾರರು
ನಾನು ಅವರಿಗೆ ತೋರಿಸಲು ಪ್ರಯತ್ನಿಸಿದರೆ
ಅವರಿಗೆ ಅದು ಕಾಣುವದಿಲ್ಲ.
ಅದು ನನ್ನ ಬೆನ್ನ ಹುರಿಯ ಬಾಗುವಿಕೆಯಲ್ಲಿದೆ
ನನ್ನ ನಗೆಯ ಸೂರ್ಯನಲ್ಲಿದೆ
ನನ್ನ ಎದೆಯ ಕುಲುಕಾಟದಲ್ಲಿದೆ
ನನ್ನ ನಡತೆಯ ಘನತ್ವದಲ್ಲಿದೆ
ನಾನು ಮಹಿಳೆ ಅದಕಾಗಿ ವಿಶೇಷತೆಯ
ವಿಶೇಷ ಮಹಿಳೆ ನಾನು.

- ಪ್ರೊ. ಪರಿಮಳಾ ನಾಯಕ

Reg. No. 45646/88 Price : 30/-